# ಕಲಾ ಶಿಕ್ಷಣ
# ART EDUCATION

## ಸಂಪನ್ಮೂಲ ಪುಸ್ತಕ
## SOURCE BOOK

**ಎಂಟರಿಂದ ಹತ್ತರ ವರೆಗಿನ ತರಗತಿಗಳು**
**(ಹೈಸ್ಕೂಲ್ ವಿಭಾಗ)**

STD. 8 to 10

ಕೇರಳ ಸರಕಾರ
ಶಿಕ್ಷಣ ಇಲಾಖೆ

*ತಯಾರಿಸಿದವರು*

**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ**

2018

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

State Council of Education Research and Training (SCERT)
Poojappura, Thiruvananthapuram 695012, Kerala.
website : www.scert.kerala.gov.in
email : scertkerala@gmail.com
phone : 0471-2341883, Fax : 0471-2341869
First Edition : 2018
Printed at : KBPS, Kakkanad, Kochi

ಸ್ನೇಹಿತರೇ,

ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ವೃತ್ತಿ ಶಿಕ್ಷಣವು ಇತರ ವಿಷಯಗಳಷ್ಟೇ ಪ್ರಾಧಾನ್ಯತೆಯೊಂದಿಗೆ ಜ್ಯಾರಿಗೆ ಬರುತ್ತಿದೆ. ಒಂದನೇ ತರಗತಿಯಿಂದಲೇ ಕ್ರಮಬದ್ಧವಾದ ಪಠ್ಯಕ್ರಮವನ್ನು ರೂಪುಗೊಳಿಸಿ ಆಗಿರುತ್ತದೆ. ಇದರ ಪ್ರಕಾರ ತರಗತಿಯ ಚಟುವಟಿಕೆಗಳಿಗೆ ಸಹಾಯಕವಾಗುವ ರೀತಿಯಲ್ಲಿ ಅಧ್ಯಾಪಕರಿಗಾಗಿ ಸಂಪನ್ಮೂಲ ಪುಸ್ತಕಗಳನ್ನು ಎಸ್.ಸಿ.ಇ.ಆರ್.ಟಿ ಸಿದ್ಧಗೊಳಿಸಿದೆ. ಮಕ್ಕಳಿಗೂ ಸಮಾಜಕ್ಕೂ ಅಗತ್ಯವಾದ ಜೀವನದ ಮೂಲಭೂತ ಘಟಕಗಳಾದ ಆಹಾರ, ಕೃಷಿ, ಆರೋಗ್ಯ ಸಂರಕ್ಷಣೆ, ಬಟ್ಟೆ ಬರೆ, ವಸತಿ, ವಿನೋದ, ಸೇವೆಗಳು, ನಿರುಪಯುಕ್ತ ವಸ್ತುಗಳಿಂದ ಉತ್ಪನ್ನಗಳ ತಯಾರಿ ಇತ್ಯಾದಿ ವಲಯಗಳನ್ನೊಳಗೊಂಡ ಪಠ್ಯಕ್ರಮಕ್ಕೆ ರೂಪು ನೀಡಲಾಗಿದೆ. ಇವುಗಳಲ್ಲಿ ಪ್ರತಿಯೊಂದರ ಕಲಿಕಾ ಸಾಧನೆಗಳು, ಆಶಯಗಳು, ಸಾಮರ್ಥ್ಯಗಳು, ಕಲಿಕಾ ಚಟುವಟಿಕೆಗಳು ಮೌಲ್ಯಮಾಪನ ವಿಧಾನಗಳು ಇತ್ಯಾದಿಗಳನ್ನು ಇದರಲ್ಲಿ ಸಮಗ್ರವಾಗಿ ಪರಾಮರ್ಶಿಸಲಾಗಿದೆ. ಒಂದರಿಂದ ನಾಲ್ಕು, ಐದರಿಂದ ಏಳು, ಎಂಟರಿಂದ ಹತ್ತು ಎಂಬ ರೀತಿಯಲ್ಲಿ ಮೂರು ಪುಸ್ತಕಗಳಾಗಿ ಸಂಪನ್ಮೂಲ ಪುಸ್ತಕಗಳನ್ನು ತಯಾರಿಸಲಾಗಿದೆ.

ನಮ್ಮ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣವು ಕಾರ್ಯದಕ್ಷತೆಯಿಂದ ಜಾರಿಗೊಳಿಸಲು ಇದು ತುಂಬಾ ಸಹಕಾರಿಯಾಗಬಹುದೆಂದು ಆಶಿಸುತ್ತೇನೆ.

ಪ್ರೀತಿಪೂರ್ವವಾಗಿ,

**ಡಾ. ಜೆ. ಪ್ರಸಾದ್**

ನಿರ್ದೇಶಕರು

ಎಸ್.ಸಿ.ಇ.ಆರ್.ಟಿ

## PARTICIPANTS IN THE WORKSHOP

**Kunhiraman** Puthussery, Chayoth, Lecturer, DIET Kasaragod
**R.K. Ramdas,** Lecturer, DIET Thiruvananthapuram.
**N. Prasad,** Lecturer, DIET Kollam
**Dr. K.S. Vasudevan,** Lecturer, DIET Kozhikode
**Sunil Kumar,** Lecturer, DIET Kannur
Dr. Gokul Das Pilla, Karikulam Expert (ret), SCERT Kerala
Dr. Venu Gopu, Research Officer (ret), SCERT Kerala
Dr. M.S. Radha Krishnan, Senior Lecturer (ret), DIET
Dr. K.G. Rajan, Senior Lecturer (Rtd), DIET
Dr. Vineetha Nedunhadi
C.Rajendran, A.V. Govt.B.H.S. Tazhava
B. Karthikeyan Pilla, G.V.H.S.S, Poruvazhi
P. Sunil Kumar, Povandoor, H.S.S. Kozhikode
Madhusoodhanan, Govt. M.H.S.S, Koilandi
V. Varghese Kalattil, G.V.H.S.S, Pallikunnu, Kannur
Dr. Abdul Latheef, V.H.S.S, NGO Quarters, Kozhikode
Suvarna Panthroth, Thotada Nerth, L.P.S, Kannur
Dr. B. Premalatha, G.V.H.S.S. Kotangulanhara, Chavara
M. Jaya Krishnan, G.U.P.S, Manjeri
T. Pradeep Kumar, C.H.M.K.M.H.S. Kavananeer, Malappuram
M.P. Balakrishnan, GVHSS North Edappali
A.G. Sethunatha Pillai, GVHSS Vadakathukavu, Adoor.
C.V. Anoop, SSDHSS Lakkidi
P.D. Revamma, KPRGHSS Kallyasseri, Kannur
G.S. Jayalakshmi, GHS Karikkkulam
R. Prasanna Kumar, GHS Kadammanitta
A.V. Sindhu, GVHSS Agali
Kalamandalam Satyavrathan A., KKR Girls HSS Chelannur
Dr. P.A. Merylitty, CCPLMAIHS Perumanoor, Ernakulam
C.S. Rajendran, HSA (Rtd.)
M. Sriharshan, Nambrathkara UPS Koyilandi, Kozhikode
Ramesh Kavil, GLPS Azhchavattam, Kozhikode
Subhash Chandrabose D.P., GHSS Konni

## ACADEMIC CO ORDINATOR

**Dr. N. Gopala Krishna Pillai,** Research Officer, SCERT, Kerala

# ಅನುಕ್ರಮಣಿಕೆ


1. ಕೇರಳ ಶಾಲಾ ಪಠ್ಯಕ್ರಮ 2013 – ಸಾಮಾನ್ಯ ಸಮೀಪನ ............. 7
2. ಕಲೆಯ ಕಲಿಕೆ – ಅಗತ್ಯ ಮತ್ತು ಪ್ರಾಧಾನ್ಯ ............................. 32
3. ಕಲೆಯ ಕಲಿಕೆ – ಕಲಿಕಾ ಸಮೀಪನ ...................................... 36
4. ಕಲೆಯ ಕಲಿಕೆ – ವಿವಿಧ ವಲಯಗಳು .................................. 40
5. ಕಲೆಯ ಕಲಿಕೆ – ಮೌಲ್ಯನಿರ್ಣಯ ....................................... 45
6. ಕಲೆಯ ಕಲಿಕೆ – ಬೆಂಬಲ ವ್ಯವಸ್ಥೆಗಳು .................................. 50
7. ಕಲೆಯ ಕಲಿಕೆ – ಅನುಕ್ರಮಣಿಕೆ ವಿಷಯದ ಮಂಡಲಗಳು .................... 51

**7.1 ಚಿತ್ರಕಲೆ ........................................................ 52**

ಎಂಟನೇ ತರಗತಿ ................................................. 54
ಒಂಬತ್ತನೇ ತರಗತಿ .............................................. 75
ಹತ್ತನೇ ತರಗತಿ ................................................. 99

**7.2 ಸಂಗೀತ ........................................................ 116**

ಎಂಟನೇ ತರಗತಿ ................................................. 118
ಒಂಬತ್ತನೇ ತರಗತಿ .............................................. 136
ಹತ್ತನೇ ತರಗತಿ ................................................. 156

**7.3 ನೃತ್ಯಕಲೆ ........................................................ 180**

ಎಂಟನೇ ತರಗತಿ ................................................. 182
ಒಂಬತ್ತನೇ ತರಗತಿ .............................................. 191
ಹತ್ತನೇ ತರಗತಿ ................................................. 199

**7.4 ನಾಟಕ ........................................................ 211**

ಎಂಟನೇ ತರಗತಿ ................................................. 213
ಒಂಬತ್ತನೇ ತರಗತಿ .............................................. 220
ಹತ್ತನೇ ತರಗತಿ ................................................. 230

ಅನುಬಂಧ 1 : ಚಟುವಟಿಕಾ ಕ್ಯಾಲೆಂಡರ್ ................................. 240
ಅನುಬಂಧ 2 : ಮಾದರಿ ಪ್ರಶ್ನೆಪತ್ರಿಕೆ ......................................... 252

# 1. ಕೇರಳ ಶಾಲಾ ಪಠ್ಯಕ್ರಮ 2013 ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

**ಸಾ**ಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣವಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಎದುರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಿದೆ.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗದ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಿರಿಸಿಕೊಂಡಿದ್ದೇವೆ.

"ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲೆಗಳಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ಅಂಗವೈಕಲ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲದು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ. (NCF 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ ಎಂಬುದನ್ನು ಇದು ಸೂಚಿಸುತ್ತದೆ.

ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳ ಸಂಬಂಧಪಟ್ಟ ಕಾನೂನುಗಳು ಪಠ್ಯಕ್ರಮ ಪರಿಷ್ಕರಣೆಯಲ್ಲಿ ಪರಿಗಣಿಸುವುದು ಅಗತ್ಯವಾಗಿದೆ.

---

### ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009
### ಸೆಕ್ಷನ್ –29 (ಅಧ್ಯಾಯ 5)
### ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

*a)* *ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.*

*b)* *ಮಗುವಿನ ಸರ್ವತೋಮುಖವಾದ ಬೆಳವಣಿಗೆ.*

*c)* *ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.*

*d)* *ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.*

*e)* ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

*f)* ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

*g)* ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

*h)* ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

---

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011

### ಶೈಕ್ಷಣಿಕ ಅಧಿಕಾರಗಳು

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1)ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯ ಪಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ (a) ಯಿಂದ (f) ವರೆಗಿನ ನಿಬಂಧನೆಗಳಿಗೆ ಬಾಧಕವಾಗದಂತೆ;
   (a) ಸಕಾಲಿಕಲವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠಪುಸ್ತಕಗಳಿಗೆ ಮೂಲಭೂತವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಗ್ರಿಗಳಿಗೆ ರೂಪು ನೀಡುವುದು;
   (b) ಒಂದರಿಂದ ಎಂಟರ ವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾ ಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;
   (c) ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;
   (d) 1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು;
   (e) ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.
   (f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಬೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (CCE) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22) ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23) ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು, ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು.

ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

## ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

## ಕಲಿಕಾ ಪರಿಸರ

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

## ಕಲಿಕಾ ಪ್ರಕ್ರಿಯೆ

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.

*ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.*

*ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.*

*ಎನ್.ಸಿ.ಎಫ್. 2005 ಪುಟ. 41,42*

- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶ ವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

## 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

**ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.**

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)

ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ.

### ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)

- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.
- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ

## (Inclusive Education)

*ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.*

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

(ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

  ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

(ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

**ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?**

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.

- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

### ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ **ICT** ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು **ICT** ಸಾಧ್ಯತೆಗಳ ಮೂಲಕ ಪರಿಹರಿಸಬಹುದು. **ICT** ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

### ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ **ICT** ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ **ICT** ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು **ICT** ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

### ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವರಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. **ICT** ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

### ಪ್ರಜಾಪ್ರಭುತ್ವ ಪ್ರಜ್ಞೆ

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

### ಸಾಂವಿಧಾನಿಕ ಮೌಲ್ಯಗಳು

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

### ಜಾತ್ಯತೀತ ಮನೋಭಾವ

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

### ಸಹಿಷ್ಣುತೆ

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

### ಕ್ರಿಯಾಶೀಲ – ಸೃಜನಶೀಲ ಚಿಂತನೆ

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

### ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

### ಸಮತ್ವ ಎಂಬ ಆಶಯ

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

## ನಾಯಕತ್ವಗುಣ

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

## ಜೀವನ ಕೌಶಲ್ಯ ಶಿಕ್ಷಣ

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

## ಪೌರಧರ್ಮ

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

## ಮಾನವ ಹಕ್ಕುಗಳು

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

## ಮಕ್ಕಳ ಹಕ್ಕುಗಳು

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

## ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

## ಶಾಂತಿಯ ಶಿಕ್ಷಣ

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

## ಕಾನೂನು ಸಾಕ್ಷರತೆ

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

## ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು. ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

## ಮಾಧ್ಯಮ ತಿಳುವಳಿಕೆ

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

## ಶಾಶ್ವತ ಅಭಿವೃದ್ಧಿ ದೃಷ್ಟಿಕೋನ

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

## ಬಾಲ್ಯ ಶಿಕ್ಷಣ

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

## ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

## ಮಾದಕ ದ್ರವ್ಯ ವಿರೋಧಿ ನಿಲುವು

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

## ಲಿಂಗ ಸಮಾನತೆ

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

## ಮಿತವ್ಯಯ ಗುಣ

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

## ರಸ್ತೆ ಸುರಕ್ಷೆ

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

ತನಗೆ ಲಭ್ಯವಾದ ಹಕ್ಕುಗಳ ಕುರಿತು ಕೂಡಾ ಆಲೋಚಿಸುವುದು ಹೇಗಿರಬಹುದು?

### ಭಾಗವಹಿಸುವಿಕೆ (Participation)

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

### ಲಭ್ಯತೆ (Provision)

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.
- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

### ಸಂರಕ್ಷಣೆ (Protection)

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

**ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ
- 

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.
.

**ಮೆಂಟರಿಂಗ್ ಮೂಲಕ**

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.

- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ (Code of Professional Ethics for School Teachers)

### 1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು

*1.1* *ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.*

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

*1.2* *ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.*

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.
- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

*1.3* *ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.*

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

*1.4* *ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.*

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.

- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

*1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.*

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

*1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.*

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.
- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

*1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.*

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

*1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.*

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

*1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.*

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

*1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.*

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್ ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

## 2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು

*22.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.*

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

*2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.*

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

*2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.*

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

*2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.*

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಕೆಗಳು ತರಗತಿಯಲ್ಲಿ ನಡೆಯಬೇಕು.

- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.
- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

## 3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು

*3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.*

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ  ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

*3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.*

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

*3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.*

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

*3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.*

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.
- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

*3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.*

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

*3.6* *ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.*

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

*3.7* *ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.*

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

*3.8* *ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.*

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

*3.9* *ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.*

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

ಪಾಠದ ಹೆಸರು :
ದಿನಾಂಕ :
ಸಮಯ :
ವಿಷಯ (Theme) :
ಕಲಿಕಾ ಸಾಧನೆಗಳು :
ಆಶಯಗಳು :
ಕೌಶಲ್ಯಗಳು :
ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) :
ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) :
ಮೌಲ್ಯಗಳು – ಮನೋಭಾವಗಳು :
ಕಲಿಕೋಪಕರಣಗಳು :
ಉತ್ಪನ್ನಗಳು :

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಮುಖ್ಯೋಪಾಧ್ಯಾಯನಿ/ಮುಖ್ಯೋಪಾಧ್ಯಾಯರ ಸಹಿ

ಅಧ್ಯಾಪಕ/ಅಧ್ಯಾಪಿಕೆಯ ಸಹಿ

## ಅವಲೋಕನ ಟಿಪ್ಪಣಿ (Reflections)

**ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು**

(ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

-
-
-
-

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

-
-
-
-

## ಅವಲೋಕನ ಟಿಪ್ಪಣಿ (Reflection note) ಯಾಕೆ?

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ SRG ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ C.E. ಕ್ರೋಡೀಕರಿಸುವುದಕ್ಕಾಗಿ.

# 2. ಕಲೆಯ ಕಲಿಕೆ – ಅಗತ್ಯ ಮತ್ತು ಪ್ರಾಧಾನ್ಯ

**ಪ್ರ**ಪಂಚದ ಯಾವುದೇ ಭಾಗದಲ್ಲಿರುವವರಿಗೆ ಆಶಯ ವಿನಿಮಯ ನಡೆಸಲು ಸಾಧ್ಯವಾಗುವ ಭಾಷೆಯ ಕಲೆ, ಕಲೆಯ ಮೂಲಕ ವ್ಯಕ್ತಿಯು ತನ್ನನ್ನು ತಾನು ತಿಳಿದುಕೊಂಡು ಪ್ರಪಂಚದಲ್ಲಿ ತನಗಿರುವ ಸ್ಥಾನವನ್ನು ಅರ್ಥಮಾಡಿಕೊಂಡು ಜೀವನದ ಅರ್ಥವನ್ನು ಕಂಡುಹಿಡಿಯುವರು. ಆದ್ದರಿಂದ ಕಲೆಯ ಕಲಿಕೆ ಎನ್ನುವರು. ಆತ್ಮ ಸಾಕ್ಷಾತ್ಕಾರಕ್ಕಿರುವ ಒಂದು ದಾರಿಯೆಂದು ತಿಳಿಯಬಹುದು.

ಕೇವಲ ಸುಖಲೋಲುಪ ಬದುಕಿನ ಹೊರತಾಗಿ ತನ್ನ ಸುತ್ತಮುತ್ತಲಿರುವ ಸೌಂದರ್ಯ ಪ್ರಪಂಚಕ್ಕೆ ಮಗುವನ್ನು ಕೊಂಡೊಯ್ಯಲು ಕಲಾಕಲಿಕೆಯು ಅತಿ ಪ್ರಧಾನವಾದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ವೈಯಕ್ತಿಕ ಮತ್ತು ಗುಂಪು ಚಟುವಟಿಕೆಗಳ ಮೂಲಕ ವಿವಿಧ ಸಾಮಾಜಿಕ ಜೀವನ ನೈಪುಣ್ಯಗಳಿಗೆ ಮಗುವನ್ನು ಕೈಹಿಡಿದು ಮುನ್ನಡೆಸಲು ಕಲೆಯಕಲಿಕೆ ಸಹಾಯಕವಾಗಿದೆ. ಸಾಂಸ್ಕೃತಿಕ ಪ್ರಜ್ಞೆ, ಮೌಲ್ಯಗಳ ಅರಿವು, ಆತ್ಮವಿಶ್ವಾಸ ಎಂಬಿವುಗಳನ್ನು ನೀಡಲು ಕಲೆಯ ಕಲಿಕೆ ಪ್ರಯೋಜನಕಾರಿಯಾಗಿದಗೆ.

ವ್ಯಕ್ತಿಯ ಸಮಗ್ರ ವಿಕಾಸವು ಶಿಕ್ಷಣದ ಮುಖ್ಯ ಗುರಿಯಾಗಿದೆ. ಶಾಸ್ತ್ರೀಯ ಮತ್ತು ಮಾನಸಿಕ ವಲಯದಂತೆ ಮಗುವಿನ ಭಾವನಾತ್ಮಕ ವಲಯವೂ, ವಿಕಾಸ ಹೊಂದಬೇಕೆಂದು ಮನಃಶಾಸ್ತ್ರದ ಸಿದ್ಧಾಂತಗಳು ಜಗತ್ತಿಗೆ ಸಾರಿವೆ. ಆ ಮೂಲಕ ಕಲೆಯ ಕಲಿಕೆಯ ಮಹತ್ವವನ್ನು ತಿಳಿದು ವಿವಿಧ ರಾಷ್ಟ್ರಗಳ ಪಠ್ಯಕ್ರಮಗಳಲ್ಲಿ ಅದು ನಿರ್ಣಾಯಕವಾದ ಸ್ಥಾನವನ್ನು ಗಳಿಸಿತು. ಬಹುಮುಖಬುದ್ಧಿ ಸಿದ್ಧಾಂತಗಳ ಪ್ರತಿಪಾದಿಸುವಂತೆ ಬುದ್ಧಿಯ ಭಿನ್ನಸ್ತರಗಳನ್ನು ಬೆಳೆಸಲು ಯೋಗ್ಯವಾದ ಮಾಧ್ಯಮವೇ ಕಲೆ., ಸಂಗೀತ, ಪ್ರಕೃತಿಪರ, ದೃಶ್ಯಸ್ಥಳಪರ, ಶಾರೀರಿಕ ಚಲನಾಪರ, ವ್ಯಕ್ತ್ಯಾಂತರ, ಆಂತರಿಕ ವೈಯಕ್ತಿಕ ಎಂಬೀ ಬೌದ್ಧಿಕ ಘಟಕಗಳಿಗೆ ಗಣ್ಯವಾದ ವಿಕಾಸ ಸಾಧ್ಯತೆಗಳನ್ನು ಕಲೆಯಕಲಿಕೆಯು ನೀಡುವುದು. ಇದರೊಂದಿಗೆ ಭಾಷಿಕ ಮತ್ತು ಗಣಿತ ಸಂಬಂಧವಾದ ಬೌದ್ಧಿಕ ವಿಕಾಸಕ್ಕೆ ಅನುವಂಶಿಕವಾದ ಅವಕಾಶಗಳನ್ನು ಇದು ಒದಗಿಸುವುದು.

ಮನುಷ್ಯ ಮನಸ್ಸನ್ನು ನಿರ್ಮಲಗೊಳಿಸಿ ಜೀವನದಲ್ಲಿ ಹೊಸ ಉತ್ತೇಜನವನ್ನು ನೀಡುವುದಕ್ಕೆ ಕಲೆಗಳಿಗೆ ಸಾಮರ್ಥ್ಯವಿದೆ. ಶಾಲೆಯಿಂದ ಕಲೆಯನ್ನು ಬೇರ್ಪಡಿಸಿದರೆ ನಾವು ಸೃಷ್ಟಿಸುವುದು ರಾಮರಾಜ್ಯಕ್ಕೆ ಬದಲಾಗಿ ರಾವಣರಾಜ ವಾಗಿರಬಹುದು ಎಂದು ಹೇಳಿದ ಶ್ರೇಷ್ಠ ಅಧ್ಯಾಪಕ ಚಿಂತಕ ಡಾ. ಎಸ್. ರಾಧಾಕೃಷ್ಣ ಅವರ ಅಭಿಪ್ರಾಯವು ಹೆಚ್ಚು ಪುಸ್ತಕವಾಗಿದೆ. ಮಕ್ಕಳನ್ನು ಕ್ರಿಯಾಶೀಲರಾಗಿಯೂ, ಉತ್ಸಾಹಶೀಲರಾಗಿಯೂ ಮಾಡುವ ಅಧಿಕ ಚೈತನ್ಯವನ್ನು ಸರಿಯಾದ ದಿಕ್ಕಿಗೆ ಬಿಡದಿದ್ದಲ್ಲಿ ಅದು ವಿನಾಶಕಾರಿಯಾಗಿ ಪರಿಣಮಿಸಬಹುದು. ಮಕ್ಕಳ ಈ ರೀತಿಯ ಅಧಿಕ ಚೈತನ್ಯವನ್ನು ಕಲೆಯ ಆಸ್ವಾದನೆ

ಹಾಗೂ ಕಲೆಯ ಪ್ರಯೋಗದ ಕಡೆಗೆ ಕೊಂಡೊಯ್ಯಬೇಕು. ಅದು ಅವರಿಗೆ ಸಮಾಜದಲ್ಲಿ ಸಂಪನ್ಮೂಲವಾಗಿ ಪರಿಣಮಿಸುವುದು.

ಅತ್ಯಂತ ಸಂಪನ್ನವೂ, ವಿಫುಲವೂ, ವೈವಿಧ್ಯಪೂರ್ಣವೂ ಆದ ಕಲಾಸಾಂಸ್ಕೃತಿಕ ಹಿನ್ನೆಲೆಯು ಭಾರತಕ್ಕಿದೆ. ಸಂಗೀತ ನೃತ್ಯ ಶಿಲ್ಪ, ನಾಟಕ ಮೊದಲಾದ ಕಲೆಗಳು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿದೆ. "ನಾಟ್ಯ ಶಾಸ್ತ್ರ" ದಂತಹ ಶ್ರೇಷ್ಠ ಕೃತಿಗಳು ಭಾರತದಲ್ಲಿ ಸೃಷ್ಟಿಯಾಗಿರುವುದು ಇಲ್ಲಿನ ಕಲೆಯ ಕಲಿಕೆ ಹಾಗೂ ಚಿಂತನೆಗಳಿಗೆ ಪ್ರಮಾಣ ಭೂತವಾಗಿವೆ. ಗುರು ಕುಲ ಶಿಕ್ಷಣ ಪದ್ಧತಿಯಲ್ಲಿ ಹಾಗೂ ಬೌದ್ದ ಧರ್ಮ ಕಾಲಘಟ್ಟದ ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳಲ್ಲಿ ಅಗತ್ಯ ಅಂಶಗಳಾಗಿ ಕಲೆಯ ಕಲಿಕೆಯೂ ಸೇರಿತ್ತು. ಭಾರತದಲ್ಲಿ ಆಧುನಿಕ ಶಿಕ್ಷಣವು ಪ್ರಚಾರ ಪಡೆದಾಗ ಪಠ್ಯಕ್ರಮದಲ್ಲಿ ಕಲೆಗಳಿಗೆ ಸ್ಥಾನ ಲಭಿಸಿತ್ತು. ಗಾಂಧೀಜಿಯವರು ಅನುಷ್ಠಾಣಕ್ಕೆ ತಂದ ಮೂಲವಿದ್ಯಾಭ್ಯಾಸದಲ್ಲಿಯೂ ಕರಕೌಶಲ್ಯಕ್ಕೆ ಹೊರತಾಗಿ ಲಲಿತಕಲೆಗಳಿಗೂ ಅವಕಾಶವಿತ್ತು. ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ವಿವಿಧ ಪಠ್ಯಕ್ರಮ ಪರಿಷ್ಕರಣೆಯ ಹಂತಗಳಲ್ಲಿ ಕಲೆಯ ಕಲಿಕೆಯು ಸೇರಿಕೊಂಡಿದ್ದರೂ, ವಿನಿಮಯ ಹಂತದಲ್ಲಿ ಕಡೆಗಣಿಸಲ್ಪಟ್ಟಿತು. ಕೇರಳದ ಸಾಮಾಜಿಕ ಜೀವನದಲ್ಲಿಯೂ ಕಲೆಯೊಂದಿಗಿರುವ ಜೈವಿಕ ಸಂಬಂಧವನ್ನು ಕಾಣಬಹುದು. ಕೃಷಿ ಹಾಗೂ ಇತರ ಉದ್ಯೋಗ ವಲಯಗಳ ವಿಧಿಯಾಚರಣೆಗಳಿಗೆ ಸಂಬಂಧಿಸಿದ ಕಲೆಗಳು ಗುರುಕುಲ ಸಂಪ್ರದಾಯದ ಕಲೆಯ ಅಭ್ಯಾಸದ ರೀತಿಯಲ್ಲಿ ತಲೆಮಾರಿನಿಂದ ತಲೆಮಾರಿಗೆ ದಾಟಿ ಬಂದಿರುವುದು ಇತಿಹಾಸ.

ಆಧುನಿಕ ಶಿಕ್ಷಣವು ವ್ಯಾಪಿಸುವ ವರೆಗೆ ಗುರುಕುಲ ಕಲೆಯ ಕಲಿಕೆಯಲ್ಲಿ ಜ್ಯಾರಿಯಲ್ಲಿತ್ತು. ಅರುವತ್ತರ ದಶಕದಲ್ಲಿ ಅನುಷ್ಠಾನಗೊಂಡ ಪಠ್ಯಕ್ರಮದಲ್ಲಿ 1 ರಿಂದ 8 ರ ವರೆಗಿನ ತರಗತಿಗಳ ವಿದ್ಯಾರ್ಥಿಗಳಿಗೆ ವರ್ಣ ಚರಿತ್ರೆ, ಮಾಡೆಲಿಂಗ್, ಸಂಗೀತ ಮೊದಲಾದ ವಲಯಗಳಲ್ಲಿ ಕಲಿಕಾನುಭವಗಳನ್ನು ನೀಡಲು ನಿರ್ದೇಶಿಸಲಾಗಿತ್ತು. ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ರೂಪಿಸಿದ ಪಠ್ಯ ಕ್ರಮದಲ್ಲಿ ವಿವಿಧ ತರಗತಿಗಳಿರುವ ವಿಸ್ತತವಾದ ಪಾಠಭಾಗಳನ್ನು ಅಳವಡಿಸಲಾಗಿತ್ತು. ಆದರೆ ಬೇಕಾದಷ್ಟು ಅಧ್ಯಾಪಕರಿಲ್ಲದಿರುವುದು, ಇರುವವರಿಗೆ ಪಠ್ಯಕ್ರಮ ವಿನಿಮಯಕ್ಕೆ ಅಗತ್ಯವಾದ ತರಬೇತಿ ಲಭಿಸದಿರುವುದು, ಈ ವಲಯದ ಅವಗಣನೆಗೆ ಕಾರಣವಾಯಿತು. ಕಲಾ ಕಲಿಕೆಯನ್ನು ಸರಿಯಾಗಿ ಮೌಲ್ಯನಿರ್ಣಯ ಮಾಡುವುದೋ, ಕಲಿಕಾಸಾಧನೆಗಳನ್ನು ಹೆತ್ತವರೊಂದಿಗೆ ಹಂಚಿಕೊಳ್ಳುವುದೋ,ಸರಿಯಾಗಿ ನಡೆಯಲ್ಲಿಲ್ಲ. ಇದರಿಂದಾಗಿ ಸಮಾಜವೂ ಈ ವಲಯವನ್ನು ಕಲಿಕೆಯ ಭಾಗ ಎಂದು ಪರಿಗಣಿಸದ ಸ್ಥಿತಿಯುಂಟಾಯಿತು. ಜಾಗತಿಕವಾಗಿ ಕಲೆಯ ಕಲಿಕೆಗೆ ನೀಡಬೇಕಾದ ಮಹತ್ವವನ್ನು ಯುನೆಸ್ಕೊ ಮೊದಲಾದ ಸಂಸ್ಥೆಗಳು ಬಿತ್ತಿ ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಭಾರತದ ವಿವಿಧ ಶಿಕ್ಷಣ ಆಯೋಗಗಳು ಶೈಕ್ಷಣಿಕ ನೀತಿನಿಯಮಗಳು ಕಲೆಯ ಕಲಿಕೆಯ ಪ್ರಧಾನ್ಯವನ್ನು ಎತ್ತಿ ಹೇಳಿವೆ. ಈ ಹಿನ್ನಲೆಯಲ್ಲಿ ಕೇರಳದ ಕಲಾಶಿಕ್ಷಣ ಪಠ್ಯಕ್ರಮವನ್ನು ಕಾಲೋಚಿತವಾದ ಪರಿಷ್ಕರಣೆಗೆ ಒಳಪಡಿಸಲಾಗುತ್ತಿದೆ.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ಕಲಾಶಿಕ್ಷಣದ ಮಹತ್ವದ ಕುರಿತು ಅಂತರಾಷ್ಟ್ರೀಯ ಮಟ್ಟದಲ್ಲೂ ರಾಷ್ಟ್ರ ಮಟ್ಟದಲ್ಲೂ ವಿವಿಧ ಸಂಸ್ಥೆಗಳು ಆಯೋಗ ಉಚಿತವಾದ ಅನೇಕ ನಿರೀಕ್ಷಣೆಗಳನ್ನು ನಡೆಸಿವೆ. ಮಕ್ಕಳಲ್ಲಿ ಆತ್ಮವಿಶ್ವಾಸ, ಆತ್ಮಸಂಬಂಧ ಇತರರನ್ನು ಅಂಗೀಕರಿಸುವುದು ಎಂಬ ಗುಣಗಳನ್ನು ಬೆಳೆಸಲು ಕಲೆಗಿರುವ ಸಾಧ್ಯತೆಯನ್ನು ಯುನೆಸ್ಕೊ ಎತ್ತಿ ಹೇಳುತ್ತದೆ. ಕಲಾಕಲಿಕೆಯೊಂದಿಗೆ ಮಕ್ಕಳಲ್ಲಿ ಭಾವನಾತ್ಮಕವೂ ಸಾಮಾಜಿಕವೂ ಆದ

ಬೆಳವಣಿಗೆ ಸಾಧ್ಯವಾಗುವದೆಂದು ಯುನೆಸ್ಕೊ ಬಯಸುತ್ತದೆ.

ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ಕಲಾಶಿಕ್ಷಣಕ್ಕೆ ಪ್ರಧಾನವಾದ ಸ್ಥಾನವಿದೆಯೆಂದು ಭಾರತದ ವಿವಿಧ ಶಿಕ್ಷಣ ಆಯೋಗಗಳು ವ್ಯಕ್ತಪಡಿಸಿವೆ.

**ಮೊದಲಿಯಾರ್ ಕಮಿಷನ್ ರಿಪೋರ್ಟ್ (1952-53) ಹೀಗೆ ಹೇಳುತ್ತದೆ –**

ಚಿತ್ರರಚನೆ ಕರಕೌಶಲ, ಸಂಗೀತ, ನೃತ್ಯ, ನಾಟಕ ಮೊದಲಾದವುಗಳಿಗೆ ಶಾಲಾ ಪಠ್ಯಕ್ರಮದಲ್ಲಿ ಪ್ರಧಾನವಾದ ಸ್ಥಾನವನ್ನು ನೀಡಬೇಕೆಂದು ಆಯೋಗವು ಸೂಚಿಸುತ್ತದೆ.

**ಕೊಠಾರಿ ಕಮಿಷನ್ ರಿಪೋರ್ಟಿನಲ್ಲಿ (1962-64) ಹೀಗೆ ಹೇಳುತ್ತದೆ –**

ಕೊಠಾರಿ ಕಮಿಷನ್ ಸೂಚನೆಗಳ ಆಧಾರದಲ್ಲಿ ಕಲಾಕಲಿಕೆಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕಾಗಿ ಪ್ರತ್ಯೇಕ ತಜ್ಞರ ಸಮಿತಿಯನ್ನು ನಂತರ ರಚಿಸಲಾಯಿತು.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ 1992 ರಲ್ಲಿ ರೂಪೀಕರಿಸಿದ ಚಟುವಟಿಕಾ ಕಾರ್ಯಕ್ರಮ (POA) ಕಾಲಾಶಿಕ್ಷಣವನ್ನು ಹೀಗೆ ಗ್ರಹಿಸಿದೆ.

An illustrated view on the cultural perspective inter linking education and culture in order to promote the process of child personality development particularly in terms of discovering the inherent potentialities of the child.

ಈ ರೀತಿಯಲ್ಲಿ ಪ್ರಿ-ಪ್ರೈಮರಿ ಯಿಂದ ಉನ್ನತ ಶಿಕ್ಷಣದ ಹಂತದವರೆಗೆ ಪಠ್ಯಕ್ರಮ ಪರಿಷ್ಕರಣೆ ಮಾಡಲು ನಿರ್ದೇಶಿಸಲಾಗಿತ್ತು.

ಎನ್.ಸಿ.ಇ.ಆರ್.ಟಿ ತಯಾರಿಸಿದ ಪಠ್ಯಕ್ರಮ ಚೌಕಟ್ಟುಗಳಲ್ಲಿ ಕಲಾಕಲಿಕೆಯ ಪ್ರಧಾನ್ಯತೆಯ ಕುರಿತು ವಿವರಿಸಲಾಗಿದೆ. 2005 ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕಲಾ ಕಲಿಕೆಗೆ ಸಂಬಂಧಿಸಿ ತಿಳುವಳಿಕೆಯನ್ನು ಪುನಃ ನಿರ್ವಚಿಸಿ ಅದರ ಸಾಧ್ಯತೆಗಳನ್ನು ವಿವಿಧ ರೀತಿಯಲ್ಲಿ ಮಂಡಿಸಿದೆ.

- ಕಲಾ ಶಿಕ್ಷಣವನ್ನು ಗಣಿತ, ವಿಜ್ಞಾನ ಎಂಬಿವುಗಳೊಡನೆ ಮೂಲ ಪಠ್ಯ ವಿಷಯವಾಗಿ ಅಂಗೀಕರಿಸಲಾಗಿದೆ.
- ಕಲೆಗಳ ಶೈಕ್ಷಣಿಕ ವಿಷಯಗಳೊಂದಿಗೆ ಸೇರಿ ಜ್ಞಾನ ಸಂಪಾದನೆಯ ಪ್ರಕ್ರಿಯೆಗಳನ್ನು ತ್ವರಿತಗೊಳಿಸಲು ಸಹಾಯ ಮಾಡುವುದು ಎಂಬ ಸಾಂಪ್ರದಾಯಿಕದ ತಿಳುವಳಿಕೆಯನ್ನು ತಿದ್ದಿ ಸರಿಪಡಿಸಲಾಗಿದೆ.
- ಕಲೆ ಎಂಬುವುದು ಜ್ಞಾನದಸ್ತರ, ಭಾವನಾಸ್ತರ, ಆಸ್ವಾದನಾಸ್ತರ ಎಂಬಿವುಗಳ ಮೂಲಕ ಮಕ್ಕಳಲ್ಲಿ ಉಂಟಾಗುವ ಪ್ರಕ್ರಿಯೆಯಾಗಿ ಬದಲಾಗಿದೆ.
- ಹೊಸ ಕಲಿಕಾ ಪ್ರಕ್ರಿಯೆಗಳನ್ನು ಅಭಿವೃದ್ಧಿಗೊಳಿಸುವ ಒಂದು ವಲಯವೇ ಕಲೆಯ ಕಲಿಕೆ ಎಂಬ ದೃಷ್ಟಿಕೋನಕ್ಕೆ ಒತ್ತು ನೀಡುವುದು.
- ಮಕ್ಕಳ ಕಲಾಸಂಬಂಧವಾದ ಬೆಳವಣಿಗೆಯೂ ವಿಕಾಸವೂ ಚೆನ್ನಾಗಿ ಪ್ರತಿಫಲಿಸಲು ಸಹಾಯಕವಾದ ಮೌಲ್ಯನಿರ್ಣಯ ತಂತ್ರಗಳನ್ನು ಅವಿಷ್ಕರಿಸಲಾಗಿದೆ.

ಇದರೊಂದಿಗೆ ಕಲಿಕೆ ಪ್ರೈಮರಿ ಮತ್ತು ಸೆಕೆಂಡರಿ ಹಂತಗಳಲ್ಲೂ ಕಡ್ಡಾಯಗೊಳಿಸಬೇಕೆಂದು ಶಿಫಾರಸು ಮಾಡಲಾಗಿದೆ.

ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಸ್ವಂತ ಸಾಮರ್ಥ್ಯಗಳು ಹಾಗೂ ಅಭಿರುಚಿಗಳನ್ನು ಪ್ರಕಟಪಡಿಸಲು ವಿದ್ಯಾರ್ಥಿಯನ್ನು ಸಮರ್ಥವಾಗಿಸಲು ಕಲಾಶಿಕ್ಷಣಕ್ಕಿರುವ ಮಹತ್ವದ ಬಗ್ಗೆ 2007–ರ ಕೇರಳ ಪಠ್ಯಕ್ರಮ ಚೌಕಟ್ಟು ಎತ್ತಿ ಹೇಳುತ್ತದೆ.

ಈ ಸೂಚನೆಗಳ ಆಧಾರದಲ್ಲಿ ನಡೆದ ಪ್ರತಿಯೊಂದು ಪಠ್ಯಕ್ರಮ ಪರಿಷ್ಕರಣೆಯಲ್ಲೂ, ಹೆಚ್ಚಿನ ವಿದ್ಯಾಭ್ಯಾಸ ವಿನಿಮಯ ಪ್ರಕ್ರಿಯೆಗಳಲ್ಲೂ ಕಲಾಶಿಕ್ಷಣಕ್ಕೆ ನಿರೀಕ್ಷಿಸಿದ ಪ್ರಗತಿ ಗಳಿಸಲು ಸಾಧ್ಯವಾಗಲಿಲ್ಲ, ಕೇವಲ ಉದ್ಯೋಗ ಸಂಪಾದನೆಯ ಸಾಧ್ಯತೆಗಳನ್ನು ಮಾತ್ರ ಮುಂದಿರಿಸಿಕೊಂಡು, ಶಾಲಾ ಶಿಕ್ಷಣವು ಸಾಗುತ್ತರುವ ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳು ಸಾಮಾಜಿಕ ಪಿಡುಗುಗಳಿಗೆ ಬಲಿಯಾಗಿ,,ಸಾಮಾಜಿಕ ಮೌಲ್ಯದ ಕುಸಿತದ ಕಡೆಗೆ ಸಾಗುತ್ತಿರುವುದು ಕಾಣಬಹುದು.

ಕಲೆಯ ಮೂಲಕ ಮಕ್ಕಳು ಗಳಿಸಬೇಕಾದ ಸಾಮಾಜಿಕ ಜೀವನದ ಪ್ರಧಾನ ಅಂಶಗಳಾದ ಸಾಂಸ್ಕೃತಿಕ ತಿಳುವಳಿಕೆ ಹಾಗೂ ಸೃಜನಾತ್ಮಕತೆಯ ವಿಕಾಸವನ್ನೂ ಪರಿಗಣಿಸದಿರುವುದು, ಈ ಮೌಲ್ಯಗಳ ಕುಸಿತಕ್ಕೆ ಕಾರಣವಾಗಬಹುದು. ಈ ಸಂದರ್ಭದಲ್ಲಿ ಇತರ ವಿಷಯಗಳಂತೆ ಕಲಾಕಲಿಕೆಯು ವೈಜ್ಞಾನಿಕ ವಲಯಗಳ ಒಂದು ವಿಷಯವಾಗಿ ಪರಿಗಳಿಸಿಕೊಂಡು ಸಮತೋಲನ ಶಿಕ್ಷಣ ರೀತಿಯನ್ನು ಕಾರ್ಯರೂಪಕ್ಕೆ ತರಬೇಕಾಗಿದೆ.

2009 ರ ಶಿಕ್ಷಣ ಹಕ್ಕು ನಿಯಮವು ಭಾರತೀಯ ಶಿಕ್ಷಣ ಚರಿತ್ರೆಯ ಇನ್ನೊಂದು ಮೈಲಿಗಲ್ಲಾಗಿ ಪರಿಗಣಿತವಾಗಿದೆ. ಮಕ್ಕಳ ಸಮಗ್ರವಾದ ಅಭಿವೃದ್ಧಿಯು ಅವನ ಮೌಲಿಕ ಹಕ್ಕುಗಳಾಗಿ ಬದಲಾಯಿತು ಎಂಬುದು ಎತ್ತಿ ಹೇಳಬೇಕಾದವ ವಿಷಯ. ಈ ವಿಶೇಷವಾದ ಹಿನ್ನೆಲೆಯಲ್ಲಿ ಕಲಾಕಲಿಕೆಯನ್ನೊಳಗೊಂಡ ವಿಷಯಗಳನ್ನು ಧೃಡಪಡಿಸಲು ಅಗತ್ಯವಾದ ಕ್ರಮಗಳನ್ನು ದೃಢಪಡಿಸಬೇಕಾದುದು ಈ ಕಾಲಘಟ್ಟದ ಅಗತ್ಯವಾಗಿದೆ.

# 3. ಕಲಾಕಲಿಕೆ – ಕಲಿಕಾ ಸಮೀಪನ

ಕಲಾಕಲಿಕೆಯು ಪಠ್ಯಕ್ರಮದ ಅಗತ್ಯವಾದ ಭಾಗವಾಗಿ ಅಂಗೀಕೃತವಾದ ಹಿನ್ನೆಲೆಯಲ್ಲಿ ಕಲಿಕಾಸಮೀಪನಗಳು ಯಾವುದಾಗಿರಬೇಕು ಎಂಬ ಸ್ಪಷ್ಟವಾದ ತಿಳುವಳಿಕೆ ಇರಬೇಕಾಗಿದೆ. ಹಿಂದೆ ವಿಜ್ಞಾನಕ್ಕೆ ಹೊರತಾದ ವಲಯ ಎಂಬ ನಿಟ್ಟಿನಲ್ಲಿ ಕಲೆಯಕಲಿಕೆಯನ್ನು ಕಾಣಲಾಗಿತ್ತು. ಆಧುನಿಕ ಮನಃ ಶಾಸ್ತ್ರದಂತೆ ವ್ಯಕ್ತಿಯ ಸಮಗ್ರ ವಿಕಾಸವೆನ್ನುವುದು ಬುದ್ಧಿಯ ವಿಭಿನ್ನ ಮಟ್ಟಗಳ ವಿಕಾಸವೇ ಆಗಿದೆ ಎಂದು ತಿಳಿದು ಬಂದಿದೆ. ವೈಜ್ಞಾನಿಕ ವಿಕಾಸದ ವಿವಿಧ ಹಂತಗಳನ್ನು ಗಾಢವಾಗಿ ಪ್ರಭಾವಿಸುವ ಪಾರಂಪರಿಕ ಹಿನ್ನೆಲೆಯುಳ್ಳ ಕಲೆಗಳು ವ್ಯಕ್ತಿತ್ವ ರೂಪೀಕರಣದಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ. ಪ್ರಿ–ಪ್ರೈಮರಿಯಿಂದ ಹೈಯರ್ ಸೆಕೆಂಡರಿ ವರೆಗಿರುವ ಶಾಲಾ ಶಿಕ್ಷಣ ಹಂತಗಳಲ್ಲಿ ಒಂದು ಪ್ರಮುಖ ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲಾಕಲಿಕೆಯನ್ನು ಸಮೀಪಿಸಬೇಕಾಗಿದೆ.

ನಮ್ಮ ಶಿಕ್ಷಣದಲ್ಲಿ ಕಲೆಗಳ ಕಲಿಕೆಯನ್ನು ಪ್ರೋತ್ಸಾಹಿಸುವುದಿಲ್ಲ ಮಾತ್ರವಲ್ಲ ಮಕ್ಕಳನ್ನು ಕಲೆಯಕಲಿಕೆಯಿಂದ ನಿರುತ್ಸಾಹಗೊಳಿಸುತ್ತಾರೆ ಎಂಬುದನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (2005) ನಿರೀಕ್ಷಣೆಯು ಹೆಚ್ಚು ಪುಸ್ತಕವಾಗಿದೆ. ಕಲೋತ್ಸವ ಸ್ಪರ್ಧೆಗಳ ಸಿದ್ಧತೆ ಹಾಗೂ ಆ ಮೂಲಕ ಶಾಲೆಗಳಿಗೆ ಲಭಿಸುವ ಬಹುಮಾನಗಳು ಎಂಬ ಗುರಿಗೆ ಕಲೆಯ ಕಲಿಕೆ ಸೀಮಿತವಾಗಿದೆ. ಶಾಲೆಗೆ ಪ್ರವೇಶ ಪಡೆಯುವ ಎಲ್ಲಾ ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಇರುವ ಕಲಿಕಾ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ಪ್ರತಿಯೊಬ್ಬ ಮಗುವಿನಲ್ಲಿರುವ ವಿಶೇಷವಾದ ಕಲಾಭಿರುಚಿಗಳನ್ನು ಪರಿಗಣಿಸಬೇಕಾಗಿದೆ.

ಶಿಶುಕೇಂದ್ರಿತ ಪಠ್ಯಕ್ರಮವು ಸಾಮಾನ್ಯವಾಗಿ ಅಂಗೀಕ್ರತವಾಗಿದ್ದರೂ ಕಲಾಕಲಿಕೆಯ ವಿಷಯದಲ್ಲಿ ಅದೇ ಪ್ರಮಾಣದಲ್ಲಿ ಸ್ವೀಕೃತವಾಗಿಲ್ಲ. ಪ್ರತಿಯೊಬ್ಬ ಮಗುವಿನ ಸಾಮರ್ಥ್ಯಗಳನ್ನು ಸಾಧ್ಯತೆಗಳನ್ನು ಗುರುತಿಸಿಕೊಂಡು ಸೃಜನಶೀಲ ವಿಕಾಸಕ್ಕೆ ಅಗತ್ಯವಾದ ರೀತಿಯಲ್ಲಿ ಕಲಿಕಾಪ್ರಕ್ರಿಯೆ ರೂಪುಗೊಳ್ಳುವಾಗ ಮಾತ್ರ ಶಿಶುಕೇಂದ್ರಿತ ಸಮಿಪನವು ಯಶಸ್ವಿಯಾಗುವುದು. ಶಿಶುಕಲೆ ಎನ್ನುವುದು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ್ದಾಗಿದ್ದು, ಮಗುವಿನ ಭಾವನೆಯಲ್ಲಿ ವಸ್ತುಗಳ ನಿಜವಾದ ಚಿತ್ರಗಳೋ, ಭಾವನೆಗಳೋ, ರೂಪಗಳೋ ಅಥವಾ ಶಬ್ದಗಳೋ ಅದೇ ರೀತಿಯಲ್ಲಿ ಮೂಡಿಬರಬೇಕೆಂದಿಲ್ಲ ಪ್ರತಿಯೊಂದು ವಿಷಯವನ್ನು ಮಗುವಿನ ದೃಷ್ಟಿಯಿಂದ ನೋಡಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು. ಬಾಲಭಾವನೆಗಳನ್ನು ಅರ್ಥಮಾಡಿಕೊಳ್ಳುವುದೇ ಶಿಶುಕೇಂದ್ರಿತ ಕಲಾಕಲಿಕೆಯ ತಿರುಳು. ಯಾವಾಗಲೂ ಕಲಾಕಲಿಕೆ ಮಗುವಿನ ಅನುಭವ ಪರಿಸರದಿಂದ ಆರಂಭವಾಗುವುದು. ಪರಿಚಿತವಾದ ಜಾನಪದ ಗೀತೆಗಳೋ ಸಿನೆಮಾಹಾಡುಗಳೋ ಆಚರಣಾತ್ಮಕ ಹಾಡುಗಳೆಲ್ಲಾ ವಿದ್ಯಾರ್ಥಿಯ ಸಂಗೀತ

ಸಂಬಂಧವಾದ ಅನುಭವ ಪರಿಸರವಾಗಿದೆ. ಈ ರೀತಿಯ ಹಾಡು ಹಾಗೂ ಬಾಯಿತಾಳಗಳಿಗೆ ಹೊಂದಿಕೊಂಡಿರುವ ತಾಳಬದ್ಧ ಚಲನೆಗಳೇ ಮಗುವಿನ ನೃತ್ಯಜ್ಞಾನದ ಅಡಿಪಾಯವಾಗಿರಬಹುದು. ಇತರರ ಪ್ರೇರಣೆ ಇಲ್ಲದ ಮಗು ಸ್ವಯಂ ಸುರಿದುಕೊಳ್ಳುವ, ಪ್ರತ್ಯಕ್ಷವಾಗಿ ಅಪೂರ್ಣವೂ, ಅಸಮತೋಲನವೂ ಆಗಿದೆ ಎಂದು ಹಿರಿಯರು ಭಾವಿಸುವ ಚಿತ್ರಗಳೇ ಚಿತ್ರಕಲೆಯಲ್ಲಿ ಅವರ ಅಡಿಪಾಯವಾಗಿದೆ.

ಹೀಗೆ ಸಹಜವಾಗಿ ಬಂದಿರುವ ಕಲಾ ಪ್ರಜ್ಞೆಯನ್ನು ಅಧ್ಯಾಪಕರು ಪ್ರೋತ್ಸಾಹಿಸಿ, ಬೆಳೆಸಿ ಉತ್ತಮ ಪ್ರದರ್ಶನದ ಕಡೆಗೆ ಕೊಂಡೊಯ್ಯಬೇಕು ಇದರೊದಿಗೆ ಆಯಾ ಪ್ರದೇಶದ ಸಾಂಸ್ಕೃತಿಕ ಇತಿಹಾಸವೆಂಬ ನಿಟ್ಟಿನಲ್ಲಿ ಅಭಿವೃದ್ಧಿ ಪಡಿಸಿದ ಸಂಗೀತ ನೃತ್ಯ ನಾಟಕವೇ ಮೊದಲಾದ ಕಲೆಗಳು, ಕಲೆಯ ಅಂಶವನ್ನು ಅಳವಡಿಸಿಕೊಂಡಿರುವ ಕೈಕೆಲಸಗಳು ಮಗುವಿನ ಅನುಭವ ಪರಿಸರವಾಗಿ ಅಧ್ಯಾಪಕರು ಅರ್ಥಮಾಡಿಕೊಳ್ಳಬೇಕಾಗಿದೆ. ಮಗುವು ಪ್ರಪಂಚವನ್ನು ತನ್ನ ಜ್ಞಾನೇಂದ್ರಿಯಗಳ ಮೂಲಕ ತಿಳಿಯುವುದು. ದರ್ಶನ, ಸ್ಪರ್ಶ, ಶ್ರವಣಗಳ ಮೂಲಕ ಪ್ರಕೃತಿಯ ಸಮಗ್ರತೆಯನ್ನು ಸ್ವಾಂಶೀಕರಿಸುವಾಗ ಕಲಿಕೆಗೆ ಕಲಾಪ್ರದರ್ಶನಗಳಲ್ಲಿ ಹಿರಿಮೆಯುಂಟಾಗುವುದು. ಇಂತಹ ವಿಷಯಗಳು ದೈನಂದಿನ ಜೀವನದಲ್ಲಿ ಕಲೆಯ ಕಲಿಕೆಯ ಮೂಲಕ ಗಳಿಸುವ ನಿರೀಕ್ಷಣಾ ಸಾಮರ್ಥ್ಯವು ಹೆಚ್ಚಿಸಲು ಪ್ರಯೋಜನಕಾರಿಯಾಗಿದೆ.

ಶಾಲೆಗಳಲ್ಲಿ ಕಲಾಸಂಬಂಧವಾದ ಪ್ರದರ್ಶನಕ್ಕೆ ಹೆಚ್ಚು ಮಹತ್ವ ಲಭಿಸುವುದು. ವಾಸ್ತವವಾಗಿ ದೃಶ್ಯ ಶ್ರಾವ್ಯ ಸೌಂದರ್ಯಗಳನ್ನು ಗುರುತಿಸಿಕೊಂಡು ಆಸ್ವಾದಿಸುವುದೆಂಬುದು ಕಲೆಯ ಕಲಿಕೆಯಲ್ಲಿ ಸ್ವೀಕರಿಸಬೇಕಾದ ಸಮೀಪನವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ವ್ಯತ್ಯಸ್ತ ಸಾಮರ್ಥ್ಯವಿರುವವರಾದುದರಿಂದ ಆಸ್ವಾದನೆಯಲ್ಲೂ, ಪ್ರದರ್ಶನದಲ್ಲೂ ಅಂತರವಿರುವುದು ಸಹಜವಾಗಿರುವುದು. ಪ್ರತಿಯೊಬ್ಬ ಮಗುವಿಗೂ ಗರಿಷ್ಟವಾದ ಮಟ್ಟಕ್ಕೆ ವೈಯುಕ್ತಿಕವಾಗಿ ತಲುಪಲು ಅವಕಾಶ ನೀಡಬೇಕು. ನೈಸರ್ಗಿಕವಾದ ಬೆಳವಣಿಗೆಯೆಂಬ ಆಧುನಿಕ ಕಲ್ಪನೆಯೂ ಪುನರಾವರ್ತನ ಕಲಿಕೆಯೂ ತಮ್ಮೊಳಗೆ ಹೊಂದಿಕೊಳ್ಳುವುದಿಲ್ಲ ಕಲೆಯ ಕಲಿಕೆಯನ್ನು ಸ್ವೀಕರಿಸುವಾಗ ಮಕ್ಕಳ ಸೃಜನಾತ್ಮಕತೆಯನ್ನು ಗರಿಷ್ಟವಾಗಿ ಪರಿಗಣಿಸಿಕೊಂಡು ಸಹಜವಾದ ಬೆಳವಣಿಗೆಯತ್ತ ಕೊಂಡೊಯ್ಯಬೇಕು. ಇದಕ್ಕಾಗಿ ಸಂಯೋಜಿತ ಕಲಿಕಾ ರೀತಿಯನ್ನು ಮೊದಲ ಹಂತದಲ್ಲಿ ಸ್ವೀಕರಿಸಬೇಕು. ಆದರೆ ಆರಂಭದಿಂದಲೇ ಕಲೆಯಕಲಿಕೆಗೆ ನವೀನವಾದ ಅಸ್ಥಿತ್ವವಿದೆ ವಿಷಯ ಬಂದಿತವಾದ ಸಂಯೋಜಿತ ಸಾಧ್ಯತೆಗಳನ್ನು ಉಪಯೊಗಪಡಿಸುವುದರೊಂದಿಗೆ ಕಲೆಯ ವಿವಿಧ ಹಂತಗಳನ್ನು ತಮ್ಮೊಳಗೆ ಅಳವಡಿಸಿಕೊಂಡಿರುವುದು.

ಕಲೆಯ ಕಲಿಕೆಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ನಾಟಕ ಎಂಬೀ ವಿಭಾಗಗಳನ್ನು ಅಳವಡಿಸಲಾಗಿದೆ.

ಪ್ರಿ–ಪ್ರೈಮರಿ ಮಕ್ಕಳು (3–5 ವರ್ಷ) ಅತೀವ ಜಿಜ್ಞಾಸೆಯುಳ್ಳವರು, ಅತ್ಯಧಿಕ ಚೈತನ್ಯ ಇರುವವರು ಆಗಿದ್ದಾರೆ. ಮಕ್ಕಳ ಈ ಸ್ವಭಾವವನ್ನು ವಿವಿಧ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಕಲಿಕೆಗೆ ಪ್ರಯೋಜನ ಪಡಿಸಬೇಕು. ಒಂದು ಮತ್ತು ಎರಡನೇ ತರಗತಿಗಳಲ್ಲಿ ಪೂರ್ಣವಾಗಿ ಸಂಯೋಜಿತ ಸಮೀಪನವನ್ನು ಸ್ವೀಕರಿಸಬೇಕಾಗಿದೆ. ಮುಂದಿನ ಹಂತಗಳಲ್ಲೂ ವಿವಿಧ ರೂಪಗಳ ಮೂಲಕ ಮಗುವಿನ ಆಂತರಿಕ ಪ್ರತಿಭೆಗಳನ್ನು ಪ್ರದರ್ಶಿಸಲು ಅವಕಾಶ ನೀಡಬೇಕು. ವಿವಿಧ ಕಲಾವಲಯಗಳಲ್ಲಿ ಪ್ರಾವೀಣ್ಯವನ್ನು ಅಧ್ಯಾಪಕ ಕರಬೇತಿ ಪಡೆದಿರುವ ಜನರ ಸೇವೆಯನ್ನು ಎಲ್ಲಾ ಹಂತಗಳಲ್ಲೂ ದೃಡಪಡಿಸಬೇಕು.

ಹೈಯರ್ ಸೆಕೆಂಡರಿ ಹಂತದವರೆಗೆ ಪ್ರದರ್ಶನಾತ್ಮಕ ಕಲೆಗಳು ಹಾಗೂ ದೃಶ್ಯಕಲೆಗಳನ್ನು ಕಲಿಕಾ ಮಾಧ್ಯಮವೆಂಬ ನಿಟ್ಟಿನಲ್ಲಿ ಉಪಯೋಗಪಡಿಸಬೇಕು. ಆದರೆ ಇದನ್ನು ಅಸಹಜ ರೀತಿಯಲ್ಲಿ ಆಗದಂತೆ ನೋಡಿಕೊಳ್ಳಬೇಕು. ದೇಶಿಯ ಪಠ್ಯಕ್ರಮ ಚೌಕಟ್ಟು–2005 ಕಲೆಯ ಕಲಿಕೆ ಪೊಸಿಷನ್ ಪೇಪರ್ ನೀಡುವ ಸೂಚನೆ ಇಲ್ಲಿ ಪುಸ್ತಕವಾಗಿದೆ.

ವಿವಿಧ ಸ್ಥಳಗಳ ತರಗತಿಗಳಲ್ಲಿ ನಡೆಸಿರುವ ಕಲಿಕೆಗಳು ಸೂಚಿಸುವುದೇನೆಂದರೆ , ಕಲಿಕಾರ್ಥಿಗಳಿಗೆ ಸ್ವತಂತ್ರ ಅವಕಾಶಗಳನ್ನು ನೀಡುವಾಗ ಕಲಾ ಸಂಬಂಧವಾದ ಹೆಚ್ಚು ಉತ್ತಮಪಡಿಸಿದ ಪ್ರದರ್ಶನಗಳು ಹೊರಹೊಮ್ಮಬಹುದು. ಮಗುವಿನ ಮನೋಧರ್ಮದ ಪ್ರದರ್ಶನಕ್ಕೆ ತಟಸ್ಥ ವಾಗದಂತೆ, ಸೃಜನಾತ್ಮಕವಾಗಿ ಪ್ರೋತ್ಸಾಹಿಸುವ ಸಮೀಪನವನ್ನು ಆರಂಭದಿಂದಲೇ ಸ್ವೀಕರಿಸುವುದು ಪ್ರಧಾನವಾಗಿದೆ ಎಂದು ಇದು ಮಂಡಿಸಿದೆ.

ಕಲಿಕೆಯಲ್ಲಿ ಅಧ್ಯಾಪಕನೊಂದಿಗೆ ರಕ್ಷಕರ ಪಾತ್ರವು ಅಂಗೀಕರಿಸಲ್ಪಡುತ್ತಿದೆಯಲ್ಲವೇ? ಕಲೆಯಕಲಿಕೆಯ ಮಹತ್ವವನ್ನು ಸಮಾಜವು ಇನ್ನೂ ಗುರುತಿಸಿಕೊಂಡಿಲ್ಲ. ಆದ್ದರಿಂದ ರಕ್ಷಕರ ಸಾನಿಧ್ಯ ಸಹಕಾರವು, ಭಾಗವಹಿಸುವಿಕೆಯು ದೃಡಪಡಿಸಲಿರುವ ಮಾರ್ಗೋಪಾಯಗಳನ್ನು ತಿಳಿಯಬೇಕಾಗಿದೆ. ಪ್ರಾದೇಶಿಕ ತಜ್ಞರನ್ನು (Local Resources) ಕಂಡುಹಿಡಿದು ಅವರ ಸಹಕಾರದಿಂದ ಕಲೆಯಕಲಿಕೆಯನ್ನು ಹೆಚ್ಚು ಕಾರ್ಯಕ್ಷಮಗೊಳಿಸಲಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.

## ಕಲಾಶಿಕ್ಷಣ–ವಿವಿಧ ನಿರೀಕ್ಷಣೆಗಳು

ವೈಯುಕ್ತಿಕವಾದ ಅನುಭವವೇ ಕಲೆ. ಕಲಿಕಾರ್ಥಿಗೆ ಕಲಾಸಂಬಂಧವಾದ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಾದ ಪ್ರಚೋದನೆ, ಚಟುವಟಿಕೆಗಳು, ಮಾರ್ಗನಿರ್ದೇಶನಗಳು, ಸಹಾಯವೂ ಕಲೆಯಕಲಿಕಾ ತರಗತಿಗಳಿಂದ ದೊರಕಬೇಕು. ಅದಕ್ಕಾಗಿ ಬಣ್ಣ, ಆಕೃತಿ, ರೂಪ, ಚಲನೆ, ತಾಳ, ಶಬ್ಧ ಎಂಬಿವುಗಳ ಮೂಲಕ ಸೌಂದರ್ಯವನ್ನು ಕಂಡುಕೊಂಡು ಅವುಗಳೊಂದಿಗೆ ಪ್ರಕ್ರಿಯಿಸಲಿರುವ ಆಸ್ವಾದನಾ ಸಾಮರ್ಥವನ್ನು ಸೃಷ್ಟಿಸಿ ಬೆಳೆಸಲಿರುವ, ವೈವಿಧ್ಯವಾದ ಕಲಿಕಾನುಭವಗಳನ್ನು ಕಲಾಕಲಿಕೆ ತರಗತಿಗಳಲ್ಲಿ ಅಳವಡಿಸಬೇಕಾಗಿದೆ. ಸಂಗೀತ, ನೃತ್ಯ, ಚಿತ್ರರಚನೆ,ಶಿಲ್ಪಕಲೆ, ನಾಟಕ ಸಿನೆಮಾ ಮೊದಲಾದ ವಿವಿಧ ಮಲಯಗಳಲ್ಲಾಗಿ ಅವಕಾಶವನ್ನು ನೀಡಬೇಕು.

ಒಂದು ಪಠ್ಯವಿಷಯವೆಂಬ ನಿಟ್ಟಿನಲ್ಲಿ ಕಲೆಯಕಲಿಕೆಯ ಗುರಿಗಳು ಹಾಗೂ ಉದ್ದೇಶಗಳನ್ನು ನಾವು ಈ ಕೆಳಗಿನ ರೀತಿಯಲ್ಲಿ ನಿರ್ಣಯಿಸಬಹುದು.

- ಕಲಿಕಾರ್ಥಿಯ ನೈಸರ್ಗಿಕವಾದ ಕಲಾಭಿರುಚಿಗಳನ್ನು ಗುರುತಿಸಿಕೊಂಡು ಬೆಳೆಸಬೇಕು.
- ವಿವಿಧ ಕಲೆಗಳನ್ನು ಆಸ್ವಾದಿಸಲು ಕಲೆಯ ಸೌಂದರ್ಯವನ್ನು ಅಳವಡಿಸಿಕೊಳ್ಳಲು.
- ಕಲೆಗಳ ಆಸ್ವಾದನೆಯನ್ನೊಳಗೊಂಡ ಸಮಾಜದಲ್ಲಿ ಮಾನವೀಯ ದೃಷ್ಟಿಕಾನವನ್ನು ರೂಪೀಕರಿಸಲು.
- ಸಾಂಸ್ಕೃತಿಕ ವೈವಿಧ್ಯತೆಯನ್ನು ಗುರುತಿಸಿಕೊಂಡು ಸಾಂಸ್ಕೃತಿಕ ತಿಳುವಳಿಕೆಯನ್ನು ಬೆಳೆಸಲು.
- ಕಲೆಯ ಚೈತನ್ಯವನ್ನೊಳಗೊಂಡು ನವೀನವಾದ ಚಿಂತನೆಗಳಲ್ಲಿ ತೊಡಗಿಸಿಕೊಂಡು ಸಮತೋಲನವಾದ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸಲು.

- ಕಲೆಯನ್ನು ಉಪಯೋಗಿಸಿಕೊಂಡು ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸಲು (Art applied learning).
- ಬಹುಮುಖ ಪ್ರತಿಭೆಗಳ ವಿಕಾಸದ ಸಾಧ್ಯತೆಗಳನ್ನು ಪ್ರಯೋಜನಪಡಿಸಲು.
- ವಿಭಿನ್ನ ಮಟ್ಟದ ವಿದ್ಯಾರ್ಥಿಗಳನ್ನು ಏಕರೀತಿಯಲ್ಲಿ ಕಲಿಕಾ ಚಟುವಟಿಕೆಗಳಲ್ಲಿ ಆಸಕ್ತಿ ಮೂಡಿಸುವುದು.
- ಅಮೂರ್ತವಾದ ಅನುಭವಗಳನ್ನು ಮೂರ್ತವಾದ ಪ್ರತಿಬಿಂಬಗಳಾಗಿ ಪರಿವರ್ತಿಸುವುದರ ಮೂಲಕ ಮಾನಸಿಕ ಉಲ್ಲಾಸ ಪಡೆಯಲು.
- ವಿವಿಧ ಕಲಿಕಾ ಚಟುವಟಿಕೆಗಳಲ್ಲಿ ಅನುರೂಪೀಕರಣ ಸಾಧ್ಯತೆಗಳನ್ನು ಕಂಡುಹಿಡಿದು ಸದುಪಯೋಗಪಡಿಸಿಕೊಳ್ಳಲು.
- ಮಕ್ಕಳ ಆಸ್ವಾದನಾ ಮಟ್ಟವನ್ನು ಹೆಚ್ಚಿಸಲು.
- ವಿವಿಧ ಕಲೆಗಳಲ್ಲಿ ಪ್ರತ್ಯೇಕ ಅಭಿರುಚಿಯಿರುವ ಮಕ್ಕಳ ಸೃಜನಾತ್ಮಕತೆಯ ಬೆಳವಣಿಗೆಗೆ.
- ವಿವಿಧ ಕಲೆಗಳಲ್ಲಿ ಆಸಕ್ತಿ ಮೂಡಿಸಲು.
- ಕಲಾಗಾರರನ್ನು ತಿಳಿಯಲೂ, ಅವರ ಕೊಡುಗೆಗಳನ್ನು ಗುರುತಿಸಿ ಗೌರವಿಸಲು.
- ತಾನು ಗಳಿಸಿದ ಕಲೆಗಳ ಬಗ್ಗೆ ಇರುವ ಜ್ಞಾನವನ್ನು ಹೊಸ ಸಂದರ್ಭದಲ್ಲಿ ಪ್ರಯೋಗಿಸಲು.
- ಸಾಮಾಜಿಕ ಪರಿಷ್ಕರಣೆಯನ್ನು ಗುರಿಯಾಗಿಸಿಕೊಂಡು ವಿವಿಧ ಕಲೆಗಳನ್ನು ಸದುಪಯೋಗ ಪಡಿಸಲು
- ವಿವಿಧ ಕಲೆಗಳ ಸಾಂಕೇತಿಕ ಅಂಶಗಳನ್ನು ಗುರುತಿಸಲೂ ಉಪಯೋಗಪಡಿಸಲು.

# 4. ಕಲೆಯ ಕಲಿಕೆ – ವಿವಿಧ ವಲಯಗಳು

**ಕ**ಲೆಗಳು ಮಾನವನ ಬೆಳವಣಿಗೆಯ ಜೊತೆಗೆ ಅಭಿವೃದ್ಧಿ ಹೊಂದಿದವುಗಳಾಗಿವೆ. ಸುತ್ತಮುತ್ತಲಿರುವ ಪ್ರಕೃತಿಯಿಂದ ಸಿಗುವ ಇಂದ್ರಿಯಾನುಭವಗಳು, ಮನಸ್ಸಿನಲ್ಲಿ ಉಂಟುಮಾಡಿದ ಅನುಕರಣೆಗಳು ಕಲೆಗಳಾಗಿ ಆವಿಷ್ಕರಿಸಲ್ಪಡುತ್ತದೆ. ಆದ್ದರಿಂದ ಕಲೆಯು ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಕೃತಿಯ ಸಹಜ ಸ್ಥಿತಿಗಳು ,ವ್ಯತ್ಯಸ್ತ ಭಾವನೆಗಳು, ಮನುಷ್ಯನಲ್ಲಿ ಉಂಟುಮಾಡಿದ ಭಾವನಾತ್ಮಕವಾದ ಸಂಬಂಧಗಳು ಕಲೆಗಳಲ್ಲೂ ಪ್ರತಿಫಲಿಸುವುದನ್ನು ಕಾಣಬಹುದು. ಇಂದ್ರಿಯಾನುಭವಗಳೊಂದಿಗೆ, ದೃಶ್ಯಗಳೊಂದಿಗೆ, ಶಬ್ಧಗಳೊಂದಿಗೆ, ಚಲನೆಯೊಂದಿಗೆ, ಹಾಗೂ ವರ್ತನೆಯೊಂದಿಗೆ ಇರುವ ಉದಾತ್ತೀಕರಣದ ಪ್ರತೀಕಗಳಾಗಿರುವುದೇ ಯಥಾಕ್ರಮದಲ್ಲಿರುವ ಚಿತ್ರಕಲೆಯಾಗಿಯೂ, ಸಂಗೀತವಾಗಿಯೂ, ನೃತ್ಯವಾಗಿಯೂ, ನಾಟಕಮಾಗಿಯೂ ಪರಿಣಮಿಸಿದೆ. ಆದ್ದರಿಂದ ಈ ಕಲೆಗಳಲ್ಲಿ ತೊಡಗಿಸಿಕೊಳ್ಳಲು ಆಸ್ವಾದಿಸಲಿರುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಬೇಕಾದುದು ಜೀವನದ ವಿಜಯಕ್ಕೆ ಅನಿವಾರ್ಯವಾಗಿದೆ.

ಈ ನಾಲ್ಕು ವಲಯಗಳಲ್ಲಾಗಿ ಕಲಾಶಿಕ್ಷಣವು ಪರಿವರ್ತಿಸುವುದು. ಇವುಗಳ ಕಲಿಕೆಯೊಂದಿಗೆ ನಿರ್ಧಿಷ್ಟವಾದ ಪ್ರತಿಭೆ ಹಾಗೂ ಸಾಮರ್ಥ್ಯಗಳ ವಿಕಾಸವನ್ನು ಗುರಿಯಾಗಿರಿಸಿಕೊಳ್ಳುವುದು. ವಿವಿಧ ತರಗತಿಗಳಲ್ಲಿ ಪ್ರತಿಯೊಂದು ವಲಯಗಳ ವ್ಯತ್ಯಸ್ತ ಮಟ್ಟದಲ್ಲಿರುವ ಕಲಿಕಾಚಟುವಟಿಕೆಗಳು ನಡೆಯುವ ರೀತಿಯಲ್ಲಿ ಆಯಾವಲಯಗಳ ಕಲಿಕಾ ಸಾಧನೆಗಳು ನಿಶ್ಚಯಿಸಲ್ಪಟ್ಟಿದೆ. ವಲಯಗಳ ಸ್ವಭಾವಕ್ಕೂ ಮಕ್ಕಳ ಮಕ್ಕಳ ಮಟ್ಟಕ್ಕೆ ಸುರಿಸಿ ಪ್ರತಿಯೊಂದು ತರಗತಿಗೂ ಪ್ರತ್ಯೇಕವಾಗಿ ತಯಾರಿಸಲಾಗಿದೆ. ಪ್ರತಿವಲಯಕ್ಕೂ ಸಂಬಂಧಿಸಿದ ಕೆಲವು ವಿವರಗಳನ್ನು ಇಲ್ಲಿ ಸೇರಿಸಿದೆ.

## 4.1 ಚಿತ್ರಕಲೆ

ಚಿತ್ರಕಲೆಯಲ್ಲಿ ಗೆರೆಗಳ ಹಾಗೂ ಬಣ್ಣಗಳ ಸಮಂಜಸವಾದ ಕೂಡುವಿಕೆಯು ಪ್ರತಿಬಿಂಬಿಸುವುದು. ದ್ವಿಮಾನ ಮೇಲ್ಮೈಯಲ್ಲಿ ಬೆಳಕನ್ನೂ ನೆರಳನ್ನು ಯೋಗ್ಯವಾಗಿ ಸಮ್ಮಿಳಿಸಿ ಸೃಷ್ಟಿಸಲ್ಪಡುವ ರೂಪಗಳು ಸೃಷ್ಟಿಸುವ ಭಾವನೆಗಳನ್ನು ಆಸ್ವಾದಕನಿಗೆ ತಲುಪಿಸುವುದಾಗಿದೆ. ರೇಖೆಗಳು ಹಾಗೂ ಬಣ್ಣಗಳು ಚಿತ್ರಗಾರನ ಸಂಪತ್ತುಗಳಾಗಿವೆ. ಸುತ್ತಮುತ್ತಲಿರುವವುಗಳ ನಿರೀಕ್ಷಣೆಯ ಮೂಲಕ ಮನಸ್ಸಿನಲ್ಲಿ ಅಚ್ಚೊತ್ತುವ ದೃಶ್ಯಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ರಚಿಸುತ್ತಾರೆ. ಅದಕ್ಕಾಗಿ ಯೋಗ್ಯವೆಂದು ತೋರುವ ಮಾಧ್ಯಮಗಳನ್ನು ಚಿತ್ರಗಾರನು ಸ್ವೀಕರಿಸುತ್ತಾನೆ.

ಚಿತ್ರರಚನೆಯ ವ್ಯತ್ಯಸ್ತ ಮಟ್ಟಗಳನ್ನು ಪ್ರತಿಯೊಂದು ಹಂತಗಳಾಗಿ ಪರಿಚಯಪಡಿಸಿಕೊಂಡು , ತರಬೇತಿ ನೀಡುವದಾಗಿದೆ. ಚಿತ್ರಕಲೆಕಲಿಕೆಯ ಪ್ರಧಾನವಾದ ಉದ್ದೇಶವಾಗಿದೆ. ಮನುಷ್ಯನು ಗುಹೆಗಳಲ್ಲಿ

ಕಳೆದಿದ್ದಂತಹ ಕಾಲದಿಂದಲೇ ಬೆಳೆದು ಅಭಿವೃದ್ಧಿ ಹೊಂದಿದ ಚರಿತ್ರೆ ಚಿತ್ರಕಲೆಗಿದೆ. ಚರಿತ್ರೆ ಹಾಗೂ ಜೀವನ ಸಂಸ್ಕೃತಿಯ ಅಭೇದ್ಯವಾದ ಸಂಬಂಧವನ್ನು ಒಳಗೊಡಿರುವುದು ಚಿತ್ರಕಲಾಕಲಿಕೆಯ ಭಾಗವಾಗಿದೆ.

**ಕಲಿಕೆಯ ಉದ್ದೇಶಗಳು**

- ಚಿತ್ರರಚನೆಯ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳಲು, ಚಿತ್ರ ರಚನೆಯಲ್ಲಿ ತೊಡಗಲು ಹಾಗೂ ಸೃಜನಾತ್ಮಕ ಸಾಮರ್ಥ್ಯವನ್ನು ಬೆಳೆಸುವುದು.
- ವಿವಿಧ ರೀತಿಯ ಚಿತ್ರರಚನಾರೀತಿಗಳನ್ನು ಪರಿಚಯಿಸಲು, ತಿಳುವಳಿಕೆಗಳನ್ನು ಗಳಿಸುವುದು.
- ಚಿತ್ರರಚನೆಯ ಮೂಲಕ ವೈಜ್ಞಾನಿಕ ನವೋಲ್ಲಾಸ ಪಡೆಯುವುದು (Infotainment) ಚಿತ್ರರಚನೆಯ ಸಾಧ್ಯತೆಗಳನ್ನು ಪ್ರಯೋಜನಪಡಿಸಿ ಜ್ಞಾನದ ಗಳಿಕೆ (Edutainment) ಯ ಮೂಲಕ ಸಂತೋಷವಾಗಿರುವುದು.
- ಚಿತ್ರಕಾರರನ್ನು ತಿಳಿಯಲು, ಚರಿತ್ರೆ ಸಂಬಂಧವಾದ ತಿಳುವಳಿಕೆಗಳನ್ನು ರೂಪೀಕರಿಸುವುದು.
- ಇತರ ವಿಷಯಗಳ ಕಲಿಕೆಯಲ್ಲಿ ಚಿತ್ರರಚನೆಯು ಸಾಧ್ಯತೆಗಳನ್ನು ಪ್ರಯೋಗಿಸುವ ತಿಳುವಳಿಕೆಯನ್ನು ಗಳಿಸುವುದು.
- ಚಿತ್ರಗಳನ್ನು ನಿರೀಕ್ಷಣೆ ಮಾಡಲು ಮತ್ತು ಆಸ್ವಾದನಾ ಮನೋಭಾವ ಬೆಳೆಸುವುದು.
- ವಿವಿಧ ಶಿಲ್ಪಗಳನ್ನು ನಿರೀಕ್ಷಿಸಲು ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವುದು.
- ಶಿಲ್ಪಕಲಾಕೇಂದ್ರಗಳನ್ನು ಸಂದರ್ಶಿಸಲು ಅವುಗಳ ಸಾಂಸ್ಕೃತಿಕ ಪ್ರಧಾನ್ಯವನ್ನು ಅಳವಡಿಸಿಕೊಳ್ಳುವುದು.
- ಶಿಲ್ಪಕಲೆಗಳ ಚರಿತ್ರೆ ಸಂಬಂಧವಾದ ಮಾಹಿತಿಗಳನ್ನು ಸಂಗ್ರಹಿಸಲು ಹೊಸ ಸಂಶೋಧನೆಗಳೆಡೆಗೆ ಕೊಂಡೊಯ್ಯುವುದು.

**ವಿವಿಧ ವಿಭಾಗಗಳು**

- ಪೆನ್ಸಿಲ್, ಕ್ರಯೋನ್, ಬಣ್ಣದ ಪೆನ್ಸಿಲುಗಳು, ಆಕ್ರಿಲಿಕ್ ಎಂಬಿವುಗಳನ್ನು ಉಪಯೋಗಿಸಿ ರಚಿಸುವ ಚಿತ್ರಗಳು , ಜಲವರ್ಣಚಿತ್ರಗಳು, ತೈಲವರ್ಣ ಚಿತ್ರಗಳು ಎಂಬಿವುಗಳ ಮೂಲಕ ರಚಿಸುವ ಪೈಟಿಂಗ್‌ಗಳು ಹೀಗೆ ಹಲವು ರೀತಿಯಲ್ಲಿ ರಚನೆಗಳನ್ನು ನಿರ್ವಹಿಸಲಾಗುತ್ತದೆ.
- ರೇಖಾಚಿತ್ರಗಳು, ಪೈಟಿಂಗ್‌ಗಳು,ಬಿತ್ತಿಚಿತ್ರಗಳು,ಅಲಂಕಾರಿಕ ಚಿತ್ರಗಳು, ಕಾರ್ಟೂನ್‌ಗಳು, ಕ್ಯಾರಿಕೇಚರ್‌ಗಳು ಹಾಗೆ ಹಲವು ವಿಭಾಗದಲ್ಲಿರುವ ಚಿತ್ರಗಳಿವೆ.
- ವಿವಿಧ ಮೇಲ್ಮೈಗಳಲ್ಲಿ ವಿವಿದ ಉಪಕರಣಗಳನ್ನು ಉಪಯೋಗಿಸಿ ಚಿತ್ರಗಳನ್ನು ರಚಿಸಲಾಗುತ್ತದೆ.

## 4.2 ಸಂಗೀತ

ಪ್ರಕೃತಿಯ ಇಂಪಾದ ಶಬ್ಧಗಳೇ ನಾದಗಳು. ನಾದಗಳು ಕ್ರಮಗತವಾಗಿ ಸೇರಿಸಿದರೆ ಸಂಗೀತವಾಗುವುದು. ಆದಿಕಾಲದಿಂದಲೇ ಸಂಗೀತವಿದೆ. ಮನುಷ್ಯನು ಪರಿಷ್ಕರಣೆ ಹೊಂದುವುದಕ್ಕೆ ಅನುಸರಿಸಿ ಸಂಗೀತವು ಪರಿಷ್ಕರಣೆಗೊಳ್ಳತೊಡಗಿತು. ಶಬ್ದ, ಮಾತು,ಚಲನೆ ಎಂಬಿವುಗಳ ಒಂದುಗೂಡುವಿಕೆಯೇ ಸಂಗೀತ. ಅದು ಒಂದೇ ಸಮಯದಲ್ಲಿ ಕಲೆಯೂ ಶಾಸ್ತ್ರವೂ ಆಗಿದೆ. ಮಾನವೀಯ ಭಾವನೆಗಳನ್ನು ಭಾಷಾತೀತವಾಗಿ ಪ್ರಕಟಿಸಲು ಸಾಧ್ಯವಾಗುವುದೇ ಸಂಗೀತದ ವಿಶೇಷತೆಯಾಗಿದೆ.

ಮಕ್ಕಳ ಮನಸ್ಸನ್ನು ಸಂಸ್ಕರಿಸಿ ಸತ್ ಸ್ವಭಾವವನ್ನು ದೃಡಗೊಳಿಸುವುದರಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ. ಸಂಗೀತದ ಕಲೆಯಿಂದ ಮನಸ್ಸನ್ನು ಶುದ್ಧೀಕರಿಸಿ, ಬುದ್ಧಿಯನ್ನು ಉದ್ದೀಪನಗೊಳಿಸುವುದರ ಮೂಲಕ ಭಾವನೆಯನ್ನು ಉತ್ತೇಜಿಸಲು ಸೃಜನಾತ್ಮಕತೆಯನ್ನು ಗಳಿಸಲು ಸಾಧ್ಯವಾಗುವುದು. ಸಂಗೀತದ ಕಲಿಕೆಯಿಂದ ಬೌದ್ಧಕ ವಿಕಾಸವೂ ಮಾನಸಿಕ ಉಲ್ಲಾಸವೂ ಲಭಿಸಬಹುದು. ವಿವಿಧ ಹಂತಗಳ ಮೂಲಕ ಮಗುವಿನಲ್ಲಿ ಸಂಗೀತಾಭ್ಯಾಸದ ಪ್ರಗತಿಯು ಸಾಧ್ಯವಾಗುವುದು.

ನಿಖರತೆ ಹಾಗೂ ಸೂಕ್ಷ್ಮತೆಯಿಂದ ಕೂಡಿದ ನಿರೀಕ್ಷಣೆ ಆಶಯ ವಿನಿಮಯ ಸಂಶೋಧನೆ, ಆಸ್ವಾದನೆ, ಪ್ರದರ್ಶನ ಎಂಬಿವುಗಳು ಆ ಹಂತಗಳಾಗಿವೆ. ತಾಳದ ಜ್ಞಾನ ಶಬ್ದಸ್ವಾಧೀನವೂ ಕ್ರಮೀಕರಣವು ಸಂಗೀತಕಲಿಕೆಗೆ ಅಗತ್ಯವಾಗಿದೆ. ಸಂಗೀತದ ಕಲಿಕಾ ಪ್ರಕ್ರಿಯೆಯಲ್ಲಿ ಮಗುವಿನ ವಿಷಯಾಸಕ್ತಿಯನ್ನು ಉತ್ತೇಜಿಸಿ ಜ್ಞಾನವು ಲಭಿಸುವಂತೆ ಮಾಡಬೇಕು. ಮಕ್ಕಳ ಪ್ರತಿಭೆಗಳನ್ನು ಗುರುತಿಸಲು, ಸ್ವೀಕರಿಸಲು, ಆಸ್ವಾದಿಸಲು, ಪ್ರೋತ್ಸಾಹಿಸಲು ಹಿರಿಯರು ತಯಾರಾಗುವಾಗಲೇ ಅದು ಪೂರ್ಣವಾಗಿ ಅಭಿವೃದ್ಧಿಹೊಂದುವುದು. ಇನ್ನಿತರ ವಿಷಯಗಳಂತೆ ಸಂಗೀತವನ್ನು ತಿಳಿಯಲು ಅನುಭವಿಸಲು ಪ್ರಕಟಿಸಲು ಅವಕಾಶವನ್ನು ನೀಡಬೇಕು.

ಇತರ ವಿಷಯಗಳ ಕಲಿಕಾಚಟುವಟಿಕೆಗಳೊಂದಿಗೆ ಸಂಗೀತದ ಕಲಿಕಾ ಸಾಧ್ಯತೆಗಳನ್ನು ಉಪಯೋಗಪಡಿಸಲು ಶ್ರದ್ಧೆವಹಿಸಬೇಕು. ಮಕ್ಕಳ ಸಂಗೀತಪರವಾದ ಸಾಮರ್ಥ್ಯಗಳನ್ನು ಸಾಧನೆಗಳನ್ನು ಸಮಾಜಕ್ಕೆ ತಿಳಿಯಪಡಿಸಲು ಪ್ರಯೋಜನಪಡಿಸಲು ಸಾಧ್ಯವಾಗಬೇಕು.

## 4.3 ನೃತ್ಯ ಕಲೆ

ಶರಿರವು ನೃತ್ಯದ ಮಾಧ್ಯಮವಾಗಿದೆ. ಅಂಗ, ಪ್ರತ್ಯಂಗ, ಉಪಾಂಗ ಎಂಬ ಎಲ್ಲಾ ಅವಯವಗಳು ಶರೀರ ಚಲನೆಯಲ್ಲಿ ಒಳಗೊಂಡಿರುತ್ತದೆ. ಇವುಗಳೆಲ್ಲಾ ಸೇರಿದ ಭಾವಪೂರ್ಣ ಅಭಿನಯವು ನೃತ್ಯವಾಗಾದರೆ

ನೃತ್ಯದ ಮೂಲಕ ಭಾವನಾತ್ಮಕವಾದ ಅನುಭೂತಿಯು ಉಂಟಾಗುತ್ತದೆ. ನೃತ್ಯವು ಆತ್ಮದ ಭಾವಪೂರ್ಣ ಅಭಿನಯವಾದುದರಿಂದ ನರ್ತಕರೂ ಅದನ್ನು ನೋಡುವವರೂ ಒಂದೇ ರೀತಿಯ ಆನಂದವನ್ನು ಅನುಭವಿಸುತ್ತಾರೆ.

ಸೌಂದರ್ಯದ ಆರಾಧನೆಯನ್ನು ಬೆಳೆಸಲು ವ್ಯಕ್ತಿಜೀವನದಲ್ಲೂ, ಸಾಮಾಜಿಕ ಜೀವನದಲ್ಲೂ ಶಿಸ್ತನ್ನು ಬೆಳೆಸಲು, ಶಾಸ್ತ್ರೀಯವಾದ ತಾಳ ನೈಪುಣ್ಯತೆ ಉಂಟಾಗಲೂ ನೃತ್ಯ ಕಲಿಕೆ ಸಹಾಯ ಮಾಡುತ್ತದೆ. ಅನುರೂಪೀಕರಣ ಸಾಧ್ಯತೆಯನ್ನು ಕಂಡುಹಿಡಿಯಲು ಮಾನಸಿಕ ಉಲ್ಲಾಸವು ಸಾಮಾಜಿಕ ಹೊಂದಾಣಿಕೆಗೂ ನೃತ್ಯಕಲಿಕೆಯು ಸಹಕರಿಸುತ್ತದೆ.

ಎಲ್ಲಾ ಮಕ್ಕಳಲ್ಲೂ ನೃತ್ಯದ ಆಸ್ವಾದನೆಯನ್ನು ಹೆಚ್ಚಿಸಲು ಶಾಲೆಗಳಲ್ಲಿ ನೃತ್ಯ ಕಲಿಕೆಯು ಗುರಿಯಾಗಿರಿಸಿಕೊಂಡಿದೆ. ಪ್ರತಿಭಾವಂತ ಮಕ್ಕಳಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಬೆಳೆಸಲು ನೃತ್ಯ ಕಲೆಯ ತರಬೇತಿ ಅನಿವಾರ್ಯವಾಗಿದೆ. ವಿವಿಧ ರೀತಿ ನೃತ್ಯಶೈಲಿಗಳು ಮುದ್ರೆ(ಸಂಕೇತ)ಗಳನ್ನು ಪರಿಚಯಪಡಲು ಭಾರತೀಯವೂ ಮತ್ತು ಕೇರಳೀಯವೂ ಆದ ನೃತ್ಯರೂಪಗಳ ಮಹತ್ವವನ್ನು ತಿಳಿಯುವುದು ಈ ಕಲಿಕೆಯ ಲಕ್ಷ್ಯವಾಗಿದೆ.

**ಕಲಿಕೋದ್ದೇಶಗಳು**

- ಚತುರ್ವಿದಾಭಿನಯಗಳ ಕುರಿತು ತಿಳುವಳಿಕೆಯನ್ನು ರೂಪೀಕರಿಸುವುದು.
- ವಿವಿಧ ರೀತಿಯ ನೃತ್ಯರೂಪಗಳನ್ನು ಪರಿಚಯಿಸುವುದು.
- ನೃತ್ಯವನ್ನು ನೋಡಿ ಆನಂದಿಸುವುದು, ನೃತ್ಯ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು.
- ವಿವಿಧ ರೀತಿಯ ನೃತ್ಯ ರೂಪಗಳ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ತಿಳಿಯುವುದು.
- ನೃತ್ಯದ ಚರಿತ್ರೆ ಸಂಬಂಧವಾದ ತಿಳುವಳಿಕೆಗಳನ್ನು ರೂಪೀಕರಿಸುವುದು.
- ಕಲಾರೂಪಗಳ ಬಗ್ಗೆ ಇನ್ನೂ ಅಧಿಕ ಸಂಶೋಧನೆಗಳನ್ನು ನಡೆಸುವುದು.
- ದೃಶ್ಯಾವಿಷ್ಕಾರಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಕಲಿಕೆಯನ್ನು ಆಸ್ವಾದಿಸುವುದು.

**ವಿವಿಧ ವಿಭಾಗಗಳು**

- ಜಾನಪದ ನೃತ್ಯಗಳು
- ಶಾಸ್ತ್ರೀಯ ನೃತ್ಯಗಳು
- ಪ್ರಾದೇಶಿಕ ನೃತ್ಯಗಳು

## 4.4 ನಾಟಕ

ನಾಟಕವು ಒಂದು ಕ್ರಿಯಾಪ್ರಧಾನವಾದ ಕಲೆಯಾಗಿದೆ. ಶಾಸ್ತ್ರೀಯ ರೀತಿಯಲ್ಲಿ ಒಂದುಗೂಡಿದ ಅಂತರ್‌ಕ್ರಿಯಾ ವಿಕಸನ ಪ್ರದರ್ಶನದ ಬಾಹ್ಯ ಆವಿಷ್ಕಾರವು ನಾಟಕವಾಗಿದೆ. ಅಭಿನಯವೂ, ಭಾವನೆಯ ಪ್ರಕಟನೆಯು ಪೂರ್ಣವೂ ಶಕ್ತವೂ ಆದ ಕ್ರಿಯೆಯಾಗಿದೆ. ಬಾಹ್ಯವಾಗಿ ಕಾಣುವುದೆಲ್ಲವೂ ಆಂತರಿಕ ಕ್ರಿಯೆಯ ಬೆಳವಣಿಗೆಗೆ ಅನುಗುಣವಾಗಿರುತ್ತದೆ. ಪ್ರತಿಯೊಂದು ನಾಟಕಕ್ಕೂ ಅದರದ್ದೇ ಆದ ಒಳಾರ್ಥಗಳು ಇರುವುದು. ಅದನ್ನು ನಾಟಕ ವೀಕ್ಷಕರಲ್ಲಿಗೆ ತಲುಪಿಸಲು ನಾಟಕ ಕರ್ತೃ, ನಾಟಕ ನಿರ್ದೇಶಕ, ನಾಟಕ ನಟರು ಎಲ್ಲರೂ ಸೇರಿ ಒಟ್ಟಿಗೆ ಪ್ರಯತ್ನಿಸುತ್ತಾರೆ.

ನಾಟಕದ ಕಥೆಗೆ ಪೂರಕವಾದ ಹೊರಗಿನಿಂದ ಕೆಲವು ಪ್ರತ್ಯೇಕ ರಂಗಸಜ್ಜಿಕೆಗಳನ್ನು ಹಾಸ್ಯಗಳನ್ನು ಸೇರಿಸಿ ನಾಟಕಾವಿಷ್ಕಾರ ಮಾಡುತ್ತಾರೆ. ಕಥೆಯ ಗುರಿ (premise) ಕಥಾ ಪಾತ್ರ(character) ಸಂಘರ್ಷ (conflict) ಸಂಭಾಷಣೆ (dialogue) ಈ ನಾಲ್ಕು ಭದ್ರ ತಳಹದಿಯ ಪರಸ್ಪರ ಸಂಯೋಜನೆಯಿಂದ ನಾಟಕ ಉಂಟಾಗುತ್ತದೆ. ಚಿತ್ರ, ಶಿಲ್ಪಕಲೆ, ಸಂಗೀತ, ಅಭಿನಯ, ನೃತ್ಯ ಎಂಬಿತ್ಯಾದಿ ಕಲೆಗಳು ನಾಟಕದಲ್ಲಿ ಒಳಗೊಂಡಿರುತ್ತದೆ.

**ಕಲಿಕೆಯ ಉದ್ದೇಶಗಳು**

- ವಿವಿಧ ನಾಟಕಗಳನ್ನು ನೋಡುವುದು ಮತ್ತು ಸಾಮಾಜಿಕ ಪ್ರಾಧಾನ್ಯತೆಯನ್ನು ತಿಳಿಯುವುದು.
- ಸರಳ ನಾಟಕಗಳಲ್ಲಿ ತೊಡಗಿಸಿಕೊಂಡು ಅಭಿನಯ ಕಲೆಯ ಸಿದ್ಧಿಯನ್ನು ಬೆಳೆಸುವುದು.
- ನಾಟಕಗಳನ್ನು ರಚಿಸಲು ಮತ್ತು ನಿರ್ದೇಶನದಲ್ಲಿ ತೊಡಗಿಸಿಕೊಳ್ಳುವ ಆಸಕ್ತಿಯನ್ನು ಬೆಳೆಸುವುದು.

- ನಾಟಕದ ತಂತ್ರಜ್ಞಾನವನ್ನು ತಿಳಿಯುವುದು, ನಾಟಕವನ್ನು ಪ್ರದರ್ಶಿಸುವುದು.
- ನಾಟಕಕ್ಕೆ ಸಂಬಂಧಿಸಿದ ವಿವಿಧ ಹಂತಗಳನ್ನು (ರಂಗಸಜ್ಜಿಕೆ, ಸಂಭಾಷಣೆ, ಅಭಿನಯ, ಸಂಗೀತ, ವಸ್ತ್ರಾಲಂಕಾರ, ವರ್ಣಾಲಂಕಾರ,ಧ್ವನಿ, ಬೆಳಕು, ನಿರ್ವಹಣೆ) ತಿಳಿಯುವುದು ಮತ್ತ ನಾಟಕ ಪ್ರದರ್ಶನದ ಮೂಲಕ ಆಸ್ವಾದನೆ, ಕಲಾರೂಪಗಳ ಬಗ್ಗೆ ಹೆಚ್ಚಿನ ಸಂಶೋಧನೆಯತ್ತ ಕೊಂಡೊಯ್ಯುವುದು.
- ವಿವಿಧ ನಾಟಕ ರೂಪಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಲ್ಲಿ ಭಾಗಿಯಾಗುವುದು.
- ನಾಟಕದ ಸಾಂಸ್ಕೃತಿಕ ಹಿನ್ನೆಲೆಯನ್ನು ತಿಳಿಯುವುದು.
- ವಿವಿಧ ವಿಷಯಗಳ ಕಲಿಕೆಗೆ ನಾಟಕದ ಸಾಧ್ಯತೆಗಳನ್ನು ತಿಳಿಯುವುದು ಮತ್ತು ಪ್ರಯೋಗಿಸುವುದು. ಕಲಿಕೆಯನ್ನು ಸಂತೋಷಕರವಾಗಿಸುವುದು
- ಸಾಮಾಜಿಕ ಬೆಳವಣಿಗೆಯಲ್ಲಿ ನಾಟಕಗಳು ವಹಿಸಿದ ಪಾತ್ರವನ್ನು ತಿಳಿಯುವುದು.

## ವಿವಿಧ ವಿಭಾಗಗಳು

- ಏಕಾಂತ ನಾಟಕಗಳು
- ಏಕಪಾತ್ರಾಭಿನಯ ನಾಟಕಗಳು
- ಬೀದಿ ನಾಟಕಗಳು
- ಪೂರ್ಣಕಾಲಿಕ ನಾಟಕಗಳು (Full lengthed plays)

# 5. ಕಲೆಯ ಕಲಿಕೆ – ಮೌಲ್ಯನಿರ್ಣಯ

**ಕ**ಲೆಯು ವಿದ್ಯಾರ್ಥಿಯ ಆಸ್ವಾದನಾ ಸಾಮರ್ಥ್ಯವನ್ನು ಸದಾ ಅಭಿವೃದ್ಧಿಪಡಿಸುತ್ತಿರುವುದು ಪ್ರಧಾನ ಘಟಕವಾಗಿದೆ. ಪ್ರದರ್ಶನಕ್ಕೆ (Performence) ಹೆಚ್ಚಿನ ಪ್ರಧಾನ್ಯತೆಯುಳ್ಳ ವಿಷಯವು ಕಲೆಯಾಗಿದೆ. ಬೆಳೆದು ಬರುತ್ತಿರುವ ಹೊಸ ತಲೆಮಾರಿನ ಮಕ್ಕಳ ಮಾನಸಿಕ ಸಂಕಷ್ಟಗಳು ಮತ್ತು ಉದ್ವಿಗ್ನತೆಗಳನ್ನು ಕಡಿಮೆಗೊಳಿಸಲು ಕಲಾಶಿಕ್ಷಣದ ಸಾಧ್ಯತೆಗಳನ್ನು ತಿಳಿಯಬೇಕಾಗಿದೆ. ಶಾಲಾ ಮಟ್ಟದಲ್ಲಿ ಕಲಾಶಿಕ್ಷಣದ ವಿಭಾಗದಲ್ಲಿ ಚಿತ್ರಕಲೆ (drawing) ಸಂಗೀತ (music) ನೃತ್ಯ (dance) ನಾಟಕ (drama) ಎಂಬೀ ನಾಲ್ಕು ಶಾಖೆಗಳು ಒಳಗೊಂಡಿರುತ್ತವೆ. ಈ ನಾಲ್ಕು ಶಾಖೆಗಳಲ್ಲಿರುವ ಸಾಮಾನ್ಯಜ್ಞಾನ ಪಾಠ್ಯಪದ್ಧತಿಯಲ್ಲಿ ಒಳಗೊಂಡಿರುತ್ತದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ತರಗತಿಗಳಲ್ಲಿ ವಿದ್ಯಾರ್ಥಿ ಪಡೆಯಬೇಕಾದ ಕಲಿಕಾ ಸಾಧನೆಗಳನ್ನು (Learning outcomes) ಮೊದಲೇ ತಯಾರಿಸಲಾಗಿದೆ. ಶಾಲಾ ಪಠ್ಯಪದ್ಧತಿಯಲ್ಲಿನ ಸಾಮಾನ್ಯ ವಿಷಯಗಳಾದ ಭಾಷೆ, ಗಣಿತ, ವಿಜ್ಞಾನ, ಪರಿಸರ ವಿಜ್ಞಾನ ಮೊದಲಾದ ವಿಷಯಗಳನ್ನು ಕಲಿಯುವ ರೀತಿಯಲ್ಲಿಯೇ ಕಲಾಶಿಕ್ಷಣವನ್ನು ಕಲಿಯಲು ವಿದ್ಯಾರ್ಥಿಗೆ ಅವಕಾಶವನ್ನು ಒದಗಿಸಬೇಕು. ಕಲಾಶಿಕ್ಷಣದ ಎಲ್ಲಾ ವಲಯಗಳಲ್ಲೂ ಲಭಿಸುವ ಜ್ಞಾನವನ್ನು ಹೆಚ್ಚಿಸಲು ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಹಿರಿಮೆಯನ್ನು ಪ್ರದರ್ಶಿಸುವ ವಿಭಾಗದಲ್ಲಿ ಮಕ್ಕಳನ್ನು ಮುಂದುವರಿಯುವಂತೆ ಪ್ರೋತ್ಸಾಹಿಸಲು ಇದರಿಂದ ಸಾಧ್ಯ.

ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಗಳ ಅವಿಭಾಜ್ಯ ಘಟಕವು ಮೌಲ್ಯನಿರ್ಣಯವಾಗಿದೆ. ಕಲೆಗೆ ಸಂಬಂಧಿಸಿ ರೂಪಕಲ್ಪನೆ ಮಾಡಿದ ಕಲಿಕಾ ಸಾಧನೆಗಳು ಎಷ್ಟು ಮಾತ್ರ ತೃಪ್ತಿಕರವಾಗಿ ನಿರ್ವಹಿಸಲ್ಪಟ್ಟಿವೆ, ಮಕ್ಕಳ ಅಭಿರುಚಿಯನ್ನು ಕಂಡುಹಿಡಿಯಲು, ಕಲಿಕೆಯನ್ನು ಆಹ್ಲಾದಕರವಾಗಿಸಲು ಸಾಧ್ಯವಾಗಿದೆಯೋ? ಮುಂತಾದವುಗಳನ್ನು ಮೌಲ್ಯನಿರ್ಣಯಗಳ ಮೂಲಕ ತಿಳಿಯಬೇಕು. ಕಲಾಶಿಕ್ಷಣದ ಮೌಲ್ಯನಿರ್ಣಯಕ್ಕೆ ಸಂಬಂಧಿಸಿದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

**ಮೌಲ್ಯನಿರ್ಣಯ ಎಂದರೇನು?**

ಕಲೆಗೆ ಸಂಬಂಧಿಸಿ ಶಾಲೆಯ ಒಳಗಿನಿಂದ ಮತ್ತು ಹೊರಗಿನಿಂದ ವಿದ್ಯಾರ್ಥಿ ಗಳಿಸಿದ ವಿವಿಧ ಸಾಮರ್ಥ್ಯಕಗಳು, ನೈಪುಣ್ಯತೆಗಳು ಮತ್ತು ಇವುಗಳನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಲು ಸಾಧ್ಯವಾಗಿದೆ ಎಂಬ ಸಂಶೋಧನೆಯೇ ಮೌಲ್ಯಮಾಪನ. ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ನೀಡುವ ರೀತಿಯಲ್ಲಿರುವ ಮೌಲ್ಯಮಾಪನ ಇಲ್ಲಿ ಅತ್ಯಗತ್ಯ. ಮೌಲ್ಯಮಾಪನವು ಕಲಾಶಿಕ್ಷಣದ ಪುರೋಗತಿಯ ಮೌಲ್ಯನಿರ್ಣಯ ಆಗಿರಬೇಕು. ಸ್ವತಃ ತಿದ್ದಿಕೊಂಡು ವಿದ್ಯಾರ್ಥಿಗೆ ಎಷ್ಟರ ಮಟ್ಟಿಗೆ ಮುಂದುವರಿಯಲು ಸಾಧ್ಯವಾಗಿದೆ ಎಂಬುವುದರ ಮೌಲ್ಯನಿರ್ಣಯವಾಗಿರಬೇಕು.

**ಮೌಲ್ಯನಿರ್ಣಯ ಹೇಗೆ?**

ಕಲಿಕಾಸಾಧನೆಗಳಿಗೆ ಪ್ರಾಧಾನ್ಯತೆಯನ್ನು ಕಲ್ಪಿಸುವ ಪಾಠ್ಯಪದ್ಧತಿಯನ್ನು 2013 ರಲ್ಲಿ ಆವಿಷ್ಕರಿಸಿ ಜ್ಯಾರಿಗೆ ತರಲಾಯಿತು. ಆದುದರಿಂದ ಮೌಲ್ಯನಿರ್ಣಯ ನಡೆಸುವಾಗ ಕಲಿಕಾಸಾಧನೆಗಳಿಗೆ ಒತ್ತು ನೀಡಬೇಕಾಗಿದೆ. ಕಲಾಶಿಕ್ಷಣಕ್ಕೆ ಸಂಬಂಧಿಸಿದ ಕಲಿಕಾಸಾಧನೆಗಳು ಎಷ್ಟರ ಮಟ್ಟಿಗೆ ತೃಪ್ತಿಕರವಾಗಿ ಗಳಿಸಲು ಸಾಧ್ಯವಾಯಿತು ಎಂಬುವುದರ ಮೌಲ್ಯನಿರ್ಣಯವನ್ನು ಅಧ್ಯಾಪಕರು ನಡೆಸಬೇಕಾಗಿದೆ.

ಅದಕ್ಕಾಗಿ ನಿರಂತರವೂ ಸಂಪೂರ್ಣವೂ ಆದ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರಬೇಕು. ಈ ರೀತಿಯ ಮೌಲ್ಯನಿರ್ಣಯ ರೀತಿಯನ್ನು ಕಾರ್ಯರೂಪಕ್ಕೆ ತರುವಾಗ ಕಲಾಶಿಕ್ಷಣದ

ಪ್ರತಿಯೊದು ವಿಭಾಗಗಳನ್ನೂ ಒಂದುಗೂಡಿಸಿ ಎರಡು ರೀತಿಯ ಮೌಲ್ಯನಿರ್ಣಯಕ್ಕೆ ಅವಕಾಶವನ್ನು ನೀಡಬೇಕು.

- ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗೆ ಮೌಲ್ಯನಿರ್ಣಯ.
- ಪ್ರದರ್ಶನ (Performance)ಗಳ ಮೌಲ್ಯನಿರ್ಣಯ ಮತ್ತು ವೈಜ್ಞಾನಿಕ ಮೌಲ್ಯನಿರ್ಣಯ.

ಈ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿ ಪ್ರತ್ಯೇಕವಾಗಿ ಪರಿಶೀಧಿಸುವುದು.

## 1. ತರಗತಿಯೊಳಗಿನ ಕಲಿಕಾಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯ

(ನಿರಂತರ ಮೌಲ್ಯನಿರ್ಣಯ)

**ಪ್ರಕ್ರಿಯಾ ಮೌಲ್ಯನಿರ್ಣಯ**

ಕಲಿಕಾ ಪ್ರಕ್ರಿಯೆ ನಿರ್ವಹಿಸುವಾಗ ಅಧ್ಯಾಪಕನ ನಿರೀಕ್ಷಣೆ– ತರಗತಿ ಕೋಣೆಯೊಳಗಿನ ವಿದ್ಯಾರ್ಥಿಯ ಪ್ರದರ್ಶನ, ಕಲಾಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹ, ಕಲಾಶಿಕ್ಷಣ–ಡೈರಿ–ಪೋರ್ಟ್‌ಪೋಲಿಯೋ ಯುನಿಟ್ ಮೌಲ್ಯನಿರ್ಣಯ ಮೊದಲಾದವುಗಳನ್ನು ಅಸ್ಪದವಾಗಿರಿಸಿ ಕಲಿಕಾ ಪ್ರಕ್ರಿಯೆಯೊಂದಿಗಿನ ಮೌಲ್ಯನಿರ್ಣಯವನ್ನು ಮಡೆಸಬಹುದಾಗಿದೆ. ಪ್ರಕ್ರಿಯೆಯ ಮೌಲ್ಯನಿರ್ಣಯ ಮಾಡಲು ಕೆಳಗೆ ಕೊಟ್ಟಿರುವ ಸೂಚನೆಗಳನ್ನು ಉಪಯೋಗಿಸಬಹುದಾಗಿದೆ.

- ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ
- ತಿಳುವಳಿಕೆ
- ಸಾಮರ್ಥ್ಯಗಳನ್ನು ಗಳಿಸುವಿಕೆ
- ಪ್ರದರ್ಶನ/ನಿರೂಪಣೆ
- ದಾಖಲಾತಿ ತಯಾರಿ.

ಸಾಮಾಜಿಕ, ಭಾವನಾತ್ಮಕ ವಲಯಗಳ ನೈಪುಣ್ಯತೆಗಳನ್ನು ಪ್ರಕ್ರಿಯಾ ಮೌಲ್ಯನಿರ್ಣಯದ ಭಾಗವಾಗಿ ಮೌಲ್ಯನಿರ್ಣಯ ನಡೆಸಬೇಕು.

ಕೆಳಗೆ ನೀಡಿರುವ ನೈಪುಣ್ಯತೆಗಳನ್ನು ಆಯಾ ಸೂಚಕಗಳನ್ನು ಪರಿಗಣಿಸುವ ಸಮಯದಲ್ಲಿ ಮೌಲ್ಯನಿರ್ಣಯ ನಡೆಸಿ ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

| ಸೂಚನೆಗಳು | ನೈಪುಣ್ಯತೆಗಳು |
|---|---|
| ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ | ಸ್ವಯಂತಿಳುವಳಿಕೆ, ಮುಖಂಡತ್ವ, ವ್ಯಕ್ತಾಂತರ ನೈಪುಣ್ಯ, ಜವಾಬ್ದಾರಿಯ ನೇತೃತ್ವ. |
| ಆಶಯ ತಿಳುವಳಿಕೆ. | ಕಲಿಕಾ ನೈಪುಣ್ಯತೆಗಳು. |
| ಸಾಮರ್ಥ್ಯಗಳ ಗಳಿಸುವಿಕೆ. | ತೀರ್ಮಾನಿಸುವುದು, ಪ್ರಶ್ನೆ ಪರಿಹಾರ ಸಾಮರ್ಥ್ಯ, ಸೃಜನಾತ್ಮಕ ಸಾಮರ್ಥ್ಯ. |
| ಪ್ರದರ್ಶನ/ ಮಂಡನೆ. | ಆಶಯ ವಿನಿಮಯ ಸಾಮರ್ಥ್ಯ. |
| ದಾಖಲಾತಿ/ತಯಾರಿ. | ವಿಮರ್ಶನಾತ್ಮಕ ಚಿಂತನೆ. |

- **ಮಕ್ಕಳ ಕಲಾಶಿಕ್ಷಣದ ದಿನಚರಿ (Diary)** : ಮಕ್ಕಳ ಕಲಾಶಿಕ್ಷಣ ದಿನಚರಿ/ನೋಟ್‌ಬುಕ್‌ಗಳು ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕಿರುವ ಪುರಾವೆಯಾಗಿ ಉಪಯೋಗಿಸಬಹುದು. ಇದನ್ನು ಸಮಯ ಬಂಧಿತವಾಗಿ ಪರಿಶೋಧಿಸಿ ಸೂಚನೆಗಳನ್ನು ನೀಡಬೇಕು. ಇದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಟೀಚಿಂಗ್ ಮಾನ್ವಲಿನಲ್ಲಿ ದಾಖಲಿಸಬೇಕು.

- **ಪೋರ್ಟ್ ಫೋಲಿಯೋ ಮೌಲ್ಯನಿರ್ಣಯ :** ಪೋರ್ಟ್‌ಪೋಲಿಯೋವು ಸಂಬಂಧಿಸಿ ಮಗುವಿಗೆ, ರಕ್ಷಕರಿಗೆ, ಅಧ್ಯಾಪಿಕೆಗೆ ಫೀಡ್‌ಬ್ಯಾಕ್ ನೀಡುವ ಕೆಲಸವನ್ನು ಮಾಡುತ್ತದೆ. ಇದು ಕಲಿಕೆಯನ್ನು ಪ್ರೋತ್ಸಾಹಿಸುತ್ತದೆ. ಕಲಿಕಾ ಚಟುವಟಿಕೆಗಳ ಮೂಲಕ ಮುಂದುವರಿಯುವಾಗ ಉಂಟಾಗುವ ಉತ್ಪನ್ನಗಳನ್ನು ಪೋರ್ಟ್‌ಪೋಲಿಯೋದಲ್ಲಿ ಸೇರಿಸಿ ಮೌಲ್ಯನಿರ್ಣಯ ಮಾಡಬೇಕು. ವಿಷಯ ಬಂಧಿತವಾದ ಕಲಿಕಾ ಪುರಾವೆಗಳು ಇದರಲ್ಲಿ ಒಳಗೊಂಡಿರುತ್ತದೆ.

ಪೋರ್ಟ್‌ಪೋಲಿಯೋದಲ್ಲಿ ಒಳಗೊಂಡಿರುವವುಗಳು

- ಕಲೆಯ ಕಲಿಕೆಯು ಡೈರಿ। ನೋಟ್‌ಬುಕ್
- ಇತರ ರಚನೆಗಳು
- ಚಿತ್ರಗಳು। ಸಂಗ್ರಹಗಳು
- ವರ್ಕ್‌ಶೀಟ್‌ಗಳು.

ಈ ರೀತಿಯ ಮೌಲ್ಯನಿರ್ಣಯದಲ್ಲಿ ಅತ್ಯುತ್ತಮ / ಉತ್ತಮ /ಸರಾಸರಿ/ ಇನ್ನೂ ಉತ್ತಮಪಡಿಸಬೇಕು ಎಂಬ ರೀತಿಯಲ್ಲಿ ವಿಂಗಡಿಸಿ ಕ್ರಮವಾಗಿ 4/3/2/1 ಅಂಕಗಳನ್ನು ನೀಡಬೇಕು.

ಟೀಚಿಂಗ್ ಮ್ಯಾನ್ವಲ್ (TM) : ಪ್ರಕ್ರಿಯೆಗಳ ಮೌಲ್ಯನಿರ್ಣಯಕ್ಕೆ ಟೀಚಿಂಗ್ ಮ್ಯಾನ್ವಲ್ (TM) ಉಪಯೋಗಿಸಬಹುದು ಟೀಚಿಂಗ್ ಮ್ಯಾನ್ವಲ್‌ನ ಮೌಲ್ಯನಿರ್ಣಯ ಪುಟದಲ್ಲಿ ದಾಖಲಿಸಿದ ಪ್ರತಿಫಲನ ಟಿಪ್ಪಣಿಗಳನ್ನು ಇದಕ್ಕೆ ಉಪಯೋಗಿಸಬಹುದು.

- **ಘಟಕ ಮಟ್ಟದ ಮೌಲ್ಯನಿರ್ಣಯ :** ಘಟಕಕ್ಕೆ ಸಂಬಂಧಿಸಿದ ವಾಚಿಕ ಮೌಲ್ಯನಿರ್ಣಯ, ಪ್ರದರ್ಶನ ಮೌಲ್ಯನಿರ್ಣಯ, ಘಟಕದ ತಿಳುವಳಿಕೆಯ ಮೌಲ್ಯನಿರ್ಣಯ ಮಾಡಬಹದಾದ ರಸಪ್ರಶ್ನೆಸ್ಪರ್ಧೆಗಳ ಮೌಲ್ಯನಿರ್ಣಯಗಳಿಂದ ಘಟಕದ ಮೌಲ್ಯನಿರ್ಣಯ ನಡೆಸಬಹುದು.

## ನಿರಂತರ ಮೌಲ್ಯನಿರ್ಣಯ (CE) ಗ್ರೇಡಿಂಗ್

ಕಲೆಯಲ್ಲಿ ಮಗುವಿನ ಪ್ರದರ್ಶನ ಮೌಲ್ಯನಿರ್ಣಯ (ಕಲೆಯ ಕಲಿಕಾಡೈರಿ, ಟೀಚಿಂಗ್ ಮ್ಯಾನ್ವಲ್ ಅಧ್ಯಾಪಕನ ನಿರೀಕ್ಷಣೆ ಎಂಬಿತ್ಯಾದಿಗಳ ಆಧಾರದಲ್ಲಿ) ಪೋರ್ಟ್ ಫೋಲಿಯೋದ ಮೌಲ್ಯನಿರ್ಣಯ, ಯೂನಿಟ್ ಮೌಲ್ಯನಿರ್ಣಯಗಳಲ್ಲಿ ಪ್ರತಿಯೊಂದರ ಅಂಕವನ್ನು 10 ರಲ್ಲಿ ಕಂಡುಹಿಡಿದು ಅವುಗಳ ಮೊತ್ತವನ್ನು ಕಂಡುಹಿಡಿಯಿರಿ. ಈ ಮೊತ್ತಕ್ಕೆ ಸರಯಾದ ಗ್ರೇಡ್ ನೀಡಿರಿ ಇದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬಹುದು.

| ಅಂಕ (30 ರಲ್ಲಿ) | ಶೇಕಡಾಮಾನ | ಗ್ರೇಡ್ |
|---|---|---|
| 23 - 30 | 75 - 100 | A |
| 18 - 22 | 60 - 74 | B |
| 14 - 17 | 45 - 59 | C |
| 10 - 13 | 33 -44 | D |
| 10 ಕ್ಕಿಂತ ಕಡಿಮೆ | 33 ಕ್ಕಿಂತ ಕಡಿಮೆ | E |

ಉದಾಹರಣೆಗಾಗಿ ಒಂದು ಮಗುವಿಗೆ ಕಲೆಯ ಕಲಿಕಾಪ್ರಕ್ರಿಯೆ, ಪೋರ್ಟ್‌ಪೋಲಿಯೋ ಘಟಕ ಮೌಲ್ಯನಿರ್ಣಯ ಎಂಬಿವುಗಳ ಅಂಕಗಳು 10 ರಲ್ಲಿ ಕ್ರಮವಾಗಿ 8,7,7 ಎಂದಾಗಿರಲಿ. ಹಾಗಾದರೆ ಒಂದು ಅಂಕ 8+7+7=22 ಆಯಿತು. ಪಟ್ಟಿಯನ್ನು ಆಧಾರವಾಗಿರಿಸಿಕೊಂಡು ಮಗುವಿನ CE ಗ್ರೇಡ್ B ಆಗಿರುವುದು.

- **ಪ್ರದರ್ಶನ ಮೌಲ್ಯನಿರ್ಣಯ ಹಾಗೂ ಶಾಸ್ತ್ರೀಯ ಮೌಲ್ಯನಿರ್ಣಯ (ಟರ್ಮ್ ಮೌಲ್ಯನಿರ್ಣಯ)**

  ಕಲೆಯ ಕಲಿಕೆಯಲ್ಲಿ ಪ್ರದರ್ಶನ ಮೌಲ್ಯನಿರ್ಣಯಕ್ಕೆ ಹೆಚ್ಚಿನ ಮಹತ್ವವಿದೆ.

ಪ್ರತಿಯೊಂದು ಮಲಯಗಳನ್ನು ಸೇರಿಸಿಕೊಂಡು ತರಗತಿಗೆ ಸಂಬಂಧಿಸಿದ ಪ್ರದರ್ಶನದ ಸಾಧ್ಯತೆಗಳನ್ನು ಕಲಿಕಾಸಾಧನೆಗಳಿಗೆ ಒತ್ತು ನೀಡಿ ಕಂಡುಹಿಡಿಯಬೇಕು. ವಿಷಯಗಳಿಗೆ ಸಂಬಂಧಿಸಿ ಅಗತ್ಯವಾಗಿ ತಿಳಿದಿರಬೇಕಾದ ಮೂಲಭೂತ ಶಾಸ್ತ್ರೀಯ ತಿಳುವಳಿಕೆಗಳನ್ನು ಕೂಡಾ ಇದರ ಜೊತೆಗೆ ಪರೀಕ್ಷಿಸಬೇಕಾಗಿದೆ.

ಈ ರೀತಿಯ ಪ್ರದರ್ಶನದ ಶಾಸ್ತ್ರೀಯ ಮೌಲ್ಯನಿರ್ಣಯದ ಮಾದರಿಗಳನ್ನು SCERT ಯು ಅಭಿವೃದ್ಧಿ ಪಡಿಸಿ ನೀಡುವುದು.

**ಮೌಲ್ಯನಿರ್ಣಯದ ಫೋರ್ಮೇಟ್**

ನಿರಂತರ ಮೌಲ್ಯನಿರ್ಣಯ (C E) ಹಾಗೂ ಟರ್ಮ್ ಮೌಲ್ಯನಿರ್ಣಯ (T E) ಗಳನ್ನು ಪ್ರತಿ ಟರ್ಮ್‌ನಲ್ಲೂ ದಾಖಲಿಸಲು ಇರುವ ಫೋರ್ಮೇಟ್.

ಟರ್ಮ್ : 1/2/3

ವಿಷಯ : ತರಗತಿ: ಡಿವಿಷನ್ :

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | CE ವಿಭಾಗ | | | CE ಗ್ರೇಡ್ | TE ಗ್ರೇಡ್ | ಷರಾ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಪೋಲಿಯೋ | ಘಟಕ ಮೌಲ್ಯನಿರ್ಣಯ | | | |
| | | | | | | | |

**ಗ್ರೇಡಿಂಗ್ ರೀತಿ**

ಪ್ರಾಥಮಿಕ ಹಂತದಲ್ಲಿ ನಿರಂತರ ಮೌಲ್ಯನಿರ್ಣಯಕ್ಕೆ ಹಾಗೂ ಟರ್ಮ್ ಮೌಲ್ಯನಿರ್ಣಯಕ್ಕೆ ಪ್ರತ್ಯೇಕ ಗ್ರೇಡ್ ನೀಡುವ ರೀತಿಯನ್ನು ಬಳಸಬೇಕು. ಅದಕ್ಕಾಗಿ ಕೆಳಗೆ ನೀಡಿರುವ ಪಟ್ಟಿಯನ್ನು ಉಪಯೋಗಿಸಬೇಕು.

| ಅಂಕಗಳ ಶೇಕಡಾಮಾನ | ಗ್ರೇಡ್ |
|---|---|
| 75 - 100 | A |
| 60 - 74 | B |
| 45 - 59 | C |
| 33 -44 | D |
| 33 ರಿಂದ ಕಡಿಮೆ | E |

**ಮೌಲ್ಯನಿರ್ಣಯದ ವಾರ್ಷಿಕ ಕ್ರೋಡೀಕರಣ**

ಟರ್ಮ್‌ಗಳ CE ಅಂಕಗಳು /ಗ್ರೇಡುಗಳನ್ನು ಪರಿಗಣಿಸುವಾಗ ಮೂರು ಟರ್ಮ್‌ಗಳಲ್ಲಿ ಮಗುವಿಗೆ ಲಭಿಸಿದ ಅತ್ಯಧಿಕ ಅಂಕ/ಗ್ರೇಡ್‌ನ್ನು CE ಯ ವಾರ್ಷಿಕ ಓವರೋಲ್ ಗ್ರೇಡ್ ಆಗಿದೆ.

**TE ಗ್ರೇಡ್**

T E ಗ್ರೇಡ್, ಮೂರನೇ ಟರ್ಮ್‌ನಲ್ಲಿ ವಿದ್ಯಾರ್ಥಿಯು ಗಳಿಸಿದ ಗ್ರೇಡ್ ಆಗಿದೆ.

CE ಗ್ರೇಡ್, TE ಗ್ರೇಡ್‌ಗಳನ್ನು ಮೇಲಿನ ರೀತಿಯಲ್ಲಿ ದಾಖಲಿಸುವುದರೊಂದಿಗೆ ಸಾಮಾಜಿಕ ಭಾವನಾತ್ಮಕ ಮಲಯಗಳಲ್ಲಿ ಗುಣಾತ್ಮಕವಾದ ದಾಖಲಿಸುವಿಕೆಗಳನ್ನು ಕೂಡಾ ವಾರ್ಷಿಕ ಫೋರ್ಮೇಟಿನಲ್ಲಿ ದಾಖಲಿಸಬೇಕು.

ಸಾಮಾಜಿಕ ಭಾವನಾತ್ಮಕ ವಲಯಗಳಲ್ಲಿ ವಿದ್ಯಾರ್ಥಿಯ ಹಿರಿಮೆಗೆ ಸಂಬಂಧಿಸಿದ ಧನಾತ್ಮಕವಾದ ಅಂಶಗಳನ್ನು ಕಂಡುಹಿಡಿದು ದಾಖಲಿಸಿದರೆ ಸಾಕು. ಋಣಾತ್ಮಕ ಅಂಶಗಳನ್ನು ದಾಖಲಿಸುವ ಅಗತ್ಯವಿಲ್ಲ.

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | *CE* ವಿಭಾಗ | | | | *CE* ಗ್ರೇಡ್ | *TE* | | ಷರಾ |
|---|---|---|---|---|---|---|---|---|---|
| | | ಪ್ರಕ್ರಿಯೆ (20) | ಪೋರ್ಟ್ ಫೋಲಿಯೋ (20) | ಘಟಕ ಮೌಲ್ಯನಿರ್ಣಯ (20) | ಒಟ್ಟು (60) | | ಸ್ಕೋರ್ (100) | ಗ್ರೇಡ್ | |
| | | | | | | | | | |

# 6. ಕಲೆಯ ಕಲಿಕೆ – ಬೆಂಬಲ ವ್ಯವಸ್ಥೆ

ಅತಿಶಕ್ತವಾದ ಪ್ರೋತ್ಸಾಹ, ಸಹಕಾರ, ಸಹಾಯದಿಂದ ಮಾತ್ರವೇ ಕಲೆಯ ಕಲಿಕೆಯು ಫಲಪ್ರದವಾಗುವುದು.

## ವಿವಿಧ ವಿಭಾಗಗಳು

### 1. ಶಾಲಾ ಮಟ್ಟ/ ತರಗತಿ ಮಟ್ಟ

ಶಾಲಾ ಮಟ್ಟದಲ್ಲಿ ಎಸ್.ಎಂ.ಸಿ ಹಾಗೂ ಪಿ.ಟಿ.ಎ ಗಳು ಇಂದು ಅತಿ ಶಕ್ತವಾಗಿವೆ. ತರಗತಿ ಮಟ್ಟದಲ್ಲಿ ಎಂ.ಪಿ.ಟಿ.ಎ ಕಾರ್ಯಾಚರಿಸುತ್ತಿದೆ. ಈ ಸಮಿತಿಗಳಿಗೆ ಕಲಾಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ಮಗುವಿನ ಕಲಿಕಾಸಾಧನೆಗಳನ್ನು ಚರ್ಚಿಸಬೇಕು. ಕಲಾಶಿಕ್ಷಣಕ್ಕೆ ಅಗತ್ಯವಾದ ತರಗತಿ ಕೋಣೆಗಳ ಸೌಕರ್ಯಗಳು, ಉಪಕರಣಗಳು,ಪ್ರದರ್ಶನ ಹಾಗೂ ಪ್ರಚಾರಕ್ಕೆ ಅಗತ್ಯವಾದ ಮೂಲಭೂತ ಭೌತಿಕ ಸೌಕರ್ಯಗಳನ್ನು ಒದಗಿಸಲು ಈ ರೀತಿಯ ಅನುಕೂಲತೆಗಳನ್ನು ಅತ್ಯಧಿಕವಾಗಿ ಉಪಯೋಗಿಸಿಕೊಳ್ಳಬೇಕು. ಪ್ರಾದೇಶಿಕ ಕಲಾವಿದರೊಂದಿಗೆ ಬೆರೆಯಲು, ಕಲಾಸೃಷ್ಟಿಗಳ ಆಸ್ವಾದನೆಗೆ ಶಾಲಾ ಮಟ್ಟದಲ್ಲಿ ಸಾಧ್ಯವಾಗಬೇಕು.

### 2. ಪಂಚಾಯತ್/ಸಿ. ಆರ್.ಸಿ ಮಟ್ಟ


ಈಗ ಜ್ಯಾರಿಯಲ್ಲಿರುವ ಕ್ಲಸ್ಟರ್ ಕೇಂದ್ರಗಳನ್ನು ಕೇಂದ್ರೀಕರಿಸಿಕೊಂಡು ಸಂಪನ್ಮೂಲಗಳ ಸಂಗ್ರಹ ಮತ್ತು ವಿನಿಮಯ ಸಾಧ್ಯವಾಗಬೇಕು. ಸಿ.ಆರ್.ಸಿಗಳ ಹಾಗೂ ಪಂಚಾಯತುಗಳ ಸಹಾಯದಿಂದ ಕಲಾಶಿಕ್ಷಣವನ್ನು ಇನ್ನೂ ಅಧಿಕ ದಕ್ಷತೆಯಿಂದ ಕಾರ್ಯಗತಗೊಳಿಸಬೇಕು. ಅದಕ್ಕಾಗಿ ಬೇಕಾದ ಮೂಲಭೂತ ಸೌಕರ್ಯಗಳನ್ನು ವರ್ಧಿಸಲು ಮತ್ತು ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಕ್ರಮೀಕರಿಸಲು ಸಾಧ್ಯವಾಗಬೇಕು.

### 3. ಉಪಜಿಲ್ಲೆ /ಬಿ ಆರ್.ಸಿ ವಿಭಾಗ

ಬಿ. ಆರ್. ಸಿ ಗಳಲ್ಲಿ ಇತರ ವಿಷಯಗಳಿಗೆ ನೀಡುವಂತೆ ಕಲಾಶಿಕ್ಷಣಕ್ಕೂ ಸಹಾಯಕವಾದ ಸೌಕರ್ಯಗಳು ಮತ್ತು ಸಂಪನ್ಮೂಲ ಸಂಗ್ರಹಕ್ಕೆ ಅಗತ್ಯವಾದ ಸಾಮಾಗ್ರಿಗಳು ಅಗತ್ಯವಾಗಿದೆ. ಬಿ. ಆರ್. ಸಿ ಮಟ್ಟದಲ್ಲಿ ಕಲಾಶಿಕ್ಷಕರಿಗೆ ಅಗತ್ಯವಾದ ತರಬೇತಿಗಳನ್ನು ನಿಶ್ಚಿತ ಸಮಯಗಳಲ್ಲಿ ನೀಡಬೇಕಾಗಿದೆ.

### 4. ಜಿಲ್ಲಾ ಮಟ್ಟ

ಜಿಲ್ಲಾ ಮಟ್ಟದಲ್ಲಿ ಕಲಾಶಿಕ್ಷಕರ ಒಂದು ರಿಸೋರ್ಸ್‌ಪೂಲ್ ಒಂದು ಡಿ.ಆರ್.ಜಿ ಯನ್ನು ರೂಪೀಕರಿಸುವುದು ಅತ್ಯಗತ್ಯವಾಗಿದೆ.



# ಚಿತ್ರಕಲೆ



# ಚಿತ್ರಕಲೆ

## ಮುನ್ನುಡಿ

ಒಂದು ಪ್ರದೇಶವನ್ನು ಪ್ರತ್ಯೇಕವಾಗಿ ಗುರುತಿಸುವುದಾಗಿದೆ. ಚಿತ್ರ ರಚನೆಯ ಮೂಲಕ ಮಾಡುವುದು. ನಮ್ಮ ದೃಷ್ಟಿಕೋನವನ್ನು ವಿಶೇಷತೆಗಳ ಒಂದು ಉತ್ತುಂಗಕ್ಕೆ ತಲುಪಿಸುವುದರ ಮೂಲಕ ಮನಸ್ಸಿನಲ್ಲಿ ವ್ಯತ್ಯಸ್ತವಾದ ದೃಶ್ಯಗಳನ್ನು ಸೃಷ್ಟಿಸುವುದಾಗಿದೆ, ಚಿತ್ರಗಳನ್ನು ಕಾಣುವಾಗ ಉಂಟಾಗುವ ಅನುಭವ. ಪ್ರಕಾಶದ ಸನ್ನಿವೇಶವೇ ಚಿತ್ರ ರಚನೆಯ ತಳಹದಿಯಾಗಿದೆ. ಅದು ಪ್ರೇಕ್ಷಕರೊಂದಿಗೆ ನೇರವಾಗಿ ಸಂವಾದ ನಡೆಸುತ್ತದೆ. ಚಿತ್ರ ರಚನೆಯು ಚಿತ್ರ ದೃಶ್ಯಗಳು ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳ ವ್ಯಕ್ತಿ ವಿಕಾಸಕ್ಕೆ ಚಿತ್ರ ಕಲೆ ಕಲಿಕೆಯು ಬಹಳ ಸಹಾಯಕವಾಗಿದೆ.

ಗೆರೆಗಳ ಹಾಗೂ ಬಣ್ಣಗಳ ವಿಸ್ಮಯವನ್ನು ಕುತೂಹಲದಿಂದ ನೋಡುವುದರಲ್ಲಿ ಮತ್ತು ಅನುಭವಿಸುವುದರಲ್ಲಿ ಮಕ್ಕಳು ಉತ್ಸುಕರಾಗಿದ್ದಾರೆ. ಬೆರಳುಗಳನ್ನು ಸೇರಿಸಿ ಉಪಯೋಗಿಸಲು ತೊಡಗುವಾಗಲೇ ಅವರು ಚಿತ್ರ ರಚನೆಯಲ್ಲಿ ತೊಡಗುತ್ತಾರೆ. ಬಣ್ಣದ ಯಾವುದೇ ವಸ್ತುವನ್ನು ಉಪಯೋಗಿಸಿ ಅವರು ನೆಲದಲ್ಲೂ ಗೋಡೆಯಲ್ಲೂ ಚಿತ್ರ ರಚಿಸುತ್ತಾರೆ. ಬೌದ್ಧಿಕ ವಿಕಾಸದ ಆರಂಭದಲ್ಲಿ ಮಕ್ಕಳು ಈ ರೀತಿಯ ಚಟುವಟಿಕೆಯಲ್ಲಿ ಭಾಗವಹಿಸುವುದು ಮನಸ್ಸಿನಲ್ಲಿ ಮೂಡುವ ವಿಷಯಗಳನ್ನೂ ರಚಿಸಿ, ನಟಿಸಿ, ಹಾಡಿನ ಮೂಲಕ ಪ್ರತಿಫಲಿಸುವುದರ ಭಾಗವಾಗಿದೆ. ಇದನ್ನು ಮುಂದುವರಿಸುವುದರ ಮೂಲಕ ವ್ಯಕ್ತಿ ವಿಕಾಸದ ಭಾಗವಾಗಿ ಅದನ್ನು ಕ್ರಮೀಕರಿಸುವುದೇ ವಿದ್ಯಾಭ್ಯಾಸ ಪ್ರಕ್ರಿಯೆಯಾಗಿದೆ.

ಗೆರೆಗಳು ಮತ್ತು ಬಣ್ಣಗಳು ಚಿತ್ರಕಲೆಯ ಮೂಲಭೂತ ಘಟಕಗಳಾಗಿವೆ. ಬಣ್ಣ ಪ್ರಕೃತಿಯಲ್ಲಿದೆ. ಆದರೆ ಗೆರೆಗಳು ಚಿತ್ರಕಾರನ ಸ್ವತಃ ಸೃಷ್ಟಿಯಾಗಿದೆ. ಈ ವರದಾನವು ಅಭಿರುಚಿಗನುಗುಣವಾಗಿ ಸಹಜವಾಗಿ ಚಿತ್ರಗಾರನಿಗೆ ಲಭ್ಯವಾಗುವುದಾಗಿದೆ. ಸಣ್ಣ ಪ್ರಾಯದಲ್ಲಿರುವ ಮಕ್ಕಳು ಸ್ವಾಭಾವಿಕವಾಗಿ ಚಿತ್ರಿಸುವುದನ್ನು ನಾವು ವಿಮರ್ಶಿಸುವುದರ ಮೂಲಕ ಚಿತ್ರಗಾರನಿಗೆ ಪ್ರಾಥಮಿಕ ಹಂತದಲ್ಲಿ ತಡೆಯೊಡ್ಡಬಾರದು. ಆದರೆ ಬಣ್ಣಗಳ ವಿನ್ಯಾಸದ ಕುರಿತಾದ ತಿಳುವಳಿಕೆ ನೀಡಬೇಕು. ಹಾಗೂ ಅದರ ಮೇಳೈಸುವಿಕೆಯಿಂದ ಉಂಟಾಗುವ ಸೌಂದರ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಬೇಕು. ಬಣ್ಣಗಳನ್ನು ಯಥೇಷ್ಟ ಉಪಯೋಗಿಸಿ ರೂಪಕಲ್ಪನೆ ನಡೆಸಲು ಅವಕಾಶ ಕಲ್ಪಿಸಬೇಕು.

ಆಕೃತಿಗಳ ಕುರಿತಾದ ಮಕ್ಕಳ ಸಂಕಲ್ಪವು ಹಿರಿಯರಿಗಿಂತ ವ್ಯತ್ಯಸ್ತವಾಗಿದೆ. ಆಕೃತಿಗಳ ಅಳತೆಯಲ್ಲಿ ಹಿರಿಯರಿಗಿಂತ ವ್ಯತ್ಯಸ್ತವಾಗಿ ಮಕ್ಕಳು ಕಾಣುವ ಅನುಪಾತ ಅವರ ಗೆರೆಗಳಲ್ಲಿ ಪ್ರತಿಫಲಿಸುತ್ತದೆ. ಅದನ್ನು ಅರ್ಥೈಸಿಕೊಂಡು ಮಕ್ಕಳ ಗೆರೆಯನ್ನು ನೋಡಬೇಕು. ಅದನ್ನು ಉತ್ತಮಗೊಳಿಸುವ ರೀತಿಯಲ್ಲಿ ಚಿತ್ರ ಕಲಾ ವಿದ್ಯಾಭ್ಯಾಸವು ವಿಕಾಸಗೊಳ್ಳಬೇಕಾಗಿದೆ. ಸುತ್ತಮುತ್ತಲಿನಲ್ಲಿರುವುದನ್ನು ಚೆನ್ನಾಗಿ ನಿರೀಕ್ಷಿಸಲು, ಯಥೇಷ್ಟ ರಚಿಸಲು, ಚಿತ್ರಗಳನ್ನು ಕಂಡು ಆಸ್ವಾದಿಸಲು ಧಾರಾಳ ಅವಕಾಶಗಳನ್ನು ಒದಗಿಸಬೇಕು. ಅಧ್ಯಾಪಕರು ಸಂದರ್ಭೋಚಿತವಾಗಿ ತಾಂತ್ರಿಕತೆಯನ್ನು ನೀಡಬೇಕು.

## ಕಲಿಕಾ ಸಾಧನೆಗಳು

### ಎಂಟನೆಯ ತರಗತಿ

- ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಚಿತ್ರ ಮಾಡುವ ಸಾಮರ್ಥ್ಯ ಪಡೆಯುವುದು
- ಪ್ರಕೃತಿ ಸ್ನೇಹ, ಸೌಂದರ್ಯ ದರ್ಶನ ಎಂಬಿವುಗಳನ್ನು ದೃಢಗೊಳಿಸುವುದು.
- ಚಿತ್ರ ರಚನೆಯಲ್ಲಿ ನೆರಳು ಮತ್ತು ಬೆಳಕಿನ ಪ್ರಾಧಾನ್ಯತೆಯನ್ನು ಆಳವಾಗಿ ತಿಳಿಯುವುದು.
- ಕೇರಳೀಯ ಕಲೆಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದು.
- ಮನುಷ್ಯ ರೀತಿಗಳ ಅನುಪಾತಿಕ ಚಿತ್ರೀಕರಣವನ್ನು ಭಾವ ವೈವಿಧ್ಯತೆಯೊಂದಿಗೆ ರಚಿಸುವುದು.
- ಸಾಮಾಜಿಕ ಒಳಿತು ಮತ್ತು ಸಾಮಾಜಿಕ ಕೆಡುಕುಗಳನ್ನು ತಳಹದಿಯಾಗಿಸಿ ಶೈಲಿಯುಕ್ತ ರಚನಾ ತಂತ್ರಗಳೊಳಗೊಂಡ ಚಿತ್ರಗಳನ್ನು ರಚಿಸುವುದು.
- ಕಂಪ್ಯೂಟರ್ ಗ್ರಾಫಿಕ್ಸ್, ಏನಿಮೇಶನ್, ಎಡಿಟಿಂಗ್ ಸಾಧ್ಯತೆಗಳನ್ನು ತಿಳಿಯುವುದು.
- ತ್ರಿಮಾನ ಕಲಾರೂಪಗಳನ್ನು ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ರಚಿಸುವುದು.
- ಭಾವಾತ್ಮಕವಾದ ಸ್ವತಂತ್ರ ಚಿತ್ರ ರಚನೆಯ ಮೂಲಕ ಆಶಯ ಪ್ರಕಟಿಸುವುದು.
- ಕಲಾ ಸೃಷ್ಟಿಗಳನ್ನು ಮತ್ತು ಕಲಾ ನಿರೂಪಗಳನ್ನು ಸಂಗ್ರಹಿಸುವುದು.

### ಒಂಬತ್ತನೇ ತರಗತಿ

- ಆಶಯಗಳನ್ನು ನಿರೀಕ್ಷಣೆ ಮಾಡಿ ಸೃಜನಾತ್ಮಕವಾದ ಚಿತ್ರಗಳನ್ನು ರಚಿಸುವುದು.
- ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿಮರ್ಶಾತ್ಮಕವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗುವುದು.
- ಚಿತ್ರ ರಚನೆಯಲ್ಲಿ ನೆರಳಿನ ಮತ್ತು ಬೆಳಕಿನ ಪ್ರಾಧಾನ್ಯತೆ ಆಳವಾಗಿ ಅರ್ಥಮಾಡಿಕೊಳ್ಳುವುದು.
- ಮನುಷ್ಯಾಕೃತಿಯ ಚಿತ್ರಗಳನ್ನು ರಚಿಸಿ ಬಣ್ಣ ನೀಡುವುದು.
- ಚಿತ್ರವನ್ನು ನಿರೀಕ್ಷಿಸಿ ಚಿತ್ರ ರಚಿಸಲು ಉಪಯೋಗಿಸಿದ ಮಾಧ್ಯಮಗಳನ್ನು ತಿಳಿಯುವುದು.
- ಚಿತ್ರ ಶಿಲ್ಪಕಲಾ ಚರಿತ್ರೆಯನ್ನು ತಿಳಿಯುವುದು.
- ವಿವಿಧ ಮಾಧ್ಯಮಗಳನ್ನುಪಯೋಗಿಸಿ ತ್ರಿಮಾನ ಚಿತ್ರಗಳನ್ನು ನಿರ್ಮಿಸುವುದು. ಆಧುನಿಕ ತಾಂತ್ರಿಕತೆ ಉಪಯೋಗಿಸಿ ಚಿತ್ರ ರಚನೆ ನಡೆಸುವುದು.
- ಕ್ಯಾಮರಾ, ವೀಡಿಯೋ ಕ್ಯಾಮರಾ ಎಂಬಿವುಗಳನ್ನು ಉಪಯೋಗಿಸಿ ಹ್ರಸ್ವ ಚಿತ್ರ ನಿರ್ಮಿಸುವುದು.
- ಚಿಂತನೆಗೂ ನಗುವಿಗೂ ಪ್ರೇರಣೆಯಾದ ಆಶಯಗಳಲ್ಲಿ ಒತ್ತು ನೀಡಿ ಸಮಕಾಲೀನ ವಿಷಯಗಳನ್ನೊಳಗೊಂಡ ಕಾರ್ಟೂನ್ ಚಿತ್ರಗಳನ್ನು ರಚಿಸಲು ಸಾಧ್ಯವಾಗುವುದು.
- ಕಲಾ ಸೃಷ್ಟಿಗಳನ್ನು ಆಸ್ವಾದಿಸಲು ಸಂರಕ್ಷಿಸಲು ಸಾಧ್ಯವಾಗುವುದು.

### ಹತ್ತನೆಯ ತರಗತಿ

- ಚಿತ್ರ ಓದಿನ ಮೂಲಕ ವಿಮರ್ಶಾತ್ಮಕವಾಗಿ ಆತ್ಮವಿಶ್ವಾಸದೊಂದಿಗೆ ಪ್ರತಿಕ್ರಿಯೆ ನೀಡುವುದು.
- ಸ್ವತಃ ಅಭಿಪ್ರಾಯಗಳನ್ನೂ, ನಿರ್ಧಾರಗಳನ್ನೂ ವ್ಯಕ್ತಗೊಳಿಸುವುದು.
- ಆಶಯವನ್ನೊಳಗೊಂಡ ಚಿತ್ರಗಳನ್ನು, ಶಿಲ್ಪಗಳನ್ನು ರಚಿಸುವುದು.
- ಚಿತ್ರಕಲೆ ಮತ್ತು ಶಿಲ್ಪಕಲೆಗಳ ಚರಿತ್ರೆ ತಿಳಿಯುವುದು.
- ಕಲೆ ಕಾಲಕ್ಕನುಗುಣವಾಗಿ ಬದಲಾವಣೆಗೊಳ್ಳುತ್ತದೆ ಎಂಬುವುದನ್ನು ತಿಳಿಯುವುದು.
- ಚಿತ್ರಕಲೆಗೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಿ ರಚನೆಯಲ್ಲಿ ತೊಡಗುವುದು.
- ಸ್ವತಂತ್ರ ರಚನೆಯ ಮೂಲಕ ಸಮಾಜದೊಂದಿಗೆ ಪ್ರತಿಕ್ರಿಯಿಸುವುದು.
- ಚಿಂತನೆಯನ್ನು ಉದ್ದೀಪನಗೊಳಿಸುವ ಕಾರ್ಟೂನ್‌ಗಳನ್ನು ಕೇರಿಕೇಚರ್‌ಗಳನ್ನು ರಚಿಸುವುದು.
- ಫೋಟೋಗ್ರಾಫಿ, ವೀಡಿಯೋಗ್ರಾಫಿ ಸಾಧ್ಯತೆಗಳನ್ನುಪಯೋಗಿಸಿ ಹ್ರಸ್ವ ಚಿತ್ರ ನಿರ್ಮಿಸುವುದು.

# ಎಂಟನೇ ತರಗತಿ

## ಯೂನಿಟ್ 1 : ನೆರಳು ಮತ್ತು ಬೆಳಕು

ದೃಶ್ಯಗಳ ತಳಹದಿ ಬೆಳಕಾಗಿದೆ. ಬೆಳಕಿದ್ದರೆ ಮಾತ್ರವೇ ವಸ್ತುಗಳನ್ನು ಕಾಣಲು ಸಾಧ್ಯವಾಗುವುದು. ಒಂದು ವಸ್ತುವಿಗೆ ಬೆಳಕು ಬಿದ್ದಾಗ ಆ ವಸ್ತುವಿನ ಘಟಕದ ಕುರಿತಾದ ತಿಳುವಳಿಕೆ ನಮಗೆ ಉಂಟಾಗುತ್ತದೆ. ಬೆಳಕಿನ ಶಕ್ತಿಯಿಂದಾಗಿ ಬರುವ ಬದಲಾವಣೆಗಳು ಪ್ರಕೃತಿಯಲ್ಲೂ ವಸ್ತುಗಳಲ್ಲಿಯೂ ದೃಶ್ಯ ಪರವಾಗಿ ದೊಡ್ಡ ಬದಲಾವಣೆಗಳನ್ನುಂಟುಮಾಡುತ್ತದೆ. ಅದೇ ರೀತಿ ಬಣ್ಣಗಳನ್ನು ತಿಳಿಯಲು ಬೆಳಕು ಅಗತ್ಯವಾಗಿದೆ. ಚುಟುಕಾಗಿ ಹೇಳುವುದಾದರೆ ದೃಷ್ಟಿಯ ಆಧಾರವೇ ಬೆಳಕಾಗಿದೆ. ಬೆಳಕು ಹಾಗೂ ನೆರಳಿನ ವ್ಯವಸ್ಥಿತ ಚಿತ್ರೀಕರಣವು ವಸ್ತುವಿನ ನೈಜತೆಯೊಂದಿಗೆ ಉತ್ತಮವಾಗಿ ಹೊಂದಿಕೆಯಾಗುವುದು.

### ಕಲಿಕಾ ಸಾಧನೆ

- ಚಿತ್ರರಚನೆಯಲ್ಲಿ ನೆರಳಿನ ಹಾಗೂ ಬೆಳಕಿನ ಪ್ರಾಧಾನ್ಯವನ್ನು ಆಳವಾಗಿ ಅರ್ಥಮಾಡಿಕೊಳ್ಳುವುದು.

### ಆಶಯ ತಿಳುವಳಿಕೆಗಳು

- ಒಂದು ವಸ್ತುವಿನ ಮೇಲೆ ಬೆಳಕು ಬಿದ್ದಾಗ ಆ ವಸ್ತುವನ್ನು ಕಾಣಲು ಸಾಧ್ಯ.
- ಬೆಳಕು ಹಾಗೂ ನೆರಳಿನ ಸರಿಯಾದ ಚಿತ್ರೀಕರಣವು ರಚಿಸಿದ ವಸ್ತುಗಳು ತ್ರಿಮಾನದಂತೆ ಗೋಚರಿಸಲು ಸಹಾಯಕವಾಗಿದೆ.
- ಬೆಳಕಿನ ಮೂಲ ಬದಲಾಗುವುದಕ್ಕೆ ಅನುಗುಣವಾಗಿ ನೆರಳು ಮತ್ತು ಬೆಳಕು ಬದಲಾವಣೆ ಹೊಂದುತ್ತಿರುತ್ತದೆ.
- ಬೆಳಕಿನ ಕಿರಣದ ದೂರಕ್ಕನುಸರಿಸಿ ಬೆಳಕು ಹಾಗೂ ನೆರಳು ಶಕ್ತವೂ, ದುರ್ಬಲವೂ ಆಗುತ್ತದೆ.
- ಬೆಳಕಿನ ತೀವ್ರತೆಗೆ ಅನುಗುಣವಾಗಿ ವಸ್ತುಗಳ ಬಣ್ಣವು ಹೊಳಪಿನಿಂದಲೂ, ಮಂದವಾಗಿಯೂ ಕಾಣಲ್ಪಡುತ್ತದೆ.

### ಕಲಿಕಾ ಚಟುವಟಿಕೆಗಳು

**ಹಂತ – 1**

- ತರಗತಿ ಕೋಣೆಯ ಕಿಟಿಕಿ ಬಳಿ ಹಾಗೂ ದೂರದಲ್ಲಿರಿಸಿದ ಎರಡು ವಸ್ತುಗಳನ್ನು ನಿರೀಕ್ಷಿಸುವುದು. (ಹೂದಾನಿ, ಮಡಿಕೆ) ಎರಡು ವಸ್ತುಗಳಲ್ಲಿ ಬೀಳುವ ಬೆಳಕು ಹಾಗೂ ನೆರಳಿನ ಪ್ರತ್ಯೇಕತೆಗಳನ್ನು ಚರ್ಚಿಸುವುದು, ಪಟ್ಟಿ ಮಾಡುವುದು, ನಿರೀಕ್ಷಣಾ ಟಿಪ್ಪಣಿ ಬರೆಯುವುದು.

**ಹಂತ – 2**

- ಬಿಸಿಲಿನಲ್ಲಿರುವ ಮರಗಳು, ಕಟ್ಟಡಗಳು ಎಂಬಿವುಗಳನ್ನು ನಿರೀಕ್ಷಿಸುವುದು, ಬೆಳಕಿನ ಕಿರಣದ ಸ್ಥಾನ, ಪದತಲದ ಸ್ಥಾನವನ್ನೆಲ್ಲಾ ನಿರೀಕ್ಷಿಸುವುದು, ಮಂದ ಬೆಳಕಿನಲ್ಲಿ ನಿರೀಕ್ಷಣೆಯನ್ನು ಅಭ್ಯಸಿಸುವುದು.

**ಹಂತ – 3**

- ತರಗತಿ ಕೋಣೆಯ ಕಿಟಿಕಿಯ ಹತ್ತಿರವಿರಿಸಿದ ಹೂದಾನಿ/ಮಡಿಕೆ ನಿರೀಕ್ಷಿಸುವುದು.
- ವಸ್ತುವಿನ ಆಕೃತಿ, ಗಾತ್ರಗಳನ್ನು ಗಮನವಿಟ್ಟು ರಚಿಸುವುದು. ಹಂತಗಳಾಗಿ ರಚಿಸುವುದು ಉತ್ತಮ, ಏಳು ಟೋನ್‌ಗಳು (ಯಾವುದೇ ಬಣ್ಣದ ಗಾಢತೆಯಲ್ಲಿ ವ್ಯತ್ಯಾಸ ಬಾರದಂತೆ) ಅರ್ಥ ಮಾಡಿಕೊಳ್ಳುವುದು.



- ಹೂದಾನಿಯನ್ನು ನಿರೀಕ್ಷಿಸಿ ನೆರಳು ಬೆಳಕಿಗೆ ಅನುಸಾರವಾಗಿ ಶೇಡ್ ಮಾಡುವುದು.
- ಶೇಡ್ ಮಾಡಲು 3B,5B,8B ಮೊದಲಾದ ಪೆನ್ಸಿಲುಗಳನ್ನು ಉಪಯೋಗಿಸುವುದು.
- ಶೇಡ್ ವಿಧಾನಗಳಾದ Hatching, Cross hatching, Dotted style, Rough Style, Photographic ಮೊದಲಾದ ರೀತಿಗಳನ್ನು ಉಪಯೋಗಿಸುವುದು (ಅಧ್ಯಾಪಕರು ಶೇಡ್ ಮಾಡಿ ತೋರಿಸಬೇಕು.)

ಹಂತ – 4

- ಪ್ರದರ್ಶನ
  - ರಚಿಸಿದ ಚಿತ್ರಗಳನ್ನು ಪ್ರದರ್ಶಿಸುವುದು. ಸ್ವಯಂ ಪರಸ್ಪರ ಮೌಲ್ಯಮಾಪನಗೊಳಿಸುವುದು.
  - ಮೌಲ್ಯಮಾಪನದ ನಂತರ ಚಿತ್ರದ ನ್ಯೂನತೆಗಳನ್ನು ಪರಿಹರಿಸುವುದಾದರೆ, ಅದಕ್ಕೆ ಅಥವಾ ಹೊಸ ಚಿತ್ರ ರಚನೆಗೆ ಮುಂದುವರಿದ ಚಟುವಟಿಕೆಗಳ ಯೋಜನೆ ನಡೆಸಬೇಕು.
  - ಮೊದಲು ರಚಿಸಿದ ಚಿತ್ರ ಮತ್ತು ನಂತರ ರಚಿಸಿದ ಚಿತ್ರಗಳನ್ನು ಪರಸ್ಪರ ಹೋಲಿಸಿ ಸ್ವಯಂ ಮೌಲ್ಯಮಾಪನಕ್ಕೆ ಅವಕಾಶ ಒದಗಿಸಬೇಕು. ಆವಿಷ್ಕಾರದಲ್ಲಿ ಉಂಟಾದ ಬೆಳೆವಣಿಗೆಯನ್ನು ಸ್ವಯಂ ತಿಳಿಯಬೇಕು.
  - ಎಲೆ ಹೂಗಳನ್ನು ಮಾದರಿಯಾಗಿರಿಸಿ ವಾಟರ್ ಕಲರ್ ಕೊಟ್ಟು ನೋಡಿರಿ.

**ಮೌಲ್ಯಮಾಪನ**

- ಕಲಿಕೆಯ ಎಲ್ಲಾ ಹಂತಗಳಲ್ಲಿ ಮೌಲ್ಯ ನಿರ್ಣಯ ಮಾಡುವುದು.
- ಬೆಳಕು ನೆರಳಿನ ಅರಿವು/ನಿರೀಕ್ಷಣಾ ಸಾಮರ್ಥ್ಯ
- ಶೇಡ್ ಮಾಡಿದ ರೀತಿ, ಶೈಲಿ.
- ವಸ್ತುವಿನ ಸ್ವಭಾವದೊಂದಿಗಿರುವ ಹೊಂದಾಣಿಕೆ.
- ಪೂರ್ಣತೆಗೆ ಒತ್ತು ಕೊಟ್ಟ ಗುಣಾತ್ಮಕ ಮೌಲ್ಯ ಮಾಪನ

**ಗಳಿಸಬೇಕಾದ ಕಲಿಕಾ ನೈಪುಣ್ಯಗಳು**

*ಕೊಟ್ಟಿರುವ ಕಲಿಕಾ ಸಾಧನೆಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ನೆರಳು ಮತ್ತು ಬೆಳಕಿನ ಕುರಿತಾದ ತಿಳುವಳಿಕೆ
- ವಸ್ತುವಿನ ಆಕಾರ ರಚಿಸಲು, ಅರ್ಥ ಮಾಡಿಕೊಳ್ಳಲು ಇರುವ ಸಾಮರ್ಥ್ಯ.
- ವಿವಿಧ ಶೇಡಿಂಗ್ ರೀತಿಗಳ ಕುರಿತಾದ ತಿಳುವಳಿಕೆ.
- ವಿವಿಧ ರೀತಿಯಲ್ಲಿ ಮತ್ತು ಶೈಲಿಯಲ್ಲಿ ಪೆನ್ಸಿಲು ಪೆನ್ನು ಉಪಯೋಗಿಸಲಿರುವ ಸಾಮರ್ಥ್ಯ.

## ಯೂನಿಟ್ 2 : ಕೇರಳೀಯ ಕಲಾ ಚರಿತ್ರೆ

ಕಲೆಯು ಕಾಲಘಟ್ಟಕ್ಕನುಗುಣವಾಗಿದೆ. ಪ್ರತಿಯೊಂದು ಕಲಾ ರೂಪಗಳು ಪ್ರಸಿದ್ಧಿ ಹೊಂದುವುದು ಆ ಕಾಲಘಟ್ಟದ ಆರ್ಥಿಕ, ಸಾಮಾಜಿಕ, ಸಾಮೂಹಿಕ, ಸಾಂಸ್ಕೃತಿಕ ಬದಲಾವಣೆಗಳಿಗನು ಗುಣವಾಗಿ ಆಗಿರುತ್ತದೆ. ಈ ರೀತಿಯಲ್ಲಿ ರೂಪುಗೊಳ್ಳದ ಕಲೆ, ಕಲಾರೂಪಗಳು ಅಸ್ತಿತ್ವವನ್ನು ಉಳಿಸಿಕೊಳ್ಳುವುದಿಲ್ಲ. ಆದ ಕಾರಣ ಕಲಾ ಚರಿತ್ರೆ ಕಲಿಯಲು ಆ ಕಲಾರೂಪವು ರೂಪುಗೊಂಡ

ಕಾಲಘಟ್ಟದ ಚರಿತ್ರೆಯನ್ನೂ ಸಾಮೂಹಿಕ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಕಲಾ ರೂಪಗಳನ್ನು ಪ್ರೀತಿಸುವುದೆಂದರೆ ನಮ್ಮ ಸಂಸ್ಕೃತಿಯನ್ನು ಪ್ರೀತಿಸುವುದು ಎಂದಾಗಿದೆ. ಕೇರಳದ ಕಲಾಚರಿತ್ರೆ ತಿಳಿಯುವುದೆಂದರೆ ಕೇರಳದ ಸಂಸ್ಕೃತಿಯನ್ನು ತಿಳಿಯುವುದು ಮತ್ತು ಆ ಸಂಸ್ಕೃತಿ ರೂಪುಗೊಳ್ಳಲು ಕಾರಣರಾದವರನ್ನು ನೆನಪಿಸುವುದು, ಗೌರವಿಸುವುದು ಹಾಗೂ ಅದರಲ್ಲಿ ಅಭಿಮಾನಗೊಳ್ಳುವುದು ಎಂದಾಗಿದೆ.

## ಕಲಿಕಾ ಸಾಧನೆ

- ಕೇರಳದ ಕಲಾಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದು.

## ಆಶಯಗಳು

- ಕಲಾ ಚರಿತ್ರೆ ಮನುಷ್ಯನ ಸಂಸ್ಕೃತಿಯ ಚರಿತ್ರೆಯಾಗಿದೆ.
- ಚರಿತ್ರೆಯಲ್ಲಿ ಗುರುತಿಸಲಾದ ಕುರುಹುಗಳು, ರೂಪಗಳು ಆ ಕಾಲಘಟ್ಟದ ಕುರಿತಾಗಿ ನಮ್ಮೊಂದಿಗೆ ಮಾತನಾಡುತ್ತವೆ.
- ಕೇರಳಕ್ಕೆ ತನ್ನದೇ ಆದ ಚಿತ್ರಕಲಾ ಪರಂಪರೆ ಇದೆ. ಅದರ ಪುರಾವೆಗಳು ಇಂದು ಬಾಕಿಯುಳಿದಿವೆ.
- ಕಾಲಕ್ಕಿಂತಲೂ ಮಿಗಿಲಾದ ರಚನಾ ಶೈಲಿ, ಬಣ್ಣಗಳ ಬಳಕೆ, ಸಾಂಸ್ಕೃತಿಕ ಸ್ವಂತಿಕೆ ಉನ್ನತವಾದ ಜೀವನ ವೀಕ್ಷಣೆ ಚರಿತ್ರೆಯನ್ನು ಸಂಪನ್ನಗೊಳಿಸುತ್ತದೆ.

## ಕಲಿಕಾ ಚಟುವಟಿಕೆಗಳು

- ಕಲಾ ಚರಿತ್ರೆ ತಿಳಿಸುವ ಸಿ.ಡಿ. ಪ್ರದರ್ಶನ, ಚರ್ಚೆ, ಅವಲೋಕನ
- ಕಲಾ ಚರಿತ್ರೆಯ ಕುರುಹುಗಳುಳ್ಳ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ, ಕಲಿಕಾ ಟಿಪ್ಪಣಿಗಳು, ಚರ್ಚೆಗಳು, ಅವಲೋಕನಗಳು.
- ಚರಿತ್ರೆಗಾರರು/ಚಿತ್ರಗಾರರೊಂದಿಗಿರುವ ಸಂದರ್ಶನ, ಚರ್ಚೆಗಳು
- ಚರಿತ್ರೆಗೆ ಸಂಬಂಧಿಸಿದ ಪತ್ರಿಕಾ ತುಣುಕುಗಳು/ಚಿತ್ರಗಳು ಇವುಗಳ ಸಂಗ್ರಹ, ಪ್ರದರ್ಶನ, ಕ್ರೋಢೀಕರಣ, blogಗಳು, ಮ್ಯಾಗಸಿನ್‌ಗಳು...
- ಕೇರಳ ಚಿತ್ರಕಲಾ ಚರಿತ್ರೆಗೆ ಸಂಬಂಧಿಸಿ ಸೆಮಿನಾರ್, ಪ್ರಬಂಧ ತಯಾರಿಸುವುದು.
- ದತ್ತ ಸಂಗ್ರಹ (ವಸ್ತುಗಳ ಸಂಗ್ರಹ) ಮಂಡನೆ, ಚರ್ಚೆ, ಉತ್ತಮಪಡಿಸುವಿಕೆ.
  - ಗುಹೆಗಳ ಚಿತ್ರ – ಎಡಕ್ಕಲ್ ಗುಹೆ
  - ಭಿತ್ತಿಚಿತ್ರಗಳು – ಗುರುವಾಯೂರು, ಮಟ್ಟಂಚೇರಿ, ತ್ರಿಶ್ಶೂರ್, ಸೇಡಿಕುಳ್ಳಂ ಕೃಷ್ಣಾಪುರ ಪದ್ಮನಾಭಪುರ ಅರಮನೆಗಳು
  - ನೆಲದ ಚಿತ್ರಗಳು – ಮಂಡಲಗಳು, ನಾಗಮಂಡಲ, ಪಡೆಯಣಿ
  - ಮುಖವರ್ಣಿಕೆ – ಭೂತಕೋಲ, ಗರುಡ, ಕಥಕ್ಕಳಿ, ಓಟಂತುಳ್ಳಲ್, ಶೀತಂಕನ್‌ತುಳ್ಳಲ್, ಯಕ್ಷಗಾನ ಇತ್ಯಾದಿ
  - ಜಾನಪದ ಕಲೆಗಳು – ತೆಯ್ಯಂ, ಪಡೆಯಣಿ, ಮುಡಿಯೇಟ್ಟಂ, ಕನ್ಯಾರ್‌ಕ್ಕಳಿ, ಚಿಮ್ಮಾನ್‌ಕ್ಕಳಿ, ಯಕ್ಷಗಾನ ಇತ್ಯಾದಿ.
  - ಅರಮನೆ ಚಿತ್ರಗಳು – ಆಳಗಿರಿ, ನಾಯಿಡು ಎಂಬಿತ್ಯಾದಿ

- ರಾಜಾ ರವಿವರ್ಮ ಚಿತ್ರಗಳು, ಚರಿತ್ರೆ.
- ರಾಜಾರಾಜ ವರ್ಮ, ಮಂಗಳಾಬಾಯಿ ತಂಬೂರಾಟಿ, ಕೆ.ಸಿ.ಎಸ್. ಪಣಿಕ್ಕರ್ ಮದ್ರಾಸ್ ಸ್ಕೂಲ್ ಆಫ್ ಆರ್ಟ್, ಎಂ.ವಿ. ದೇವನ್, ಸಿ.ಎನ್. ಕರುಣಾಕರನ್, ಅಕ್ಕಿತಂ ನಾರಾಯಣನ್, ಅಕ್ಕಿತಂ ವಾಸುದೇವನ್, ಸಿ.ಕೆ. ರಾಂ, ಎಸ್.ಎಲ್. ಲೋರೆನ್ಸ್, ಕನಾಯಿ ಬಾಲನ್ ನಂಬ್ಯಾರ್, ಮಾಧವ ಮೆನೊನ್, ಟಿ.ಕೆ. ಪದ್ಮಿನಿ, ಎಂ.ಆರ್.ಡಿ. ದತ್ತನ್, ಒ.ಡಿ. ದತ್ತನ್, ಪುಲಿಂಜಿನಾಥ್, ಪಾರೀಸ್ ವಿಶ್ವನಾಥನ್, ಕಲಾಧರನ್. ಪುಣಿಚಿತ್ತಾಯರು.
- ರೇಖಾಚಿತ್ರಕಾರರು – ನಂಬೂತಿರಿ, ಎ.ಎಸ್. ನಾಯರ್, ಎಂ.ವಿ. ದೇವನ್, ಮದನನ್, ಷರೀಫ್.

### ಮೌಲ್ಯನಿರ್ಣಯ

- ಕಲಿಕೆಯ ಎಲ್ಲಾ ಹಂತಗಳಲ್ಲಿರುವ ಮೌಲ್ಯ ನಿರ್ಣಯ.
- ಚರಿತ್ರೆಯಲ್ಲಿರುವ ಆಸಕ್ತಿ
- ಸಂಗ್ರಹ, ಸೆಮಿನಾರ್, ಪ್ರಬಂಧ ತಯಾರಿಸಿ ಮಂಡನೆ
  ಇದರ ಆಧಾರದಲ್ಲಿ ಗುಣಾತ್ಮಕ ಮೌಲ್ಯ ಮಾಪನ

### ಗಳಿಸಬೇಕಾದ ಕಲಿಕಾ ನೈಪುಣ್ಯಗಳು

*ಕೊಟ್ಟಿರುವ ಕಲಿಕಾ ಸಾಧನೆಗಳನ್ನು ಪಡೆಯಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?*

- ಕಲಾ ಚರಿತ್ರೆಯೊಂದಿಗೆ ಸಂಸ್ಕೃತಿಯನ್ನು ತಿಳಿಯುವುದು. ಆ ಸಂಸ್ಕೃತಿ ರೂಪುಗೊಳ್ಳಲು ಸಹಕರಿಸಿದ ಮಹಾತ್ಮರನ್ನು ತಿಳಿಯುವುದು, ಗೌರವಿಸುವುದು, ಆ ಸಂಸ್ಕೃತಿಯಲ್ಲಿ ಅಭಿಮಾನಪಡುವ ಪೌರನಾಗುವನು ಎಂದು ತಿಳಿಯವುದು.

## ಯೂನಿಟ್ 3 : ಮನುಷ್ಯ ಆಕೃತಿಗಳು

ಚಿತ್ರಕಲೆಯಲ್ಲಿ ಮನುಷ್ಯ ಆಕೃತಿಯನ್ನೊಳಗೊಂಡ ಚಿತ್ರಗಳನ್ನು ರಚಿಸುವುದು ಪ್ರಧಾನವಾದುದಾಗಿದೆ. ನಿತ್ಯ ಜೀವನಕ್ಕೆ ಸಂಬಂಧವಿರುವ ಯಾವುದೇ ಚಿತ್ರರಚನೆಯಲ್ಲೂ ಬಿಡಲಾಗದ ಒಂದು ಭಾಗವಾಗಿದೆ ಮನುಷ್ಯ ಆಕೃತಿಯನ್ನೊಳಗೊಂಡಿರುವುದು. ಆದುದರಿಂದ ಮನುಷ್ಯ ಆಕೃತಿ, ಅನುಪಾತವನ್ನು ಸೂಕ್ಷ್ಮವಾಗಿ ರಚಿಸುವುದು ಬಹಳ ಪ್ರಧಾನವಾದ ವಿಷಯ ವಾಗಿದೆ. ಅದೇ ರೀತಿ ಚಿತ್ರವನ್ನು ಸುಂದರಗೊಳಿಸಲು ರಚಿಸುವ ಮನುಷ್ಯನ ಭಾವ, ಚಲನೆ ಎಂಬಿವುಗಳು ಬಹಳಷ್ಟು ಪ್ರಧಾನವಾಗಿದೆ.

### ಕಲಿಕಾ ಸಾಧನೆ

- ಮನುಷ್ಯಾಕೃತಿಯ ಅನುಪಾತಿಕ ರಚನೆಯನ್ನು ಭಾವನೆ, ಚಲನೆಯನ್ನೊಳಗೊಂಡು ರಚಿಸುವುದು.

### ಆಶಯ, ತಿಳುವಳಿಕೆ

- ಮನುಷ್ಯ ಶರೀರದ ಪ್ರತಿಯೊಂದು ಅಂಗಾಂಗವು ಸ್ಪಷ್ಟವಾದ ಅನುಪಾತದಲ್ಲಿದೆ.

- ತಲೆಯ ಅಳತೆಯನ್ನು ಆಧಾರವಾಗಿರಿಸಿ ಶರೀರ ಭಾಗಗಳ ಅಳತೆ ಲೆಕ್ಕ ಹಾಕುವುದು.
- ಮನುಷ್ಯನನ್ನು ರಚಿಸುವಾಗ ಚಲನೆ, ಭಾವ ಎಂಬಿವುಗಳನ್ನು ಗಮನಿಸಬೇಕು.


## ಕಲಿಕಾ ಪ್ರಕ್ರಿಯೆ

### ಹಂತ 1

- ಮನುಷ್ಯ ಶರೀರದ ಅಳತೆಗಳು ತಲೆಯ ಅಳತೆಯನ್ನು ಆಧಾರವಾಗಿರಿಸಿದೆ ಎಂದು ತಿಳಿಯುವುದು. ಚರ್ಚೆ, ಕ್ರೋಢೀಕರಣ.
- ಪ್ರಾಯಪೂರ್ತಿಯಾದ ಒಬ್ಬ ವ್ಯಕ್ತಿಯ ತಲೆ ಒಂದು ದೀರ್ಘವೃತ್ತದಲ್ಲಿ ಹಿಡಿಯಬಹುದು.
- ಈ ವೃತ್ತದ ಎತ್ತರ ಸಹಿತ 71/2 ಭಾಗ ಸಮಾನವಾಗಿ ಕೆಳಗಡೆಗೆ ರಚಿಸಿದರೆ ಅನುಪಾತಿಕವಾದ ಮನುಷ್ಯ ಶರೀರ ರಚಿಸಲು ಸಾಧ್ಯವಾಗುವುದು. (ಇದೊಂದು ಸರಾಸರಿ ಅಳತೆಯಾಗಿದೆ)
- ತಲೆ ಒಳಗೊಳ್ಳಲಿರುವ ದೀರ್ಘವೃತ್ತದ ಎತ್ತರವನ್ನು ಪರಿಗಣಿಸಿ ಮನುಷ್ಯ ಶರೀರದ ಇತರ ಭಾಗಗಳನ್ನು ಗುರುತಿಸುವುದು.


### ಹಂತ 2

- ಒಬ್ಬ ವಿದ್ಯಾರ್ಥಿಯನ್ನು ಮಾದರಿಯಾಗಿರಿಸಿ, ತಲೆಯ ಅಳತೆ ಯನ್ನು ಆಧಾರವಾಗಿಟ್ಟು ಶರೀರ ಭಾಗವನ್ನು ಅಳೆದು ತಿಳಿಯುವುದು. (ಪ್ರಾಯಪೂರ್ತಿಯಾದ ವ್ಯಕ್ತಿಗೆ ಏಳುವರೆಯಾದರೆ ಮಕ್ಕಳಿಗೆ ಐದು ಆಗಿರುವುದು)




**ಹಂತ 3**

- ಚಲಿಸುವ ಮನುಷ್ಯ ರೂಪ ರಚಿಸುವುದಕ್ಕಾಗಿ ವಿವಿಧ ವಸ್ತುಗಳನ್ನು ಮಕ್ಕಳು ಮಾದರಿ ಯಾಗಿರಿಸಿ ಸ್ಕೆಲ್ಟನ್ ಸ್ಟೈಲ್ ಡ್ರಾಯಿಂಗ್ ನಿರ್ಮಿಸುವುದು.



**ಹಂತ 4**

- ರಚಿಸಿದ ಸ್ಕೇಚುಗಳನ್ನು ಡಬ್ಬಲ್ ಲೈನ್ ಪದ್ಧತಿ ಉಪಯೋಗಿಸಿ ಯಥಾರ್ಥ ಮನುಷ್ಯ ರೂಪಕ್ಕೆ ಸಾದೃಶ್ಯಗೊಳಿಸುವುದು.



ಹೆಣ್ಣು – ಗಂಡು ವ್ಯತ್ಯಾಸವನ್ನು ಕಾಣಿಸುವುದು

**ಹಂತ 5**

- ಚಿತ್ರಗಳನ್ನು ಪ್ರದರ್ಶಿಸುವುದು, ಮೌಲ್ಯಮಾಪನಗೊಳಿಸುವುದು.
- ನ್ಯೂನತೆಗಳನ್ನು ಬದಲಾಯಿಸಿ ಪುನಃ ರಚಿಸಿ ಪೂರ್ತಿಗೊಳಿಸುವುದು.

**ಹಂತ 6**

- ಒಂದು ವೃತ್ತದೊಳಗೆ ಕಣ್ಣುಗಳು ನಾಲಗೆ ಬದಲಾಯಿಸಿ ರಚಿಸುತ್ತಾ ವಿವಿಧ ಭಾವ ಪ್ರಕಟಣೆಯನ್ನಾಗಿಸಲು ಪ್ರಯತ್ನಿಸುವುದು.
- ಸಣ್ಣ ಬದಲಾವಣೆಗಳಿಂದ ಭಾವ ವ್ಯತ್ಯಾಸಗೊಳಿಸಬಹುದು ಎಂದು ತಿಳಿಯುವುದು.
- ಚಿತ್ರ ರಚಿಸುವುದು, ಪ್ರದರ್ಶನ.

## ಮೌಲ್ಯಮಾಪನ

- ಕಲಿಕೆಯ ಎಲ್ಲಾ ಹಂತಗಳಲ್ಲೂ ಮೌಲ್ಯಮಾಪನ ನಡೆಸುವುದು.
- ಶರೀರ ಭಾಗದ ಅಳತೆಗಳು, ವಿವಿಧ ಚಲನೆಗಳ ಚಿತ್ರೀಕರಣ, ವ್ಯತ್ಯಸ್ತ ಭಾವ ಪ್ರಕಟಣೆ.
- ಪೂರ್ಣತೆ.
- ಗುಂಪಾದ ಚಿತ್ರ ರಚನಾ ನೈಪುಣ್ಯದ ಗುಣಾತ್ಮಕವಾದ ಮೌಲ್ಯಮಾಪನ ನಡೆಸುವುದು.

## ಗಳಿಸಬೇಕಾದ ಕಲಿಕಾ ನೈಪುಣ್ಯಗಳು

*ಇಲ್ಲಿ ನೀಡಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಪಡೆದಿದ್ದಾರೆ?*

- ಶರೀರದ ಅನುಪಾತದ ಕುರಿತಾದ ತಿಳುವಳಿಕೆ.
- ಒಬ್ಬಂಟಿ ಹಾಗೂ ಗುಂಪಾಗಿ ಇರುವ ಮನುಷ್ಯ ರೂಪಗಳ ಆಶಯ ಪ್ರಕಟಣೆಗೆ ಇರುವ ಸಾಮರ್ಥ್ಯ.
- ಭಾವನೆಗಳ ವ್ಯತ್ಯಾಸವನ್ನು ಚಿತ್ರೀಕರಿಸುವುದರೊಂದಿಗೆ ಆಶಯಗಳಿಗೆ ಪೂರ್ಣತೆ ನೀಡಲಿರುವ ಸಾಮರ್ಥ್ಯ.

# ಯೂನಿಟ್ 4 : ಪ್ರಕೃತಿ ಸೌಂದರ್ಯ

ಪ್ರಕೃತಿಯನ್ನು ಚಿತ್ರಿಸಲು ಪ್ರಕೃತಿಯಲ್ಲಿ ಕಾಣುವ ಪ್ರತಿಯೊಂದು ವಸ್ತುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಬೇಕು. ಪ್ರತಿಯೊಂದು ವಸ್ತುವಿನ ಘಟಕಗಳು/ಸ್ವಭಾವ/ಬಣ್ಣ/ಪ್ರತಿಯೊಂದು ವಿಭಾಗದಲ್ಲಿ ಒಳಪಟ್ಟ ವಸ್ತುಗಳೊಳಗಿನ ವ್ಯತ್ಯಾಸಗಳು ಮೊದಲಾದವುಗಳನ್ನು ಸಮರ್ಪಕವಾಗಿ ತಿಳಿಯಪಡಿಸುವುದು ಅಗತ್ಯವಾಗಿದೆ.

## ಕಲಿಕಾ ಸಾಧನೆ

- ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ಚಿತ್ರಿಸುವುದು.

## ಆಶಯ, ತಿಳುವಳಿಕೆ

- ಒಂದೇ ವಿಭಾಗದಲ್ಲಿ ಒಳಪಡುವ ವಿವಿಧ ವಸ್ತುಗಳೊಳಗಿನ ರಚನೆಯಲ್ಲೂ, ಗಾತ್ರದಲ್ಲೂ, ಸ್ವಭಾವದಲ್ಲೂ ವ್ಯತ್ಯಾಸವಿದೆ. (ಎಲೆ ಎಂಬ ವಿಭಾಗದಲ್ಲಿ ಮಾವು, ಹಲಸುಗಳೊಳಗಿನ ವ್ಯತ್ಯಾಸ

ತಿಳಿಯುವುದು)

- ಸಮರ್ಪಕವಾದ ಚಿತ್ರರಚನೆಗೆ ಪ್ರಕೃತಿಯ ವಿವಿಧ ವಸ್ತುಗಳ ರೂಪ/ಬಣ್ಣ/ವೈವಿಧ್ಯಗಳನ್ನು ಸೂಕ್ಷ್ಮವಾಗಿ ತಿಳಿಯುವುದು.
- ಪ್ರಕೃತಿಯಲ್ಲಿ ಕಾಣುವ ಬಣ್ಣ ವೈವಿಧ್ಯಗಳಿಂದ ಚಿತ್ರ ರಚಿಸಲು ಬಣ್ಣಗಳ ಸಮರ್ಪಕವಾದ ತಿಳುವಳಿಕೆ ಅಗತ್ಯವಾಗಿದೆ.

## ನೈಪುಣ್ಯ

- ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಲಿರುವ ಸಾಮರ್ಥ್ಯ
- ಸ್ವಭಾವ ವೈಶಿಷ್ಟ್ಯಗಳಿಂದ ಪ್ರಕೃತಿಯ ಆಕೃತಿಗಳನ್ನು ಒಳಪಡಿಸಿ ಚಿತ್ರರಚನೆ ಮಾಡಲಿರುವ ಸಾಮರ್ಥ್ಯ.
- ವಿವಿಧ ಬಣ್ಣಗಳನ್ನು ಸೇರಿಸಿ ಪ್ರಕೃತಿಯ ವಸ್ತುಗಳಿಗೆ ಸೂಕ್ತವಾದ ಬಣ್ಣಗಳನ್ನು ನೀಡಲಿರುವ ಸಾಮರ್ಥ್ಯ.

## ಕಲಿಕಾ ಪ್ರಕ್ರಿಯೆ

### ಹಂತ 1

- ಒಂದು ಮಗುವಿನೊಡನೆ ಕರಿಹಲಗೆಯಲ್ಲಿ ಎಲೆಯೊಂದನ್ನು ರಚಿಸಲು ಸೂಚಿಸುವುದು.
- ರಚಿಸಿದ ಎಲೆ ಯಾವುದೆಂದು ಉಳಿದ ಮಕ್ಕಳಲ್ಲಿ ಪ್ರಶ್ನಿಸುವುದು
- ವಿಭಿನ್ನವಾದ ಅಭಿಪ್ರಾಯವಾದರೆ ರಚಿಸಿದ ಎಲೆ ಒಂದು ಪ್ರತ್ಯೇಕವಾದ ಮರದ್ದು ಎಂದು ತಿಳಿಯಲು ಸಾಧ್ಯವಾಗದಿದ್ದರೆ ಸ್ಪಷ್ಟವಾದ ಒಂದು ಮರದ ಎಲೆ ಮಾವು/ಹಲಸು/ಆಲ ಅಧ್ಯಾಪಕರು ಕರಿಹಲಗೆಯಲ್ಲಿ ರಚಿಸುವುದು ಹಾಗೂ ಎಲೆಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು. ಪ್ರತ್ಯೇಕತೆಗಳನ್ನು ತಿಳಿಯುವುದು.

### ಹಂತ 2

- ಈ ರೀತಿಯ ರಚನೆಯಲ್ಲಿ ರೂಪಗಳಿಗಿರುವ ಪ್ರತ್ಯೇಕತೆಗಳನ್ನು ತಿಳಿಯಲು ಪ್ರಕೃತಿಯ ವಸ್ತುವನ್ನು/ವಸ್ತುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಲು ಅವಕಾಶ ನೀಡುವುದು.

  *(ರೂಪ, ಸ್ವಭಾವ, ಬಣ್ಣ, ಎಂಬಿತ್ಯಾದಿಗಳಿಗೆ ಪ್ರತ್ಯೇಕ ಪ್ರಾಧಾನ್ಯ ನೀಡಬೇಕು)*

### ಹಂತ 3

- ಮುಂಭಾಗದಲ್ಲಿ ಕಾಣುವ ಒಂದೆರಡು ವಸ್ತುಗಳನ್ನು ನಿರೀಕ್ಷಣೆ ಮಾಡಿ ಚಿತ್ರರಚನೆ ನಡೆಸುವುದು. ಆಕೃತಿಗಳನ್ನು ಸಮರ್ಪಕವಾಗಿ ರಚಿಸಿ (ಗಿಡ, ಮರ, ಮನೆ, ಮನುಷ್ಯ) ಸೂಕ್ತವಾದ ಬಣ್ಣವನ್ನು ನೀಡುವುದು (ಜಲವರ್ಣ ಕ್ರಾಯೋನ್ಸ್, ತೈಲವರ್ಣ ಇತ್ಯಾದಿ)
- ಈ ರೀತಿಯ ವಸ್ತುಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಚಿತ್ರರಚನೆ ನಡೆಸಲು ನಿರ್ದೇಶನ ನೀಡುವುದು.



**ಹಂತ 4**

- ರಚಿಸಿದ ಚಿತ್ರಗಳನ್ನು ಪರಸ್ಪರ ಕಾಣಲಿರುವ ಅವಕಾಶ ಅಭಿಪ್ರಾಯಗಳು/ಸೇರಿಸುವುದು/ಕೊನೆಯಲ್ಲಿ ಅಧ್ಯಾಪಕರು ರಚಿಸಿದ ಚಿತ್ರವನ್ನು ಕಾಣಿಸುವುದು.

## ಮೌಲ್ಯನಿರ್ಣಯ

- ವಸ್ತುಗಳ ಸೂಕ್ಷ್ಮ ಮಟ್ಟದ ವಿನ್ಯಾಸ ತಿಳಿಯಲಿರುವ ಸಾಮರ್ಥ್ಯ
- ಬಣ್ಣಗಳ ಉಪಯೋಗ/ಅವುಗಳ ಬಳಕೆ
- ನಿರೀಕ್ಷಣಾ ಸಾಮರ್ಥ್ಯ

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಇಲ್ಲಿ ನೀಡಲಾದ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಪ್ರಕೃತಿಯಲ್ಲಿರುವ ವಸ್ತುಗಳನ್ನು ಸ್ಪಷ್ಟವಾಗಿ ತಿಳಿಯುವುದು.
- ವಸ್ತುಗಳ ಬಣ್ಣಗಳ ಕುರಿತಾದ ತಿಳುವಳಿಕೆ.

# ಯೂನಿಟ್ 5 : ಸ್ವತಂತ್ರ ಚಿತ್ರರಚನೆ

ಸಾಮಾಜಿಕ ಸಮಸ್ಯೆಗಳಲ್ಲಿ ವಿಮರ್ಶಾತ್ಮಕ ದೃಷ್ಟಿಕೋನ ಸ್ವೀಕರಿಸಿಕೊಂಡು ಚಿತ್ರಗಾರರು ಜನಪಕ್ಷದಲ್ಲಿದ್ದುಕೊಂಡು ತಮ್ಮ ರಚನೆಗಳ ಮೂಲಕ ಪ್ರತಿಕ್ರಿಯಿಸಿದ್ದಾರೆ. ಚಿತ್ರಗಾರರು ಮತ್ತು ಇತರ ಕಲಾವಿದರು ಸಮಾಜದ ಭಾಗವಾಗುವುದು ಸಮಾಜದಲ್ಲಿ ಉಂಟಾಗುವ ಸಮಸ್ಯೆಗಳನ್ನು ತಮ್ಮ ಸ್ವಂತ ಸಮಸ್ಯೆಯೆಂದು ತಿಳಿದು ಪ್ರತಿಕ್ರಿಯಿಸುವುದು ತಮ್ಮ ಕರ್ತವ್ಯವೆಂಬುದು ಕಲಾ ಸಮೂಹದ ವಿಶ್ವಾಸ ವಾಗಿದೆ. ಗ್ರಾಫಿಟಿ ಆರ್ಟ್ ಎಂಬ ಕಲಾ ರೂಪವು ಈ ಚಿಂತನೆಯಿಂದ ಉಂಟಾದುದಾಗಿದೆ. ವಿದ್ಯಾರ್ಥಿ ಗಳಲ್ಲಿ ಇಂತಹ ಪ್ರತಿಕ್ರಿಯಾ ಸಾಮರ್ಥ್ಯ ಬೆಳೆಸುವುದರಿಂದ ನಾಳಿನ ಸುದೃಢ ಸಮಾಜವುಂಟಾಗಲು ಸಹಕರಿ ಸುವುದು. ವಿದ್ಯಾರ್ಥಿಗಳು ಸಮಾಜದ ಭಾಗವಾಗಿದ್ದಾರೆ ಎಂಬ ಚಿಂತನೆಯನ್ನು ಅವರಲ್ಲಿ ಬೆಳೆಸುವುದರಿಂದ ಸಾಮಾಜಿಕ ಬದ್ಧತೆಯು ಪ್ರತಿಕ್ರಿಯಾ ಸಾಮರ್ಥ್ಯವಿರುವ ಸಮಾಜದ ನಿರ್ಮಾಣಕ್ಕೆ ಅತ್ಯಗತ್ಯವಾಗಿದೆ.

## ಕಲಿಕಾ ಸಾಧನೆ

- ಸಾಮಾಜಿಕ ವಿಷಯಗಳನ್ನು ಆಧಾರವಾಗಿರಿಸಿ ಸ್ವತಂತ್ರ ಶೈಲಿಯಲ್ಲಿ ಚಿತ್ರಗಳನ್ನು ರಚಿಸುವುದು.

## ಆಶಯ ತಿಳುವಳಿಕೆ

- ಚಿತ್ರಗಳು ಆಶಯ ವಿನಿಮಯ ಹಾಗೂ ಆಶಯ ಪ್ರಚಾರಕ್ಕಿರುವ ಮಾಧ್ಯಮವಾಗಿದೆ.
- ಸಮಾಜಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಸ್ವತಂತ್ರ ಶೈಲಿಯಲ್ಲಿ ಪ್ರತಿಕ್ರಿಯಿಸುವುದು ನಮ್ಮ ಕರ್ತವ್ಯವಾಗಿದೆ.
- ರಚನೆ ವ್ಯತ್ಯಸ್ಥವಾಗುವಾಗ ಸ್ವಂತ ತೀರ್ಮಾನಗಳನ್ನು ತಿಳಿಸುವ ಶೈಲಿ ರಚನಾ ತಂತ್ರಗಳನ್ನು ಸ್ವೀಕರಿಸುವುದು.
- ಲಭ್ಯವಾಗುವ ಯಾವುದೇ ಮಾಧ್ಯಮಗಳನ್ನು ಇದಕ್ಕಾಗಿ ಬಳಸುವುದು.

## ಕಲಿಕಾ ಪ್ರಕ್ರಿಯೆ

### ಹಂತ 1

- ಸಾಮಾಜಿಕ ಸಮಸ್ಯೆಗೆ ಆಧಾರವಾದ ಪತ್ರಿಕಾವಾರ್ತೆ, ಓದುವಿಕೆ
- ಚರ್ಚೆ, ಪ್ರತಿಕ್ರಿಯೆಯ ಅಗತ್ಯವನ್ನು ತಿಳಿಯುವುದು.
- ಚಿತ್ರ ರಚನೆ ನಡೆಸುವುದು.
- ರಚಿಸಿದ ಚಿತ್ರಗಳ ಪ್ರದರ್ಶನ – ಆಶಯ ಸಂಬಂಧಿತ ಚರ್ಚೆಗಳು–ಮೌಲ್ಯ ಮಾಪನ (ಸ್ವಯಂ, ಪರಸ್ಪರ)
- ಮೌಲ್ಯ ಮಾಪನದ ಬಳಿಕ ರಚಿಸಿದ ಚಿತ್ರಗಳಲ್ಲಿ ನ್ಯೂನತೆಗಳು ಕಂಡುಬಂದರೆ ತಿದ್ದಿ ಪುನಃ ರಚಿಸಲು ಅವಕಾಶ ನೀಡುವುದು. ಮೊದಲ ಚಿತ್ರದಿಂದ ಎರಡನೇ ಚಿತ್ರಕ್ಕಿರುವ ಪ್ರಗತಿಯನ್ನು ಸ್ವಯಂ ತಿಳಿಯುವುದು.
- ಚಿತ್ರ ಬದಲಾಯಿಸಿ ರಚಿಸುವುದು/ತಿಳಿಯುವುದು.



**ಹಂತ 2**

- ಚಾರ್ಟು ಪೇಪರನ್ನು ಉಪಯೋಗಿಸಿ ಉದ್ದವಾದ ದೊಡ್ಡ ಕ್ಯಾನ್‌ವಾಸ್ ನಿರ್ಮಿಸಿ ಮಕ್ಕಳು ಗುಂಪಾಗಿ ಒಂದೇ ಸಮಯದಲ್ಲಿ ಚಿತ್ರ ರಚಿಸುವುದು, ವಿದ್ಯಾಲಯದ ತರಗತಿಯ ಒಳಗೆ ಅಥವಾ ಹೊರಗೆ ಪ್ರತ್ಯೇಕ ಸಜ್ಜುಗೊಳಿಸಿದ ಸ್ಥಳದಲ್ಲಿ, ಯಾವುದಾದರೂ ಪ್ರತ್ಯೇಕ ವಿಷಯ/ಆಶಯವನ್ನಿಟ್ಟುಕೊಂಡು ಚಿತ್ರ ರಚಿಸುವುದು. ಕ್ರೆಯೋನ್, ಸ್ಕೆಚ್‌ಪೆನ್, ಡ್ರೈ ಪೇಸ್ಟ್ ಎಂಬಿತ್ಯಾದಿ ಶಿಶು ಸೌಹಾರ್ದ ಮಾಧ್ಯಮಗಳನ್ನು ಉಪಯೋಗಿಸುವುದು.

**ಹಂತ 3**

- ಪ್ರದರ್ಶನ, ಅಭಿನಂದನೆ

## ಮೌಲ್ಯನಿರ್ಣಯ

ಗುಣಾತ್ಮಕ ಮೌಲ್ಯ ಮಾಪನ

- ಆಶಯ ಕಂಡುಕೊಳ್ಳುವುದು.
- ಚರ್ಚೆಯಲ್ಲಿ ಭಾಗವಹಿಸುವಿಕೆ.
- ಆಶಯದ ಚಿತ್ರ ರಚಿಸಲಿರುವ ಸಾಮರ್ಥ್ಯ, ಶೈಲಿ
- ಮಾಧ್ಯಮಗಳನ್ನು ಉಪಯೋಗಿಸುವ ಶೈಲಿ.
- ಆಶಯದ ಪ್ರಕಟಣೆಗೆ ಅಗತ್ಯವಾದ ಚಿಹ್ನೆಗಳನ್ನು ಆಯ್ಕೆ ಮಾಡಲಿರುವ ಸಾಮರ್ಥ್ಯ.

**ಗಳಿಸಬಹುದಾದ ಕಲಿಕಾ ನೈಪುಣ್ಯಗಳು**

*ಕೆಳಗೆ ನೀಡಲಾದ ಕಲಿಕಾ ಸಾಮರ್ಥ್ಯಗಳನ್ನು ಪಡೆಯಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ?*

- ತಾನು ಸಮಾಜದ ಭಾಗವೆಂದೂ ಸಮಾಜದ ಸಮಸ್ಯೆಗಳು ತನ್ನದು ಎಂಬ ತಿಳುವಳಿಕೆ.
- ಆಶಯ ಚಿತ್ರೀಕರಣದ ಸಾಮರ್ಥ್ಯ.
- ಆಶಯಕ್ಕನುಗುಣವಾಗಿ ಮಾಧ್ಯಮಗಳನ್ನು ಆರಿಸಲು ಮತ್ತು ಉಪಯೋಗಿಸಲಿರುವ ನೈಪುಣ್ಯ.

## ಯೂನಿಟ್ 6 : ಕಾರ್ಟೂನುಗಳು

ಸಾಮಾಜಿಕ ಪಿಡುಗಿಗೆ ವಿರುದ್ಧವಾದ ಒಂದು ಆಯುಧವಾಗಿದೆ ಕಾರ್ಟೂನ್. ಇದು ಕೂಡ ಚಿತ್ರರಚನೆಯ ಭಾಗವಾಗಿದೆ. ಸಭ್ಯತೆಯ ಆಶಯ ಮತ್ತು ಚಿತ್ರೀಕರಣ ಇದರಲ್ಲಿ ಪ್ರಧಾನವಾಗಿದೆ. ಅಬಾಲವೃದ್ಧರು ಇದನ್ನು ಇಷ್ಟಪಡುತ್ತಾರೆ. ವರ್ತಮಾನ ವಿಷಯಗಳನ್ನೊಳಗೊಂಡ ಕಾರ್ಟೂನ್‌ಗಳು ಎಲ್ಲರನ್ನೂ ಆಕರ್ಷಿಸುತ್ತವೆ. ಐ.ಟಿ. ಸಾಧ್ಯತೆ ಕಾರ್ಟೂನ್ ಅನಿಮೇಶನ್ ಎಂಬ ಒಂದು ರೀತಿಯನ್ನು ಬಹಳಷ್ಟು ಜನಪ್ರಿಯಗೊಳಿಸಿದೆ. ಸನ್ನಡತೆಯ ಮತ್ತು ಕೆಡುಕುಗಳನ್ನು ಎದುರಿಸುವ ಒಂದು ಸಮಾಜವನ್ನು ನಿರ್ಮಿಸಲು ಕಾರ್ಟೂನ್‌ಗಳಿಂದ ಸಾಧ್ಯವಾಗುವುದು.

### ಕಲಿಕಾ ಸಾಧನೆ

- ಚಿಂತನೆ ಮತ್ತು ನಗುವಿಗೆ ಪ್ರೇರಕವಾದ ಆಶಯಗಳಿಗೆ ಒತ್ತು ನೀಡುವ ಕಲಿಕಾ ಮಹತ್ವವುಳ್ಳ ಕಾರ್ಟೂನ್‌ಗಳನ್ನು (ಹಾಸ್ಯ ಚಿತ್ರ)ರಚಿಸುವುದು.

### ಆಶಯ, ತಿಳುವಳಿಕೆ

- ಓದುವಿಕೆಯೊಂದಿಗೆ ಆಶಯಗಳನ್ನು ಉಳಿಸಿಕೊಳ್ಳುವುದು ಇದರಲ್ಲಿ ಪ್ರಧಾನವಾಗಿದೆ.
- ಜೀವಿಸಿರುವ ಹಾಗೂ ಮರಣ ಹೊಂದಿದ ಕಾರ್ಟೂನಿಸ್ಟ್‌ಗಳ ಕಾರ್ಟೂನ್ ಚಿತ್ರಗಳನ್ನು ನೋಡುವುದಲ್ಲದೆ ಅದರ ಕುರಿತು ತಿಳಿಯಬೇಕಾಗಿದೆ.
- ಪ್ರತಿಯೊಂದು ಕಾರ್ಟೂನಿಸ್ಟ್‌ನ ರಚನಾ ಶೈಲಿಯು ಅವರು ಜೀವಿಸಿದ್ದ ಕಾಲಘಟ್ಟವನ್ನು ತಿಳಿಯಬಹುದಾಗಿದೆ.
- ಸಾಮಾಜಿಕ ವಿಮರ್ಶೆ, ರಾಜಕೀಯ ವಿಮರ್ಶೆ ಎಂಬಿತ್ಯಾದಿಗಳನ್ನು ಸಂಕ್ಷಿಪ್ತವಾಗಿ ಮಂಡಿಸುವುದು.
- ಕಾರ್ಟೂನ್ ಅನಿಮೇಶನ್ ಎಂಬ ಒಂದು ಪ್ರತ್ಯೇಕ ವಿಭಾಗ, ಐ.ಟಿ. ವಿಭಾಗದೊಂದಿಗೆ ಸಂಯೋಜಿಸಿ ತಿಳಿಯಬೇಕಾಗಿದೆ. CTP - Cartoon Television Programme)

### ಕಲಿಕಾ ಪ್ರಕ್ರಿಯೆ

**ಹಂತ 1**

- ಕಾರ್ಟೂನ್‌ನ ಸೌಂದರ್ಯ ಹೆಚ್ಚಿಸಲು ಕಪ್ಪು, ಶಾಯಿ ಹಾಗೂ ಬಿಳಿಯ ಹಾಳೆ ಸೂಕ್ತವೆಂಬುದನ್ನು ತಿಳಿಸುವುದು.

- ಸೂಕ್ಷ್ಮ ನಿರೀಕ್ಷಣೆ ನಡೆಸಲು ಮಕ್ಕಳನ್ನು ಪ್ರಾಪ್ತರನ್ನಾಗಿಸಲು ಮನುಷ್ಯ, ಪಕ್ಷಿಮೃಗಾದಿಗಳ ಕುರಿತು ಹೆಚ್ಚು ತಿಳಿಯಲು ಸೂಚಿಸುವುದು.
- ಮುಖಭಾವ, ಚಲನೆಯನ್ನು ನೋಡಿ ಅರ್ಥಮಾಡಿಕೊಳ್ಳಲು ನಿರ್ದೇಶಿಸುವುದು.
- ವಿಮರ್ಶಾತ್ಮಕವೂ ಸಂಕ್ಷಿಪ್ತವೂ ಆದ ಕಾರ್ಟೂನ್ ರಚನೆಯಲ್ಲಿ ಮಕ್ಕಳನ್ನು ಏರ್ಪಡಿಸುವುದು.
- ರಚಿಸಿದುದನ್ನು ಪ್ರದರ್ಶಿಸುವುದು.
- ಪರಸ್ಪರ ಅಭಿಪ್ರಾಯ ತಿಳಿಯುವುದು.
- ಪ್ರಸಿದ್ಧರಾದವರನ್ನು ಆಹ್ವಾನಿಸಿ ಕಾರ್ಟೂನ್ ತರಬೇತಿ ಶಿಬಿರ ನಡೆಸುವುದು.
- ಅವರ ಸಾನ್ನಿಧ್ಯದಲ್ಲಿ ಕಾರ್ಟೂನ್ ರಚನೆ ನಡೆಸುವುದು.
- ಚರ್ಚೆ ನಡೆಸುವುದು, ಕುಂದು ಕೊರತೆಗಳನ್ನು ಪರಿಹರಿಸಲು ಬೇಕಾದ ನಿರ್ದೇಶನಗಳನ್ನು ಕೊಡುವುದು.
- ಸಾಮಾಜಿಕ ಪ್ರಾಧಾನ್ಯತೆಯುಳ್ಳ ಸಕಾಲಿಕ ವಿಷಯಗಳನ್ನು ಕಾರ್ಟೂನ್‌ಗಳಲ್ಲಿ ಸೇರಿಸಬೇಕು.

**ಹಂತ 2**

- ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಲು ತಿಳಿಸುವುದು.
- ಟಿಪ್ಪಣಿ ತಯಾರಿಸುವುದು – ಆಶಯಗಳನ್ನು ಕಂಡುಹಿಡಿಯುವುದು.
- ಹಾಸ್ಯ, ವಿಮರ್ಶೆ ಇವುಗಳನ್ನು ಸೇರಿಸಿ ಕಾರ್ಟೂನ್ ರಚಿಸಲು ತಿಳಿಸುವುದು.
- ಚಿತ್ರಗಳನ್ನು ಸಂಗ್ರಹಿಸಿ ಕ್ಲಾಸ್ ಗ್ಯಾಲರಿ ತಯಾರಿಸುವುದು.
- ಚರ್ಚೆ, ವಿಮರ್ಶೆ ನಡೆಸುವುದು.
- ಉತ್ತಮಪಡಿಸಲಿರುವ ನಿರ್ದೇಶಗಳನ್ನು ನೀಡುವುದು.

**ಹಂತ 3**

- ಪ್ರಸಿದ್ಧರಾದವರನ್ನು ಆಹ್ವಾನಿಸಿ ಕಲಿಕಾ ತರಬೇತಿ ಹಾಗೂ ರಚನೆಯನ್ನು ನಡೆಸಬೇಕು.
- ಶಾಲೆಯ ಎಲ್ಲಾ ಮಕ್ಕಳಿಗೂ ಕಾಣಲು ಅವಕಾಶ ನೀಡುವುದು.
- ಕಾರ್ಟೂನಿಸ್ಟ್ ಮತ್ತು ಕಾರ್ಟೂನಿನ ಕುರಿತು ತಿಳಿಯುವುದು ಐ.ಟಿ. ಸಾಧ್ಯತೆ, ರೆಫರೆನ್ಸ್ ಗ್ರಂಥಗಳನ್ನು ತಿಳಿಯುವುದು.

## ಮೌಲ್ಯನಿರ್ಣಯ

- ಕಲಿಕೆಯ ಎಲ್ಲಾ ಹಂತಗಳಲ್ಲೂ ಮೌಲ್ಯ ನಿರ್ಣಯ ಅಗತ್ಯವಾಗಿದೆ.
- ಕಾರ್ಟೂನಿನಲ್ಲಿರುವ ಅಭಿರುಚಿ
- ಸಂಗ್ರಹ, ರೆಫರೆನ್ಸ್, ಕಲಿಕಾ ಶಿಬಿರಗಳು
- ಸಂಪೂರ್ಣ ಮೌಲ್ಯ ನಿರ್ಣಯ

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಮೇಲೆ ಕೊಟ್ಟಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಿದ್ದಾರೆ.?*

- ಒಂದು ಸಂಸ್ಕೃತಿಯ ಭಾಗವಾಗಿ ಕಾರ್ಟೂನಿಸ್ಟ್‌ಗಳುಂಟಾಗುತ್ತಾರೆ
- ಪ್ರತಿಕ್ರಿಯಾ ಸಾಮರ್ಥ್ಯ ಹೆಚ್ಚಾಗುತ್ತದೆ.
- ಓದುವ ಹವ್ಯಾಸ, ಸಂಗ್ರಹ ಮನೋಭಾವ ಹೆಚ್ಚಾಗುತ್ತದೆ.
- ದೇಶಪ್ರೇಮವಿರುವ ವ್ಯಕ್ತಿಯಾಗಿ ಬದಲಾಗುತ್ತಾರೆ.
- ಹೆಚ್ಚು ಕಾಣಲು, ತಿಳಿಯಲು cartoonacademy.blogspot.iv

# ಯೂನಿಟ್ 7 : ಭಾವ ವಿಕಾಸ

ಚಿತ್ರಕಲೆ ಎಂಬುದೊಂದು ಸಾರ್ವತ್ರಿಕ ಭಾಷೆಯಾಗಿದೆ. ಆಶಯ ವ್ಯಕ್ತಪಡಿಸಲು ಇರುವ ಮಾಧ್ಯಮವಾಗಿ ಭಾಷೆಯನ್ನು ಉಪಯೋಗಿಸಲಾಗುವುದು. ಆದುದರಿಂದ ಒಂದು ಚಿತ್ರ ರಚಿಸುವಾಗ ರಚನೆಗಾರನ ಮನಸ್ಸಿನಲ್ಲಿ ರೂಪುಗೊಳ್ಳುವ ಆಶಯಗಳು ಮತ್ತೊಬ್ಬರಿಗೆ ಅಥವಾ ಒಂದು ಸಮಾಜದೊಂದಿಗೆ ಹಂಚಿಕೊಳ್ಳುವುದಕ್ಕಾಗಿದೆ. ಆದ ಕಾರಣ ಚಿತ್ರಕಲೆಯನ್ನು ಒಂದು ಭಾಷೆ ಎಂಬ ರೀತಿಯಲ್ಲಿ ಉಪಯೋಗಿಸಬೇಕಾಗಿದೆ. ರಚಿಸಿದ ಚಿತ್ರವನ್ನು ಪ್ರದರ್ಶಿಸುವಾಗ ರಚನೆಗಾರ ವ್ಯಕ್ತಪಡಿಸಲು ಉದ್ದೇಶಿಸಿದ ಆಶಯ ಅದರ ಹಲವು ವಿಭಿನ್ನ ರೀತಿಗಳ ಮೂಲಕ ಸಂಚರಿಸಿ ಕಾಣುವವನ ದೃಷ್ಟಿಕೋನ ಸಮರಸ ಹೊಂದಿ ಹೊಸ ಆಶಯಕ್ಕೆ ಸಂಚರಿಸುತ್ತದೆ. ಆದುದರಿಂದ ಒಂದು ಚಿತ್ರವು ಪೂರ್ತಿಯಾಗುವುದು ವೀಕ್ಷಕನ ಮನಸ್ಸಿನಲ್ಲಾಗಿದೆ ಎಂದೂ ಹೇಳುವರು.

## ಕಲಿಕಾ ಸಾಧನೆ

- ಭಾವನೆಯುಕ್ತವಾದ ಸ್ವತಂತ್ರ ಚಿತ್ರ ರಚನೆಯ ಮೂಲಕ ಆಶಯ ವ್ಯಕ್ತಪಡಿಸುವುದು.

## ಆಶಯ, ತಿಳುವಳಿಕೆ

- ಚಿತ್ರ ರಚನೆ ಆಶಯಪರವಾದ ದೃಷ್ಟಿಕೋನದ ಪೂರ್ತಿಕರಣವಾಗಿದೆ.
- ಆಶಯಪರವಾದ ಚಿತ್ರರಚನೆ ಎಂಬ ಚಿತ್ರ ಶಾಖೆ ಅಸ್ತಿತ್ವದಲ್ಲಿದೆ.
- ಆಶಯ ಪ್ರಕಟಣೆಗಿರುವ ಮಾಧ್ಯಮವಾಗಿ ಚಿತ್ರವನ್ನು ಉಪಯೋಗಿಸಬೇಕು.
- ಸಾಮಾಜಿಕ ದೃಷ್ಟಿಕೋನ ಸ್ವತಂತ್ರ ರಚನೆಗೆ ಸಹಾಯಕವಾಗಿದೆ.
- ಚಿತ್ರಗಾರನಿಗೆ ಪೆನ್ಸಿಲ್, ಕಲರ್ ಪೆನ್ಸಿಲ್, ಬೂದಿ, ಬಣ್ಣ ಮೊದಲಾದ ಯಾವುದೇ ಮಾಧ್ಯಮವನ್ನು ಉಪಯೋಗಿಸಬಹುದಾಗಿದೆ.
- ಒಳ್ಳೆಯ ಚಿತ್ರಗಳನ್ನು, ಚಿತ್ರಗಾರರನ್ನು ತಿಳಿಯಬೇಕು. ಇದಕ್ಕಾಗಿ ಇಂಟರ್‌ನೆಟ್, ವಿಕಿಪೀಡಿಯಾ ಸಹಾಯಕವಾಗುವುದು.

## ಕಲಿಕಾ ಪ್ರಕ್ರಿಯೆ

**ಹಂತ 1**

- ಭಾವನಾತ್ಮಕವಾಗಿ ರಚಿಸಲ್ಪಟ್ಟ ಚಿತ್ರಗಳ ಪ್ರದರ್ಶನ (*Projector* ಉಪಯೋಗಿಸುವುದು).
  - ಗಾರ್ನಿಕ್ – ಪಿಕಾಸೊ
  - Here papa comes-Ravivarma
  - Gipsis-Ravivarma
  - Gujarnica-Yousaf Arakkal
  - Bird and Nest-Tagore
  - Yellow Christ-Paul Guagin
  - The Screen-Edverd Munch
  - The Harvest-Vanghogh

- ಚಿತ್ರ ಓದಿನಂತೆ ಪ್ರತಿ ಚಿತ್ರವನ್ನು ಕಾಣುವುದು ಚಿತ್ರ ರಚಿಸಿದ ಕಾಲಘಟ್ಟ, ಸಾಮಾಜಿಕ ಸ್ಥಿತಿ, ರಚನಾ ರೀತಿ, ಆಶಯ ರೀತಿ, ಎಲ್ಲವನ್ನು ಸೇರಿಸಿ ಟಿಪ್ಪಣಿ ತಯಾರಿಸಿ ಮಂಡಿಸುವುದು.

ಮೈಕಲ್ ಆಂಜಲೋ, ರಾಫೆಲ್, ಟಿಷ್ಯನ್, ರಂಬ್ರಾಂಡ್, ಜಿ.ಡಿ ಪೋಳ್‌ರಾಜ್, ಅಮಿತ್ ಕಪೂರ್ ಮೊದಲಾದವರ ಚಿತ್ರಗಳನ್ನು ಕಲಿಯಲು ಉಪಯೋಗಿಸುವುದು.

- ಪ್ರತಿ ಚಿತ್ರವು ತೋರಿಸುವ ಆಶಯ ಪರವಾದ ದೃಷ್ಟಿಕೋನಗಳನ್ನು ವಿವರಿಸುವುದು.
- ಅಂತಃಕಲಹ, ಯುದ್ಧಗಳು, ಹಸಿವು, ಕೋಮುಗಲಭೆ, ಸಾಮಾಜಿಕ ಏಕಾಂಗಿತನ, ಕೈಗಾರಿಕಾ ಕ್ರಾಂತಿ ಎಂಬಿವುಗಳನ್ನು ಚರ್ಚೆಯಲ್ಲಿ ಸೇರಿಸಬೇಕು.

**ಹಂತ 2**

- ಮೊದಲು ನಡೆಸಿದ ಚಟುವಟಿಕೆಗಳ ಆಧಾರದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಮನಸ್ಸಿನಲ್ಲಿ ಉಂಟಾಗುವ ಘಟನೆಗಳ ಆಶಯಪರವಾದ ಚಿತ್ರೀಕರಣಕ್ಕೆ ಶ್ರಮಿಸುವುದು.
- ಇಂದಿನ ಸಾಮಾಜಿಕ ಸ್ಥಿತಿಯನ್ನು ನೀವು ಹೇಗೆ ನೋಡಿರುವಿರಿ?

  ಪ್ರತಿಕ್ರಿಯೆ ಎಂಬ ರೀತಿಯಲ್ಲಿ ಚಿತ್ರ ರಚಿಸಲಿರುವ ಆಶಯ ಕಂಡು ಹಿಡಿಯಬಹುದೇ? ಹೆಚ್ಚು ಪ್ರಧಾನ ವಿಷಯಗಳು ಏನೆಲ್ಲಾ? ಚರ್ಚೆ.
- ದೃಶ್ಯಾವಿಷ್ಕರಿಸಲು ಹೆಚ್ಚು ಸುಲಭವಾದ ವಿಷಯ ಯಾವುದು?

  ಆ ವಿಷಯ ಚಿತ್ರೀಕರಿಸಲು ಅಗತ್ಯವಾದ ಆಕೃತಿ ಯಾವುವು?

  (ಮಕ್ಕಳು ಪಟ್ಟಿ ಮಾಡುವುದು ಪ್ರತಿ ಆಕೃತಿಯ ಭಾವನೆ, ಘಟಕ ಎಂಬಿವುಗಳ ರೇಖೆ ರಚಿಸುವುದು)
- ಲಭಿಸಿದ ತಿಳುವಳಿಕೆಗಳ ಆಧಾರದಲ್ಲಿ ಚಿತ್ರ ರಚನೆ ನಡೆಸುವುದು.

  ಚಿತ್ರ ರಚಿಸುವುದು. ಇಷ್ಟವಿರುವ ಮಾಧ್ಯಮವನ್ನು ಉಪಯೋಗಿಸುವುದು.
- ಚಿತ್ರ ಪ್ರದರ್ಶನ

  ಸ್ವಯಂ, ಪರಸ್ಪರ ಮೌಲ್ಯ ಮಾಪನ
- ಆಶಯಪರವೂ ಅನೌಪಚಾರಿಕವೂ ಆದ ಚರ್ಚೆ

  ಸ್ವಯಂ–ಪರಸ್ಪರ ಮೌಲ್ಯ ಮಾಪನದ ಬಳಿಕ ನ್ಯೂನತೆಗಳನ್ನು ಪರಿಹರಿಸಿ ಚಿತ್ರ ಪೂರ್ತಿಕರಿಸಲು ಅವಕಾಶ ನೀಡುವುದು.
- ಎರಡನೆ ಚಿತ್ರ ರಚಿಸಿದ ಬಳಿಕ ಮೊದಲ ಚಿತ್ರದೊಂದಿಗೆ ಹೋಲಿಸಿ ಬೆಳವಣಿಗೆ ಸ್ವಯಂ ತಿಳಿಯುವುದು. ಕೊನೆಯಲ್ಲಿ ಅಧ್ಯಾಪಕರು ರಚಿಸಿದ ಚಿತ್ರವನ್ನು ಪ್ರದರ್ಶಿಸುವುದು.

**ಮೌಲ್ಯನಿರ್ಣಯ**

- ಆಶಯ ಕಂಡುಹಿಡಿಯುವುದು
- ಚರ್ಚೆಯಲ್ಲಿ ಭಾಗವಹಿಸುವಿಕೆ.
- ರಚನಾ ರೀತಿ, ರಚನಾ ಶೈಲಿ, ಆಶಯ ಪ್ರಕಟಣೆಗಿರುವ ಸಾಮರ್ಥ್ಯ, ಪೂರ್ಣತೆ ಇವುಗಳ ಗುಣಾತ್ಮಕ ಮೌಲ್ಯ ನಿರ್ಣಯ.

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

ಕೆಳಗೆ ನೀಡಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಿದ್ದಾರೆ.

- ಭಾವನೆಯಿಂದ ಚಿತ್ರ ರಚಿಸಲಿರುವ ಸಾಮರ್ಥ್ಯ
- ಭಾಷೆ ಎಂಬ ರೀತಿಯಲ್ಲಿ ಚಿತ್ರವನ್ನು ಉಪಯೋಗಿಸಲಾಗುವುದು.
- ವಿವಿಧ ಮಾಧ್ಯಮಗಳನ್ನು ಆಶಯಕ್ಕನುಗುಣವಾಗಿ ಉಪಯೋಗಿಸಲಿರುವ ಸಾಮರ್ಥ್ಯ.
- ಸ್ವತಂತ್ರವಾಗಿ ಚಿಂತಿಸುವ, ಚಿತ್ರಿಸುವ ಸಾಮರ್ಥ್ಯ.
- ಚಿತ್ರಕಲೆಯನ್ನು ಮಕ್ಕಳು ಪೂರ್ಣವಾಗಿ ಅರ್ಥಮಾಡಿಕೊಳ್ಳುವರು. ಕಲಿತ ಬಳಿಕ ಅವರು ಸ್ವಂತಹಾದಿ ಕಂಡುಕೊಳ್ಳುವುದು. ಅಲ್ಲಿಯ ವರೆಗೆ ಅವರನ್ನು ಒತ್ತಾಯಪೂರ್ವಕವಾಗಿ ಕಳುಹಿಸಬಾರದು. ಮಕ್ಕಳ ಹಿತವನ್ನು ಕೂಡ ಪರಿಗಣಿಸಬೇಕು.

# ಯೂನಿಟ್ 8 : ನಿರೂಪಣೆಗಳು

ಕಲಾ ಸೃಷ್ಟಿಗಳು ಕಾಲಘಟ್ಟದ ಪ್ರತಿಬಿಂಬಗಳಾಗಿವೆ. ಕಾಲಘಟ್ಟದ ಪ್ರತ್ಯೇಕತೆಗಳ ಹಿಂದಿರುವ ಚಿತ್ರಗಳನ್ನು ಸಂಗ್ರಹಿಸಿ ಕಾಪಾಡುವಾಗ ಆ ಕಾಲಘಟ್ಟದ ಪ್ರತ್ಯೇಕತೆಗಳನ್ನು ನಾವು ಸಂರಕ್ಷಿಸುತ್ತೇವೆ. ಈ ರೀತಿಯ ಸಂಗ್ರಹಿಸಿಡುವವುಗಳು ಭವಿಷ್ಯದಲ್ಲಿ ಉಪಯೋಗಿಸಲಾಗುವುದು. ಒಂದು ಕಲಾ ರೂಪವನ್ನು ಆವರ್ತಿಸಿ ಕಾಣುವಾಗ ಅದನ್ನು ಹೆಚ್ಚು ಕಲಿಯಬಹುದಾಗಿದೆ, ಅದರೊಂದಿಗೆ ಸಂಗ್ರಹದಲ್ಲಿರುವ ಚಿತ್ರಗಳನ್ನು ವಿಮರ್ಶಾತ್ಮಕವಾಗಿ ತಿಳಿದು ಟಿಪ್ಪಣಿಗಳನ್ನು ತಯಾರಿಸಿ ತಾರತಮ್ಯ ಕಲಿಕೆ ನಡೆಸುವುದರಿಂದ ಕಲಾಪರವೂ, ಸಾಂಸ್ಕೃತಿಕವೂ ಆದ ಚಿಂತನೆಗಳು ಉದ್ದೀಪನಗೊಳ್ಳುವುದು.

## ಕಲಿಕಾ ಸಾಧನೆ

- ಕಲಾ ಸೃಷ್ಟಿ ಮತ್ತು ಕಲಾ ನಿರೂಪಣೆಗಳನ್ನು ಸಂಗ್ರಹಿಸುವುದು, ನಿರೂಪಣೆ ತಯಾರಿ.

## ಆಶಯ, ತಿಳುವಳಿಕೆ

- ಚಿತ್ರ ಓದು ಕಲಾಸ್ವಾದನೆಯ ಮೊದಲ ಹಂತವಾಗಿದೆ.
- ಚಿತ್ರ ಓದಿನ ಮೂಲಕ, ಚಿತ್ರ ರಚಿಸಿದ ಕಾಲಘಟ್ಟದ ಮೂಲಕ ಸಂಸ್ಕೃತಿಯೊಂದಿಗೆ ಸಂಚರಿಸುವುದು.
- ಸಂಗ್ರಹದ ಮೂಲಕ ವ್ಯತ್ಯಸ್ತ ಶೈಲಿಗಳು, ಮಾಧ್ಯಮಗಳು ಇವುಗಳನ್ನು ಅರ್ಥಮಾಡಿಕೊಂಡು ಪುನಃ ಉಪಯೋಗಿಸುವುದು.
- ಸ್ವತಂತ್ರವಾದ ವಿಮರ್ಶನೆಯು ಕಲೆ ಹಾಗೂ ಕಾಲವನ್ನು ಹೆಚ್ಚು ಅರ್ಥಮಾಡಿಕೊಳ್ಳಲು ಉಪಯೋಗಿಸಬಹುದು.

## ಕಲಿಕಾ ಪ್ರಕ್ರಿಯೆ

**ಹಂತ 1**

- ಸಂಚಿಕೆ ತಯಾರಿಸುವುದು.
- ಕಲಾ ಸೃಷ್ಟಿ ನಿರೂಪಣಾ ಸಂಗ್ರಹದ ಅವಶ್ಯಕತೆಯೇನು?
- ಚರ್ಚೆ, ಅವಲೋಕನ
- ಏನೆಲ್ಲಾ? ಯಾರದೆಲ್ಲಾ? ಹೇಗೆ?
- ಸಂಗ್ರಹಿಸಿದ ಚಿತ್ರಗಳನ್ನು ಪುನಃ ಅನಾಯಾಸವಾಗಿ ಹುಡುಕಲು ಪುನಃ ಯಾವ ಕ್ರಮದಲ್ಲಿರಿಸಬೇಕು.
- ಮಾಧ್ಯಮ, ವರ್ಷ, ಅನುಕ್ರಮಣಿಕೆ (ಸಂಗ್ರಹಕ್ಕೆ, ಕಲಿಕೆಗೆ ಇಂಟರ್‌ನೆಟ್ ಉಪಯೋಗಿಸುವುದು)

**ಹಂತ 2**

- ಆಲ್ಬಂ ನಿರ್ಮಿಸುವುದು ಪ್ರದರ್ಶಿಸುವುದು, ಉತ್ತಮಪಡಿಸುವುದು.
- ಮೌಲ್ಯ ನಿರ್ಣಯ
  ಆಲ್ಬಂನ ಲೇ ಔಟ್
  ವೈವಿಧ್ಯ
  ಕ್ರಮೀಕರಣ, ಗುಣಾತ್ಮಕ ಮೌಲ್ಯ ನಿರ್ಣಯ
  ಪ್ರಾತ್ಯಕ್ಷಿಕೆ ತೋರಿಸುವುದು.

**ಹಂತ 3**

- ಪ್ರಸಿದ್ಧರಾದ ಕಲಾವಿದರಲ್ಲಿ ಯಾರಾದರೊಬ್ಬರ ಚಿತ್ರ ಪ್ರದರ್ಶಿಸುವುದು.



ಉದಾ: ರವಿವರ್ಮನ ಮಿಲ್ಕ್ ಮೇಡ್

- ಗಾರ್ನಿಕ್
  ಪಿಕಾಸೋ ಕಾಲಘಟ್ಟ
  ಗಾರ್ನಿಕ ಪಟ್ಟಣ
  ಸ್ಪಾನಿಷ್ ಅಂತಃಕಲಹ
  ಬಾಂಬೆ ಆಕ್ರಮಣ
  ಜನರಲ್ ಪ್ರೇಂಕ್
  600 ಸ್ಕೆಚ್ಚಸ್ ಆಂಡ್ ವೈಟ್, ಬೂದು ಗ್ರೇ ಬಣ್ಣ ಅಳತೆ

- ಚಿಹ್ನೆ, ಎತ್ತು, ಹಟ್ಟಿ, ಕುದುರೆ, ವಾರ್ತಾ ಪತ್ರಿಕೆ, ತುಂಡಾದ ಶಿಲ್ಪ, ಕೈಯಲ್ಲಿರುವ ಖಡ್ಗ, ಮಗುವಿನೊಂದಿಗೆ ಅಳುವ ಮಗು, ಕಣ್ಣು, ಬಲ್ಬು, ದೀಪ ಹಿಡಿದು ನೋಡುತ್ತಿರುವ ಸ್ತ್ರೀ, ಮುರಿದು ಬೀಳುತ್ತಿರುವ ಕಟ್ಟಡದಿಂದ ಹೊರ ಹಾರುವ ಸ್ತ್ರೀ, ಈ ರೀತಿಯಲ್ಲಿ ವಿಷಯಗಳನ್ನು ತಿಳಿದು ಚಿತ್ರ ಓದಬೇಕು.
- ಚಿತ್ರ ಹಾಗೂ ಚಿತ್ರಗಾರನ ಕಾಲಘಟ್ಟದ ಕುರಿತು ಮಕ್ಕಳು ತಿಳಿದಿರುವುದನ್ನು ಹೇಳಲಿ. ಪಟ್ಟಿ ಮಾಡುವುದು, ಕ್ರೋಡೀಕರಣ ಹೆಚ್ಚು ವಿಚಾರಗಳನ್ನು ಅಧ್ಯಾಪಕರು ಹಂಚಿಕೊಳ್ಳುವರು.
- ಚಿತ್ರದ ಕುರಿತು ನೀವು ತಿಳಿದ ವಿಚಾರಗಳನ್ನು ಬರೆಯಿರಿ. ಮಂಡಿಸುವುದು.
- ಮಂಡನೆಯ ಬಳಿಕ ನಿಮ್ಮ ಆಲ್ಬಂನ ಚಿತ್ರವಾರ್ತೆಗಳು, ನಿರೂಪಣೆಗಳನ್ನು ಓದುವಿರಾ, ಆ ಶೈಲಿ, ರೀತಿ ನೀವು ಬರೆದ ಟಿಪ್ಪಣಿಯೊಂದಿಗೆ ಹೋಲಿಸಿ ನೋಡುವುದು.
- ಹಾಗಾದರೆ ನೀವು ಬರೆದ ನಿರೂಪಣಾ ಟಿಪ್ಪಣಿಯಲ್ಲಿ ಬದಲಾವಣೆಗಳು ಅಗತ್ಯವಲ್ಲವೇ?
- ಹೆಚ್ಚು ರೆಫರೆನ್ಸ್ ಅಗತ್ಯವಿದೆಯೇ?

  ಶಾಲಾ ಲೈಬ್ರರಿಯ ಪ್ರಯೋಜನ ಪಡೆಯುವುದು, ಚಿತ್ರಕಲಾ ಅಧ್ಯಾಪಕನ ಸಹಾಯ ಪಡೆಯುವುದು.
- ರೆಫರೆನ್ಸ್‌ನ ಸಹಾಯದಿಂದ ಹೆಚ್ಚು ಉತ್ತಮವಾದ ರೀತಿಯಲ್ಲಿ ನಿರೂಪಣೆ ತಯಾರಿಸುವುದು. ಮಂಡಿಸುವುದು.
- ಉತ್ತಮ ಚಿತ್ರಗಳನ್ನು ನೆಟ್‌ನಿಂದ ತೆಗೆದು ಲ್ಯಾಪ್‌ಟ್ಯಾಪ್‌ನ ಮೂಲಕ ತರಗತಿಯಲ್ಲಿ ತೋರಿಸುವುದು, ಅಧ್ಯಾಪಕನು ಪಟ್ಟಿ ಮಾಡಿದುದನ್ನು ಮಕ್ಕಳಿಗೆ ತೋರಿಸುವುದು.

### ಮೌಲ್ಯ ಮಾಪನ

- ಚಿತ್ರವನ್ನು ನಿರೂಪಣಾತ್ಮಕವಾಗಿ ನೋಡುವ ಸಾಮರ್ಥ್ಯ.
- ಚಿತ್ರವನ್ನು ಓದಲಿರುವ ಸಾಮರ್ಥ್ಯ
- ಟಿಪ್ಪಣಿ ತಯಾರಿ, ರೆಫರೆನ್ಸ್ ಪ್ರಯೋಜನಪಡಿಸಲಿರುವ ಸಾಮರ್ಥ್ಯ.
- ಮಂಡಿಸುವ ರೀತಿ

ಇವುಗಳ ಗುಣಾತ್ಮಕ ಮೌಲ್ಯಮಾಪನ

### ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಮೇಲೆ ನೀಡಿದ ಕಲಿಕಾ ಸಾಮರ್ಥ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಚಿತ್ರ ಓದಿನ ಮೂಲಕ ಚರಿತ್ರೆ, ಸಂಸ್ಕೃತಿಯನ್ನು ತಿಳಿಯುತ್ತಾರೆ.
- ಸಂಗ್ರಹದ ಮೂಲಕ ಚಿತ್ರ ಸಂರಕ್ಷಣಾ ಮನೋಭಾವ ಬೆಳೆಯುತ್ತದೆ.
- ರೆಫರೆನ್ಸ್ ಪ್ರಯೋಜನಪಡಿಸಲು ಟಿಪ್ಪಣಿಗಳನ್ನು ಉತ್ತಮಪಡಿಸಲಿರುವ ಸಾಮರ್ಥ್ಯ.

# ಯೂನಿಟ್ 9 : ತ್ರಿಮಾನ ರೂಪಗಳು

ತ್ರಿಮಾನ ರೂಪಗಳು ಆಶಯ ಪ್ರಕಟಣೆಗಿರುವ ಪ್ರಧಾನ ಮಾಧ್ಯಮವಾಗಿದೆ. ಒಬ್ಬ ಶಿಲ್ಪಿ ತನ್ನೊಳಗಿರುವ ಪ್ರತಿಯೊಂದು ಆಶಯವನ್ನು ಶಿಲ್ಪವಾಗಿ ನಿರ್ಮಿಸುವಾಗ, ತನಗೆ ಜಗತ್ತಿನೊಂದಿಗೆ ಹೇಳಲಿರುವ ಒಂದು ಹೊಸ ಆಶಯದ ಪ್ರಕಟಿತ ರೂಪವಾಗಿ ಶಿಲ್ಪ ಬದಲಾಗುತ್ತದೆ. ಸ್ವಾಭಾವಿಕವಾಗಿ ಒಬ್ಬ ಮನುಷ್ಯನ ಆಶಯದ ಪ್ರಕಟಿತ ಮಾಧ್ಯಮಗಳಲ್ಲಿ ಶಿಲ್ಪಗಳಿಗೆ ಬಹಳ ಪ್ರಾಧಾನ್ಯತೆಯಿದೆ. ಮಾತ್ರವಲ್ಲದೆ ಒಂದು ಕಲಿಕಾ ವಿಷಯವಾಗಿ ಶಿಲ್ಪ ರಚಿಸುವಾಗ ಖಂಡಿತವಾಗಿ ಅತೀ ಸೂಕ್ಷ್ಮವಾದ ನಿರೀಕ್ಷಣಾ ಕಲಿಕೆ ತಾನು ರಚಿಸಿಕೊಂಡಿರುವ ಆಶಯದ ತ್ರಿಮಾನರೂಪಕ್ಕೆ ಸಂಬಂಧಿಸಿ ನಡೆಯಬೇಕಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಶಿಲ್ಪಕಲೆ ಬಹಳ ಬೌದ್ಧಿಕವಾಗಿ ಪಾಲುಗೊಳ್ಳುವ ಒಂದು ಮಾಧ್ಯಮವಾಗಿದೆ. ಪ್ರತ್ಯೇಕವಾಗಿ ಹೇಳುವುದಾದರೆ ಒಂದು ಆಶಯವನ್ನು ಬೌದ್ಧಿಕವಾಗಿ ಶಿಲ್ಪರಚನೆ ಮಾಡುವುದಾಗಿದೆ. ಆದುದರಿಂದ ಈ ರಂಗದಲ್ಲಿ ವಿದ್ಯಾರ್ಥಿಗಳು ಬಹಳ ಸೂಕ್ಷ್ಮವಾಗಿ ಆಶಯವಿನಿಮಯ ನಡೆಸುತ್ತಾರೆ.

## ಕಲಿಕಾ ಸಾಮರ್ಥ್ಯ

- ತ್ರಿಮಾನ ರೂಪಗಳನ್ನು ವಿವಿಧ ಮಾಧ್ಯಮಗಳ ಉಪಯೋಗದೊಂದಿಗೆ ಸೃಷ್ಟಿಸುವುದು.

## ಆಶಯ ತಿಳುವಳಿಕೆ

- ಶಿಲ್ಪವು ಆಶಯ ವ್ಯಕ್ತಪಡಿಸಲಿರುವ ಒಂದು ಮಾಧ್ಯಮವಾಗಿದೆ.
- ಅದು ತ್ರಿಮಾನತ್ವವುಳ್ಳದ್ದಾಗಿದೆ. ಅದರ ಸೌಂದರ್ಯ ನಿತ್ಯನೂತನ
- ಶಿಲ್ಪ ನಿರ್ಮಿಸುವಾಗ ವಸ್ತುವಿನ ಎಲ್ಲಾ ಭಾಗಗಳ ಕಲಿಕೆ ಅಗತ್ಯವಾಗಿದೆ.
- ಶಿಲ್ಪ ನಿರ್ಮಾಣಕ್ಕೆ ಮರ/ಆವೆಮಣ್ಣು ಎಂಬೀ ಪರಂಪರಾಗತ ಮಾಧ್ಯಮಗಳು, ಸಿಮೆಂಟ್, ಫೈಬರ್, ಪೇಪರ್ ಪಲ್ಪ್, ಪ್ಲಾಸ್ಟಿಕ್ ವ್ಯಾಕ್ಸ್, ಅಕ್ಕಿ ಹುಡಿ, ಗಮ್ ಎಂಬೀ ಆಧುನಿಕ ಮಾಧ್ಯಮಗಳನ್ನು ಉಪಯೋಗಿಸುವುದು.
- ಎತ್ತರವಾಗಿರುವ ಶಿಲ್ಪಗಳನ್ನು ರಚಿಸುವಾಗ ಬೀಳದಿರಲು ಪೆಡಾಸ್ಟಲ್ ಆರ್‌ಮೆಚರ್ ಒಳಗೊಂಡ ವಿಧಾನವನ್ನು ಬಳಸಬೇಕು.
- ಶಿಲ್ಪದ ಸ್ವಭಾವಕ್ಕನುಗುಣವಾಗಿ ಮಾಧ್ಯಮಗಳನ್ನು ಆಯ್ಕೆ ಮಾಡಬೇಕು.
- ಶಿಲ್ಪಗಳಿಗೆ ಉಪಯೋಗಿಸುವ ನಿಡ್‌ಲ್‌ಗಳು, ಡೆಮೊಸ್ಟ್ರೇಶನ್ ನೆಟ್‌ನಿಂದ ಕಾಣಿಸುವುದು.

## ಕಲಿಕಾ ಪ್ರಕ್ರಿಯೆ

- ವಿವಿಧ ಮಾಧ್ಯಮಗಳಲ್ಲಿ ರಚಿಸಿದ ಶಿಲ್ಪಗಳನ್ನು ಕಾಣಲು ಡೆಮೋಸ್ಟ್ರೇಶನ್, ಸಿ.ಡಿ. ಪ್ರದರ್ಶನ, ಮೂಲಕ ಅವಕಾಶ ನೀಡುವುದು.
- ಶಿಲ್ಪ ರಚನೆಯ ಆಶಯಗಳು/ವಸ್ತುಗಳನ್ನು ಕಂಡುಕೊಳ್ಳಲಿರುವ ಚರ್ಚೆ, ಪಟ್ಟಿ ಮಾಡುವುದು.

***ಚರ್ಚಾ ಸೂಚಕಗಳು***

1. ಶಿಲ್ಪ ರಚಿಸಲಿರುವ ರೂಪಗಳ ಪಟ್ಟಿ, ಉದಾ: ಪಿರಮಿಡ್, ಚೌಕಾಕಾರ ಮೊದಲಾದ ನಮೂನೆಗಳು.
2. ಆಶಯಗಳು:
   ಉದಾ: ಗಿಳಿಗಳು, ಮೊಲ, ಇಲಿ, ಕಪ್ಪೆ, ನಾಯಿ, ಆನೆ, ಕಾವು ಕುಳಿತಿರುವ ಕೋಳಿ, ಪಕ್ಷಿಗಳು.

3. ಯಾವೆಲ್ಲಾ ಮಾಧ್ಯಮ ಉಪಯೋಗಿಸಬಹುದು? ಹಗ್ಗ ನೂಲು ಇತ್ಯಾದಿ.
   ಆನೆಯ ನಾಲ್ಕು ಭಾಗಗಳಲ್ಲಿರುವ ಚಿತ್ರಗಳನ್ನು ಕಲಿಕೆಗೆ ಬಳಸಬೇಕು. ಆವೆಮಣ್ಣು, ಪ್ಲಾಸ್ಟರ್ ಆಪ್ ಪ್ಯಾರಿಸ್, ಪಲ್ಪ್ ಇತ್ಯಾದಿ
4. ಮರ ಎಳೆಯುವ ಆನೆ, ಬಂಡೆಕಲ್ಲಿನ ಮೇಲೆ ನಿಂತಿರುವ ಸಿಂಹ, ಭಿಕ್ಷುಕ (ಮರ ಎಳೆಯುವ ಆನೆಗೆ ಒಳ್ಳೆಯ ಅಭಿನಯವಿರುವಂತೆ ಗಮನಿಸಬೇಕು. ನಿರ್ಮಾಣಕ್ಕೆ ಒಂದು ಅಥವಾ ಹೆಚ್ಚು ಮಾಧ್ಯಮಗಳನ್ನು ಉಪಯೋಗಿಸಬಹುದು)

- ಆವೆಮಣ್ಣು, ಮರ
- ಕಂಡುಕೊಂಡ ಆಶಯ/ವಸ್ತುಗಳನ್ನು ನಿರ್ಮಿಸಲು ಯಾವುದೆಲ್ಲಾ ಮಾಧ್ಯಮಗಳನ್ನು ಬಳಸಬಹುದು? ಪಟ್ಟಿ ಮಾಡುವುದು.
  ಉದಾ: ಒಂದು ಮರದ ಮೇಲೆ ಗೂಡುಕಟ್ಟಿ ಮೊಟ್ಟೆಯಿಟ್ಟು ಕೂಗಿಕೊಂಡಿರುವ ಪಕ್ಷಿಯ ಶಿಲ್ಪ.
- ಮರ, ಪಕ್ಷಿಗಾಗಿ ಆವೆಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್‌ನ್ನು ಉಪಯೋಗಿಸಬಹುದು. ಗೂಡಿಗೆ ತೆಂಗಿನ ಸಿಪ್ಪೆಯ ನಾರು, ಕಡ್ಡಿಗಳನ್ನು ಉಪಯೋಗಿಸಬಹುದು.
- ಶಿಲ್ಪ ರಚಿಸಲು ಅಗತ್ಯವಾದ ಸ್ಕೆಚು ತಯಾರಿಸುವುದು. ನಕ್ಷೆ ಪ್ರದರ್ಶಿಸಿ ಚರ್ಚೆ ನಡೆಸಿ ಅಗತ್ಯವಾದ ತಿದ್ದುಪಡಿ ನಡೆಸುವುದು.
- ಮಾಧ್ಯಮ ತೀರ್ಮಾನಿಸುವುದು, ಅಗತ್ಯವಾದ ಪೆಡಸ್ಟಲ್ ಆರ್ಮೆಚರ್ ನಿರ್ಮಿಸುವುದು, ಅದಕ್ಕಾಗಿ ಆವೆಮಣ್ಣು, ತಂತಿ, ಹಿಡಿಕಡ್ಡಿ, ನೂಲು ಎಂಬಿತ್ಯಾದಿ ಉಪಯೋಗಿಸುವುದು.
- ಶಿಲ್ಪ ನಿರ್ಮಿಸುವುದು, ಪ್ರದರ್ಶಿಸುವುದು
- ಶಿಲ್ಪಿಗೆ ಆಶಯ ಅವಲೋಕನ/ಪ್ರಕಟಿಸುವುದಕ್ಕೆ ಚರ್ಚೆ
- ಅಭಿನಂದಿಸುವುದು, ಮೌಲ್ಯಮಾಪನಗೊಳಿಸುವುದು
- ಮೌಲ್ಯಮಾಪನದ ಬಳಿಕ ಶಿಲ್ಪಗಳ ನ್ಯೂನತೆಗಳನ್ನು ಪರಿಹರಿಸುವುದು ಅಥವಾ ಹೊಸ ಶಿಲ್ಪ ನಿರ್ಮಿಸಲು ಅವಕಾಶ ಒದಗಿಸುವುದು.

## ಮೌಲ್ಯನಿರ್ಣಯ

- ಶಿಲ್ಪ ನಿರ್ಮಾಣಕ್ಕಿರುವ ಆಶಯ ಕಂಡುಕೊಳ್ಳುವುದು. ಆಶಯದ ಸಮಕಾಲೀನ ಪ್ರಾಧಾನ್ಯತೆ.
- ಮಾಧ್ಯಮಗಳನ್ನು ಉಪಯೋಗಿಸಲು, ಕಂಡುಕೊಳ್ಳಲು ಇರುವ ಸಾಮರ್ಥ್ಯ.
- ಗಟ್ಟಿಯಾದ ನಿರ್ಮಾಣ ರೀತಿ: ಪೆಡಸ್ಟಲ್ ಆರ್ಮೇಚರ್ ನಿರ್ಮಾಣ
- ಪೂರ್ಣತೆ, ಡಿಟೆಯೆಲ್ಸ್, ಟೆಕ್ಸ್ಚರ್ ಎಂಬಿವುದರಲ್ಲಿ ಇರುವ ಆಸಕ್ತಿ. ಇವುಗಳೆಲ್ಲದರ ಗುಣಾತ್ಮಕ ಮೌಲ್ಯ ನಿರ್ಣಯ.

# ಒಂಭತ್ತನೇ ತರಗತಿ

## ಯೂನಿಟ್ 1 : ಚಿತ್ರ ರಚಿಸುವ

ವ್ಯಕ್ತಿ ಕೇಂದ್ರೀಕೃತ ಆಶಯ ಪ್ರಕಟಣೆಗೆ ಸೃಜನಾತ್ಮಕ ರಚನೆಗಳು ಸಹಾಯಕವಾಗಿದೆ. ಮಗುವಿಗೆ ಯಾವುದೇ ಮಾಧ್ಯಮ, ಶೈಲಿಯನ್ನು ಉಪಯೋಗಿಸಲು, ಇತರರೊಂದಿಗೆ ವಿನಿಮಯ ನಡೆಸಲು ಸಾಧ್ಯವಾಗಬೇಕು.

### ಕಲಿಕಾ ಸಾಧನೆ

- ಆಶಯವನ್ನೊಳಗೊಂಡು ಸೃಜನಾತ್ಮಕ ಚಿತ್ರಗಳನ್ನು ರಚಿಸುವುದು.

### ಆಶಯ, ತಿಳುವಳಿಕೆ

- ಚಿತ್ರದ ಸ್ವಭಾವ, ಸ್ವಂತಿಕೆ, ಶೈಲಿ ಇವುಗಳು ಮೂಲಭೂತವಾಗಿ ಮಗುವಿನ ಸ್ವಂತ ರೀತಿಯೇ ಆಗಿದೆ. ಇನ್ನೊಬ್ಬರ ಚಿತ್ರ ಅಥವಾ ಫೋಟೋಗ್ರಾಫಿ ಇದಕ್ಕೆ ಸಾಟಿಯಾಗದು. ತನ್ನದಾದ ಶೈಲಿಯನ್ನು ಅಭ್ಯಸಿಸುವ ಮಗುವಿನಲ್ಲಿ ವೇಗವಾಗಿ ಆಶಯ ಪ್ರಕಟಣೆ ನಡೆಯುತ್ತದೆ. ಮಾತ್ರವಲ್ಲದೆ ಇತರರಿಗೂ ಈ ಆಶಯವನ್ನು ವೇಗವಾಗಿ ತಲುಪಿಸಲು ಸಾಧ್ಯವಾಗುತ್ತದೆ. ಪರಂಪರಾಗತ ರೀತಿಯಲ್ಲಿ ಅರ್ಥಮಾಡಿಕೊಳ್ಳುವುದರ ಜೊತೆಗೆ ಹೊಸ ರೀತಿಗಳನ್ನು ಪರಿಚಯಿಸಬೇಕು.

### ಕಲಿಕಾ ಚಟುವಟಿಕೆಗಳು

**ಹಂತ 1**

- ಪ್ರಸಿದ್ಧರಾದ ಚಿತ್ರಗಾರರ ಚಿತ್ರಗಳನ್ನು ಕಾಣಲಿರುವ ಅವಕಾಶ ಒದಗಿಸುವುದು. ಶಾಸ್ತ್ರೀಯ ಚಿತ್ರಗಳು, ಸಮಕಾಲೀನ ಚಿತ್ರಗಳು.



ಅಬನೀಂದ್ರನಾಥ ಟಾಗೋರರ 'ಜರ್ನೀ ಎಂಡ್', ಎಂಬ ಪೈಂಟಿಂಗ್

- ಪ್ರತಿಯೊಂದು ಕಾಲದ ಚಿತ್ರಗಳ ಶೈಲಿಯು, ಚಿತ್ರೀಕರಣ ರೀತಿಯನ್ನು ಕಲಾ ಅಧ್ಯಾಪಕನು ಮಕ್ಕಳಿಗೆ ವಿವರಿಸುವರು.
- ಸೃಜನಾತ್ಮಕತೆಯಿಂದ ರಚಿಸಿರುವ ಚಿತ್ರಕ್ಕಿರುವ ಮಹತ್ವವು ಅದರ ಪ್ರತಿಕೃತಿಗೆ ಒಮ್ಮೆಯೂ ಇರಲಾರದು ಎಂದು ಮಗುವಿಗೆ ತಿಳಿಯಪಡಿಸಬೇಕು.
- ಚಿತ್ರಪ್ರದರ್ಶನ ಕಾಣಲು ಅವಕಾಶ ಒದಗಿಸುವುದು.
- ಐ.ಟಿ. ರಂಗವನ್ನು ಇದಕ್ಕಾಗಿ ಬಹಳಷ್ಟು ಪ್ರಯೋಜನಪಡಿಸಬೇಕು.

***ಹಂತ 2***

- ತರಗತಿ ಚಟುವಟಿಕೆಯಾಗಿ ಎಲ್ಲಾ ಮಕ್ಕಳಲ್ಲೂ ಯಾವುದಾದರೂ ಒಂದು ವಿಷಯವನ್ನು ಆಧಾರವಾಗಿರಿಸಿ ಚಿತ್ರ ರಚಿಸಲು ಹೇಳುವುದು.
- ಚಿತ್ರಗಳನ್ನು ಪರಸ್ಪರ ಬದಲಾಯಿಸಿ ಮಕ್ಕಳಲ್ಲಿ ಸ್ವಯಂ ತಿಳಿಯಲು ಹೇಳುವುದು.
- ಚಿತ್ರದ ಕುರಿತು ಪ್ರತಿಯೊಂದು ಮಗುವು ಅಭಿಪ್ರಾಯ ಹೇಳಲಿ.
- ಈ ಸಂದರ್ಭದಲ್ಲಿ ಕಲಾ ಅಧ್ಯಾಪಕನ ಸಹಕಾರ ಹೆಚ್ಚು ಆಶಯ ಪ್ರಕಟಣೆಗೆ ಸಹಾಯಕವಾಗುವುದು.
- ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವುದು.
- ತರಗತಿಯಲ್ಲಿ ಚಿತ್ರಗಳನ್ನು ಪ್ರದರ್ಶಿಸುವುದು.

ಮಕ್ಕಳ ಹಾಗೂ ಅಧ್ಯಾಪಕರ ಪ್ರತಿಯೊಂದು ಚಿತ್ರಗಳ ಕುರಿತು ವಿವರಿಸುವಾಗ ಚಿತ್ರಗಳ ಆಶಯವೂ, ನೈಪುಣ್ಯವು ಅಭಿವೃದ್ಧಿಯಾಗಿದೆ ಎಂಬುದಾಗಿ ಮಕ್ಕಳಿಗೆ ಅರ್ಥವಾಗುತ್ತದೆ. ಚಿತ್ರರಚನೆಗೆ ಇರುವ ಆಕಾಂಕ್ಷೆಯು, ಹಂಬಲವು ಹೆಚ್ಚುತ್ತದೆ. ಮಕ್ಕಳು ಕಂಡುಕೊಂಡ ಆಶಯವನ್ನು ಅಧ್ಯಾಪಕರು ಚಿತ್ರ ರಚಿಸಿ ತೋರಿಸುವುದು.

## ಮೌಲ್ಯಮಾಪನ

- ಸ್ವಯಂ ಮೌಲ್ಯಮಾಪನ, ಉತ್ತಮಪಡಿಸುವುದಕ್ಕಾಗಿ ಕಲಾ ಅಧ್ಯಾಪಕನ ಮೌಲ್ಯ ಮಾಪನ
- ವಿಷಯದೊಂದಿಗಿರುವ ಸಂಬಂಧ
- ಪ್ರಯೋಗ ರೀತಿ (ಸ್ವಂತ ರೀತಿಯೋ ಇತರರು ಅಥವಾ ಉಪಯೋಗಿಸಿರುವುದೋ?)
- ಬಣ್ಣಗಳ ಕುರಿತಾದ ತಿಳುವಳಿಕೆ
- ಆಶಯ
- ಪೂರ್ಣತೆ (ಪೂರ್ಣವಾಗದಿದ್ದರೆ ಕಾರಣ ತಿಳಿಯುವುದು ಪರಿಹಾರಕ್ಕೆ ಇರುವ ನಿರ್ದೇಶನಗಳನ್ನು ನೀಡಬೇಕು)
- ಮಗು ಗಳಿಸಬೇಕಾದ ನೈಪುಣ್ಯಗಳು, ತಾಂತ್ರಿಕ ನೈಪುಣ್ಯಗಳು
- ಶಾರೀರಿಕವೂ ಮಾನಸಿಕವೂ ಆದ ಬೆಳವಣಿಗೆ
- ಚಿತ್ರಕಲೆಯಲ್ಲಿರುವ ಅಭಿರುಚಿ
- ಉತ್ತಮ ಪೌರರನ್ನು ಸೃಷ್ಟಿಸುವುದು
- ಸೃಜನಾತ್ಮಕತೆಯನ್ನು ಪ್ರೋತ್ಸಾಹಿಸುವುದು.

**ಹೆಚ್ಚೆಚ್ಚು ರಚಿಸಲು ಹಂಬಲಿಸುವ ಮಕ್ಕಳಿಗೆ**

ಮನಸ್ಸಿನಲ್ಲಿರುವ ಆಶಯಗಳು ರೂಪಗಳಾಗಿ ಯಥಾಸ್ಥಾನದಲ್ಲಿ ಪ್ರತಿಷ್ಠಾಪಿಸುವಾಗ ಚಿತ್ರವಾಗುವುದು, ರೂಪದೊಂದಿಗೆ (ಆಕಾರ) ನೆರಳು, ಬೆಳಕು, ಬಣ್ಣ, ಅಂತರ, ಅನುಪಾತವು ಸೇರಿದಾಗ ಅದು ಉತ್ತಮ ಚಿತ್ರವಾಗುವುದು.

**ಕಲಿಕಾ ಸಾಧನೆ**

ಆಶಯವನ್ನು ಅರ್ಥಮಾಡಿಕೊಂಡು ಸೃಜನಾತ್ಮಕ ಚಿತ್ರಗಳನ್ನು ರಚಿಸುವುದು.

**ಆಶಯ, ತಿಳುವಳಿಕೆಗಳು**

ಪ್ರತಿಯೊಂದನ್ನು ಕೂಡ ಸ್ವಂತವಾಗಿ ರಚಿಸಲು ಸಾಧ್ಯವಾಗಬೇಕೆಂಬುದು ಪ್ರತಿಯೊಬ್ಬರ ಬಹುದೊಡ್ಡ ಕನಸು. ಅದು ಉತ್ತಮವಾದುದಾದರೆ ಅದರಿಂದ ಸಿಗುವ ಮಾನಸಿಕ ಸಂತೋಷ ಹೇಳತೀರದು. ಯಾವುದಾದರೊಂದು ಸಮಸ್ಯೆಗಳೆಲ್ಲದ ಮನುಷ್ಯರಿದ್ದಾರೆಯೇ? ...... ಇಲ್ಲ. ಚಿತ್ರ ರಚನೆಯು ಎಲ್ಲಾ ದುಃಖವನ್ನು ಒಂದು ನಿಮಿಷಕ್ಕೆ ಮರೆಯಲಿರುವ ಔಷಧವಾಗಿದೆ. ಒಳ್ಳೆಯ ಚಿತ್ರಗಳನ್ನು ನೋಡಿದಾಗ ಕೂಡ ಈ ಅನುಭವ ಉಂಟಾಗುವುದು.


ಆದರೆ ಆ ರೀತಿಯಲ್ಲಿ ಚಿತ್ರ ರಚಿಸಲು ತರಬೇತಿ ಅಗತ್ಯವಾಗಿದೆ. ಅದಕ್ಕೆ ಬೇಕಾದ ರೂಪಗಳನ್ನು ನಮಗೆ ಪ್ರಕೃತಿಯಿಂದ ಕಲಿಯಬಹುದು. ಆಶಯವು ಜೀವನದಿಂದಲೂ ಅನುಭವದಿಂದಲೂ ಲಭಿಸುವುದು. ಮನಸ್ಸನ್ನು ಉತ್ತೇಜಿಸಬೇಕು. ಕ್ರಮೇಣ ಚಿತ್ರ ರಚನೆಯನ್ನು ಉತ್ತಮಪಡಿಸಬೇಕು.

**ಕಲಿಕಾ ಚಟುವಟಿಕೆಗಳು**

- ಬಯಲು ಎಂಬ ಒಂದು ಪದವನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವರು. ಇದಕ್ಕೆ ಸಂಬಂಧಿಸಿ ಏನೆಲ್ಲಾ ಚಿತ್ರ ರಚಿಸಬಹುದು? ಚಿಂತಿಸಿ ಪಟ್ಟಿ ಮಾಡಲು ಹೇಳುವುದು.
- ಕೆಲವರಿಂದ ಓದಿಸುವುದು. ಬೋರ್ಡಿನಲ್ಲಿ ಬರೆಯುವುದು. ಇತರ ಮಕ್ಕಳು ಹೆಚ್ಚು ವಿಷಯಗಳನ್ನು ಸೇರಿಸುವರು.

ಉದಾ: ಬಯಲು, ಬಯಲಿನಲ್ಲಿ ಕೆಲಸ ಮಾಡುವ ಸ್ತ್ರೀಯರು, ಬಯಲು ಉಳುವ ಪುರುಷರು, ಹುಣಿಯಲ್ಲಿ ಕೊಡೆ ಹಿಡಿದಿರುವ ಜಮೀನ್ದಾರ, ಕೊಯ್ಯುವ ಸ್ತ್ರೀಯರು, ಬಡಿಯುವ ಜನರು, ಭತ್ತ ಗಾಳಿಗೆ ಹಿಡಿಯುವುದು, ಬೆಳೆದು ನಿಂತ ಪೈರುಗಳು, ಎತ್ತುಗಳು, ಕೋಣಗಳು, ಟ್ರಾಕ್ಟರ್, ಕೊಯ್ಲು ಯಂತ್ರ, ಹಸಿರಾದ ಬಯಲು, ಬೆಳೆದ ಪೈರುಗಳು, ಕೊಕ್ಕರೆಗಳು ಬಯಲಿನ ಬದಿಯಲ್ಲಿ ಮನೆ, ಮೊದಲಾದ ವಿಷಯಗಳನ್ನು ಮಕ್ಕಳು ಪಟ್ಟಿ ಮಾಡುವರು. ಅದರಿಂದ ನಿಮಗೆ ಚಿತ್ರ ರಚಿಸಲು ಸಾಧ್ಯವಿರುವ ಒಂದು ವಿಷಯದ ಬಗ್ಗೆ ಚಿತ್ರ ರಚಿಸುವುದು.

- ಅವರು ಚಿತ್ರ ರಚಿಸಲು ಆರಂಭಿಸುವಾಗ ಅಧ್ಯಾಪಕರು ಕೆಲವು ವಿಷಯಗಳನ್ನು ಕೂಡ ವಿವರಿಸುವರು.



ಚಿತ್ರ ರಚಿಸಲಿರುವ ಕಾಗದದ/ಕ್ಯಾನ್‌ವಾಸ್‌ನ ಉದ್ದ ಅಗಲವನ್ನು ಮೂರಾಗಿ ವಿಭಾಗಿಸುವುದು. ಆಗ ಸಿಗುವ 4 ಮೂಲೆಗಳಲ್ಲಿ ಒಂದರ ಭಾಗವಾಗಿ ಪ್ರಧಾನ ಕಥಾಪಾತ್ರವನ್ನು ರಚಿಸುವುದು ಉತ್ತಮ. ಇದನ್ನು Centre of Interest ಎಂದು ಹೇಳುವರು.

- ಪ್ರಧಾನ ಕಥಾಪಾತ್ರ ಮುರಿದು ಹೋಗದೆ ರಚಿಸುವುದು ಉತ್ತಮ.
- ಇನ್ನು ನಮಗೆ ಚಿತ್ರ ರಚಿಸುವಾ. ಮಕ್ಕಳು ಚಿತ್ರ ರಚಿಸಲಿ. ಈ ಸಮಯದಲ್ಲಿ ಚಿತ್ರ ರಚಿಸುವ ರೀತಿಯನ್ನು ಹೇಳಿ ಕೊಡಬಹುದು. ಮನಸ್ಸಿನಲ್ಲಿರುವ ಆಶಯಗಳನ್ನು ಕ್ಯಾನ್‌ವಾಸ್‌ಗೆ ಬದಲಾಯಿಸುವುದು ಸ್ವಲ್ಪ

ಕಷ್ಟಕರ ಕೆಲಸವಾಗಿದೆ. ಅದಕ್ಕೆ ಒಂದು ಉಪಾಯವನ್ನು ಉಪಯೋಗಿಸಬಹುದಾಗಿದೆ. ಮನಸ್ಸಿನ ರೂಪಗಳನ್ನು ಮೂರೋ ನಾಲ್ಕೋ ಗೆರೆಗಳಲ್ಲಿ ವೇಗವಾಗಿ ರಚಿಸುವುದು. ಅದಕ್ಕೆ ಪೂರ್ಣತೆ ಇರದಿದ್ದರೂ ತೊಂದರೆಯಿಲ್ಲ. ಇಷ್ಟು ಮಾಡಿ ಚಿಂತಿಸುವ. ರಚಿಸಿದ್ದರೆ ಏನಾದರೂ ತಪ್ಪಿದೆಯೇ. ಇದು ರಚಿಸಬೇಕಾದುದು ಇಲ್ಲಿಯೇ? ಹೀಗೆ ರಚಿಸಬೇಕಾದುದೇ? ಮನಸ್ಸಿನಲ್ಲಿ ತೋರಿದ ಬದಲಾವಣೆಗಳನ್ನು ಮಾಡುವುದು. ಮತ್ತು ಪೆನ್ಸಿಲ್‌ನಲ್ಲೋ ಅಥವಾ ನೇರವಾಗಿ ವಾಟರ್ ಕಲರ್‌ನಲ್ಲಿ Yellow ocher ತೆಳುವಾಗಿ ಕದಡಿಸಿ ಸ್ಕೆಚ್ ಮಾಡುವುದು. ಸರಿಯಾದ ರೂಪ ದೊರೆತರೆ ಸ್ಪಷ್ಟವಾಗಿ ಕಾಣಬೇಕಾದ ಭಾಗಗಳಿಗೆ (dark) ಮಾಡಿ ಸರಿಯಾದ ಬಣ್ಣವನ್ನು ನೀಡಿ ಚಿತ್ರ ಪೂರ್ತಿಗೊಳಿಸುವುದು.

- ಅಧ್ಯಾಪಕನು ಈ ರೀತಿ ವಿವರಿಸಿ ಕೊಡಬೇಕು. ಸರಿಯಾದ ಭಾವನೆ, ಸೌಂದರ್ಯ ಸಿಗಲು ಈ ರೀತಿ ಗುಣಕರವಾಗಿದೆ. ಉಜ್ಜಿ ಉಜ್ಜಿ ರಚಿಸಿದ ಸರಿಯಾದ ಭಾಗ ಸ್ಪಷ್ಟವಾಗಿ ಕಂಡುಬರುವ ರೀತಿಯು ಇಂಗ್ಲೀಷರಿಗೆ ತುಂಬಾ ಇಷ್ಟ.
- ಮಕ್ಕಳು ಚಿತ್ರ ರಚಿಸುವಾಗ ಅಧ್ಯಾಪಕರು ತಾನು ರಚಿಸಿದ ಸ್ಕೆಚನ್ನು ತೋರಿಸಿ ಕೊಡಬಹುದು.
- ಚಿತ್ರ ರಚಿಸಿ ಆದವರೂ, ಆಗದವರೂ ಅಧ್ಯಾಪಕರಿಗೆ ರೂಪು ರೇಷೆ ತೋರಿಸಿ ತಮ್ಮ ಚಿತ್ರವನ್ನು ಮನೆಗೆ ಹೋಗಿ ಉತ್ತಮಪಡಿಸಿ ರಚಿಸಲಿ. ಅದನ್ನು ತರಗತಿಯಲ್ಲಿ ಮಂಡಿಸಿದ ಬಳಿಕ ಅಧ್ಯಾಪಕರು ಜಲ ವರ್ಣದಲ್ಲಿ ರಚಿಸಿ ಕೊಂಡು ಬಂದ ಚಿತ್ರ ಕಾಣಿಸುವುದು. ಎಲ್ಲರಿಗೂ ಪಾಸ್ ಮಾಡುವುದು.



- ಅಧ್ಯಾಪಕ ರಚಿಸಿದ ಚಿತ್ರವು ಮಕ್ಕಳಲ್ಲಿ ಪುನಃ ಚಿತ್ರ ರಚಿಸಲಿರುವ ಕುತೂಹಲ ಹೆಚ್ಚಿಸುವುದು. ಆಶಯಗಳ ಕೊರತೆಯಿಂದಲ್ಲ ಅವರು ರಚಿಸದಿರುವುದು, ಬದಲಾಗಿ ರಚಿಸಲಿರುವ ಭಯ ಮತ್ತು ತಾಂತ್ರಿಕವಾದ ತಿಳುವಳಿಕೆಯ ಕೊರತೆ ಇದನ್ನೂ ಪರಿಹರಿಸಿದರೆ ಸಾಕು.
- ಮಕ್ಕಳು ಪಟ್ಟಿ ಮಾಡಿದ ಘಟನೆಗಳಲ್ಲಿ ಅವರು ಆಯ್ಕೆ ಮಾಡಿದರೊಂದನ್ನು ಅಧ್ಯಾಪಕರು ಪ್ರಾತ್ಯಕ್ಷಿಕೆ ನಡೆಸಿ ಚಿತ್ರ ರಚಿಸಿದರೆ ಒಳ್ಳೆಯ ಚಿತ್ರಗಳು ಒಳ್ಳೆಯ ಚಿತ್ರಗಾರರು ಉಂಟಾಗುವರು.
- ಇಂಟರ್‌ನೆಟ್‌ನಲ್ಲಿರುವ ಒಳ್ಳೆಯ ಚಿತ್ರಗಳನ್ನು ಲ್ಯಾಪ್‌ಟೋಪ್‌ಗಳಲ್ಲೂ, ಕಲರ್ ಲೇಸರ್ ಪ್ರಿಂಟಾಗಿಯೋ ಮಕ್ಕಳಿಗೆ ಕಾಣಿಸುವುದು.

**ಮೌಲ್ಯ ನಿರ್ಣಯ**

- ಏನನ್ನಾದರೂ ರಚಿಸಬಹುದೆಂಬ ತೋರಿಕೆ ಕಂಡುಬರುತ್ತದೆಯೇ?
- ಆರಂಭ ಭಯ ಬದಲಾಯಿತೇ?
- ಆಕೃತಿಗಳು ಮಗುವಿಗೆ ಮನವರಿಕೆಯಾದರೆ ಬಳಿಕ ಬಣ್ಣ, ನೆರಳು ಬೆಳಕು, ಅಗಲ ಎಲ್ಲವನ್ನು ಸೇರಿಸಿ ಚಿತ್ರೀಕರಣಕ್ಕೆ ಅಧ್ಯಾಪಕನು ಸಹಾಯ ನೀಡಬೇಕು.

# ಯೂನಿಟ್ 2 : ಚಿತ್ರ ರಚಿಸುವ, ಬಣ್ಣ ನೀಡುವ

ಪ್ರಕೃತಿಯ ಚಿತ್ರ ಬಿಡಿಸುವುದಕ್ಕೆ ಹೆಚ್ಚು ಗುಣಕರವಾದ ರೀತಿಯಾಗಿದೆ. ನಿರೀಕ್ಷಿಸಿ ಚಿತ್ರೀಕರಿಸುವುದು. ಚಿತ್ರೀಕರಣಕ್ಕಾಗಿ ವಿಕಾಸಗೊಳಿಸಿದ ತಾಂತ್ರಿಕ ರೀತಿಗಳನ್ನುಪಯೋಗಿಸಿ ಅನಾಯಾಸ ಪ್ರಕೃತಿಯ ರೂಪುರೇಷೆ ರಚಿಸಲು ಸಹಾಯಕವಾಗುವುದು. ಮುಂದಿರುವ ವಸ್ತುಗಳ ಘಟಕದಲ್ಲೂ ಸ್ವಭಾವದಲ್ಲೂ ಬಣ್ಣಗಳಲ್ಲೂ ನಿಖರತೆ ಖಚಿತಪಡಿಸುವುದರೊಂದಿಗೆ ಚಿತ್ರದೊಂದಿಗೆ ಅವುಗಳ ವಿನ್ಯಾಸವನ್ನು ಗಮನಿಸಬೇಕಾಗಿದೆ. ವಸ್ತುಗಳೊಳಗಿನ ಗಾತ್ರ ವ್ಯತ್ಯಾಸಗಳು, ಕಣ್ಣಿನ ದೃಷ್ಟಿಯ ದೂರ ವ್ಯತ್ಯಾಸಗಳು, ಸಮಯ, ನೆರಳು ಬೆಳಕು, ನಿಬಂಧನೆಗಳು ಚಿತ್ರದಿಂದ ಅನುಭವವಾಗಬೇಕು.

## ಕಲಿಕಾ ಸಾಧನೆ

- ಪ್ರಕೃತಿಯನ್ನು ನಿರೀಕ್ಷಣೆ ಮಾಡಿ ತಾಂತ್ರಿಕತೆಯೊಂದಿಗೆ ಬಣ್ಣವನ್ನು ನೀಡಿ ಚಿತ್ರ ರಚಿಸುವುದು.

## ಆಶಯ, ತಿಳುವಳಿಕೆ

- ವೀಕ್ಷಣಾ ರೇಖೆ, ಅನುಪಾತ, ಚಿತ್ರ ಸಂಯೋಜನೆ, ತುಲನೆ ಎಂಬೀ ತಾಂತ್ರಿಕತೆ ಉಪಯೋಗಿಸಿ ಚಿತ್ರ ರಚನೆ ಉತ್ತಮಗೊಳಿಸುವುದು.
- ಚಿತ್ರೀಕರಣದಲ್ಲಿ ವೈವಿಧ್ಯಮಯ ವಸ್ತುಗಳನ್ನು ಅವುಗಳ ನಿಖರವಾದ ಅನುಪಾತದಲ್ಲಿ ರಚಿಸಬೇಕು.
- ಆಕೃತಿಯ ನಿಖರತೆಗಾಗಿ ಜ್ಯಾಮಿತಿಮಾನಗಳನ್ನು ಉಪಯೋಗಿಸಬಹುದು.
- ಬಣ್ಣಗಳ ಪ್ರಾಯೋಗಿಕತೆಯಲ್ಲಿ ಸಂಕಲ್ಪದೊಂದಿಗೆ ದೂರ ದೃಷ್ಟಿಯಲ್ಲೂ, ಸಮಯದಲ್ಲೂ ನೆರಳೂ, ಬೆಳಕಲ್ಲೂ ಉಂಟುಮಾಡಬೇಕಾದ ಬದಲಾವಣೆಗೆ ಅನುಸಾರವಾಗಿ ಚಿತ್ರವನ್ನು ರಚಿಸುವುದು (ಕಲಾ ಅಧ್ಯಾಪಕನ ಸಹಾಯದೊಂದಿಗೆ).

## ನೈಪುಣ್ಯ

- ತಾಂತ್ರಿಕತೆಗಳನ್ನು ಅರ್ಥಮಾಡಿಕೊಂಡು ಪ್ರಕೃತಿಯ ಚಿತ್ರ ರಚಿಸುವ ಸಾಮರ್ಥ್ಯವುಂಟಾಗುವುದು.


## ಕಲಿಕಾ ಚಟುವಟಿಕೆಗಳು

**ಹಂತ 1**

- ಪ್ರಕೃತಿಯ ಚಿತ್ರ ರಚಿಸುವಾಗ ಅರ್ಥ ಮಾಡಬೇಕಾದ ತಾಂತ್ರಿಕತೆಗಳೇನು?
- ಮಕ್ಕಳ ಪ್ರತಿಕ್ರಿಯೆಗೆ ಅವಕಾಶ
- ವೀಕ್ಷಣಾ ರೇಖೆ, ಅನುಪಾತ, ಚಿತ್ರ ಸಂಯೋಜನೆ, ತುಲನೆ ಎಂಬೀ ತಾಂತ್ರಿಕತೆಗಳಲ್ಲಿ ಮಕ್ಕಳು ತಿಳುವಳಿಕೆ ಹೊಂದುತ್ತಾರೆ.
- ಚರ್ಚೆ, ಕ್ರೋಢೀಕರಣ

*ಹಂತ 2*

- ಪ್ರಕೃತಿಯನ್ನು ನಿರೀಕ್ಷಣೆ ಮಾಡಲು ಅವಕಾಶ ನೀಡುವುದು.
- ವಸ್ತುಗಳು/ವಿಶೇಷತೆಗಳು



- ನೆರಳು,ಬೆಳಕು
- ವ್ಯತ್ಯಸ್ತ ಬಣ್ಣಗಳು, ಸಮಯ
- ಸ್ಥಾನ, ಅಂತರ
- ಫ್ರೇಂ, ಕಾಣುವ ದೃಶ್ಯಗಳ ಚಿತ್ರ ರಚನೆ ಆಯ್ಕೆ ಮಾಡುವ ವಿಷಯಗಳು
- ಫ್ರೇಂ ನಲ್ಲಿ ಆರಿಸಿದ ವಿಷಯಗಳ ರೂಪುರೇಖೆ ರಚಿಸುವುದು. (ತಾಂತ್ರಿಕತೆಯನ್ನು ಗಮನಿಸಬೇಕು)
- ಪ್ರತಿಯೊಂದು ವಸ್ತುವನ್ನು ಸೂಕ್ಷ್ಮ ಮಟ್ಟದಲ್ಲಿ ಚಿತ್ರೀಕರಿಸುವುದು.
- ಬೆಳಕು, ನೆರಳನ್ನು ಸ್ಪಷ್ಟವಾಗಿ ವಿನ್ಯಾಸಿಸುವುದು.

***ಹಂತ 3***

- ಪ್ರತಿಯೊಂದು ವಸ್ತುವಿನ ಗಾತ್ರ ವ್ಯತ್ಯಾಸ, ದೂರ ವ್ಯತ್ಯಾಸ ಬಣ್ಣ ವ್ಯತ್ಯಾಸಗಳನ್ನು ತಿಳಿದುಕೊಂಡು ಚಿತ್ರ ರಚಿಸುವುದು.
- ಸೂಕ್ತವಾದ ಮಾಧ್ಯಮ ಆಯ್ಕೆ ಮಾಡುವುದು (ಜಲವರ್ಣ, ಕ್ರೇಯೋನ್ಸ್, ತೈಲವರ್ಣ, ಅಕ್ರಿಲಿಕ್)
- ಸೂಕ್ತವಾದ ಬಣ್ಣಗಳನ್ನು ಕಂಡುಕೊಳ್ಳುವುದು.
- ಸೂಕ್ತವಾದ ರೀತಿಯಲ್ಲಿ ಬಣ್ಣಗಳ ಸಂಯೋಜನೆ ನಡೆಸುವುದು.
- ಪ್ರಕೃತಿಯ ಬಣ್ಣಕ್ಕನುಸರಿಸಿ ಅದನ್ನು ಚಿತ್ರದಲ್ಲಿ ಪ್ರಯೋಗಿಸುವುದು.

## ಮೌಲ್ಯ ಮಾಪನ

- ಪ್ರಕೃತಿ ದೃಶ್ಯಗಳೊಂದಿಗೆ ಸಮಾನತೆಯಿದೆ
- ತಾಂತ್ರಿಕತೆ

- ಪ್ರಕೃತಿಯ ಬಣ್ಣಗಳನ್ನೇ ನೀಡುವುದು
- ಪೂರ್ಣತೆ
- ಸಮಗ್ರತೆ, ಆಕರ್ಷಕ

### ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಕೊಟ್ಟಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಪ್ರಕೃತಿಯ ದೃಶ್ಯಗಳನ್ನು ತನ್ನ ದೃಷ್ಟಿಕೋನದಿಂದ ಸ್ವಾಂಶೀಕರಿಸಿ ಪುನಃ ಸೃಷ್ಟಿಸುವುದು.
- ಚಿತ್ರ ರಚನೆಯ ತಾಂತ್ರಿಕತೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ.

## ಯೂನಿಟ್ 3: ಚಿತ್ರ ಪ್ರತಿಕ್ರಿಯೆ

ಭಾಷೆ ಮತ್ತು ಅಕ್ಷರಗಳಿಗಿಂತ ಮೊದಲೇ ಆಶಯ ಪ್ರಕಟಣೆಯ ಮಾಧ್ಯಮವಾಗಿ ಚಿತ್ರಗಳನ್ನುಪಯೋಗಿಸುತ್ತಿದ್ದರು. ಯಾವುದೇ ಭಾಷೆ ಯನ್ನು ಉಪಯೋಗಿಸುವವರಾದರೂ, ಯಾವುದೇ ಖಂಡದಲ್ಲಿ ಜೀವಿಸುವವರಿಗಾದರೂ ಒಂದೇ ರೀತಿಯಲ್ಲಿ ಚಿತ್ರಗಳು ಅರ್ಥವಾಗುವುದು. ಆದುದರಿಂದ ಪ್ರತಿಯೊಂದು ಚಿತ್ರವು ಸಮೂಹದ, ಪ್ರೇಕ್ಷಕರ ಮುಂದೆ ಒಂದೇ ಆಶಯ ನೀಡುತ್ತದೆ. ಅಥವಾ ಒಂದೇ ಆಶಯ ಸಮಾಜಕ್ಕೆ ನೀಡುವುದಕ್ಕಾಗಿ ಚಿತ್ರಗಳು ರಚಿಸಲ್ಪಡುತ್ತದೆ. ಚಿತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವಾಗ ಆ ಚಿತ್ರದ ಘಟಕಗಳು ಯಾವ ಆಶಯವನ್ನು ಪ್ರಕಟಗೊಳಿಸುತ್ತದೆ ಎಂದು ತಿಳಿಯುತ್ತದೆ. ಮಾತ್ರವಲ್ಲದೆ ಚಿತ್ರಗಾರನು ಪ್ರಕಟಿಸಿದ ಆಶಯವನ್ನು ಚಿತ್ರ ರಚಿಸಿದ ಕಾಲಘಟ್ಟಕ್ಕೆ ಅದರ ಕಾಲಘಟ್ಟದ ಪ್ರಾಧಾನ್ಯತೆಯನ್ನು ವಿಮರ್ಶಾತ್ಮಕವಾಗಿ ಚರ್ಚೆ ನಡೆಸಲ್ಪಡುವುದೋ ಹೊಂದಿಕೊಂಡು ಆಗ ಚಿತ್ರವು ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ರಂಗದೊಂದಿಗೆ ಎಷ್ಟರ ಮಟ್ಟಿಗೆ ಸಂಬಂಧ ಹೊಂದಿದೆ ಎಂಬುದನ್ನು ತಿಳಿಯಬಹುದು.

### ಕಲಿಕಾ ಸಾಧನೆ

- ಚಿತ್ರ ನಿರೀಕ್ಷಿಸಿ ಆಸ್ವಾದಿಸುತ್ತಾರೆ, ವಿಮರ್ಶಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ.

### ನೈಪುಣ್ಯಗಳು

- ಪ್ರತಿಯೊಂದು ಚಿತ್ರ ಕಾಲಘಟ್ಟವನ್ನು ತಳಹದಿಯಾಗಿರಿಸಿ ಒದಲಿರುವುದು.
- ಚಿತ್ರ ಒಂದು ಆಶಯವನ್ನು ನಮ್ಮ ಮುಂದೆ ನೀಡುತ್ತದೆ. ಅದೇ ರೀತಿ ಚಿತ್ರ ರಚಿಸಿದ ಕಾಲಘಟ್ಟ ಹಾಗೂ ಅದರ ಸಂಸ್ಕೃತಿಯನ್ನು ತಿಳಿಸುತ್ತದೆ.
- ಚಿತ್ರದ ಆಶಯವನ್ನು ಅರ್ಥ ಮಾಡಿ ವಿಮರ್ಶಾತ್ಮಕವಾಗಿ ಮೌಲ್ಯಮಾಪನಗೊಳಿಸಲು ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ.

### ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಪರಿಚಿತವಾದ ಒಂದು ಚಿತ್ರ ಅಧ್ಯಾಪಕರು ಪ್ರದರ್ಶಿಸುವರು.

- ಚಿತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದು.
- ಚಿತ್ರದಲ್ಲಿ ಏನೆಲ್ಲಾ ಎಲೆಮೆಂಟ್ಸ್ ರಚಿಸಲಾಗಿದೆ/ಚಿತ್ರ ರಚಿಸಿದ ಕಾಲಘಟ್ಟ/ಸಾಮಾಜಿಕ ಸ್ಥಿತಿಗತಿ ಏನಾಗಿತ್ತು?
- ಈ ಚಿತ್ರ ಮುಂದಿಡುವ ಆಶಯವೇನು?
- ಚಿತ್ರಗಾರ ಯಾರು? ಚಿತ್ರ ರಚಿಸಿದ ಕಾಲಘಟ್ಟ, ಮಾಧ್ಯಮ ಆಶಯ ಇವುಗಳನ್ನು ಕಂಡುಕೊಂಡು ಬರೆಯುವುದು, ಈ ಚಿತ್ರಗಾರನ ಇತರ ಕೃತಿಗಳು, ಇತರ ಚಿತ್ರಗಾರರ ರಚನೆಗಳು, ಅಂತರ್ಜಾಲದಿಂದಲೂ, ವಿಕಿಪೀಡಿಯದಿಂದಲೂ ತೆಗೆದು ನೋಡುವುದು.
- ನೀವು ಕಂಡ ವಿಷಯಗಳನ್ನು ಬರೆದಿಡುವುದು. ಹೆಚ್ಚುವರಿಯಾಗಿ ಅಧ್ಯಾಪಕರು ಹೇಳಿಕೊಡುವರು. ರಾಜಾ ರವಿವರ್ಮ ಜಿ.ಡಿ. ಪೋಲ್‌ರಾಜ್, ಡಾವಿಂಚಿ, ರಾಂಬ್ರಾಂಡ್, ಜೋನ್ ವಿಲಿಯಮ್ ಗೋಲ್ಡ್, ವಾಡ್ ಡಾನಿಯಲ್ ರಿಡ್‌ಜೇವ್ ನೈಟ್ ಇವರ ಪೈಂಟಿಂಗ್ ಈಗ ಜೀವಿಸಿರುವ ಅಮಿತ್ ಕಪೂರ್, ಅಜಯ್ ರಾಯ್ ಬೋಲ್, ಸೇರ್‌ಗೀಯ ಮಿಯ, ಗೋಡವಾಡಿನ ಪೂರ್ಣತ ಇವರ ಚಿತ್ರಗಳು ಕಾಣುವುದು. ಪೂರ್ಣತೆ, ಸೌಂದರ್ಯ, ರಾತ್ರಿಯ ಪ್ರಕೃತಿ ಸೌಂದರ್ಯ ಇವುಗಳನ್ನೆಲ್ಲಾ ಕಾಣದಿದ್ದರೆ ಅದೊಂದು ನಷ್ಟವಾಗುವುದು.

***ಚಟುವಟಿಕೆ 2***

- ಮೊದಲು ನಡೆಸಿದ ಚಟುವಟಿಕೆಗಳ ಆಧಾರದಲ್ಲಿ ಒಂಭತ್ತನೇ ತರಗತಿಯ ಪಾಠಭಾಗಕ್ಕೆ ಸಂಬಂಧಿಸಿ ವಿನ್ಸೆಂಟ್ ವೊಟ್ಟಚೋ ಈಟಿರ್ಯಸ್ ಎಂಬ ಚಿತ್ರ ಪ್ರದರ್ಶಿಸಿ ಚಿತ್ರ ಓದು ನಡೆಸುವುದು.
- ಚಿತ್ರದ ಕುರಿತಾಗಿ ಆಸ್ವಾದನಾ ಟಿಪ್ಪಣಿ ಬರೆಯುವುದು.
- ಮಂಡನೆ, ಚರ್ಚೆ

**ಚಟುವಟಿಕೆ 3**

- ಮೊದಲು ನಡೆಸಿದ ಚಿತ್ರ ಓದಿನಿಂದ, ಚಿತ್ರದಲ್ಲಿ ಚಿಹ್ನೆಗಳನ್ನು ಉಪಯೋಗಿಸುವುದಕ್ಕೆ ಸಂಬಂಧಿಸಿ ಲಭಿಸಿದ ತಿಳುವಳಿಕೆಯಿಂದ ಸ್ವಂತವಾಗಿ ಆಶಯ ಆಧಾರವಾಗಿರಿಸಿ ಚಿತ್ರ ರಚಿಸುವರು.

**ಚಟುವಟಿಕೆ 4**

- ರಚಿಸಿದ ಚಿತ್ರವನ್ನು ಪ್ರದರ್ಶಿಸುವುದು ಆಯ್ಕೆ ಮಾಡಿದ ಚಿತ್ರಗಳನ್ನು ಸೂಚಕಗಳ ಆಧಾರದಲ್ಲಿ ಚಿತ್ರ ಓದಿಗೆ ಒಳಪಡಿಸುವುದು.

  *ಚರ್ಚಾ ಸೂಚಕಗಳು*

  - ಬಣ್ಣಗಳು
  - ಆಕಾರಗಳು
  - ಚಿಹ್ನೆಗಳು
  - ಕ್ರಮೀಕರಣ

### ಗಳಿಸಬಹುದಾದ ಕಲಿಕಾ ನೈಪುಣ್ಯಗಳು

ನೀಡಿದ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಿದ್ದಾರೆ?

- ಆಸ್ವಾದನಾ ಸಾಮರ್ಥ್ಯ ಹೆಚ್ಚುವುದು
- ರಚನಾ ಸಾಮರ್ಥ್ಯ ಹೆಚ್ಚುವುದು
- ಚರಿತ್ರೆಯನ್ನು ತಿಳಿಯುತ್ತಾರೆ.
- ಒಂದೊಂದು ಪ್ರದರ್ಶನವು ಚಿತ್ರಗಾರರ ಕುರಿತು, ರಚನೆಗಳ ಕುರಿತು ಕಾಲಘಟ್ಟದ ಕುರಿತು ಜಾಗ್ರತರನ್ನಾಗಿಸುತ್ತದೆ.
- ನೆರಳು–ಬೆಳಕಿನ ಪ್ರಯೋಗ ರೀತಿ
- ಚಿತ್ರಕಲೆಯ ಬೆಳವಣಿಗೆ ಪ್ರತಿ ಪ್ರದರ್ಶನದಲ್ಲೂ ಪ್ರತಿ ಕಾಲಘಟ್ಟಗಳಲ್ಲೂ ಉಂಟಾದ ಬೆಳವಣಿಗೆ ಹೇಗೆಂಬ ತಿಳುವಳಿಕೆ.
- ನಿರೀಕ್ಷಣೆ ಹಾಗೂ ಮೌಲ್ಯ ಮಾಪನಕ್ಕೆ ಹೆಚ್ಚು ಶ್ರಮಿಸುವುದು.
- ಸಾಂಸ್ಕೃತಿಕ ಬೆಳವಣಿಗೆಗೆ ಅನುಗುಣವಾಗಿ ಚಿತ್ರಕಲೆಯ ಬೆಳವಣಿಗೆಯನ್ನು ತಿಳಿಯುವುದು.
- ಉತ್ಪನ್ನಗಳನ್ನು ಸೃಷ್ಟಿಸುವ ಕಲೆಗಳಿಗೆ ಪ್ರಾಧಾನ್ಯತೆಯಿದೆ ಎಂಬ ತತ್ವ ತಿಳಿಯುತ್ತಾರೆ.

## ಯೂನಿಟ್ 4 : ಮನುಷ್ಯ ಗೆರೆಗಳು

ಮನುಷ್ಯ ರೂಪಗಳ ಅನುಪಾತ( ಜನಿಸಿದ ಮಗುವಿನಿಂದ ತೊಡಗಿ ವೃದ್ಧಾಪ್ಯದಲ್ಲಿರುವ ಮನುಷ್ಯನವರೆಗೆ) ಸ್ಪಷ್ಟವಾಗಿ ಅವರ ವೈವಿಧ್ಯಮಯ ವಸ್ತ್ರಧಾರಣಾ ರೀತಿ ಸೂಕ್ಷ್ಮವಾಗಿ ನಿರೀಕ್ಷಿಸಿ ಒಂದೇ ಚಿತ್ರವಾಗಿ, ಗುಂಪು ಚಿತ್ರವಾಗಿ (ಕೊಂಬಿಸಿಷನ್) ವಿಷಯಾಧಾರಿತವಾಗಿ ಚಿತ್ರೀಕರಿಸಲು ಅವಕಾಶ ನೀಡುವುದು. ಇದರೊಂದಿಗೆ ಸ್ವಾಭಾವಿಕ ವ್ಯತ್ಯಾಸ, ಬಣ್ಣಗಳ ಕುರಿತು ಅರಿವು ಗಳಿಸುವುದಿದೆ.

**ಕಲಿಕಾ ಸಾಧನೆ**

- ಮನುಷ್ಯ ರೂಪಗಳನ್ನೊಳಗೊಂಡ ಚಿತ್ರಗಳನ್ನು ರಚಿಸುವುದು.

**ಆಶಯ, ತಿಳುವಳಿಕೆ**

- ಮನುಷ್ಯ ರೂಪಗಳ ರಚನೆ, ಚಲನಾತ್ಮಕತೆ, ಪ್ರಾಯ, ಭಾವ, ವೇಷ ಎಂಬಿವುಗಳು ಚಿತ್ರಕ್ಕೆ ಜೀವ ನೀಡುತ್ತವೆ.
- ಮನುಷ್ಯ ರೂಪಗಳನ್ನು ಚಿತ್ರೀಕರಿಸುವಾಗ ಅನುಪಾತದಲ್ಲಿ ಚಿತ್ರೀಕರಿಸಲು ಸಾಧ್ಯವಾಗಬೇಕು.
- ಒಂದಕ್ಕಿಂತ ಹೆಚ್ಚು ಮನುಷ್ಯ ರೂಪಗಳೊಳಗಿನ ಅಂತರ, ಅನುಪಾತ ಹಾಗೂ ಅನ್ಯೋನ್ಯ ಸಂಬಂಧವನ್ನು ಚಿತ್ರ ರಚಿಸಬಹುದು.

- ಮನುಷ್ಯ ರೂಪಗಳಿಗನುಗುಣವಾದ ಹಿನ್ನೆಲೆ ಬೇಕು.

## ನೈಪುಣ್ಯಗಳು

- ಅನುಪಾತದೊಂದಿಗೆ ಮನುಷ್ಯ ಆಕೃತಿಗಳನ್ನು ಚಿತ್ರ ರಚಿಸುವ ನೈಪುಣ್ಯ
- ವಿಷಯಾಧಾರಿತ ಮನುಷ್ಯ ರೂಪಗಳು, ಹಿನ್ನೆಲೆ, ಸಮಗ್ರವಾಗಿ ರಚಿಸಲಿರುವ ಸಾಮರ್ಥ್ಯ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಚಲನೆಯೊಂದಿಗಿರುವ ಮನುಷ್ಯಾಕೃತಿಯ ಚಿತ್ರ/ಫೋಟೋ ಇತ್ಯಾದಿಗಳನ್ನು ಪ್ರದರ್ಶಿಸುವುದು.
- ಚಿತ್ರದಲ್ಲಿ ಎಷ್ಟು ಮನುಷ್ಯಾಕೃತಿಗಳಿವೆ? ಅಧ್ಯಾಪಕರು ಕೇಳುವುದು.
- ಮಕ್ಕಳ ಪ್ರತಿಕ್ರಿಯೆ
- ಪ್ರತಿಯೊಬ್ಬರು ಏನು ಮಾಡುತ್ತಾರೆ?
- ಚಲನಾಕೃತಿಯ ಮನುಷ್ಯ ರೂಪಗಳನ್ನು ಚಿತ್ರ ರಚಿಸುವಾಗ ಏನೆಲ್ಲಾ ಗಮನಿಸಬೇಕು?
- ಆಕೃತಿಯ ಅಳತೆಗಳನ್ನು ಗಮನಿಸಬೇಕು.
- ಚಟುವಟಿಕೆಗಳಿಗನುಸರಿಸಿದ ಚಲನೆ, (ಕೈ ಕಾಲು, ದೇಹ ತಲೆ) ಬಾಗುವಿಕೆ ಎಂಬಿವುಗಳು ಸೂಕ್ತವಾಗಿರಬೇಕು.
- ಪ್ರಾಯಕ್ಕನುಸರಿಸಿದ ಶರೀರ.
- ಪ್ರಾಯ, ಕೆಲಸಕ್ಕನುಸರಿಸಿದ ವಸ್ತ್ರಧಾರಣೆ
- ಹಿನ್ನಲೆಯಾಗಿ ಏನೆಲ್ಲಾ ಇದೆ?
- ಏನನ್ನು ಸೂಚಿಸುತ್ತದೆ?
- ಆಶಯಕ್ಕನುಗುಣವಾದ ಹಿನ್ನೆಲೆ ಬೇಕು.

***ಚಟುವಟಿಕೆ 2***

- ಈ ರೀತಿಯ ಒಂದು ಚಿತ್ರ ರಚಿಸುವಾ (ವಿಷಯ ಕಂಡುಕೊಳ್ಳವುದು)
- ಈ ಸಂದರ್ಭಕ್ಕನುಸರಿಸಿ ಎಷ್ಟು ಮನುಷ್ಯಾಕೃತಿಗಳನ್ನು ಉಂಟುಮಾಡಬೇಕು? ಯಾವ ಯಾವ ಪ್ರಾಯದವರು? ವೇಷಭೂಷಣ ಯಾವುದು? ಏನು ಮಾಡುತ್ತಾರೆ?
- ಹಿನ್ನಲೆಯ ಕುರಿತು ವಿವರಿಸಬಹುದೇ?
- ಮಕ್ಕಳಲ್ಲಿ ಮನೋಚಿತ್ರ ರೂಪುಗೊಳ್ಳುತ್ತದೆ.
- ಮಕ್ಕಳಿಗೆ ಚಿತ್ರ ರಚಿಸಲು ಅವಕಾಶ ಕೊಡುವುದು. ಅಧ್ಯಾಪಕರು, ಮಕ್ಕಳು ರಚನೆಯಲ್ಲಿ ತೊಡಗುವುದು.
- ರಚಿಸಿದ ಚಿತ್ರಗಳನ್ನು ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸುವುದು.

## ಮೌಲ್ಯಮಾಪನ

ಮೌಲ್ಯ ಮಾಪನ ಸೂಚಕಗಳು

- ಮನುಷ್ಯಾಕೃತಿಗಳನ್ನು ಅನುಪಾತಿಕವಾಗಿ ರಚಿಸಲಾಗಿದೆ.
- ಸೂಕ್ತವಾದ ವೇಷಭೂಷಣ, ಚಲನೆ ಪ್ರಾಯ ಎಂಬಿವುಗಳಿವೆ.
- ಸೂಕ್ತವಾದ ಹಿನ್ನೆಲೆಯಿದೆ.
- ಚಿತ್ರದಲ್ಲಿ ಸಮಗ್ರತೆಯಿದೆ

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

ಕೆಳಗೆ ನೀಡಿದ ಕಲಿಕಾ ನೈಪುಣ್ಯಗಳನ್ನು ಗಳಿಸಲು ಎಷ್ಟರ ಮಟ್ಟಿಗೆ ಸಾಧ್ಯವಾಗಿದೆ.

- ರಚನಾ ಸಾಮರ್ಥ್ಯ ಉತ್ತಮಗೊಂಡಿದೆ.
- ಶರೀರ ರಚನೆಯ ಬಗ್ಗೆ ತಿಳಿಯಲಾಗಿದೆ.
- ಕೆಲಸ/ಕೆಲಸಗಾರರೊಳಗಿನ ಸಂಬಂಧ ತಿಳಿಯಲಾಗಿದೆ.
- ಮನುಷ್ಯ ಶರೀರ ಬೆಳವಣಿಗೆಯ ಬದಲಾವಣೆ ತಿಳಿದಿದೆ.
- ಮನುಷ್ಯ ಆಕೃತಿಗಳನ್ನು ಚಿತ್ರದಲ್ಲಿ ನೇರ ಸೇರಿಸಲಾಗಿದೆ.
- ಚರ್ಮದ ವಿವಿಧ ಬಣ್ಣಗಳ ಕುರಿತು ಕಲಿಯಲಾಗಿದೆ.
- ವಸ್ತ್ರಧಾರಣಾ ರೀತಿ ತಿಳಿಸಲಾಗಿದೆ.

# ಯೂನಿಟ್ 5 : ಶಿಲ್ಪಕಲಾ ಚರಿತ್ರೆ

ಕಲಾಚರಿತ್ರೆ ಪ್ರತಿಯೊಂದು ಕಾಲಘಟ್ಟದ ಚರಿತ್ರೆಯಾಗಿದೆ. ಸಾಮಾಜಿಕ ಬದಲಾವಣೆಗೆ ಅನುಸರಿಸಿ ಕಲೆಯು ಬದಲಾಗುತ್ತದೆ. ಸಂಸ್ಕೃತಿಯನ್ನು ರೂಪುಗೊಳಿಸುವಲ್ಲಿ ಶಿಲ್ಪ–ಚಿತ್ರಕಲೆಗಳು ಪ್ರಧಾನ ಪಾತ್ರ ವಹಿಸುತ್ತವೆ. ಕಲೆಗಳನ್ನು ಪ್ರೀತಿಸುವುದು, ಕಲಿಯುವುದು, ಪ್ರಚಾರಪಡಿಸುವುದು, ಸಂರಕ್ಷಿಸುವುದು ಎಂದರೆ ದೇಶವನ್ನು, ಸಂಸ್ಕೃತಿಯನ್ನು ಗೌರವಿಸುವುದಾಗಿದೆ. ಕಲೆ, ಕಲಾಗಾರನು, ಆಸ್ವಾದಕನು, ಪ್ರಚಾರಕನು ಸಂಸ್ಕೃತಿಯನ್ನು ಉನ್ನತಿಗೇರಿಸುತ್ತಾನೆ ಎಂಬ ಅರಿವು ಮಕ್ಕಳ ಸಾಂಸ್ಕೃತಿಕ ಉನ್ನತಿಗೆ ಬಹಳಷ್ಟು ಸಹಾಯಕವಾಗಿದೆ.

## ಕಲಿಕಾ ಸಾಧನೆ

- ಚಿತ್ರಶಿಲ್ಪಕಲಾ ಚರಿತ್ರೆ ಆಳವಾಗಿ ತಿಳಿಯುವುದು.

## ಆಶಯ, ತಿಳುವಳಿಕೆ

- ಕಲಾಚರಿತ್ರೆ ಕಾಲಘಟ್ಟದ ಚರಿತ್ರೆಯಾಗಿದೆ. ಎಲ್ಲಾ ಕಲೆಗಳು ನಮ್ಮ ಸಾಂಸ್ಕೃತಿಕ ಚರಿತ್ರೆಯ ಕುರಿತು ಮಾತನಾಡುತ್ತವೆ.

- ಭಾರತದಲ್ಲಿ, ಪ್ರತ್ಯೇಕವಾಗಿ ಕೇರಳದ ಕಾಲಘಟ್ಟದ ಪ್ರತೀಕಗಳಾಗಿ ಧಾರಾಳ ಕಲಾರೂಪಗಳಿವೆ.
- ಮನುಷ್ಯನ ವಾಸಸ್ಥಳಗಳೆಲ್ಲಾ ಕಲಾಸೃಷ್ಟಿಗಳು ರೂಪುಗೊಂಡಿವೆ.
- ಒಂದು ಪ್ರದೇಶದ ಸಂಸ್ಕೃತಿಯ ದರ್ಶನವಾಗುತ್ತದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಕಲಾ ಚರಿತ್ರ ಗ್ರಂಥ ಕಲಿಕೆಗೆ ಸಹಾಯಕವಾಗುತ್ತದೆ
- ಕಲಾ ಚರಿತ್ರೆ ಸಿ.ಡಿ. ಪ್ರದರ್ಶನ
- ಚಿತ್ರ, ಶಿಲ್ಪಗಳ ಫೋಟೋ, ಪ್ರಿಂಟ್ ಸಂಗ್ರಹ
- ದಿನಚರಿ ಟಿಪ್ಪಣಿಗಳು

***ಚಟುವಟಿಕೆ 2***

- ಚರಿತ್ರೆಗಾರರು, ಶಿಲ್ಪಿಗಳು, ಚಿತ್ರಗಾರರು ಇವರೊಂದಿಗೆ ಚರ್ಚೆ, ಸಂದರ್ಶನ
- ಚರಿತ್ರೆಯ ಪುರಾವೆಗಳಿರುವ ಸ್ಥಳಕ್ಕೆ ಶೈಕ್ಷಣಿಕ ಪ್ರವಾಸ
- ಕಲಿಕಾ ಟಿಪ್ಪಣಿ, ಚರ್ಚೆಗಳು, ಅವಲೋಕನ

***ಚಟುವಟಿಕೆ 3***

- ಕಲಾ ಚರಿತ್ರೆಗೆ ಸಂಬಂಧಿಸಿದ ಪತ್ರಿಕಾ ತುಣುಕುಗಳು, ಚಿತ್ರಗಳು ಇವುಗಳ ಸಂಗ್ರಹ, ಪ್ರದರ್ಶನ

***ಚಟುವಟಿಕೆ 4***

- ಕಲಾ ಚರಿತ್ರೆಗೆ ಸಂಬಂಧಿಸಿದ ಪ್ರಬಂಧ ರಚನೆ, ಮಂಡನೆ, ಚರ್ಚೆ, ಉತ್ತಮಪಡಿಸುವುದು.
    - ಗುಹಾ ಚಿತ್ರಗಳು
    - ಭಿತ್ತಿ ಚಿತ್ರಗಳು
    - ರಂಗೋಲಿ ಚಿತ್ರಗಳು, ರಂಗವರ್ಣಿಕೆ,
    - ಮುಖವರ್ಣಿಕೆ, ತೆಯ್ಯಂ, ಗರುಡತುಳ್ಳಲ್, ಪರಯನ್‌ತುಳ್ಳಲ್, ಬಣ್ಣ, ಓಟ್ಟಂತುಳ್ಳಲ್, ಕಥಕ್ಕಳಿ, ಯಕ್ಷಗಾನ ಎಂಬಿವುಗಳು
- ಇವು ಜಾನಪದ ಕಲೆಗಳಾಗಿವೆ.
- ಅರಮನೆಯ ಚಿತ್ರಗಾರರು (ರಾಜರ ಆಳ್ವಿಕೆ ಕಾಲ)
- ಪ್ರಸಿದ್ಧ ಚಿತ್ರಗಾರರು, ಶಿಲ್ಪಿಗಳು (ಐ.ಟಿ. ಸಾಧ್ಯತೆ ಪ್ರಯೋಜನಪಡಿಸುವುದು)

## ಮೌಲ್ಯನಿರ್ಣಯ

- ಕಲಿಕೆಯ ಎಲ್ಲಾ ಹಂತಗಳಲ್ಲೂ ಮೌಲ್ಯ ನಿರ್ಣಯ ಅಗತ್ಯ.
- ಕಲಾ ಚರಿತ್ರೆಯಲ್ಲಿರುವ ಅಭಿಮಾನ
- ಸಂಗ್ರಹ, ರೆಫರೆನ್ಸ್, ಸೆಮಿನಾರ್, ಪ್ರಬಂಧ ತಯಾರಿ
- ಅಧ್ಯಾಪಕರ ಮತ್ತು ಮಕ್ಕಳ ಪರಸ್ಪರ ಮೌಲ್ಯ ಮಾಪನ

**ಗಳಿಸಬಹುದಾದ ನೈಪುಣ್ಯಗಳು**

*ಕೆಳಗೆ ಕೊಟ್ಟಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲು ಸಾಧ್ಯವಾಗಿದೆ?*

- ಕಲೆ ಮತ್ತು ಕಲಾಗಾರನು ಸಂಸ್ಕೃತಿಯ ಭಾಗವೆಂದು ತಿಳಿಯುತ್ತಾರೆ.
- ಸಹಾಯಕರಾಗಿ ದುಡಿದವರ ಮಹತ್ವ ತಿಳಿಯುತ್ತಾರೆ.
- ಸಾಂಸ್ಕೃತಿಕ ಪ್ರಜ್ಞೆಯುಳ್ಳ ಪ್ರಜೆಗಳಾಗಿ ಬದಲಾಗುತ್ತಾರೆ.

## ಯೂನಿಟ್ 6 : ಚಿತ್ರರಚನೆ ಮತ್ತು ಮಾಹಿತಿ ತಂತ್ರಜ್ಞಾನ

ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯು ಕಲಾ ಕ್ಷೇತ್ರವನ್ನು ಸಂಪನ್ನಗೊಳಿಸಿದೆ. ಆಧುನಿಕ ಮಾಧ್ಯಮಗಳ ಪ್ರತೀತಿ ತೋರಿಸುವ ರೀತಿಯಲ್ಲಿ ಕಂಪ್ಯೂಟರ್ ಚಿತ್ರರಚನೆ ಮಾಡಿ ಪ್ರಿಂಟುಗಳನ್ನು ತೆಗೆಯಬಹುದು. ಚಿತ್ರಕಲೆಯಲ್ಲಿ ಸೃಜನಾತ್ಮಕತೆಯುಳ್ಳವರಿಗೆ ಈ ಕ್ಷೇತ್ರದಲ್ಲಿ ಬಹಳಷ್ಟು ಉನ್ನತಿಗೇರಬಹುದು.

### ಕಲಿಕಾ ಸಾಧನೆ

- ಆಧುನಿಕ ತಂತ್ರಜ್ಞಾನ ಉಪಯೋಗಿಸಿ ಚಿತ್ರ ರಚಿಸುವುದು.

### ಆಶಯ, ತಿಳುವಳಿಕೆ

- ಕಂಪ್ಯೂಟರ್‌ನಲ್ಲಿ ಚಿತ್ರ ರಚನೆ ಮಾಡಲು ಧಾರಾಳ ಸಾಫ್ಟ್‌ವೇರ್‌ಗಳು ಇವೆ.
- ಸಾಮಾನ್ಯವಾಗಿ ಚಿತ್ರ ರಚನೆಗೆ ಲಭ್ಯವಾಗುವ ರೀತಿಯಲ್ಲಿ ಇದರಲ್ಲೂ ಉಪಕರಣಗಳು ಲಭ್ಯವಿದೆ.
- ರೇಖಾಚಿತ್ರ, ಪೈಂಟಿಂಗ್ಸ್ (ಎಲ್ಲಾ ಮಾಧ್ಯಮಗಳಲ್ಲೂ)ನೆರಳು ಬೆಳಕು, ತ್ರಿಮಾನ, ವರ್ಣಚಿತ್ರಗಳು ಎಲ್ಲ ಲಭ್ಯವಾಗುವುದು.
- ಈ ಮಾಧ್ಯಮವು ಮಕ್ಕಳಿಗೆ ತುಂಬಾ ಇಷ್ಟವಾಗಿದೆ.

### ಕಲಿಕಾ ಚಟುವಟಿಕೆಗಳು

- ಸಾಫ್ಟ್‌ವೇರ್‌ಗಳನ್ನು ಆಯ್ಕೆ ಮಾಡುವುದು (GIMP)
- ಮೌಸ್ ಉಪಯೋಗಿಸಿ ರೇಖಾಚಿತ್ರ ರಚಿಸುವುದು (Tools, Layers)
- ಬಣ್ಣಗಳನ್ನು ನೀಡುವುದು (Select, Fill, Gradient, Smudge )
- ನೆರಳು – ಬೆಳಕು ಗುರುತಿಸುವುದು.
- ಬಣ್ಣಗಳನ್ನು ಆಯ್ಕೆ ಮಾಡುವುದು.
- ವಿಷಯಾಧಾರಿತ ಚಿತ್ರಗಳನ್ನು ರಚಿಸುವುದು, ಸ್ಥಳ ಆಯ್ಕೆ ಮಾಡುವುದು. ಚಿತ್ರ ಜೋಪಾನವಾಗಿಡುವುದು.
- ಅನುಭವಸ್ಥರ ಪ್ರಾತ್ಯಕ್ಷಿಕೆ ನಿರೀಕ್ಷಿಸಲು ಅವಕಾಶ ಒದಗಿಸುವುದು.
- ಚಿತ್ರದ ಪ್ರಿಂಟು ತೆಗೆಯುವುದು, ಪ್ರದರ್ಶನ, ಚರ್ಚೆ.

- ಮೌಲ್ಯ ಮಾಪನದ ಬಲಿಕ ಚಿತ್ರದ ನ್ಯೂನತೆ ಪರಿಹರಿಸಬೇಕಾದರೆ ಹೊಸ ಚಿತ್ರಗಳನ್ನು ರಚಿಸಲು ಮುಂದುವರಿದ ಚಟುವಟಿಕೆಯ ಯೋಜನೆ ಮಾಡುವುದು.
- ಮೊದಲು ರಚಿಸಿದ ಚಿತ್ರ ಮತ್ತು ಎರಡನೆಯ ಚಿತ್ರವನ್ನು ಹೋಲಿಸಿ ಉತ್ತಮವಾದುದನ್ನು, ನ್ಯೂನತೆಗಳನ್ನು ಅರ್ಥಮಾಡಿಕೊಳ್ಳುವುದು.

**ಮೌಲ್ಯ ನಿರ್ಣಯ**

- ಕಲಿಕೆಯ ಎಲ್ಲಾ ಹಂತಗಳಲ್ಲೂ ಮೌಲ್ಯ ನಿರ್ಣಯ ಅನಿವಾರ್ಯ
- ರೇಖೆಗಳ ಬಳುಕು, ಕ್ರಮೀಕರಣ, ಬಣ್ಣ ನೀಡುವುದು, ನೆರಳು, ಬೆಳಕು, ವೇಗತೆ, ಪೂರ್ಣತೆ ಗುಣಾತ್ಮಕ ಮೌಲ್ಯ ನಿರ್ಣಯ

**ಗಳಿಸಬೇಕಾದ ಕಲಿಕಾ ನೈಪುಣ್ಯಗಳು**

*ಕೆಳಗೆ ಕೊಟ್ಟಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಆಧುನಿಕ ಕಾಲದ ಕಂಪ್ಯೂಟರ್‌ನ ಸಹಾಯದಿಂದ ಚಿತ್ರ ರಚನೆ ತುಂಬಾ ಪ್ರಯೋಜನಕಾರಿ.
- ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ಈ ರಂಗದ ಬೆಳವಣಿಗೆಗೆ ಬಹಳ ಸಹಾಯಕವಾಗಿದೆ.
- ವೃತ್ತಿಪರ ಶಿಕ್ಷಣವಾಗಿ ಇದು ಬದಲಾಗುತ್ತದೆ.
- ಉದ್ಯೋಗ ಅವಕಾಶ ಹೆಚ್ಚುವುದು.
- ಸಿನೆಮಾ ರಂಗದಲ್ಲಿ ಬಹಳ ಪ್ರಯೋಜನಕಾರಿ
- ಈ ಕಲಿಕೆಯ ಮೂಲಕ ವೇಗವಾಗಿ ಚಿತ್ರ ರಚಿಸಲಿರುವ ಸಾಮರ್ಥ್ಯ ಮಗುವಿಗೆ ಲಭಿಸುತ್ತದೆ.

## ಯೂನಿಟ್ 7 : ಚಿತ್ರಗಳನ್ನು ಆಸ್ವಾದಿಸೋಣ

ಕಲೆಗಳನ್ನು ಆಸ್ವಾದಿಸುವುದು ಮತ್ತು ಅವುಗಳನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸುವುದು ಎಂಬ ಪರಂಪರೆ ಎಲ್ಲಾ ತಲೆಮಾರಿನಲ್ಲೂ ಕಂಡುಬರುವ ವಿಶೇಷತೆಯಾಗಿದೆ. ಕಲೆಗಳನ್ನು, ಪ್ರಧಾನವಾಗಿ ಚಿತ್ರಕಲೆಯನ್ನು ಆಸ್ವಾದಿಸುವಾಗ ಆ ಚಿತ್ರದ ರಚನೆಗಾರನು ಮುಂದಿಡುವ ಆಶಯ ಕೂಡ ಆಸ್ವಾದನೆಗೊಳಪಟ್ಟು ಅದು ನಮ್ಮಲ್ಲಿ ಚಲನೆಯನ್ನುಂಟುಮಾಡುತ್ತದೆ. ಒಂದು ಚಿತ್ರ ರೂಪುಗೊಳ್ಳುವುದು ಆ ಕಾಲಘಟ್ಟದ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದ ಆಗುಹೋಗುಗಳಿಗೆ ಅನುಗುಣವಾಗಿ ಆಗಿದೆ. ಆಗ ಚಿತ್ರವೆಂಬುದು ರಚಿಸಿದ ಕಾಲಘಟ್ಟದ ಪ್ರತಿಬಿಂಬವಾಗುವುದು ಅಥವಾ ಆ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಪ್ರತಿನಿಧಿಯಾಗುವುದು. ಅದನ್ನು ಆಸ್ವಾದಿಸುವುದು, ಅರ್ಥಮಾಡಿಕೊಳ್ಳುವುದು ಮತ್ತು ಹೆಮ್ಮೆಪಡುವುದು ಎಂಬುದಕ್ಕೆ ಸಮಾನವಾಗಿದೆ. ಅದನ್ನು ಸಂರಕ್ಷಿಸಲಿರುವ ಮನೋಭಾವ ಎಂಬುದು ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸುವ ಮನೋಭಾವಕ್ಕೆ ಸಮಾನವಾಗಿದೆ. ಅದು ಸಂಸ್ಕೃತಿಯ ಅಸ್ತಿತ್ವಕ್ಕೆ ಅನಿವಾರ್ಯವಾಗಿದೆ.

**ಕಲಿಕಾ ಸಾಧನೆ**

- ಕಲಾಸೃಷ್ಟಿಗಳನ್ನು ಆಸ್ವಾದಿಸುವುದು ಮತ್ತು ಸಂರಕ್ಷಿಸಲಿರುವ ಮನೋಭಾವ ಬೆಳೆಯುವುದು.

**ಆಶಯ, ತಿಳುವಳಿಕೆ**

- ಕಲಾ ಸೃಷ್ಟಿಗಳು ಕಾಲಘಟ್ಟದ, ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ.
- ಕಲಾ ಸೃಷ್ಟಿಗಳ ಮೂಲಕ ಪ್ರಕಟಗೊಳ್ಳುವುದು ಆ ಕಾಲಘಟ್ಟದ ವಿಶೇಷತೆಗಳು, ಅದರಲ್ಲಿ ಕಲಾವಿದನ ಭಾಗವಹಿಸುವಿಕೆ ಹಾಗೂ ಪ್ರತಿಕ್ರಿಯೆಯಾಗಿದೆ.
- ಕಲಾ ಸೃಷ್ಟಿಗಳನ್ನು ಸಂರಕ್ಷಿಸುವುದು ಎಂದರೆ ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸುವುದು ಹಾಗೂ ಅದರಲ್ಲಿ ಹೆಮ್ಮೆಪಡುವುದಾಗಿದೆ.
- ಸಂರಕ್ಷಣೆಯು ಪರಂಪರೆಯ ಮುಂದುವರಿಕೆ ಹಾಗೂ ಅಸ್ತಿತ್ವಕ್ಕೆ ಅನಿವಾರ್ಯವಾಗಿದೆ.

**ಕಲಿಕಾ ಚಟುವಟಿಕೆಗಳು**

***ಚಟುವಟಿಕೆ 1***

- ರಾಜಾ ರವಿವರ್ಮನ ಜಿಪ್ಸಿಗಳು ಎಂಬ ಚಿತ್ರ ಪ್ರದರ್ಶಿಸುವುದು.
- ಈ ಚಿತ್ರದಲ್ಲಿ ಪ್ರತಿಪಾದಿಸಿದ ವಿಷಯಗಳೇನು?
- ರಚನೆಗೆ ಉಪಯೋಗಿಸಿದ ರೀತಿ ಮತ್ತು ಉಪಕರಣಗಳು ಯಾವುವು?
- ಕಾಲಘಟ್ಟ, ಅದರ ವಿಶೇಷತೆಯೇನು?
- ಈ ವಿಷಯಗಳಿಗೆ ಪ್ರಾಧಾನ್ಯತೆ ನೀಡಿ ಗುಂಪುಚರ್ಚೆ ಟಿಪ್ಪಣಿ ತಯಾರಿ.

  *ಚರ್ಚಾ ಸೂಚಕಗಳು*

  - ಚಿತ್ರಗಾರ, ಜೀವನ ಕ್ರಮ
  - ಚಿತ್ರದಲ್ಲಿ ಪ್ರತಿಪಾದಿಸಿದ ವಿಷಯ
  - ಚಿತ್ರ ರಚಿಸಿದ ಮಾಧ್ಯಮ, ಕೇನ್‌ವಾಸ್ ಪ್ರಯೋಗಿಸಿದ ರೀತಿ
  - ಕಾಲಘಟ್ಟ, ಸಾಮಾಜಿಕ ಸ್ಥಿತಿ
  - ಸ್ವಂತ ದೃಷ್ಟಿಕೋನ
- ಟಿಪ್ಪಣಿ ಮಂಡನೆ, ಕ್ರೋಡೀಕರಣ
- ನಡೆಸಿದ ಚಟುವಟಿಕೆಯ ಮುಂದುವರಿಕೆಯಾಗಿ ವೈಯಕ್ತಿಕವಾಗಿ ಆಸ್ವಾದನಾ ಟಿಪ್ಪಣಿ ರಚಿಸುವುದು.
- ತಯಾರಿಸಿದ ಟಿಪ್ಪಣಿ ಸೂಚಕಗಳ ಆಧಾರದಲ್ಲಿ ಗುಂಪಿನಲ್ಲಿ ಮಂಡಿಸಿ, ಚರ್ಚಿಸಿ, ಉತ್ತಮಪಡಿಸಿ, ಮಂಡಿಸುವುದು. ಚರ್ಚೆ ಉತ್ತಮಪಡಿಸುವುದು.

***ಚಟುವಟಿಕೆ 2***

- ಮುಂದುವರಿದ ಚಟುವಟಿಕೆ ಎಂಬ ನೆಲೆಯಲ್ಲಿ ಇನ್ನೊಂದು ಚಿತ್ರ ಪ್ರದರ್ಶಿಸಿ ಮೊದಲಿನ ಸೂಚನೆ ಪ್ರಕಾರ ಗುಂಪು ಚರ್ಚೆ ನಡೆಸಿ ಸೆಮಿನಾರ್, ಪ್ರಬಂಧ ತಯಾರಿಸಿ ಮಂಡಿಸುವುದು.
- ಚಿತ್ರಗಾರನ ಹೆಸರು, ಊರು, ಜನಿಸಿದ ವರ್ಷ ಮೊದಲಾದವುಗಳು

***ಚಟುವಟಿಕೆ 3***

- ತರಗತಿಯಲ್ಲಿ ಹಳೆಯ ಕಾಲದಲ್ಲಿ ಉಪಯೋಗಿಸಿದ ವಸ್ತುಗಳ ಪ್ರದರ್ಶನ ಏರ್ಪಡಿಸುವುದು.

- ಮರೆಯಾದ ವಸ್ತುಗಳ (ಈಗ ಉಪಯೋಗಿಸದ) ಪ್ರದರ್ಶನ (ಎಲ್.ಸಿ.ಡಿ. ಉಪಯೋಗ)
    - ಈ ಉಪಕರಣಗಳು ನಿಮಗೆ ಪರಿಚಯವಿದೆಯೇ?
    - ಇವುಗಳನ್ನು ಇಂದು ಉಪಯೋಗಿಸಲಾಗುತ್ತಿದೆಯೇ?
    - ಇವುಗಳು ಏನನ್ನು ಸೂಚಿಸುತ್ತವೆ?
    - ಇವುಗಳನ್ನು ನಿರ್ಮಿಸಿದವರಾರು?
- ಈ ರೀತಿಯ ಸೂಚಕಗಳನ್ನಿಟ್ಟು ಚರ್ಚೆ
- ಅಭಿಪ್ರಾಯಗಳನ್ನು ಪಟ್ಟಿ ಮಾಡುವುದು.
    - ಈ ವಸ್ತುಗಳನ್ನು ಹಳೆಯ ತಲೆಮಾರಿನವರು ನಿತ್ಯ ಜೀವನದಲ್ಲಿ ಉಪಯೋಗಿಸುತ್ತಿದ್ದರು.
    - ಆಧುನಿಕ ತಂತ್ರಜ್ಞಾನವು ಬಳಕೆಗೆ ಬರುವ ಮೊದಲೇ ಯಂತ್ರ ಸಹಾಯವಿಲ್ಲದೆ ನಿರ್ಮಿಸಿದವುಗಳಾಗಿವೆ.
    - ಇವು ಆ ಕಾಲದಲ್ಲಿ ಸಾಂಸ್ಕೃತಿಕವಾಗಿ ಬೆಳೆದ ಒಂದು ಜನಾಂಗವು ನಿರ್ಮಿಸಿ ಉಪಯೋಗಿಸಿರುವುದಾಗಿದೆ.
    - ಈ ರೀತಿಯ ಉಪಕರಣಗಳನ್ನು ನಿರ್ಮಿಸಲು ಮತ್ತು ಸಂರಕ್ಷಿಸಲು ಬೇಕಾದ ಮನೋಭಾವ ಅವರಲ್ಲಿ ಇತ್ತು.
    - ಈ ಸಂರಕ್ಷಣೆಯಿಂದಾಗಿ ಆ ತಲೆಮಾರಿನ ಸಾಂಸ್ಕೃತಿಕ ಉನ್ನತಿಯು, ಉನ್ನತವಾದ ಚಿಂತನೆ, ದೃಷ್ಟಿಕೋನ ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ.
    - ಇವುಗಳು ಇಲ್ಲದಿದ್ದರೆ ಆ ತಲೆಮಾರಿನ ಕುರಿತಾದ ತಿಳುವಳಿಕೆ ಮುಂದುವರಿಕೆ ಇಲ್ಲದೆ ನಷ್ಟವಾಗುತ್ತಿತ್ತು.
    - ಇದನ್ನು ಸಂರಕ್ಷಿಸುವುದರೊಂದಿಗೆ ಆ ತಲೆಮಾರಿನ ಶ್ರಮ ಸೃಜನಾತ್ಮಕತೆಯನ್ನು ನೆನಪಿಸುವುದರೊಂದಿಗೆ ಅದನ್ನು ಗೌರವಿಸುವುದು ಹಾಗೂ ಅದರಲ್ಲಿ ಹೆಮ್ಮೆಪಡುವುದು.
    - ಇಂದು ಉಪಯೋಗಿಸುವ ಎಲ್ಲಾ ಉಪಕರಣಗಳು, ಕಲಾ ರೂಪಗಳು ನಿರ್ಮಿಸಿರುವುದರ ಹಳೆಯ ತಲೆಮಾರು ಆರ್ಜಿಸಿದ ನೈಪುಣ್ಯಗಳನ್ನು ಬಳಸಿಕೊಂಡು ನಿರ್ಮಿಸಿರುವುದಾಗಿದೆ.
    - ಅದರಂತೆ ಇಂದಿರುವ ಕಲಾರೂಪಗಳನ್ನು, ಆಕೃತಿಗಳನ್ನು ನಾಳೆಯ ತಲೆಮಾರಿಗಾಗಿ ಸಂರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.
- ತಿಳುವಳಿಕೆಯ ಆಧಾರದಲ್ಲಿ ಇಂತಹ ಪ್ರಾಚ್ಯ ವಸ್ತುಗಳನ್ನು ಸಂಗ್ರಹಿಸಿಡುವ ಮ್ಯೂಸಿಯಂಗಳನ್ನು ಸಂದರ್ಶಿಸಿ ಅದರ ಪ್ರಾಧಾನ್ಯತೆಯನ್ನು ತಿಳಿಯುವುದು.
- ಚಿತ್ರ ಸಂಗ್ರಹದಲ್ಲಿ ಈ ರೀತಿ ವಸ್ತುಗಳ ಚಿತ್ರಗಳನ್ನು ಸೇರಿಸುವುದು. ಎಡೆಗೆಡೆಗೆ ಗುಹೆಯಂತಹ ಸ್ಥಳಗಳನ್ನು ಸಂದರ್ಶಿಸಿ ಅದರ ಆವಶ್ಯಕತೆ ತಿಳಿಯುವುದು.

**ಗಳಿಸಬಹುದಾದ ನೈಪುಣ್ಯಗಳು**

*ಕೆಳಗೆ ಕೊಟ್ಟಿರುವ ಕಲಿಕಾ ನೈಪುಣ್ಯ ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಆಸ್ವಾದನಾ ಸಾಮರ್ಥ್ಯ, ಉನ್ನತ ಚಿಂತನೆ, ವಿಮರ್ಶನಾತ್ಮಕ ಮನೋಭಾವ ಉಂಟಾಗುತ್ತದೆ. ವಿಮರ್ಶನಾತ್ಮಕ ಕಲಿಕಾ ಜ್ಞಾನ ಲಭಿಸುವುದು.
- ಸಾಂಸ್ಕೃತಿಕ ಪುರಾವೆಗಳಲ್ಲಿ ಅಭಿಮಾನಗೊಳ್ಳುವುದರೊಂದಿಗೆ ಅದನ್ನು ಸಂರಕ್ಷಿಸುವುದು ಎಂಬ ಕರ್ತವ್ಯದಲ್ಲಿ ಜಾಗೃತರಾಗಿ ಮಾನಸಿಕವಾಗಿ ತಯಾರಾಗುವುದು.

# ಯೂನಿಟ್ 8 : ಚಿತ್ರೀಕರಣ

ಸ್ಟಿಲ್ ಕ್ಯಾಮರಾ ಮತ್ತು ವೀಡಿಯೋ ಕ್ಯಾಮರಾಗಳು ಆಧುನಿಕ ಕಾಲದಲ್ಲಿ ಹೊರತುಪಡಿಸಲಾರದ ಮಾಧ್ಯಮಗಳಾಗಿವೆ. ತಾಂತ್ರಿಕ ರಂಗದಲ್ಲೂ ಸಾಮಾಜಿಕ ರಂಗದಲ್ಲೂ ದೊಡ್ಡ ಪ್ರತಿಕ್ರಿಯೆಗೆ ಸಾಧ್ಯತೆಯಿರುವುದಾಗಿದೆ ಈ ಎರಡು ಉಪಕರಣಗಳು. ಸಾಮಾಜಿಕ ಜೀವನದಲ್ಲಿ ಹೆಚ್ಚು ಉದ್ಯೋಗ ಸಾಧ್ಯತೆಯಿರುವ ಕ್ಷೇತ್ರವಾಗಿದೆ. ತಾಂತ್ರಿಕತೆಯಲ್ಲಿ ಸಣ್ಣ ಪರಿಣತಿ ಪ್ರಕಟಿಸಲು ಸಾಧ್ಯವಾಗುವವರಿಗೆ ಕಲಾಪರವಾದ ಫೋಟೋ, ವೀಡಿಯೋ ಎಂಬಿವುಗಳನ್ನು ಚೆನ್ನಾಗಿ ತೆಗೆಯಲು ಸಾಧ್ಯ. ಸಿನೆಮಾದಂತಹ ಪ್ರಬಲವಾದ ಕ್ಷೇತ್ರದ ಆರಂಭ ಎಂಬ ನೆಲೆಯಲ್ಲಿ ಈ ಚಟುವಟಿಕೆಗಳನ್ನು ನೋಡಬಹುದಾಗಿದೆ. ವರ್ತಮಾನ ಕಾಲದಲ್ಲಿ ಬಹಳಷ್ಟು ಚರ್ಚಾ ವಿಷಯವಾದ ಹಲವು ವಿಷಯಗಳು ಬೆಳಕಿಗೆ ಬಂದದ್ದು ಕಡಿಮೆ ಸಮಯದಲ್ಲಿ ನಿರ್ಮಿಸಿದ್ದ ವೀಡಿಯೋ ತುಣುಕುಗಳಿಂದಾಗಿದೆ. ಸಾಮಾಜಿಕ ಪ್ರತಿಕ್ರಿಯಾ ಮಾಧ್ಯಮಗಳಾದ ವಾರ್ತಾ ಪತ್ರಿಕೆ, ಚ್ಯಾನಲುಗಳಲ್ಲಿ ಇದೇ ರೀತಿಯ ತಂತ್ರಜ್ಞಾನವನ್ನು ಉಪಯೋಗಿಸುವುದಾಗಿದೆ.

## ಕಲಿಕಾ ಸಾಧನೆ

- ಸ್ಟಿಲ್ ಕ್ಯಾಮರಾ, ವೀಡಿಯೋ ಕ್ಯಾಮರ ಇವುಗಳನ್ನುಪಯೋಗಿಸಿ ಚಿತ್ರೀಕರಣ ನಡೆಸುವುದು.

## ಆಶಯ, ತಿಳುವಳಿಕೆ

- ನಿಶ್ಚಲ ದೃಶ್ಯಗಳನ್ನು ತೆಗೆಯಲು ಸ್ಟಿಲ್ ಕ್ಯಾಮೆರಾ ಉಪಯೋಗಿಸುವುದು.
- ಚಲಿಸುವ ದೃಶ್ಯಗಳನ್ನು ತೆಗೆಯಲು ವೀಡಿಯೋ ಕ್ಯಾಮರಾ ಉಪಯೋಗಿಸುವುದು.
- ತಯಾರಿಸಿದ ಚಿತ್ರ ಕಥೆಗೆ (ಟೈಂಲೈನ್) ಅನುಸಾರವಾಗಿ ಚಲನಚಿತ್ರ ದೃಶ್ಯಗಳನ್ನು ಚಿತ್ರೀಕರಿಸುವುದಾಗಿದೆ. (Open videoshot, Audacity)
- ಕಂಪ್ಯೂಟರ್ ಸಾಫ್ಟ್‌ವೇರ್‌ಗಳ ಸಹಾಯದಿಂದ ಚಿತ್ರಗಳ ವೀಡಿಯೋ ಎಡಿಟಿಂಗ್, ಟೈಂಲೈನಿಂಗ್, ಶಬ್ದಮಿಶ್ರಣ ಎಂಬಿವುಗಳನ್ನು ನಿರ್ವಹಿಸಬಹುದು.
- ಕ್ಯಾಮರಾ ಉಪಯೋಗಿಸುವುದಕ್ಕೆ ತರಬೇತಿ ಅಗತ್ಯ (6 Frames)

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಪ್ರಸಿದ್ಧರಾದ ಫೋಟೋಗ್ರಾಫರ್‌ಗಳ ಚಿತ್ರಗಳನ್ನು ತರಗತಿಯಲ್ಲಿ ಪ್ರದರ್ಶಿಸುವುದು. (ಪ್ರಿಂಟುಗಳು, ಪ್ರಾಜೆಕ್ಟರ್‌ಗಳನ್ನು ಉಪಯೋಗಿಸಬಹುದಾಗಿದೆ)
- ಸಾಮಾಜಿಕ ಪ್ರಾಮುಖ್ಯತೆಯಿರುವ ವಿಷಯಗಳ ಫೋಟೋಗ್ರಾಫ್‌ಗಳನ್ನು ಪ್ರದರ್ಶಿಸುವುದು. ಉದಾ: ಮಧುರಾಜ್‌ನ ವೆಳ್ಳಂಕಳ್ಳನ್, ಎಂಡೋಸಲ್ಫಾನ್ ಎಂಬಿವುಗಳ ಪ್ರಿಂಟಾದರೆ ಉತ್ತಮ.
- ಲೇಂಡ್‌ಸ್ಕೇಪ್, ಪೋರ್ಟ್ರೈಟ್, ಸ್ಟಿಲ್, ಲೈಫ್ ಮೊದಲಾದವುಗಳನ್ನು ಉಪಯೋಗಿಸಬಹುದು.

  ಯಾವೆಲ್ಲಾ ರೀತಿಯ ಫೋಟೋಗ್ರಾಫ್‌ಗಳಿವೆ?
- ವೀಡಿಯೋ ಫೋಟೋಗ್ರಾಫಿ, ಫೋಡ್ರೋಡ್ ಫೋಟೋ, ಲಾಂಡ್‌ಸ್ಕೇಪ್, ಸ್ಟಿಲ್‌ಲೈಫ್, ಸ್ಪೋರ್ಟ್ಸ್ ಎಂಬಿವುಗಳು.
- ಫೋಟೋ ಉಂಟುಮಾಡುವುದು ಹೇಗೆ?

ಚರ್ಚೆ, ಅವಲೋಕನ

- ಕ್ಯಾಮರ ಫಿಲ್ಮ್ ಪ್ರಿಂಟ್, ಮೆಮರಿ ಕಾರ್ಡ್, ಡೆವಲಪಿಂಗ್ (ಸೂಂಲೆನ್ಸ್), ಕಂಪ್ಯೂಟರ್ ಪ್ರಿಂಟರ್ ಎಂಬಿತ್ಯಾದಿ ಚರ್ಚಿಸಬೇಕು.
    - ಯಾವ ರೀತಿಯ ಫೋಟೋಗ್ರಾಫಿ ನಿಮಗೆ ಇಷ್ಟವಾಗುತ್ತದೆ?
    - ಸ್ವಂತ ಇಷ್ಟಕ್ಕನುಗುಣವಾಗಿ ಫೋಟೋ ತೆಗೆಯಬಹುದೇ?

*ಚಟುವಟಿಕೆ 2*

- ಪ್ರತಿಯೊಬ್ಬರಿಗೂ ಇಷ್ಟವಿರುವ ಚಿತ್ರ ತೀರ್ಮಾನಿಸುವುದು. ಗುಂಪಿನಲ್ಲಿ ಇಷ್ಟವಿರುವ ವಸ್ತು ಘಟನೆ ಇವುಗಳ ಫೋಟೋ ತೆಗೆಯುವುದು.
- ಫೋಟೋ ತೆಗೆಯಲು ಕ್ಯಾಮರಾ, ಮೊಬೈಲ್ ಫೋನ್, ಲ್ಯಾಬ್ ಎಂಬಿವುಗಳನ್ನು ಉಪಯೋಗಿಸಬಹುದು.

***ಚಟುವಟಿಕೆ 3***

- ಕ್ಯಾಮರದಲ್ಲಿರುವ ಚಿತ್ರಗಳನ್ನು ಹೇಗೆ ಪ್ರಿಂಟು ತೆಗೆಯಬಹುದು. ಚರ್ಚೆ.
- ಕಂಪ್ಯೂಟರ್ ಪ್ರಿಂಟರ್, ಲ್ಯಾಬ್, ಪ್ರಿಂಟ್ ಎಂಬಿವುಗಳ ಕುರಿತು ಚರ್ಚೆ
- ಕ್ಯಾಮರದಲ್ಲಿರುವ ಚಿತ್ರಗಳನ್ನು ಎಡಿಟ್ ಮಾಡಲು ಕಂಪ್ಯೂಟರ್‌ಗೆ ಬದಲಾಯಿಸಬೇಕು.

***ಚಟುವಟಿಕೆ 4***

- ಕ್ಯಾಮರ, ಕಂಪ್ಯೂಟರ್‌ಗಳನ್ನು ಡೇಟಾ ಕೇಬಲ್ ಮುಖಾಂತರ ಜೋಡಿಸಿ ಚಿತ್ರಗಳನ್ನು ಕಂಪ್ಯೂಟರ್‌ಗೆ ಲೋಡ್ ಮಾಡುವುದು.
- ಜಿಂಪ್ ಸಾಫ್ಟ್‌ವೇರ್ ತೆರೆದು, ತೆಗೆದ ಚಿತ್ರ ತೆರೆದು ಲೆವೆಲ್, ಕಲರ್ ಕರಕ್ಷನ್, ಬ್ರೈಟ್‌ನೆಸ್, ಕೋನ್‌ಟ್ರಾಸ್ಟ್, ಕಂಪೋಸಿಶನ್ ಎಂಬೀ ಎಡಿಟಿಂಗ್ ಕೆಲಸ ನಡೆಸಿ ಅಗತ್ಯವಾದ ಆಕೃತಿಗಳಲ್ಲಿ ಕ್ರಾಪ್ ಮಾಡಿ ಸ್ವಂತ ಫೋಲ್ಡರ್‌ನಲ್ಲಿ ಫೈಲ್ ಹೆಸರು ಕೊಟ್ಟು ಸೇವ್ ಮಾಡಿ ಪ್ರಿಂಟ್ ತೆಗೆಯುವುದು.

***ಚಟುವಟಿಕೆ 5***

- ಡೆಸ್ಕ್‌ಟೋಪ್‌ನಲ್ಲಿ ಪ್ರದರ್ಶಿಸುವುದು. ಮೌಲ್ಯಮಾಪನ
- ಮೌಲ್ಯ ಮಾಪನದ ಬಳಿಕ ನ್ಯೂನತೆಗಳನ್ನು ಪರಿಹರಿಸಿ ಫೋಟೋ ತೆಗೆಯಲು ಎಡಿಟಿಂಗ್ ಮಾಡಲು ಅವಕಾಶ ಒದಗಿಸುವುದು.

***ಚಟುವಟಿಕೆ 6***

- ಕ್ಯಾಮರ ಉಪಯೋಗಿಸುವ ರೀತಿ
- ದೃಶ್ಯಗಳ ಪೂರ್ಣತೆ
- ಸಮಗ್ರತೆ ಕಂಪೊಸಿಷನ್
- ಎಡಿಟಿಂಗ್ ಸಾಮರ್ಥ್ಯ ಎಂಬಿವುಗಳ ಗುಣಾತ್ಮಕ ಮೌಲ್ಯಮಾಪನ

***ಚಟುವಟಿಕೆ 7***

**ಎಲ್.ಸಿ.ಡಿ. ಪ್ರೊಜೆಕ್ಟರ್‌ಗಳ ಸಹಾಯದಿಂದ ತರಗತಿಯಲ್ಲಿ ವೀಡಿಯೋಗಳನ್ನು ಪ್ರದರ್ಶಿಸುವುದು.**

- ವೀಡಿಯೋ ನಿರ್ಮಿಸುವುದು ಹೇಗೆ? ಚರ್ಚೆ, ಕ್ರೋಡೀಕರಣ
- ವೀಡಿಯೋ ಕ್ಯಾಮರ, ಎಡಿಟಿಂಗ್, ಸೌಂಡ್ ಮಿಕ್ಸಿಂಗ್, ಶೀರ್ಷಿಕೆ, ಡಬ್ಬಿಂಗ್ ಶೂಟಿಂಗ್ ಕ್ಯಾಮರಾ ಪ್ಲೇ, ಟೈಂಲೈನ್ ಇತ್ಯಾದಿ.

- ನಿಮಗಿಷ್ಟವಾದ ವಿಷಯದಲ್ಲಿ ವೀಡಿಯೋ ತಯಾರಿಸಬಹುದೇ?
  ಶೂಟಿಂಗ್ ನಡೆಸುವುದನ್ನು ದೃಶ್ಯ, ಸಂಭಾಷಣೆ ರೂಪದಲ್ಲಿ ತಯಾರಿಸುವುದು.

***ಚಟುವಟಿಕೆ 8***

**ಕ್ಯಾಮರಾ ಉಪಯೋಗಿಸಿ ಶೂಟಿಂಗ್ ನಡೆಸುವುದು.**

- ಗುಂಪಿನಲ್ಲಿ ಚಟುವಟಿಕೆ ನಡೆಸುವುದು.

***ಚಟುವಟಿಕೆ 9***

- ಶೂಟಿಂಗ್ ನಡೆಸಿದ ದೃಶ್ಯಗಳನ್ನು ಡಾಟಾ ಕೇಬಲ್ ಮುಖಾಂತರ ಸಿಸ್ಟಂಗೆ ಲೋಡ್ ಮಾಡಬಹುದು.
- ಸೌಂಡ್‌ಫೋರ್ಜ್ ಸಾಫ್ಟ್‌ವೇರ್ ಉಪಯೋಗಿಸಿ ಶಬ್ದ ರೆಕಾರ್ಡ್ ಮಾಡಬಹುದು.
- ಶಬ್ದವನ್ನು ಸೌಂಡ್ ಫೈಲ್ ಆಗಿ ಫೋಲ್ಡರ್‌ನಲ್ಲಿ ಸೇವ್ ಮಾಡಬಹುದು.
- ವೀಡಿಯೋ ಎಡಿಟಿಂಗ್ ಸಾಫ್ಟ್‌ವೇರ್‌ನಲ್ಲಿ ವೀಡಿಯೋ ತೆರೆಯುವುದು.
- ಶೂಟಿಂಗ್ ಮಾಡಿದ ದೃಶ್ಯವನ್ನು ಕಟ್ ಎಡಿಟ್ ರೀತಿ ಉಪಯೋಗಿಸಿ ಅಗತ್ಯವಿರುವುದನ್ನು ಉಳಿಸಿ ಬಾಕಿಯಿರುವುದನ್ನು ಡಿಲೀಟ್ ಮಾಡುವುದು. ಅಗತ್ಯವಾದ ಸೌಂಡ್ ಮಿಕ್ಸ್ ಮಾಡುವುದು.
- ಶೀರ್ಷಿಕೆಯನ್ನು ಸೇರಿಸಿ ವಿ.ಸಿ.ಡಿ, ಡಿ.ವಿ ಫೋರ್ಮೇಟುಗಳ ಎಕ್ಸ್‌ಪೋರ್ಟ್ ಮಾಡುವುದು.
- ಫೋಲ್ಡರ್‌ನಲ್ಲಿ ಫೈಲ್ ಹೆಸರು ನೀಡಿ ಸೇವ್ ಮಾಡುವುದು.

***ಚಟುವಟಿಕೆ 10***

- ನಿರ್ಮಿಸಿದ ಚಲನಚಿತ್ರ ಪ್ರದರ್ಶಿಸುವುದು
- ಮೌಲ್ಯ ನಿರ್ಣಯ ಚರ್ಚೆ
- ಮೌಲ್ಯ ನಿರ್ಣಯದ ಬಳಿಕ ನ್ಯೂನತೆಗಳನ್ನು ಪರಿಹರಿಸಿ ಉತ್ತಮಪಡಿಸುವುದು. ಪುನಃ ಪ್ರದರ್ಶಿಸುವುದು.

## ಮೌಲ್ಯ ನಿರ್ಣಯ

- ಕಥೆ, ಆಶಯ ಪ್ರಕಟಣೆ
- ಕ್ಯಾಮರಾ ಉಪಯೋಗಿಸಲಿರುವ ಸಾಮರ್ಥ್ಯ
- ದೃಶ್ಯಗಳನ್ನು ಎಡಿಟ್ ಮಾಡಿ ಶಬ್ದ ಮಿಶ್ರಣ ಮಾಡಲಿರುವ ಸಾಮರ್ಥ್ಯ
- ಹ್ರಸ್ವಚಿತ್ರ ನಿರ್ಮಾಣಕ್ಕಿರುವ ತಿಳುವಳಿಕೆ

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಕೆಳಗೆ ಕೊಟ್ಟಿರುವ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ಕ್ಯಾಮರಾ, ವೀಡಿಯೋ ಕ್ಯಾಮರಾ ಇವುಗಳನ್ನು ಉಪಯೋಗಿಸಲಿರುವ ಸಾಮರ್ಥ್ಯ
- ಚಿತ್ರಕಥೆ ರಚಿಸಲಿರುವ ಸಾಮರ್ಥ್ಯ
- ಕಂಪ್ಯೂಟರ್ ಎಡಿಟಿಂಗ್, ಮಿಕ್ಸಿಂಗ್, ಸೌಂಡ್ ರೆಕಾರ್ಡಿಂಗ್, ಮಿಕ್ಸಿಂಗ್ ಇವುಗಳಿಗಿರುವ ಸಾಮರ್ಥ್ಯ, ತಿಳುವಳಿಕೆ.

# ಯೂನಿಟ್ 9 : ಶಿಲ್ಪ ನಿರ್ಮಾಣ

ಶಿಲ್ಪ ನಿರ್ಮಾಣ ಎಂಬುದು ಶಿಲ್ಪಿಯ ಮನಸ್ಸಿನಲ್ಲಿರುವ ಒಂದು ಆಶಯದ ನಿರ್ಮಾಣವಾಗಿದೆ. ಶಿಲ್ಪ ನಿರ್ಮಿಸುವಾಗ ಮಕ್ಕಳ ಬಹುಮುಖ ಪ್ರತಿಭೆಯ ಎಲ್ಲಾ ಮಂಡಲಗಳೂ ಒಂದೇ ಸಮಯದಲ್ಲಿ ವಿಕಾಸಗೊಳ್ಳುವುದು. ಕಾಣುವ ರೂಪಗಳನ್ನು ಅದೇ ಸಮಯದಲ್ಲಿ ಪುನಃ ಸೃಷ್ಟಿಸುವುದಾಗಿದೆ. ಶಿಲ್ಪ ನಿರ್ಮಾಣ ನಿರ್ಮಿಸಲಿರುವ ಶಿಲ್ಪಕ್ಕೆ ಆಧಾರವಾಗಿರುವ ವಸ್ತುವನ್ನು ನಿರ್ಮಿಸುವ ಮಾನಸಿಕ ಚಿಂತನೆಗಳಿಗನುಗುಣವಾಗಿ ಬದಲಾಯಿಸುವುದಾಗಿದೆ. ಅಲ್ಲವಾಗಿದ್ದಲ್ಲಿ ಅದು ಕೇವಲ ನಕಲು (ರೀಪ್ರೊಡಕ್ಷನ್) ಮಾತ್ರವಾಗುವುದು, ಶಿಲ್ಪಿಯ ಸೃಷ್ಟಿಪರವಾದ ಸಾಮರ್ಥ್ಯವು ತನ್ನ ಶಿಲ್ಪದಲ್ಲಿ ಪ್ರತಿಫಲಿಸಬೇಕಾದುದೆಂದು ತಿಳಿಯಬೇಕಾಗಿದೆ. ಪ್ರತಿಯೊಂದು ಶಿಲ್ಪವು, ಪ್ರತಿಯೊಂದು ಶಿಲ್ಪಿಯಂತೆ ವಿಶ್ವಾಸಾರ್ಹವಾದಾಗ ಮಾತ್ರ ಶಿಲ್ಪಿಯ ಸೃಜನಾತ್ಮಕ ಸೃಷ್ಟಿಯಾಗಿ ಅದು ಬದಲಾಗುವುದು.

## ಕಲಿಕಾ ಸಾಧನೆ

- ವಿವಿಧ ಮಾಧ್ಯಮಗಳನ್ನುಪಯೋಗಿಸಿ ಆಶಯಾಧಾರಿತವಾದ ಶಿಲ್ಪಗಳನ್ನು ನಿರ್ಮಿಸುವುದು.

## ಆಶಯ, ತಿಳುವಳಿಕೆ

- ಶಿಲ್ಪವು ಆಶಯ ಪ್ರಕಟಣೆಗಿರುವ ಮಾಧ್ಯಮವಾಗಿದೆ.
- ಶಿಲ್ಪವು ತ್ರಿಮಾನವಾಗಿದೆ.
- ಶಿಲ್ಪ ನಿರ್ಮಾಣಕ್ಕೆ ವಸ್ತುವಿನ ಪೂರ್ಣವಾದ ಕಲಿಕೆ ಅಗತ್ಯವಾಗಿದೆ.
- ಸಮತಲದಲ್ಲಿ ಉಬ್ಬುಚಿತ್ರ ಕೊರೆದ ಚಿತ್ರ ರಿಲೀಫ್ ಮೂಲಕ ಶಿಲ್ಪಗಳನ್ನು ನಿರ್ಮಿಸಬಹುದು.
- ಶಿಲ್ಪ ನಿರ್ಮಾಣಕ್ಕಾಗಿ ಆವೆಮಣ್ಣು, ಮರ, ಲೋಹ, ಸಿಮೆಂಟ್ ಎಂಬೀ ಪರಂಪರಾಗತ ಮಾಧ್ಯಮಗಳನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್, ಫೈಬರ್, ವ್ಯಾಕ್ಸ್ ಎಂಬೀ ಹೊಸ ಮಾಧ್ಯಮಗಳನ್ನು ಉಪಯೋಗಿಸಬಹುದು.
- ಎತ್ತರವಾದ ಶಿಲ್ಪಗಳನ್ನು ನಿರ್ಮಿಸುವಾಗ ಬೀಳದಿರಲು ಪೆಡಸ್ಟಲ್ ಆರ್ಮೆಚರ್ ಎಂಬೀ ವ್ಯವಸ್ಥೆಗಳನ್ನು ಒದಗಿಸಬೇಕು.
- ಶಿಲ್ಪದ ಸ್ವಭಾವಕ್ಕನುಸಾರವಾದ ಮಾಧ್ಯಮವನ್ನು ಆರಿಸುವುದು ಮತ್ತು ಅದರ ಪ್ರತ್ಯೇಕತೆಗಳನ್ನು ಸೇರಿಸಲು ಅಗತ್ಯವಾದ ಉಪಕರಣಗಳನ್ನು ಉಪಯೋಗಿಸಬೇಕಾಗಿದೆ (ಟೆಕ್ಸ್‌ಚರ್ ಮೊದಲಾದವುಗಳು)

## ಕಲಿಕಾ ಚಟುವಟಿಕೆಗಳು

- ವಿವಿಧ ಮಾಧ್ಯಮಗಳಿಂದ ನಿರ್ಮಿಸಿದ ಶಿಲ್ಪಗಳ ಪ್ರದರ್ಶನ ಪ್ರಾತ್ಯಕ್ಷಿಕೆ, ಸಿ.ಡಿ. ಪ್ರದರ್ಶನ
- ಪ್ರಸಿದ್ಧರಾದ ಶಿಲ್ಪಿಗಳ, ಶಿಲ್ಪಗಳು, ಪರಿಚಯಿಸಿಕೊಳ್ಳುವುದು (ಎಲ್.ಸಿ.ಡಿ., ಐ.ಟಿ. ಸಾಧ್ಯತೆಗಳ ಉಪಯೋಗ)
- ಶಿಲ್ಪ ನಿರ್ಮಾಣಕ್ಕಿರುವ ಆಶಯಗಳು, ವಸ್ತುಗಳು, ಇವುಗಳನ್ನು ಕಂಡುಕೊಳ್ಳಲು ಚರ್ಚೆ, ಪಟ್ಟಿ ತಯಾರಿ.
- ಕಂಡುಕೊಂಡ ಆಶಯಕ್ಕೆ ವಸ್ತುಗಳನ್ನು ನಿರ್ಮಿಸಲು ಯಾವೆಲ್ಲಾ ಮಾಧ್ಯಮಗಳನ್ನು ಉಪಯೋಗಿಸಬಹುದು? ಕಂಡುಕೊಳ್ಳುವುದು. ಪಟ್ಟಿ ತಯಾರಿ.

- ಶಿಲ್ಪಕ್ಕೆ ಅಗತ್ಯವಾದ ಸ್ಕೆಚ್ ತಯಾರಿಸುವುದು, ಪ್ರದರ್ಶಿಸಿ ಅಗತ್ಯವಾದ ಬದಲಾವಣೆ ಮಾಡುವುದು.
- ಮಾಧ್ಯಮಗಳನ್ನು ತೀರ್ಮಾನಿಸಿ ಅಗತ್ಯವಾದ ಪೆಡಸ್ಟಲ್ ಆರ್ಮೆಚರ್ ನಿರ್ಮಿಸಬೇಕು. ಪ್ಲೈವುಡ್, ತಂತಿ, ಹಿಡಿಸೂಡಿ ಎಂಬಿವುಗಳನ್ನು ಉಪಯೋಗಿಸಬಹುದಾಗಿದೆ.
- ಶಿಲ್ಪ ನಿರ್ಮಿಸುವುದು.
- ಶಿಲ್ಪ ನಿರ್ಮಿಸುವಾಗ ಸೃಜನಾತ್ಮಕತೆಗೆ ಅವಕಾಶ ನೀಡುವುದು, ಟೆಕ್ಸ್ಚರ್, ಫೋಮ್ ಶೇಪ್ ಇವುಗಳಲ್ಲಿ ಉಂಟುಮಾಡುವ ಬದಲಾವಣೆಗಳನ್ನು ಪ್ರೋತ್ಸಾಹಿಸಬೇಕು. ಅಗತ್ಯವಾದ ಉಪಕರಣಗಳನ್ನು ಸ್ವಯಂ ನಿರ್ಮಿಸಲು ಪ್ರೇರಣೆ ನೀಡಬೇಕಾಗಿದೆ.
- ಪ್ರದರ್ಶಿಸುವುದು, ಚರ್ಚೆ, ಮೌಲ್ಯ ಮಾಪನ, ಅಭಿನಂದನೆ
- ಮೌಲ್ಯ ಮಾಪನದ ಬಳಿಕ ಶಿಲ್ಪಗಳ ನ್ಯೂನತೆಗಳನ್ನು ನಿವಾರಿಸಲು ಅದರಲ್ಲಿ ಹೊಸತನ್ನು ನಿರ್ಮಿಸಲಿರುವ ಅವಕಾಶ ನೀಡುವುದು.

**ಮೌಲ್ಯಮಾಪನ**

- ಶಿಲ್ಪ ನಿರ್ಮಾಣಕ್ಕಿರುವ ಆಶಯ ಕಂಡುಕೊಳ್ಳುವುದು.
- ಮಾಧ್ಯಮಗಳನ್ನು ಆಯ್ಕೆ ಮಾಡಿ ಉಪಯೋಗಿಸಲಿರುವ ಸಾಮರ್ಥ್ಯ
- ದೃಢವಾದ ನಿರ್ಮಾಣ ರೀತಿ, ಪೆಡಸ್ಟಲ್ ಆರ್ಮೆಚರ್ ನಿರ್ಮಾಣ
- ಪೂರ್ಣತೆ, ವಿವರ, ಟೆಕ್ಸ್ಚರ್ ಎಂಬಿವುಗಳ ಆಸಕ್ತಿ ಇವುಗಳ ಗುಣಾತ್ಮಕ ಮೌಲ್ಯಮಾಪನ.

## ಯೂನಿಟ್ 10 : ಶಿಲ್ಪಕಲಾ ಚರಿತ್ರೆ

ಕಲೆಗಳು ಕಾಲಘಟ್ಟದ ಚರಿತ್ರೆಯಾಗಿದೆ. ಚಿತ್ರಗಳು, ಶಿಲ್ಪಗಳು ಸಾಮಾಜಿಕ ಬದಲಾವಣೆಗೊಳಗಾಗುತ್ತವೆ. ರಾಜಕೀಯ ಸಾಮಾಜಿಕ ರಂಗಗಳ ಬದಲಾವಣೆ ಉಂಟುಮಾಡಲು ಚಿತ್ರಗಳಿಗೂ ಶಿಲ್ಪಗಳಿಗೂ ಸಾಧ್ಯವಾಗಿದೆ. ಚಿತ್ರಗಾರನ, ಶಿಲ್ಪಿಯ ಕಾಲಘಟ್ಟದೊಂದಿಗಿರುವ ಪ್ರತಿಬದ್ಧತೆ ಆಯಾ ಕಾಲಗಳಲ್ಲಿ ಉನ್ನತಿಗೆ ತಲುಪಿದೆ. ಚಿತ್ರ ಶಿಲ್ಪಕಲಾ ಚರಿತ್ರೆಯನ್ನು ಮಕ್ಕಳು ಆಳವಾಗಿ ತಿಳಿಯುವಾಗ ಶಿಲ್ಪಿಯು, ಚಿತ್ರಗಾರನು, ಆಸ್ವಾದಕರೂ ಪ್ರಚಾರಕನು ಎಲ್ಲವೂ ಒಂದು ದೇಶದ ಸಾಂಸ್ಕೃತಿಕ ಪರಂಪರೆಯನ್ನು ಉನ್ನತಿಗೇರಿಸಿದ್ದಾರೆ ಎಂದು ತಿಳಿಯುತ್ತಾರೆ.

**ಕಲಿಕಾ ಸಾಧನೆ**

- ಚಿತ್ರ, ಶಿಲ್ಪ ಕಲಾಚರಿತ್ರೆ ತಿಳಿಯುತ್ತಾರೆ.

**ಆಶಯ ತಿಳುವಳಿಕೆ**

- ಮನುಷ್ಯನ ಎಲ್ಲಾ ವಾಸಕೇಂದ್ರಗಳಲ್ಲಿ ಚಿತ್ರವೂ ಶಿಲ್ಪವೂ ರೂಪುಗೊಂಡಿದೆ.
- ಭಾರತದಲ್ಲಿ ಪ್ರತ್ಯೇಕವಾಗಿ ಕೇರಳದಲ್ಲಿ ಕಾಲಘಟ್ಟದ ಕುರುಹುಗಳಾಗಿ ಧಾರಾಳ ಚಿತ್ರಗಳು ಶಿಲ್ಪಗಳು ಇವೆ.

- ಮಹತ್ತರವಾದ ರೂಪಗಳನ್ನು ರೂಪಿಸಲು ಈ ತಲೆಮಾರಿಗೆ ಸಾಧ್ಯವಾಗಬೇಕೆಂದು ಈ ಕುರುಹುಗಳನ್ನು ನಮ್ಮನ್ನು ಆಹ್ವಾನಿಸುತ್ತಿವೆ.
- ಕಲಾಚರಿತ್ರೆ ನಾಡಿನ ಚರಿತ್ರೆಯಾಗಿದೆ. ಅವುಗಳು ಉತ್ತಮ ಸಂಸ್ಕೃತಿಗೆ ಪಾದಾರ್ಪಣೆಯೆಂದು ಮಕ್ಕಳು ತಿಳಿಯಬೇಕಾಗಿದೆ.
- ಮನುಷ್ಯನ ಸಂಸ್ಕೃತಿಯ ರೂಪೀಕರಣದಲ್ಲಿ ಚಿತ್ರ, ಶಿಲ್ಪಗಳಿಗಿರುವ ಪಾತ್ರ ಮಹತ್ತರವಾದುದು ಎಂಬ ಅರಿವು ಮಕ್ಕಳಿಗೆ ಉಂಟಾಗುತ್ತದೆ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಚಿತ್ರ ಸಂಗ್ರಹ (ಚಿತ್ರಕಲೆ, ಶಿಲ್ಪಕಲೆ)
- ಚಿತ್ರಗಾರರು, ಶಿಲ್ಪಿಗಳು ಇವರ ಫೋಟೋ ಪ್ರಿಂಟುಗಳು
- ರೆಫರೆನ್ಸ್ ಗ್ರಂಥಗಳು
- ಚರಿತ್ರೆ ಅಧ್ಯಾಪಕನ ಸಹಾಯದೊಂದಿಗೆ ಭಾರತೀಯ ಕಲಾಚರಿತ್ರೆಯ ಕುರಿತಾದ ಚರ್ಚೆ
- ಐ.ಸಿ.ಟಿ. ಸಾಧ್ಯತೆ ಉಪಯೋಗಿಸುವುದರ ಬಗ್ಗೆ ಕಲಾ ಅಧ್ಯಾಪಕರು ವಿವರಿಸುತ್ತಾರೆ.

***ಚಟುವಟಿಕೆ 2***

- ಮಕ್ಕಳ ನೇತೃತ್ವದಲ್ಲಿ ಈ ವಿಷಯದ ಕುರಿತು ಒಂದು ಸೆಮಿನಾರ್ ನಡೆಸುವುದು.
- ಸಂಗ್ರಹಿಸಿದ ವಿವರಗಳ ಪ್ರದರ್ಶನ
- ಕಲಿಕಾ ಚಟುವಟಿಕೆಯ ಭಾಗವಾದ ಶಿಲ್ಪ, ಚಿತ್ರ ಸಂಗ್ರಹಕ್ಕೆ ಯಾತ್ರೆ, ಟಿಪ್ಪಣಿ ತಯಾರಿಸುವುದು.
- ಚರ್ಚೆ, ಆಲ್ಬಂ ತಯಾರಿ

## ಮೌಲ್ಯಮಾಪನ

- ಸಂಶೋಧನಾ ಬುದ್ಧಿ
- ನಿರೀಕ್ಷಣೆ
- ಗುಂಪು ಚಟುವಟಿಕೆ
- ಚರ್ಚೆಯಲ್ಲಿ ಭಾಗವಹಿಸುವಿಕೆ
- ತಿಳಿದ ವಿಚಾರಗಳನ್ನು ವಿವರಿಸುವುದು.

## ಗಳಿಸಬಹುದಾದ ಕಲಿಕಾ ನೈಪುಣ್ಯಗಳು

*ಕೆಳಗೆ ನೀಡಲಾದ ಕಲಿಕಾ ನೈಪುಣ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ?*

- ನಾಡಿನ ಚರಿತ್ರೆಯು ಸಮಕಾಲೀನ ಚರಿತ್ರೆ, ಶಿಲ್ಪಗಳ ಕುರಿತು ಕಲಿಯಲಿರುವ ಆಸಕ್ತಿ.
- ತಲೆಮಾರುಗಳಿಗಾಗಿ ಚಿತ್ರಗಳನ್ನು ಶಿ ಲ್ಪಗಳನ್ನು ಸಂರಕ್ಷಿಸಬೇಕು ಎಂಬ ತಿಳುವಳಿಕೆ
- ವಿವಿಧ ದೇಶಗಳ ಶಿಲ್ಪ, ಚಿತ್ರ ಚರಿತ್ರೆ ಕಲಿಯುತ್ತಾರೆ.

# ಯೂನಿಟ್ 11 : ಕಾರ್ಟೂನ್

ಭಾವನಾಸಂಪನ್ನವೂ, ಹಾಸ್ಯಪ್ರಧಾನವೂ, ಚಿಂತನೆಯ ಉದ್ದೀಪನವೂ ವಿಮರ್ಶಾನಾತ್ಮಕವೂ ಆದ ಕಲಾಶಾಖೆಯಾಗಿದೆ ಕಾರ್ಟೂನ್, ಕೇರಿಕೇಚರ್ ಸಾಮಾಜಿಕ ಒಳಿತುಗಳನ್ನು ಹೊಗಳಿಯೂ, ಕೆಡುಕುಗಳನ್ನು ಎದುರಿಸಿಯೂ ಕಾರ್ಟೂನ್‌ಗಳನ್ನು ರಚಿಸಲಾಗುವುದು. ಚಿತ್ರಕಲೆಯ ಒಂದು ಭಾಗವೇ ಆಗಿದೆ ಕಾರ್ಟೂನ್. ಪ್ರಪಂಚದಲ್ಲಿ ಸಾಕಷ್ಟು ಕಾರ್ಟೂನಿಸ್ಟ್‌ಗಳೂ, ಕೇರಿಕೇಚ್ಚರಿಸ್ಟ್‌ಗಳೂ ಇದ್ದಾರೆ.

ಪ್ರಥಮವಾಗಿ ಆಶಯವೂ, ಚಿತ್ರೀಕರಣವೂ ಕಾರ್ಟೂನಿನಲ್ಲಿ ಅಗತ್ಯವಾಗಿದೆ. ಕಾರ್ಟೂನ್ ಅತ್ಯಂತ ಜನಪ್ರಿಯವಾದ ಒಂದು ಕಲೆಯಾಗಿದೆ. ಅಬಾಲವೃದ್ಧ ಜನರೂ ಬಹಳ ಇಷ್ಟಪಡುತ್ತಾರೆ. ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿ ಬಹಳಷ್ಟು ಕಾರ್ಟೂನ್‌ಗಳು ಪ್ರಪಂಚದಲ್ಲಿ ಚರ್ಚಿಸಲ್ಪಡುವುದು.

## ಕಲಿಕಾ ಸಾಧನೆ

- ಚಿಂತನೆಯನ್ನು ಉದ್ದೀಪನಗೊಳಿಸುವ ಕಾರ್ಟೂನ್‌ಗಳನ್ನೂ ಕೇರಿಕೇಚರ್‌ಗಳನ್ನೂ ರಚಿಸಲಾಗುವುದು. ಬಹಳ ಸರಳವಾಗಿಯೂ, ಸುಲಭವಾಗಿಯೂ ಚಿಂತಿಸಲು ಕಾರ್ಟೂನಿಗೆ ಸಾಧ್ಯ. ಅದರಲ್ಲಿ ರೇಖೆಗಳಿಗಿಂತಲೂ ಆಶಯಕ್ಕೆ ಹೆಚ್ಚು ಪ್ರಾಧಾನ್ಯತೆ ಇದೆ.

## ಆಶಯ, ತಿಳುವಳಿಕೆ

- ಓದುವಿಕೆ ಮತ್ತು ಆಶಯ ಕಾಯ್ದುಕೊಳ್ಳುವಿಕೆ ಪ್ರಧಾನವಾಗಿದೆ.
- ಕಾರ್ಟೂನಿಸ್ಟ್, ಕಾರ್ಟೂನ್ ಕೇರಿಕೇಚರ್‌ನ ಚರಿತ್ರೆಯನ್ನು ಸಂಶೋಧನೆ ನಡೆಸಬೇಕು.
- ಚಿತ್ರ ರಚನೆಯಲ್ಲಿನ ಅಪಾರ ಜ್ಞಾನವು ಕಾರ್ಟೂನ್ ಚಿತ್ರಗಳಿಗೆ ಹೆಚ್ಚು ಯೋಗ್ಯವಾಗಿದೆ.
- ಪ್ರತಿಯೊಂದು ಕಾರ್ಟೂನಿಸ್ಟ್‌ನ ರಚನಾ ಶೈಲಿ ವ್ಯತ್ಯಸ್ತವಾಗಿದೆಯೆಂದು ತಿಳಿಯಬೇಕಾಗಿದೆ.
- ಸಮಕಾಲೀನ ರಾಜಕೀಯ, ಸಾಮಾಜಿಕ ವಾತಾವರಣ ತಿಳಿಯಬೇಕಾಗಿದೆ.
- ವಾರ್ತೆಗಳ ಸಂಗ್ರಹವು ಹೆಚ್ಚು ಪ್ರಯೋಜನಕಾರಿಯಾಗಿದೆ.
- ಸಾಮಾಜಿಕ ಸಮಸ್ಯೆಗಳ ಕಾರ್ಟೂನ್‌ನನ್ನು ಹೆಚ್ಚು ಸಂಪನ್ನಗೊಳಿಸುವುದೆಂಬ ಜ್ಞಾನವುಂಟಾಗಬೇಕು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ – 1***

- ಸೂಕ್ತವಾದ ಒಂದು ಕಾರ್ಟೂನ್ ಪ್ರದರ್ಶಿಸುವುದು. ಸೂಕ್ಷ್ಮ ನಿರೀಕ್ಷಣೆ ನಡೆಸುವುದು.
- ಪಕ್ಷಿ ಮೃಗಾದಿಗಳ, ಮನುಷ್ಯರ, ಚಲನೆ ನಿರೀಕ್ಷಿಸಿ ಅರ್ಥೈಸಬೇಕಾಗಿದೆ.
- ಮುಖಭಾವ, ಚಲನೆಯನ್ನು ನಿರೀಕ್ಷಿಸಬೇಕು.
- ಪತ್ರಿಕಾ ಓದು, ಸಂಗ್ರಹ ಮಾಡಬೇಕು.
- ಪ್ರಧಾನ ಘಟನೆಗಳು, ಅದರ ವ್ಯಕ್ತಿಗಳು ಇವುಗಳನ್ನು ದಾಖಲಿಸಬೇಕು.

***ಚಟುವಟಿಕೆ – 2***

- ಕಾರ್ಟೂನ್ ಪ್ರದರ್ಶಿಸುವುದು, ಕಾರ್ಟೂನಿನ ಪ್ರಾಧಾನ್ಯತೆಯ ಕುರಿತು ವಿವರಿಸುವುದು.

***ಚಟುವಟಿಕೆ – 3***

- ಕಾರ್ಟೂನ್‌ಗಳನ್ನು ಸಂಗ್ರಹಿಸಲು ಹೇಳುವುದು
- ಪ್ರದರ್ಶಿಸುವುದು
- ಮಕ್ಕಳಿಗೆ ಇಷ್ಟವಾದ ಕಾರ್ಟೂನ್‌ಗಳ ಕುರಿತು ಟಿಪ್ಪಣಿ ತಯಾರಿಸುವುದು.
- ಚರ್ಚಿಸುವುದು. ಅವರು ಕಾರ್ಟೂನ್ ರಚಿಸುವರು, ಅಧ್ಯಾಪಕರು ಸಹಾಯ ನೀಡುವರು.

***ಚಟುವಟಿಕೆ – 4***

- ಅತ್ಯಂತ ನೂತನ ರಾಜಕೀಯ ವಿಷಯದ ಕುರಿತು, ಸಾಮಾಜಿಕ ವಿಷಯದ ಕುರಿತು ಕಾರ್ಟೂನ್ ರಚಿಸಿ ಬರಲು ಹೇಳುವುದು.
- ಕಾರ್ಟೂನ್‌ಗಳನ್ನು ಪ್ರದರ್ಶಿಸುವುದು.
- ಪ್ರತಿಯೊಬ್ಬರೂ ರಚಿಸಿದ ಕಾರ್ಟೂನ್‌ಗಳ ಕುರಿತು ವಿವರಿಸಲು ಹೇಳುವುದು.
- ಸಾಮಾಜಿಕ, ರಾಜಕೀಯ ವಿಷಯಗಳಿಗೆ ಸಂಬಂಧಿಸಿದವುಗಳೆಂದು ಮಕ್ಕಳೇ ಕಂಡುಕೊಳ್ಳಬೇಕು.
- ಆರಿಸಿದವುಗಳ ಹಿರಿಮೆಯನ್ನು ವಿವರಿಸಬೇಕು.
- ಇನ್ನೂ ಹೆಚ್ಚು ಕಾರ್ಟೂನ್‌ಗಳನ್ನು ರಚಿಸಲು ಹೇಳುವುದು.

***ಚಟುವಟಿಕೆ – 5***

- ಪ್ರಸಿದ್ಧ ಕಾರ್ಟೂನಿಸ್ಟ್‌ಗಳ ನೇತೃತ್ವದಲ್ಲಿ ಕಾರ್ಟೂನ್/ಕೇರಿಕೇಚ್ಚರ್ ಕಲಿಕಾ ಶಿಬಿರ ನಡೆಸುವುದು.
- ಕಾರ್ಟೂನ್ ಮತ್ತು ಕೇರಿಕೇಚ್ಚರ್‌ಗಳೊಳಗಿನ ವ್ಯತ್ಯಾಸಗಳನ್ನು ತಿಳಿಸುವುದು.
- ಮಕ್ಕಳು ಪರಸ್ಪರ ಕೇರಿಕೇಚ್ಚರ್‌ಗಳನ್ನು ರಚಿಸಲು ಅವಕಾಶ ಒದಗಿಸುವುದು.
- ಕೇರಿಕೇಚ್ಚರ್‌ಗಳನ್ನು ರಚಿಸುವಾಗ ಬೇಕಾದ ಸೂಕ್ಷ್ಮಾಂಶಗಳನ್ನು ತಿಳಿಯುವುದು.
- ಪ್ರಸಿದ್ಧರು ರಚಿಸಿದ ಕಾರ್ಟೂನ್‌ಗಳನ್ನೂ, ಕೇರಿಕೇಚ್ಚರ್‌ಗಳನ್ನೂ, ಮಕ್ಕಳು ರಚಿಸಿದ ಕಾರ್ಟೂನ್‌ಗಳನ್ನೂ ಕೇರಿಕೇಚರನ್ನೂ ಪ್ರದರ್ಶಿಸುವುದು, ಚರ್ಚೆಯ ಮೂಲಕ ಮೌಲ್ಯಮಾಪನ ನಡೆಸಿ ಮುಂದುವರಿದ ಚಟುವಟಿಕೆಗಳಿಗೆ ಪ್ರೇರೇಪಿಸುವುದು.

**ಮೌಲ್ಯ ಮಾಪನ**

- ಎಲ್ಲಾ ಹಂತಗಳಲ್ಲೂ ಮೌಲ್ಯಮಾಪನ ಅಗತ್ಯ
- ಕಾರ್ಟೂನಿನಲ್ಲೂ, ಕೇರಿಕೇಚರಿನಲ್ಲಿರುವ ಅಭಿರುಚಿ
- ರಚನಾ ರೀತಿ

- ವಿಷಯದೊಂದಿಗಿನ ಸಂಬಂಧ
- ಸಾಮಾಜಿಕ, ರಾಜಕೀಯ ವಿಷಯಗಳ ಆಯ್ಕೆ
- ಸಮಗ್ರವಾದ ಮೌಲ್ಯಮಾಪನ
- ವಾರ್ತಾ ಸಂಗ್ರಹಕ್ಕಿರುವ ಅಭಿರುಚಿ

**ಗಳಿಸಬಹುದಾದ ಕಲಿಕಾ ಹಿರಿಮೆಗಳು**

*ಕೆಳಗೆ ನೀಡಲಾದ ಕಲಿಕಾ ಹಿರಿಮೆಗಳನ್ನು ಎಷ್ಟರ ಮಟ್ಟಿಗೆ ಗಳಿಸಿದರು?*

- ವಾಚನಾ ಹವ್ಯಾಸ, ಸಂಗ್ರಹಣಾ ಮನೋಭಾವ ಹೆಚ್ಚುವುದು.
- ವ್ಯಕ್ತಿಗಳನ್ನು, ಸಮಾಜವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದು.
- ಭಾವನೆಗಳ ವಿಕಾಸ

## ಯೂನಿಟ್ 12 : ಲೋಗೋ

ವಿವಿಧ ಸಂಸ್ಥೆಗಳನ್ನು ಗುರುತಿಸುವ ಉಪಕರಣವಾಗಿ ಲೋಗೋವನ್ನು ಉಪಯೋಗಿಸಲಾಗುವುದು. ಲೋಗೋ ರೂಪೀಕರಣ ಒಂದು ಸೃಜನಾತ್ಮಕ ಕಲಾ ಚಟುವಟಿಕೆಯಾಗಿದೆ. ಲೋಗೋದ ಮೂಲಕ ಒಂದು ಸಂಸ್ಥೆಯ ಚಟುವಟಿಕಾ ಸ್ವಭಾವ ವಲಯ ಒಂದಾಗಿ ಪ್ರಕಟಿಸಲು ಸಾಧ್ಯ. ಸರಳವಾಗಿದ್ದು, ಆಶಯಾತ್ಮಕವಾದ ಸಂಕೇತಗಳು ಗಮನ ಸೆಳೆಯುತ್ತವೆ.

**ಕಲಿಕಾ ಸಾಧನೆ**

- ಮಕ್ಕಳು ಲೋಗೋ (ಸಂಕೇತ) ತಯಾರಿಸುತ್ತಾರೆ.

**ಆಶಯ, ತಿಳುವಳಿಕೆ**

- ಒಂದು ಸಂಸ್ಥೆಯ ಗರಿಷ್ಠ ವಿವರಗಳನ್ನು ಪ್ರತಿಫಲಿಸಲು ಸಂಕೇತಗಳಿಗೆ ಸಾಧ್ಯವಾಗಬೇಕು.
- ಸಂಕೇತವು ಸರಳವೂ, ಅನಾಯಾಸವಾಗಿ ಓದಲು ಸಾಧ್ಯವಾಗಿರಬೇಕು.

**ಕಲಿಕಾ ಚಟುವಟಿಕೆಗಳು**

***(ಸಂಕೇತಗಳ ಪರಿಚಯ)***

- ಅಧ್ಯಾಪಕರು ಚಾರ್ಟಿನಲ್ಲಿ ತಯಾರಿಸಿದ ಒಂದು ಸಂಕೇತವನ್ನು ಪ್ರದರ್ಶಿಸುವರು.
- ಇದು ಯಾವ ಸಂಸ್ಥೆಯದ್ದಾಗಿರಬಹುದು?
- ಮಕ್ಕಳ ಪ್ರತಿಕ್ರಿಯೆ
- ಈ ಸಂಕೇತಗಳಿಂದ ನಿಮಗೆ ಓದಿ ತಿಳಿಯಬಹುದಾದ ವಿಷಯಗಳನ್ನು ನೋಟ್‌ಪುಸ್ತಕದಲ್ಲಿ ದಾಖಲಿಸುವುದು.
- ಮಕ್ಕಳು ಬರೆದ ಆಶಯವನ್ನು ಮಂಡಿಸುವರು. ಅಧ್ಯಾಪಕರು ಕ್ರೋಢೀಕರಿಸುವರು.
  ಇದೊಂದು ಬೇಂಕಿನ ಸಂಕೇತವಾಗಿದೆ
  ಬೇಂಕ್ ಹಣಕಾಸು ಸಂಸ್ಥೆಯಾಗಿದೆ
  ಕೀಲಿಕೈ, ಎರಡು ವಿಷಯಗಳನ್ನು ಸೂಚಿಸುತ್ತದೆ
  ನಿಮ್ಮ ಹಣ ಇಲ್ಲಿ ಸುರಕ್ಷಿತ
  ನಿಮಗೆ ಹಣ ಬೇಕಾಗಿ ಬಂದಾಗ ಈ ಬೇಂಕ್ ಸದಾ ನಿಮಗಾಗಿ ತೆರೆದಿರುತ್ತದೆ.

ಕೀಲಿಕೈಯ ಸುತ್ತಲಿರುವ ಆಕೃತಿ ವೃತ್ತಾಕೃತಿಯಾಗಿದೆ – ಸುರಕ್ಷಿತತ್ವ

- ಇನ್ನು ಒಂದು ಸಂಕೇತವನ್ನು ರಚಿಸೋಣ
- ಯಾವುದಾದರೊಂದು ಸಂಸ್ಥೆ(ಅಸ್ತಿತ್ವದಲ್ಲಿ ಇರುವುದು, ಇಲ್ಲದ್ದೂ) ಆರಿಸಲು ಮಕ್ಕಳಲ್ಲಿ ಸೂಚಿಸುವುದು.
- ಆರಿಸಿದ ಸಂಸ್ಥೆಯ ಚಟುವಟಿಕಾ ವಲಯ, ಈ ಮುದ್ರೆಯ ಪ್ರೇಕ್ಷಕರು ಯಾರೆಲ್ಲಾ ಎಂದು ದಾಖಲಿಸುತ್ತಾರೆ.
- ಸಂಕೇತ ನಿರ್ಮಾಣಕ್ಕೆ ಅಗತ್ಯವಾದ ಚಿಹ್ನೆಗಳು, ರೂಪಗಳು ಇವುಗಳನ್ನು ಕಂಡುಕೊಳ್ಳುವುದು.
- ಸಂಕೇತಗಳ ರಚನೆ
- ರಚಿಸಿದ ಸಂಕೇತಗಳನ್ನು ತರಗತಿಯ ಆರ್ಟ್‌ಗ್ಯಾಲರಿಯಲ್ಲಿ ಪ್ರದರ್ಶಿಸುವುದು.
- ಒಂದು ಮಗು ರಚಿಸಿದ ಸಂಕೇತಗಳನ್ನು ಇನ್ನೊಂದು ಮಗು ಮಂಡಿಸುವುದು (ಹೀಗೆ ಎಲ್ಲಾ ಮಕ್ಕಳು ತರಗತಿಯಲ್ಲಿ ಮಂಡಿಸುವರು)

## ಮೌಲ್ಯಮಾಪನ

- ಸಂಕೇತಗಳನ್ನು ಸ್ವಯಂ ಮೌಲ್ಯಮಾಪನ ನಡೆಸುವುದು
- ಪರಸ್ಪರ ಮೌಲ್ಯಮಾಪನ

ಮೌಲ್ಯಮಾಪನ ಸೂಚಕಗಳು

- ಆಶಯಗಳು ಪ್ರತಿಫಲಿಸುವುದು
- ಸರಳವಾದ ರಚನೆ
- ಸಂಕೇತದ ಪೂರ್ಣತೆ
- ಸಂಕೇತದ ಆಕರ್ಷಣೀಯತೆ
- ಸಂಕೇತದ ಸಮಗ್ರತೆ.

# ಹತ್ತನೇ ತರಗತಿ

## ಯೂನಿಟ್ 1 : ಚಿತ್ರಗಳ ಓದುವಿಕೆ

ಪ್ರತಿಯೊಂದು ಚಿತ್ರಕ್ಕೂ ವಿಭಿನ್ನ ಭಾವಗಳಿವೆ. ಆಶಯಗಳಿವೆ. ಪ್ರತಿಯೊಂದು ಕಲಾಸೃಷ್ಟಿಯ ಕಲಾಗಾರನು ವಿಭಿನ್ನ ಪ್ರತಿಭೆಯಿಂದೊಡಗೂ ಡಿದವನಾಗಿರುವನು. ಹಾಗೇ ಆಗಿರಬೇಕೆಂಬುದೇ ಎಲ್ಲರ ಬಯಕೆ. ಪ್ರತಿಯೊಂದು ಚಿತ್ರವು ನೋಡುಗರಲ್ಲಿ ಉಂಟು ಮಾಡುವ ಆಶಯಗಳು, ಭಾವನೆಗಳು ವಿಭಿನ್ನವಾಗಿವೆ. ಆಸ್ವದನಾ ಸಾಮರ್ಥ್ಯ/ನಿರೀಕ್ಷಣಾ ಸಾಮರ್ಥ್ಯ ಪ್ರತಿಯೊಂದು ವ್ಯಕ್ತಿಯಲ್ಲಿ ವಿಭಿನ್ನವಾಗಿರುವುದರಿಂದ ಚಿತ್ರವನ್ನು ಅರ್ಥ ಮಾಡಿಕೊಳ್ಳುವ ರೀತಿಯೂ ವಿಭಿನ್ನವಾಗಿದೆ.

ಮಕ್ಕಳು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಆಶಯಗಳನ್ನು ಅರ್ಥ ಮಾಡಿಕೊಳ್ಳುವುದಾದರೆ ವಿಮರ್ಶಿಸಲು, ಮೌಲ್ಯನಿರ್ಣಯ ಮಾಡಲು, ವ್ಯಾಖ್ಯಾನಿಸಲು ಸಾಮರ್ಥ್ಯವನ್ನು ಗಳಿಸುತ್ತಾರೆ. ಅದಕ್ಕಾಗಿ ಚಿತ್ರಗಳನ್ನು ಕಾಣಲು, ಚಿತ್ರಗಾರರನ್ನು ತಿಳಿಯಲು ಸಾಕಷ್ಟು ಅವಕಾಶಗಳನ್ನು ನೀಡಬೇಕಾಗಿದೆ.

### ಕಲಿಕಾ ಸಾಧನೆ

- ಚಿತ್ರಗಳ ಓದುವಿಕೆಯ ಮೂಲಕ ವಿಮರ್ಶಾತ್ಮಕವಾಗಿ ಆತ್ಮವಿಶ್ವಾಸದೊಂದಿಗೆ ಪ್ರತಿಕ್ರಿಯಿಸುವುದು.

### ಆಶಯ, ತಿಳುವಳಿಕೆ

- ಮನುಷ್ಯನು ವಾಸ ಮಾಡಿರುವ ಎಲ್ಲಾ ಕಡೆಗಳಲ್ಲಿ ಪೂರ್ವಜರ ಮಹತ್ತರವಾದ ಚಿತ್ರಗಳನ್ನು ಸಂರಕ್ಷಿಸಲಾಗಿದೆ. ಅವುಗಳನ್ನು ಕಾಣುವ ಮತ್ತು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸುವುದು.
- ಚಿತ್ರಗಾರನ ಕುರಿತಾಗಿಯೂ ಅವರ ಜೀವನದ ಬಗ್ಗೆಯೂ ಓದಿ ಮತ್ತು ಪ್ರತ್ಯಕ್ಷವಾಗಿ ಅರ್ಥಮಾಡಿಕೊಳ್ಳುವ ಸಾಮರ್ಥ್ಯಗಳಿಸುವುದು.
- ಸೂಕ್ಷ್ಮತೆ ನಿರೀಕ್ಷಣೆ ಮಾಡಲು, ವಿಮರ್ಶಿಸಲಿರುವ ಸಾಧ್ಯತೆಯನ್ನು ಉಂಟು ಮಾಡುವುದರ ಮೂಲಕ ಮಗುವಿನಲ್ಲಿ ಆತ್ಮ ವಿಶ್ವಾಸ ಹೆಚ್ಚಾಗಿ ಸ್ವಂತವಾದ ದೃಷ್ಟಿ ಕೋನದಲ್ಲಿ ಪ್ರಕಟಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು.
- ವಿವಿಧ ರಚನಾ ತಂತ್ರಗಳ ಕುರಿತು ಮಗು ತಿಳಿದುಕೊಳ್ಳುವುದು.


### ಕಲಿಕಾ ಚಟುವಟಿಕೆಗಳು

*ಹಂತ–1*

- ರೆಫರೆನ್ಸ್ ಗ್ರಂಥಗಳಿಂದ, ಇಂಟರ್‌ನೆಟ್‌ನಿಂದ ಚಿತ್ರಗಳ ಪ್ರಿಂಟನ್ನು ಸಂಗ್ರಹಿಸುವುದು.



ಅಮೃತ ಶೇರ್ಗಿಲಿನ ಪೈಂಟಿಂಗ್



ಜಾಮಿನಿ ರೋಯ್‌ಯ ಪೈಂಟಿಂಗ್

- ವಿವಿಧ ಚಿತ್ರಗಾರರ ಚಿತ್ರಗಳನ್ನು(ಪ್ರಿಂಟುಗಳು) ಸಂಗ್ರಹಿಸುವುದು.
- ಚಿತ್ರಗಾರರ ಬಗ್ಗೆ ಟಿಪ್ಪಣಿಗಳನ್ನು ತಯಾರಿಸುವುದು.
- ಮಕ್ಕಳು ರಚಿಸಿದ ಚಿತ್ರಗಳನ್ನು ಸಂಗ್ರಹಿಸುವುದು.
- ಚಿತ್ರಕಲಾ ಅಧ್ಯಾಪಕನ ಸಮ್ಮುಖದಲ್ಲಿ ಸಂಶಯಗಳನ್ನು ಪರಿಹರಿಸುವುದು.

***ಹಂತ–2***

- ಚಿತ್ರದ ವಿಷಯ ಏನೆಂದು ಕಂಡು ಹಿಡಿಯುವುದು.
- ಚಿತ್ರವನ್ನು ರಚಿಸಲು ಉಂಟಾದ ಸಂದರ್ಭ ಯಾವುದೆಂದು ಹೇಳುವುದು.
- ಮಾಧ್ಯಮದ ಆಯ್ಕೆಗೆ ಕಾರಣವೇನಾದರೂ ಇದೆಯಾ? ಎಂದು ಕೇಳಿ ತಿಳಿದುಕೊಳ್ಳುವುದು.
- ಚಿತ್ರ ಸಂಯೋಜನೆಯಲ್ಲಿ ನಿಖರತೆ ಇದೆಯೇ? ಎಂದು ಹೇಳುವುದು.
- ಬೇರೆ ಯಾವುದಾದರೂ ಚಿತ್ರವನ್ನು ಅನುಕರಿಸಿದ್ದಾರೆಯೋ? ಎಂದು ತಿಳಿಯುವುದು.
- ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ್ದಾಗಿದೆಯೇ ಎಂದುತಿಳಿಯುವುದು
- ಚಿತ್ರದಿಂದ ನೀವೇನು ತಿಳಿಯುವಿರಿ? ಎಂದು ತಿಳಿಯುವುದು.
- ಈ ಚಿತ್ರಕ್ಕೆ ಸಾಮ್ಯವಿರುವ ಬೇರೆ ಚಿತ್ರಗಳು ಇವೆಯೇ ಎಂದು ತಿಳಿಯುವುದು.

- ಇದೇ ರೀತಿಯ ಚಿತ್ರಗಳನ್ನು ಪುನಃ ರಚಿಸಲು ಪ್ರೇರಣೆ ನೀಡುವುದು
- ಚಿತ್ರಗಳನ್ನು ಸಂಗ್ರಹಿಸಿ ಮೌಲ್ಯ ನಿರ್ಣಯ ನಡೆಸಲು ಹೇಳುವುದು
- ಚಿತ್ರಕ್ಕೆ ಸಕಾಲಿಕ ಮಹತ್ವ ಇದೆಯೋ ಎಂದು ತಿಳಿಯುವುದು
- ವಾತ್ಸಲ್ಯ, ದುಡಿಮೆ, ದುಃಖ ಇತ್ಯಾದಿ ಭಾವನಗೆಳನ್ನು ಪ್ರಕಟಪಡಿಸುವಂತಹ ಚಿತ್ರಗಳ ರಚನೆಗೆ ಹೇಳುವುದು
- ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂಗಳಾಗಿ ಮಾಡಿ ಲೈಬ್ರರಿಯಲ್ಲಿ ಅಥವಾ ಸ್ವಂತವಾಗಿ ಸಂರಕ್ಷಿಸುವುದು.

### ಮೌಲ್ಯ ನಿರ್ಣಯಗಳು

- ಪ್ರತೀ ಹಂತದಲ್ಲೂ ವಿಮರ್ಶಾತ್ಮಕವಾದ ಮೌಲ್ಯ ನಿರ್ಣಯಗಳು ಅತ್ಯಗತ್ಯ
- ವೈಜ್ಞಾನಿಕ ಹಾದಿಯಲ್ಲಿ ಚಿತ್ರರಚನೆಗೆ ಮಹತ್ವವಿದೆ
- ಸಾಮಾಜಿಕ, ರಾಜಕೀಯ ವಿಷಯಗಳಲ್ಲಿ ಚಿತ್ರರಚನೆಗಿರುವ ಸಾನಿಧ್ಯ
- ಚಿತ್ರ ಸೌಂದರ್ಯ ಹಾಗೂ ಕ್ರಮೀಕರಣ

### ಲಭಿಸಬೇಕಾದ ಕಲಿಕಾ ಹಿರಿಮೆಗಳು

*ಕೆಳಗೆ ನೀಡಲಾದ ಕಲಿಕಾ ಹಿರಿಮೆಯು ಎಷ್ಟರ ಮಟ್ಟಿಗೆ ಮಗುವಿಗೆ ಲಭಿಸಿದೆ?*

- ಎಲ್ಲಾ ಮಂಡಲಗಳಲ್ಲೂ ಚಿತ್ರ ರಚನೆಯ ವ್ಯಾಪ್ತಿ ಇದೆ
  ಭಾಗವಹಿಸುವಿಕೆ ಇರುತ್ತದೆ

## ಯೂನಿಟ್ 2 : ಒಂದು ವ್ಯವಹಾರ ರೂಪ

ಕಾಲವು ಬದಲಾದಂತೆ ಪ್ರಕೃತಿಯಲ್ಲೂ ಬದಲಾವಣೆಗಳು ಕಂಡು ಬರುತ್ತಿವೆ. ನಿರಂತರವಾದ ಪ್ರಕೃತಿಯ ಬದಲಾವಣೆಯೇ ಕಾಲಗಳು ಎಂದು ಹೇಳಿದರೆ ಅದು ತಪ್ಪಾಗಲಾರದು. ಪ್ರಕೃತಿಯ ಜೊತೆಗೆ ಅಲ್ಲಿ ವಾಸಿಸುವ ಜೀವಿಗಳಲ್ಲೂ ಬದಲಾವಣೆಗಳು ಉಂಟಾಗುತ್ತವೆ. ಮನುಷ್ಯನು ತನ್ನ ಬುದ್ಧಿ ಕೌಶಲ್ಯವನ್ನುಪಯೋಗಿಸಿ ಪ್ರಕೃತಿಯನ್ನು ವಶಪಡಿಸಿ ಅದರ ಬದಲಾವಣೆಗೂ ಕಾರಣನಾಗುತ್ತಾನೆ. ನವೀನತೆ ಹಾಗೂ ಬೆಳವಣಿಗೆಗಾಗಿ ನಡೆಸುವಂತಹ ಈ ಚಟುವಟಿಕೆಗಳ ಮೂಲಕ ಮನುಷ್ಯನು ತನ್ನ ವ್ಯವಹಾರ ರೂಪಗಳಲ್ಲೂ ಬದಲಾವಣೆಯನ್ನುಂಟುಮಾಡುವನು. ಕಲೆ ಒಂದು ವ್ಯವಹಾರ ರೂಪವಾಗಿದೆ. ಆದ್ದರಿಂದ ಕಲೆಯಲ್ಲಿ ಕಾಲಾನುಕಾಲಕ್ಕೆ ಅನುಗುಣವಾದ ಬದಲಾವಣೆಗಳು ಬರುವುದು ಸ್ವಾಭಾವಿಕವಾಗಿದೆ. ಅಭಿವೃದ್ಧಿಗೆ ಸಹಾಯ ಮಾಡುವ ಕಲೆಗಳು ಸಾಂಸ್ಕೃತಿಕ ರಂಗದ ಸಂಶೋಧನೆಗಳಾಗಿವೆ.

### ಕಲಿಕಾ ಸಾಧನೆ

- ಕಲೆ ಎಂಬುದು ಕಾಲಾನುಕ್ರಮವಾಗಿ ಬದಲಾವಣೆಗೆ ಒಳಗಾಗುವುದು ಎಂದು ತಿಳಿಯುವುದು.

### ಆಶಯಗಳು, ತಿಳಿವಳಿಕೆ

- ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳು ಮನುಷ್ಯನಲ್ಲೂ ಅವನ ವ್ಯವಹಾರ ರೂಪಗಳಲ್ಲೂ ಬದಲಾವಣೆಗಳನ್ನುಂಟುಮಾಡುತ್ತದೆ.
- ಕಲೆಯು ಒಂದು ವ್ಯವಹಾರ ರೂಪವಾದ ಕಾರಣ ಶಿಲ್ಪ–ಚಿತ್ರಕಲೆಗಳಲ್ಲಿ ಕಾಲಘಟ್ಟಕ್ಕನುಸಾರವಾದ ಬದಲಾವಣೆಗಳು ಬಂದಿವೆ.

- ಕಲೆಯ ಮೂಲಕ ಆಶಯ ಮಟ್ಟದಲ್ಲೂ, ರಚನೆಯ ತಾಂತ್ರಿಕ ಮಟ್ಟದಲ್ಲೂ ಬದಲಾವಣೆ ಉಂಟಾಗುವುದು ಪರಿಷ್ಕೃತ ಸಮಾಜದ ಲಕ್ಷಣಗಳಾಗಿವೆ.
- ನಿಯಂತ್ರಿತವಾದ ಚೌಕಟ್ಟಿನಿಂದ ಸ್ವತಂತ್ರವಾದ ಮಟ್ಟಕ್ಕೆ ಕಲಾಗಾರ ತಲುಪಿದನೆಂದರೆ ಅದು ಕಾಲಘಟ್ಟದ ಬದಲಾವಣೆಯ ಸೂಚನೆಗಳಾಗಿವೆ.
- ಕಾಲಘಟ್ಟದ ಬದಲಾವಣೆಯಿಂದ ಉಂಟಾದ ತಾಂತ್ರಿಕ ಬದಲಾವಣೆಯ ಡಿಜಿಟಲ್ ರಚನೆಗಿರುವ ಸೂಚನೆಯಾಗಿದೆ.

**ಕಲಿಕಾ ಚಟುವಟಿಕೆಗಳು**

- ವಿವಿಧ ಕಾಲಘಟ್ಟವನ್ನು ಸೂಚಿಸುವಂತಹ ಚಿತ್ರಗಳನ್ನು ವೀಕ್ಷಿಸಲು ಸಂದರ್ಭವನ್ನು ಒದಗಿಸುವುದು.
    - ಗುಹಾ ಚಿತ್ರಗಳು
    - ಭಿತ್ತಿ ಚಿತ್ರಗಳು
    - ಚುಕ್ಕಿ ಚಿತ್ರಗಳು, ರಂಗೋಲಿ
    - ತೈಲ, ಕ್ಯಾನ್‌ವಾಸ್ ಚಿತ್ರಗಳು
    - ಡಿಜಿಟಲ್ ಚಿತ್ರಗಳು
- ನಿರೀಕ್ಷಣೆ ಮಾಡಿದ ಚಿತ್ರಗಳಲ್ಲಿ ಉಪಯೋಗಿಸಿ ಮಾಧ್ಯಮಗಳು ಕಾಲಘಟ್ಟಗಳನ್ನು ಸೂಚಿಸುವುದಿಲ್ಲವೇ?
- ಕಾಲಘಟ್ಟಗಳನ್ನು ಸೂಚಿಸುವ ಇತರ ಘಟಕಗಳು?
    - ಆಶಯಗಳ ಕ್ರಮೀಕರಣ
    - ಆಶಯಗಳ ವೈವಿಧ್ಯತೆ/ಸಂಪನ್ನತೆ
    - ಸಾಮಾಜಿಕ–ರಾಜಕೀಯ ವ್ಯವಸ್ಥೆಗಳು(ಸ್ಥಿತಿ)
    - ಸಾಂಸ್ಕೃತಿಕ ಸ್ಥಿತಿ
    - ಶೈಲಿಯಲ್ಲಿ ಉಂಟಾದ ಬದಲಾವಣೆಗಳು
- ಹೀಗೆ ಕಾಲಘಟ್ಟಕ್ಕೆ ಅನುಸರಿಸಿರುವ ಸಾಂಸ್ಕೃತಿಕ ಬದಲಾವಣೆಗಳು ಕಲಾರಚನೆಯಲ್ಲೂ ಕೂಡಾ ಪ್ರತಿಫಲಿಸಿವೆ.
- ಇದಕ್ಕೆ ಸಂಬಂಧಿಸಿ "ವಿವಿಧ ಕಾಲಘಟ್ಟಗಳಲ್ಲಿ ಕಲೆ" ಎಂಬ ಒಂದು ಟಿಪ್ಪಣಿ ತಯಾರಿಸಿದರೆ ಹೇಗೆ?
- ಈ ಟಿಪ್ಪಣಿಯಲ್ಲಿ ಏನೆಲ್ಲಾ ವಿಷಯಗಳು ಒಳಗೊಂಡಿರಬೇಕು?
- ವಿಭಿನ್ನ ಕಾಲಘಟ್ಟಗಳಲ್ಲಿ ಉಪಯೋಗಿಸುತ್ತಿದ್ದ ಮಾಧ್ಯಮಗಳು–ಕಾಲಘಟ್ಟದಲ್ಲಿ ಉಂಟಾದ ಬೆಳವಣಿಗೆಗಳು–ಕಾಲಘಟ್ಟದಲ್ಲಿ ಉಂಟಾದ ಬೆಳವಣಿಗೆಯನ್ನು ಸೂಚಿಸುತ್ತದೆ. ಕಾಲಘಟ್ಟದಲ್ಲಿ ಉಂಟಾದ ಈಬದಲಾವಣೆಯು ತಾಂತ್ರಿಕತೆಯ ಬೆಳವಣಿಗೆಯನ್ನು ಸೂಚಿಸುವುದು.
- ಮಾಧ್ಯಮಗಳೊಂದಿಗೆ ಆಶಯ ಪ್ರಕಟಣೆಗೂ ಬೆಳವಣಿಗೆಯುಂಟಾಗಿದೆ. ಗುಹಾಚಿತ್ರದ ಅಲ್ಲಲ್ಲಿ ಕಂಡುಬರುವ ರೇಖಾಚಿತ್ರಗಳು ಮುಂದೆ ಚಿಹ್ನೆಗಳು ಮುದ್ರೆಗಳತ್ತ ಬದಲಾಗಿದೆ. ಇದು ಆಶಯಮಂಡನೆ ಹಾಗೂ ಆಸ್ವಾದನಾ ಶೈಲಿಯಲ್ಲಿ ಬಂದಂತಹ ಬದಲಾವಣೆಗಳಾಗಿವೆ.

- ಸಂವೇದನಾತ್ಮಕ ಆಶಯಗಳಲ್ಲಿಯೂ ಬದಲಾವಣೆ ಉಂಟಾಗಿದೆ. ಗುಹಾಚಿತ್ರಗಳಲ್ಲಿ ಅಂದಿನ ಜೀವನಕ್ಕೆ ಆವಶ್ಯಕವಾದ ರೂಪಗಳನ್ನು ಚಿತ್ರೀಕರಿಸುತ್ತಿದ್ದರು. ಆದರೆ ಆಧುನಿಕ ಕಾಲದಲ್ಲಿ ಸಾಮಾಜಿಕ ವಿಚಾರಗಳ ಪ್ರತಿಕ್ರಿಯೆಗಳು ಬೆಳೆಯಿತು.
- ಈಗಿನ ಹೆಚ್ಚಿನ ಚಿತ್ರಗಳೂ ಕೂಡಾ ವೈಯಕ್ತಿಕವಾದ ಆಸ್ವಾದನೆ ಹಾಗೂ ಸಮಾಜದ ಬದಲಾವಣೆಗಳಿರುವುದಾಗಿದೆ.

### ಮೌಲ್ಯ ನಿರ್ಣಯ

- ವಿಮರ್ಶಾತ್ಮಕ ಭಾಗವಹಿಸುವಿಕೆ
- ಆಲ್ಬಂನ ಸಮಗ್ರತೆ
- ಸೆಮಿನಾರ್‌ನಲ್ಲಿರುವ ಆಶಯ ದೃಢತೆ

## ಯೂನಿಟ್–3 ಸ್ವತಂತ್ರ ರಚನೆ

ಕಲಾಚಟುವಟಿಕೆಗಳು ಸಾಮಾಜಿಕ ಬದಲಾವಣೆಗಳಿರುವ ಸಾಂಸ್ಕೃತಿಕ ಚಟುವಟಿಕೆಗಳಾಗಿವೆ. ಕಲೆಯ ಸೃಷ್ಟಿಯ ವೇಳೆ ಕಲಾಗಾರನು ಆತನ ಸಂತೃಪ್ತಿಗಿಂತ ಸಮಾಜದ ಜನರ ತೃಪ್ತಿಯ ಮೇಲೆ ಗಮನ ಹರಿಸುತ್ತಾನೆ. ವಿಮರ್ಶನಾತ್ಮಕ ಸಮಾಜವು ಕಲಾಸೃಷ್ಟಿಯ ಹಿರಿಮೆಗಳನ್ನು ಮೌಲ್ಯ ಮಾಪನ ಮಾಡುವುದು. ಸಮಾಜದಲ್ಲಿ ವಿವಿಧ ರೀತಿಯ ಶಕ್ತಿಗಳಿವೆ. ಇವುಗಳ ಕಾರ್ಯಚಟುವಟಿಕೆಗಳಿಂದ ಸಮಾಜದಲ್ಲಿ ಕೆಲವು ಅಸಮತೋಲನಗಳು ಉಂಟಾಗುವುದು. ಇಂತಹ ಅಸಮತೋಲನಗಳ ವಿರುದ್ಧ ಕಾರ್ಯವೆಸಗಿ ಸಮತೋಲನವನ್ನು ಕಾಪಾಡುವುದೇ ಈ ಕಲಾಸೃಷ್ಟಿಗಳ ಉದ್ದೇಶವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಸಮಾಜದ ಒಳಿತು ಕೆಡುಕುಗಳನ್ನು ತಿಳಿದುಕೊಂಡು ಕೆಡುಕುಗಳನ್ನು ಹೋಗಲಾಡಿಸಿ ಒಳಿತಿಗಾಗಿ ಕಾರ್ಯನಿರ್ವಹಿಸುವುದು ಅಥವಾ ಅದಕ್ಕಾಗಿರುವ ಆಶಯಗಳ ಪ್ರಚಾರವನ್ನು ನಡೆಸುವುದುಕಲೆ ನಡೆಸುವ ಸಾಂಸ್ಕೃತಿಕ ಚಟುವಟಿಕೆಯಾಗಿದೆ. ಚಿತ್ರ–ಶಿಲ್ಪ ಕಲೆಗಳಿಗೂ ಕೂಡ ಈ ಮಂಡಲದಲ್ಲಿ (ವಿಭಾಗದಲ್ಲಿ) ಅತಿ ಹೆಚ್ಚು ಕಾರ್ಯಗಳನ್ನು ಮಾಡಲು ಸಾಧ್ಯವಿದೆ. ಇದು ಕಲಾವಿದನ ಸಾಮಾಜಿಕ ಹೊಣೆ ಕೂಡಾ ಆಗಿದೆ. ಯಾವನೇ ಒಬ್ಬ ವ್ಯಕ್ತಿಗೂ ತನ್ನ ಸಮಾಜದಲ್ಲಿ ಉಂಟಾಗುವ ಒಳಿತು ಕೆಡುಕುಗಳಿಗೆ ಸ್ವಂತ ಕ್ಷೇತ್ರ ರೀತಿಯನ್ನು ಉಪಯೋಗಿಸಿಕೊಂಡು ಪ್ರತಿಕ್ರಿಯಿಸಲಿರುವ ಸಾಮರ್ಥ್ಯ ಇರಬೇಕು.

### ಕಲಿಕಾ ಸಾಧನೆ

- ಸ್ವತಂತ್ರ ರಚನೆಯ ಮೂಲಕ ಸೃಜನಶೀಲತೆ ಹಾಗೂ ಆತ್ಮ ತೃಪ್ತಿಯನ್ನು ಪಡೆಯುವುದು

### ಆಶಯ/ತಿಳುವಳಿಕೆ

- ಶಿಲ್ಪ–ಚಿತ್ರರಚನೆಗಳನ್ನು ಸಮಾಜದ ಒಳಿತಿಗಾಗಿ ಉಪಯೋಗಿಸುವುದು ಪರಿಷ್ಕೃತ ಆಧುನಿಕ ಜನತೆಯ ಸಾಂಸ್ಕೃತಿಕ ಸಂಕೇತವಾಗಿದೆ.
- ಸಮಾಜದಲ್ಲಿ ಕಂಡು ಬರುವಂತಹ ಅನೀತಿಗಳಿಗೆದುರಾಗಿ ಕಾರ್ಯ ವೆಸಗಲು ಶಿಲ್ಪ–ಚಿತ್ರ ರಚನೆಗಳಿಗೆ ಸಾಧ್ಯ.
- ಶಿಲ್ಪ–ಚಿತ್ರ ರಚನೆಗಳು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಬೇಕಾಗಿ ಸಮಾಜದ ಗಮನವನ್ನು ತನ್ನ ಕಡೆಗೆ ಸೆಳೆಯುತ್ತದೆ.

- ಕಲಾಗಾರನಿಗೆ ಹಾಗೂ ಕಲೆಗೆ ಕೆಲವು ಸಾಮಾಜಿಕ ಜವಾಬ್ದಾರಿಗಳಿವೆ. ಅದನ್ನು ನೆರವೇರಿಸಿದಾಗ ಮಾತ್ರ ಕಲಾವಿದನು ಒಬ್ಬ ಸಮಾಜ ಜೀವಿಯಾಗುವನು.

**ಕೌಶಲ್ಯಗಳು**

- ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವುದು, ಒಳಿತು ಕೆಡುಕುಗಳನ್ನು ತಿಳಿಯುವ ಸಾಮರ್ಥ್ಯ
- ಸಾಮಾಜಿಕ ಸಮಸ್ಯೆಗಳಿಗೆದುರಾಗಿ ತನ್ನ ಮಾಧ್ಯಮದ ಮೂಲಕ ಪ್ರತಿಕ್ರಿಯಿಸುವುದು
- ಅಗತ್ಯಕ್ಕನುಸರಿಸಿ ತನ್ನ ಮಾಧ್ಯಮವನ್ನು ಬಳಸಲಿರುವ ಸಾಮರ್ಥ್ಯ

**ಕಲಿಕಾ ಚಟುವಟಿಕೆಗಳು**

***ಹಂತ–1 ಓದು ಚಿತ್ರ ಓದು***

- ಸಾಮಾಜಿಕ ಸಮಸ್ಯೆಗಳನ್ನು (ಸಮಸ್ಯೆಗಳು ಪ್ರತಿಬಿಂಬಿಸುವಂತೆ ರಚಿಸಲ್ಪಟ್ಟ) ಮುಂದಿಟ್ಟುಕೊಂಡು ರಚಿಸಿದ ಕೆಲವು ಚಿತ್ರಗಳ ಪ್ರತಿಗಳನ್ನು ವೀಕ್ಷಿಸುವುದು.
- ಈ ಚಿತ್ರದಲ್ಲಿ ನಮಗೆ ಏನೆಲ್ಲಾ ಗಮನಿಸಬಹುದು? ಚರ್ಚೆ.
- ಇಂತಹ ಚಿತ್ರವನ್ನು ರಚಿಸಲು ಕಲಾಗಾರನಿಗೆ ಪ್ರೇರಣೆ ನೀಡಿದ ಘಟಕಗಳೇನಾಗಿರಬಹುದು?
- ಸಾಮಾಜಿಕ ಸಮಸ್ಯೆಯ ಕಡೆಗೆ ಚರ್ಚೆಯನ್ನು ಮುಂದುವರಿಸುವುದು.
- ಸಮಾಜದ ಶೋಚನೀಯಾವಸ್ಥೆಗೆ ಎದುರಾಗಿ/ಅಸಮಾನತೆಗೆದುರಾಗಿ ಜನರ ಗಮನವನ್ನು ಸೆಳೆಯಲು, ಜನರಲ್ಲಿ ಅದಕ್ಕೆದುರಾದ ಭಾವನೆಯನ್ನು ಸೃಷ್ಟಿಸಲು ಕಲಾಗಾರನಿಗೆ ಸಾಧ್ಯವಾಗವುದು. ಇದಕ್ಕಾಗಿ ಅವನು ತನ್ನ ಮಾಧ್ಯಮವನ್ನು ಉಪಯೋಗಿಸುವನು.
- ಸಾಮಾಜಿಕ ಒಳಿತನ್ನು ಗುರಿಯಾಗಿರಿಸಿಕೊಂಡು ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸಲು ಬೇಕಾಗಿ ನಡೆಸಿದ ಸಾಮಾಜಿಕ ಚಟುವಟಿಕೆಯಲ್ಲಿ ಉಪಯೋಗಿಸಿದ ಮಾಧ್ಯಮ, ಶೈಲಿ, ರೂಪಗಳು, ಅವುಗಳ ವಿನ್ಯಾಸ/ಕ್ರಮೀಕರಣ, ಬಣ್ಣಗಳು ಇವುಗಳ ಬಗ್ಗೆ ಚರ್ಚೆ ನಡೆಸುವುದು.

***ಹಂತ–2 : ಸ್ವತಂತ್ರ ಚಿತ್ರ ರಚನೆ ನಡೆಸುವುದು***

- ಕಲಾ ಚಟುವಟಿಕೆಯ ಸಾಮಾಜಿಕ ಜವಾಬ್ದಾರಿಯು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವುದಾಗಿದೆಯಲ್ಲವೇ?
- ತರಗತಿಯಲ್ಲಿ ಪ್ರತಿ ಬೆಂಚಿಗೆ ಒಂದೊಂದು ಆ ದಿನದ ವಾರ್ತಾ ಪತ್ರಿಕೆಯನ್ನು ವಿತರಿಸುವುದು
- ಪತ್ರಿಕೆಯಲ್ಲಿ ಅಡಕವಾಗಿರುವ ಮುಖ್ಯವಾದ ಸಾಮಾಜಿಕ ಸಮಸ್ಯೆಗಳು ಯಾವುವು?
- ಮಕ್ಕಳು ಪಟ್ಟಿ ಮಾಡಿ ಮಂಡಿಸುವುದು
- ಎಲ್ಲಾ ಗುಂಪು ಗುರುತಿಸಿದ ಒಂದು ಸಾಮಾಜಿಕ ಸಮಸ್ಯೆಯನ್ನು ಆಯ್ಕೆ ಮಾಡಿ ಬೋರ್ಡ್‌ನಲ್ಲಿ ದಾಖಲಿಸುವುದು
- ಈ ಸಮಸ್ಯೆಯ ಕುರಿತಾಗಿ ನಿಮಗಿರುವ ಅಭಿಪ್ರಾಯವೇನು?
- ಈ ಸಮಸ್ಯೆಗೆದುರಾಗಿ ಪ್ರತಿಕ್ರಿಯಿಸುವಂತಹ ಒಂದು ಚಿತ್ರವನ್ನು ರಚಿಸಬಹುದೇ?
- ಹಾಗಾದರೆ ಆ ಚಿತ್ರದಲ್ಲಿರಬೇಕಾದ ರೂಪಗಳು, ಚಿಹ್ನೆಗಳು ಯಾವುವು?
- ಆ ಚಿತ್ರದಿಂದಾಗಿ ಪ್ರೇಕ್ಷಕನಲ್ಲಿ ಮೂಡಬಹುದಾದ ಆಶಯಗಳು ಯಾವುವು?

- ಹಾಗಾದರೆ ಅವುಗಳನ್ನು ಹೇಗೆ ಚಿತ್ರದಲ್ಲಿ ಕ್ರಮೀಕರಿಸಬೇಕು?
- ಮಕ್ಕಳು ರೂಪುರೇಶೆಯನ್ನು ತಯಾರಿಸುವರು.
- ರಚಿಸಿದ ರೂಪು ರೇಷೆಗನುಸರಹಿಸಿ ಚಿತ್ರವನ್ನು ಪೂರ್ತಿಗೊಳಿಸಲು ಸಾಧ್ಯವೇ?
- ಮಕ್ಕಳು ಚಿತ್ರ ರಚಿಸುವರು. ತರಗತಿಯ ಆರ್ಟ್ ಗ್ಯಾಲರಿಯಲ್ಲಿ ಅದನ್ನು ಪ್ರದರ್ಶಿಸುವುದು.

## ಮೌಲ್ಯ ನಿರ್ಣಯ

- ಆಶಯ ಪ್ರಕಟಣೆಯ ಸಾಮರ್ಥ್ಯ
- ಸಮಗ್ರತೆ
- ಆಕರ್ಷಣೆ
- ಸೃಜನಾತ್ಮಕತೆ

# ಯೂನಿಟ್-4 : ಚಿತ್ರರಚನೆ (Illustration)

ಚಿತ್ರರಚನಾ ವಿಭಾಗದಲ್ಲಿ ಕತೆ ಕವಿತೆಗಳಿಗೆ ಅಗತ್ಯವಾಗಿರುವ ಚಿತ್ರೀಕರಣವನ್ನು ಮಾಡುವುದು ಸಮಕಾಲೀನ ಪ್ರಾಧಾನ್ಯತೆಯನ್ನು ಹೊಂದಿರುವ ಸಂಕೇತವಾಗಿದೆ. ಕಥೆ/ಕವಿತೆಯ ಆಶಯಕ್ಕೆ ಅನುಗುಣವಾಗಿರುವ ಈ ಚಿತ್ರಗಳನ್ನು ವೀಕ್ಷಕನಿಗೆ ನೈಜ ಅನುಭವವನ್ನು ನೀಡಲು ಕತೆ ಕವಿತೆಗಳಲ್ಲಿ ಇವುಗಳನ್ನು ಒಳಗೊಳ್ಳಿಸಲಾಗುವುದು. ಇದು ಒಂದೇ ಚಿತ್ರದಲ್ಲಿ (scene) ಕಥೆಯಲ್ಲಿರುವ ಅಥವಾ ಕವಿತೆಯಲ್ಲಿರುವ ಆಶಯವನ್ನು ಚಿತ್ರೀಕರಿಸುವ ರೀತಿಯಾಗಿದೆ. ಆ ಚಿತ್ರೀಕರಣವನ್ನು ನೋಡುವಾಗ ಓದುವಾತನಿಗೆ ಸಾಮಾನ್ಯ ಕಥೆಯ ಆಶಯವು ಅರ್ಥವಾಗುವುದು. ಈ ವಿಭಾಗದಲ್ಲಿ ಭಾವನೆ ಹಾಗೂ ಸೃಜನಾತ್ಮಕತೆ ಅತೀ ಹೆಚ್ಚು ಅವಶ್ಯಕವಾಗಿದೆ. ಚಿತ್ರೀಕರಿಸುವ ಪ್ರತಿ ಹಂತದಲ್ಲೂ ಆಶಯದೊಂದಿಗೆ ಇರುವ ಸಾಮ್ಯತೆಯನ್ನು ತುಲನೆ ಮಾಡುತ್ತಿರಬೇಕು. ಕಥಾ ಪಾತ್ರ, ಭಾವನೆ, ವೇಷ, ಹಿನ್ನೆಲೆ, ಚಲನೆ ಮೊದಲಾದ ಎಲ್ಲಾ ಅಂಶಗಳನ್ನು ಕಥೆಯ ಸಾರಕ್ಕೆ ಹೊಂದಿಕೆಯಾಗಿರಬೇಕು. ಸಮಕಾಲೀನ ಪ್ರಕಟಣೆಗಳಲ್ಲಿ ಈ ರೀತಿಯ ರಚನೆಗೆ ಹೆಚ್ಚಿನ ಸ್ಥಾನವಿದೆ. ಕೆಲವೊಮ್ಮೆ ಚಿತ್ರೀಕರಣವನ್ನು ನೋಡಿ ಮಾತ್ರ ಪ್ರಸಿದ್ಧಿ ಪಡೆದ ಕೆಲವು ಪ್ರಕಟಣೆಗಳು ಕನ್ನಡದಲ್ಲಿವೆ. ಶೈಲಿ, ಭಾವನೆಯು ಅತೀ ಹೆಚ್ಚು ಆಕರ್ಷಿಸುವ ವಿಷಯವಾಗಿದೆ.

## ಕಲಿಕಾ ಸಾಧನೆ

- ಆಶಯಗಳನ್ನು ಅರ್ಥೈಸಿಕೊಂಡು ಚಿತ್ರ, ಶಿಲ್ಪಗಳನ್ನು ರಚಿಸುವುದು.

## ಒಳಹೂರಣ

- ಕಥೆ, ಕವಿತೆ, ನಾಟಕ ಎಂಬಿವುಗಳಿಗೆ ಯೋಗ್ಯವಾದ ಭಾವನಾತ್ಮಕ ಚಿತ್ರೀಕರಣ ಮಾಡುವುದು
- ಈ ಸಾಹಿತ್ಯ ಸೃಷ್ಟಿಗಳನ್ನು ಸಂಪನ್ನಗೊಳಿಸುವುದು, ಆಕರ್ಷಕವಾಗಿ ಮಾಡುವುದು
- ಭಾವನಾತ್ಮಕ ಚಿತ್ರೀಕರಣಕ್ಕೆ ಭಾವನೆ, ವೇಷ ಹಿನ್ನಲೆ ಎಂಬಿವುಗಳನ್ನು ಕಥಾ ತಂತುವಿನೊಂದಿಗೆ ಸರಿಹೊಂದಬೇಕು.
- ಭಾವನಾತ್ಮಕ ಮತ್ತು ಸೃಜನಾತ್ಮಕತೆ ಅತಿ ಹೆಚ್ಚು ಆವಶ್ಯಕವಾಗಿರುವ ವಿಭಾಗವಾಗಿದೆ.

## ನೈಪುಣ್ಯ

- ಆಶಯಕ್ಕೆ ಪೂರಕವಾದ ಮನೋಚಿತ್ರ ಮಾಡಲಿರುವ ಸಾಮರ್ಥ್ಯ
- ಭಾವನೆ, ವೇಷ ಪ್ರತ್ಯೇಕತೆಯೊಂದಿಗೆ ಮನುಷ್ಯ ರೂಪವನ್ನು ಚಿತ್ರಿಸಲಿರುವ ಸಾಮರ್ಥ್ಯ

## ಕಲಿಕಾ ಚಟುವಟಿಕೆಗಳು

### *ಪ್ರಕ್ರಿಯೆ – 1*

- ಸಮಕಾಲೀನ ಪ್ರಕಟಣೆಯಲ್ಲಿರುವ ಯಾವುದಾದರೂ ಆಶಯಕ್ಕೆ ಸಂಬಂಧಿಸಿ ರಚಿಸಿದ ಚಿತ್ರಗಳನ್ನು ಪರಿಚಯಿಸುವುದು



- ಆನುಕಾಲಿಕ ಪ್ರಕಟಣೆಗಳು ಲಭಿಸುವುದು.
- ಅದರಲ್ಲಿರುವ ಯಾವುದಾದರೂ ಕಥೆ ಅಥವಾ ಕವಿತೆಯನ್ನು ಓದುವುದು
- ಆಶಯವನ್ನು ರೂಪಿಸುವುದು
- ಪ್ರಧಾನ ಘಟನೆ/ಆಶಯವನ್ನು ಕಂಡು ಹಿಡಿದು ರಚಿಸಿದ ಚಿತ್ರವನ್ನು ವೀಕ್ಷಿಸುವುದು
- ಈ ಚಿತ್ರವನ್ನು ರಚಿಸಲು ಚಿತ್ರಗಾರನಿಗೆ ಏನೆಲ್ಲಾ ಆವಶ್ಯಕವಾಗಿದೆ?
  - ಕಥೆಯ ಸನ್ನಿವೇಶದ ಹಿನ್ನೆಲೆ
  - ಕಥೆಯ ಪ್ರಧಾನ ಸನ್ನಿವೇಶ
  - ಕಥಾ ತಂತು, ಕಥಾ ಪಾತ್ರ, ವೇಷ, ಭಾವನೆ, ಚಲನೆ, ಪ್ರಾಯ
- ಈ ಮೇಲೆ ಹೇಳಿದ ವಿಷಯಗಳಿಗೆ ಮಹತ್ವ ನೀಡಿ ಚರ್ಚೆಯನ್ನು ಕೊನೆಗೊಳಿಸಬೇಕು

### ಪ್ರಕ್ರಿಯೆ–2

- ಕಥೆ/ಕವಿತೆಗಳಲ್ಲಿರುವ ಆಶಯಗಳಿಗೆ ಮನೋಚಿತ್ರ ರಚಿಸುವುದು

- ಚಿತ್ರಗಳಿಲ್ಲದ ಸಣ್ಣ ಕಥೆ/ಕವಿತೆಗಳನ್ನು ಗುಂಪುಗಳಿಗೆ ನೀಡುವುದು
- ಈ ಕಥೆ/ಕವಿತೆಯ ಪ್ರಧಾನ ಸನ್ನಿವೇಶಗಳ ಕುರಿತು ಚರ್ಚೆ
- ಈ ಕಥೆ/ಕವಿತೆಯಲ್ಲಿನ ಪ್ರಧಾನ ಸನ್ನಿವೇಶಗಳನ್ನು ಚಿತ್ರೀಕರಿಸುವಾಗ ಹಿನ್ನೆಲೆಯಲ್ಲಿ ಏನೇನಿರಬೇಕು?
- ಕಥಾ ಪಾತ್ರಗಳು, ವೇಷ, ಭಾವ, ಚಲನೆ, ಪ್ರಾಯ–ಚರ್ಚೆ
- ನಿಮ್ಮ ಮನಸ್ಸಲ್ಲಿ ಒಂದು ನಿಶ್ಚಲ ಚಿತ್ರವುಂಟಾಯಿತಲ್ಲವೇ? ಒಳಗೊಂಡಿರುವ ಆಶಯಗಳನ್ನು ಒತ್ತಿ ಹೇಳಿ ಚರ್ಚೆಯನ್ನು ಕೊನೆಗೊಳಿಸುವುದು

**ಪ್ರಕ್ರಿಯೆ–3**

- ಆಶಯಕ್ಕನುಸರಿಸಿ ಚಿತ್ರರಚನೆ
- ನಿಮ್ಮ ಮನಸ್ಸಲ್ಲಿ ರೂಪುಗೊಂಡಿರುವ ಚಿತ್ರವನ್ನು ಬಿಡಿಸಿ ನೋಡೋಣವೇ?
- ಚಿತ್ರ ರಚನೆಗೆ ಸಮಯವೊದಗಿಸುವುದು
- ಚಿತ್ರ ರಚನೆಯ ನಂತರ ಚಿತ್ರ ಪ್ರದರ್ಶನ, ಮೌಲ್ಯ ನಿರ್ಣಯ

### ಮೌಲ್ಯ ನಿರ್ಣಯ

- ಭಾವನಾಪೂರ್ಣವಾಗಿದೆ
- ಆಶಯಕ್ಕೆ ಹೊಂದಿಕೊಂಡಿದೆ
- ಪೂರ್ಣತೆ
- ವೇಷ, ಭಾವ, ಚಲನೆ, ಪ್ರಾಯ ಇತ್ಯಾದಿಗಳ ವ್ಯಕ್ತವಾಗಿವೆ.
- ಸಮಗ್ರವಾಗಿದೆ.

## ಯೂನಿಟ್–5 : ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ

ಚಿತ್ರಗಳು ಕಾಲಘಟ್ಟದ ಕನ್ನಡಿಗಳಿದ್ದಂತೆ. ಒಂದು ಚಿತ್ರವು ಪ್ರತಿಬಿಂಬಿಸುವ ಸಂಕೇತಗಳು ಆ ಕಾಲಘಟ್ಟದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ರಂಗದ ಬದಲಾವಣೆಗಳನ್ನು ತೋರಿಸುವ ಆಶಯಗಳ ವ್ಯಕ್ತಪಡಿಸುವಿಕೆಯಾಗಿದೆ. ಆದ್ದರಿಂದ ಚಿತ್ರಗಳನ್ನು ರಚಿಸಿದ ಕಾಲಘಟ್ಟದ ವಿಶೇಷತೆಗಳನ್ನು ಅರ್ಥ ಮಾಡಿಕೊಂಡು ಕಲಿಯಬೇಕು ಮತ್ತು ಓದಬೇಕು. ಮಾತ್ರವಲ್ಲ ಅನುಕೂಲಕರ ಹಾಗೂ ಪ್ರತಿಕೂಲವಾದ ಅಭಿಪ್ರಾಯಗಳನ್ನು ದೃಷ್ಟಿ ಮೇಲಿರುವ ನಮ್ಮ ದೃಷ್ಟಿಕೋನವು ಆ ಕಾಲಘಟ್ಟದ ದೃಷ್ಟಿಕೋನದ ಜತೆಗೆ ಪ್ರತಿಕೂಲಕರವೋ ಅನುಕೂಲಕರವೋ ಎಂಬುದನ್ನು ಸೂಚಿಸುತ್ತದೆ.

### ಕಲಿಕಾ ಸಾಧನೆ

- ಚಿತ್ರವನ್ನು ನಿರೀಕ್ಷಣೆ ಮಾಡಿ ಅಭಿಪ್ರಾಯ ಮತ್ತು ನಿಲುವನ್ನು ವ್ಯಕ್ತಪಡಿಸುವುದು

### ಆಶಯ/ತಿಳುವಳಿಕೆ

- ಚಿತ್ರವು ಕಾಲಘಟ್ಟದ ಪ್ರತಿನಿಧಿಯಾಗಿದೆ.
- ಕಾಲಘಟ್ಟದೊಂದಿಗೆ ಹೊಂದಾಣಿಕೆಯಾಗದ್ದು ನೆಲೆನಿಲ್ಲದು.
- ನಿರೀಕ್ಷಣೆ ಮಾಡಿ ಸರಿ ತಪ್ಪುಗಳನ್ನು ಚರ್ಚೆ ಮಾಡಬೇಕು

- ಚಿತ್ರದ ಮೂಲಕ ಆ ಕಾಲಘಟ್ಟದ ಆಗುಹೋಗುಗಳನ್ನು ಅರ್ಥೈಸಿಕೊಂಡು ಕಲಿಯಬಹುದು.

## ಕಲಿಕಾ ಚಟುವಟಿಕೆಗಳು

**ಹಂತ–1**

- ಪ್ರಸಿದ್ಧವಾದ ಚಿತ್ರಗಳನ್ನು ಪ್ರದರ್ಶಿಸುವುದು (ಎಲ್‌ಸಿಡಿ/ಪ್ರಿಂಟ್ ತಾಂತ್ರಿಕತೆಗಳನ್ನು ಉಪಯೋಗಿಸಬಹುದು)

ಉದಾ:

| | |
|---|---|
| Here papa comes | : Ravivarma |
| The Screws | : Edward munch |
| Still life with Pepsi | : Bhagyanath |
| A train from the past | : Sudheer |

- ಈ ಚಿತ್ರಗಳು ನಿಮ್ಮಲ್ಲಿ ಉಂಟು ಮಾಡುವ ಆಶಯಗಳೇನು?
- ಇವುಗಳನ್ನು ರಚಿಸಿದ ಕಾಲಘಟ್ಟ/ ಅದರ ವಿಶೇಷತೆಗಳು ಏನೆಲ್ಲಾ?
- ಚರ್ಚೆ, ಟಿಪ್ಪಣಿ ತಯಾರಿಸುವುದು
- ಉತ್ತಮಗೊಳಿಸಲು ಲೈಬ್ರರಿ, ಇಂಟರ್‌ನೆಟ್, ಚಿತ್ರ–ಚರಿತ್ರೆಗಾರರ ಸಹಾಯವನ್ನು ಕೂಡ ಪಡೆಯಬಹುದು
- ಉತ್ತಮಗೊಳಿಸಿದ ಟಿಪ್ಪಣಿಯನ್ನು ಮಂಡಿಸುವುದು
- ಚರ್ಚೆ ನಡೆಸುವುದು, ಕ್ರೋಢೀಕರಿಸುವುದು

  ಉದಾ:

  Here papa comes : Ravivarma

  - ಅಮ್ಮ ಮಗುವನ್ನು ಎತ್ತಿಕೊಂಡು ತಂದೆಯನ್ನು ಕಾದು ನಿಲ್ಲುತ್ತಿದ್ದಾಳೆ. ಅಳಿಯಕಟ್ಟು ಕಾಲಘಟ್ಟ, ತಂದೆಯ ಆಸ್ತಿ ಮತ್ತು ಸಂಪಾದನೆಗಳು ಅಳಿಯಂದಿರಿಗೆ ಮಾತ್ರ ಸ್ವಂತವಾಗುವುದು. ಆಗ ಅಮ್ಮ ತನ್ನ ಮಗನನ್ನು ಎತ್ತಿ ತಂದೆಯನ್ನು ಅಲ್ಲ ಬದಲಾಗಿ ಮಾವನನ್ನು ಕಾದು ನಿಲ್ಲುತ್ತಿರುವಳು.
  - ರವಿವರ್ಮನು ಅಳಿಯಕಟ್ಟು ಪದ್ಧತಿಗೆ ವಿರೋಧಿಯಾಗಿದ್ದನು. ಆಗ ರವಿವರ್ಮ ಚಿತ್ರಗಾರನಿಗಿಂತಲೂ ಸಮಾಜ ಸುಧಾರಕರಾಗಿದ್ದರು.

- ನೀವು ಯಾವ ಸಂಪ್ರದಾಯವನ್ನು ಅಂಗೀಕರಿಸುವಿರಿ? ಅಳಿಯಕಟ್ಟು ಅಥವಾ ಮಕ್ಕಳ ಕಟ್ಟು ಚರ್ಚೆ
- ತಮ್ಮ ತಮ್ಮ ಅಭಿಪ್ರಾಯಗಳನ್ನು ಉದಾಹರಣೆ ಸಹಿತ ವಿವರಿಸುವುದು.

**ಹಂತ–2**

- ಮೊದಲು ಪ್ರದರ್ಶಿಸಿದ ಚಿತ್ರಗಳು ಆಶಯಪರವಾಗಿ ಸಾಮ್ಯತೆಯನ್ನು ಹೊಂದಿವೆಯಾ?
- ಚಿತ್ರದಲ್ಲಿರುವ ಆಶಯಗಳನ್ನು ಕೇಂದ್ರವಾಗಿರಿಸಿಕೊಂಡು ಒಂದು ಸೆಮಿನಾರ್ ನಡೆಸುವುದು
- ಚಿತ್ರ–ಚಿತ್ರಗಾರ–ಮಾಧ್ಯಮ
- ಕಾಲಘಟ್ಟ, ಸಾಂಸ್ಕೃತಿಕ ರಂಗ, ಶಿಥಿಲತೆ, ಪ್ರತಿಕ್ರಿಯೆ, ಸ್ವಂತ ಅಭಿಪ್ರಾಯ

- ಗುಂಪಿನಲ್ಲಿ ಸೆಮಿನಾರ್ ಪ್ರಬಂಧವನ್ನು ತಯಾರು ಮಾಡುವುದು.

### ಮೌಲ್ಯನಿರ್ಣಯ

- ಚಿತ್ರದ ಮೂಲಕ ಚರಿತ್ರೆಯ ಕಲಿಕೆ
- ಚರಿತ್ರೆಯಲ್ಲಿರುವ ಒಳಿತು–ಕೆಡುಕುಗಳನ್ನು ಗುರುತಿಸುವುದು
- ಸ್ವಂತ ಅಭಿಪ್ರಾಯಗಳನ್ನು ಪ್ರಕಟಪಡಿಸಲು, ದೃಢೀಕರಿಸಲ, ಸಾಕ್ಷ್ಯಗಳೊಂದಿಗೆ ಅವುಗಳನ್ನು ಸಾಬೀತು ಪಡಿಸಲಿರುವ ಸಾಮರ್ಥ್ಯ
- ಸಾಮಾಜಿಕ ಪ್ರತಿಕ್ರಿಯಾ ಸಾಮರ್ಥ್ಯ

## ಯೂನಿಟ್–6 : ಚಿತ್ರರಚನೆ–ಕಂಪ್ಯೂಟರಿನ ಮೂಲಕ

ಕಂಪ್ಯೂಟರ್‌ನ ಮೂಲಕ ಉಪಯೋಗಿಸಿರುವ ಚಿತ್ರರಚನಾ ರೀತಿ (ಡಿಜಿಟಲ್ ಆರ್ಟ್) ಈಗ ಸಾರ್ವತ್ರಿಕವಾಗಿ ಹಬ್ಬಿಕೊಂಡಿದೆ. (ಔದ್ಯಮಿಕ) ಚಿತ್ರಕಲಾ ಉದ್ಯಮದಲ್ಲಿ (ಅಪ್ಲೈಡ್ ಆರ್ಟ್) ಪ್ರಧಾನ ಮಾಧ್ಯಮವು ಕಂಪ್ಯೂಟರ್ ಹಾಗೂ ಅನುಬಂಧ ಉಪಕರಣಗಳಾಗಿವೆ. ಕಂಪ್ಯೂಟರ್‌ನಲ್ಲಿ ಮಾಡಿದ ಚಿತ್ರವನ್ನು ಪೇಪರ್, ಕ್ಯಾನ್‌ವಾಸ್, ಫ್ಲೆಕ್ಸ್ ಎಂಬೀ ಯಾವುದೇ ಸಮತಲ ಮೇಲ್ಮೈ ಪ್ರಿಂಟ್ ತೆಗೆಯಲಿರುವ ಸೌಲಭ್ಯಗಳು ಇಂದು ಲಭ್ಯಯವಿದೆ.

ಇನ್‌ಫ಼ೋರ್ ಮೇಷನ್ ಟೆಕ್ನೋಲಜಿ ಬೇಸ್‌ಡ್ ಆರ್ಟ್ ಎಂಬುದು ಹೊಸ ತಲೆಮಾರಿನಲ್ಲಿರುವವರಿಗೆ ಒಂದು ವೃತ್ತಿ ಕ್ಷೇತ್ರವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ಆಶಯಗಳನ್ನು ಚಿತ್ರ ರೂಪದಲ್ಲಿ ಪ್ರಕಟಿಸುವಾಗ ಆಧುನಿಕ ತಾಂತ್ರಿಕತೆಗಳನ್ನು ಉಪಯೋಗಿಸಬೇಕು.

### ಕಲಿಕಾ ಸಾಧನೆ

- ಚಿತ್ರ ಕಲೆಗೆ ಸಂಬಂಧಿಸಿದ ಸೋಫ್ಟ್‌ವೇರ್‌ನ್ನುಉಪಯೋಗಿಸಿ ಚಿತ್ರ ರಚಿಸುವುದು.

### ಆಶಯ/ತಿಳುವಳಿಕೆ

- ಚಿತ್ರ ರಚನೆಗೆ ಕಂಪ್ಯೂಟರಲ್ಲಿ ಸೋಫ್ಟ್‌ವೇರ್‌ಗಳಿವೆ.
- ಕಂಪ್ಯೂಟರಲ್ಲಿ ಮಾಡಿದ ಚಿತ್ರವನ್ನು ಪೇಪರ್, ಕ್ಯಾನ್‌ವಾಸ್, ಫ್ಲೆಕ್ಸ್ ಎಂಬೀ ಯಾವುದೇ ಸಮತಲ ಮೇಲ್ಮೈಯಲ್ಲಿ ಪ್ರಿಂಟ್ ತೆಗೆಯಲಿರುವ ತಂತ್ರಜ್ಞಾನ ಇಂದು ಲಭ್ಯವಿದೆ.
- ಕಂಪ್ಯೂಟರ್‌ನಲ್ಲಿ ಚಿತ್ರಗಳು ಮಾತ್ರವಲ್ಲ, ಜಾಹೀರಾತು ಫಲಕಗಳು, ಫ್ಲೆಕ್ಸ್, ಬ್ಯಾನರ್ ಮೊದಲಾದ ಎಲ್ಲಾ ಅಪ್ಲೈಡ್ ಆರ್ಟ್ ಫೋಮ್ ಕೂಡ ಮಾಡಲು ಸಾಧ್ಯವಿದೆ.

### ಕಲಿಕಾ ಚಟುವಟಿಕೆಗಳು

**ಹಂತ–1**

- ಕಂಪ್ಯೂಟರ್‌ನಲ್ಲಿ ಸೋಫ್ಟ್‌ವೇರ್ ಬಳಸಿ ರಚಿಸಿದ ಕೆಲವು ಚಿತ್ರಗಳನ್ನು ಪ್ರದರ್ಶಿಸುವುದು.
- ಈ ಚಿತ್ರಗಳನ್ನು ರಚಿಸಲು ಬಳಸಿದ ಸೋಫ್ಟ್‌ವೇರ್‌ಗಳ ಪರಿಚಯವಿದೆಯೇ? ಚರ್ಚೆ

- ಕಂಪ್ಯೂಟರ್–ಜಿಂಪ್ ಸೋಫ್ಟ್‌ವೇರ್
- ಜಿಂಪ್ ಸೋಫ್ಟ್‌ವೇರ್‌ನಲ್ಲಿ ಚಿತ್ರಗಳನ್ನು ರಚಿಸಬಹುದೇ?
- ರಚಿಸಬೇಕಾದ ಚಿತ್ರದ ಸ್ಕೆಚ್ ಪೇಪರ್‌ನಲ್ಲಿ ತಯಾರು ಮಾಡುವುದು.

**ಹಂತ–2**

- ಜಿಂಪ್ ಸೋಫ್ಟ್‌ವೇರ್‌ನ್ನು ತೆರೆಯುವುದು
- ರಚಿಸಲಿರುವ ಕ್ಯಾನ್‌ವಾಸ್‌ನ್ನು ತಯಾರಿಸುವುದು
- (ಮೋಡ್, ಸೈಜ್(size), resolution ಎಂಬಿವುಗಳನ್ನು ತಯಾರು ಮಾಡುವುದು)
- ಬ್ರಷ್ ಟೂಲ್ ಉಪಯೋಗಿಸಿ ಚಿತ್ರರಚನೆ ಮಾಡುವುದು.
- (ಟೆಕ್ಸ್ಚರ್, special effect, rendor ಇವುಗಳನ್ನು ಉಪಯೋಗಿಸಬಹುದು)
- ಬಣ್ಣವನ್ನು ನೀಡಿ, ಎಕ್ಸ್‌ಪೋರ್ಟ್ ಮಾಡುವುದು.
- folder ಅಲ್ಲಿ ಫೈಲ್ ಹೆಸರು ಹಾಕಿ ಸೇವ್ ಮಾಡುವುದು.
- ಪ್ರದರ್ಶಿಸುವುದು. ಸ್ವ–ಪರಸ್ಪರ ಮೌಲ್ಯ ಮಾಪನ ಮಾಡುವುದು.
- ಮೌಲ್ಯ ಮಾಪನದ ಬಳಿಕ ಇರುವ ನ್ಯೂನತೆಗಳನ್ನು ಹೋಗಲಾಡಿಸಿ ಹೊಸ ಚಿತ್ರವನ್ನು ರಚಿಸುವುದು. ಎರಡು ಚಿತ್ರಗಳನ್ನು ಕೂಡ ಹೋಲಿಸಿ ರಚನೆಯಲ್ಲುಂಟಾದ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳುವುದು.

## ಮೌಲ್ಯ ಮಾಪನ

- ಸ್ಕೆಚ್‌ನ ಗುಣಮಟ್ಟ
- ಕಂಪ್ಯೂಟರ್ ಬಳಸುವ ಸಾಮರ್ಥ್ಯ
- ಸೋಫ್ಟ್‌ವೇರ್‌ನಲ್ಲಿರುವ ಟೂಲ್ ಉಪಯೋಗಿಸುವ ಸಾಮರ್ಥ್ಯ
- ಕಲರ್ ಕೋಂಬಿನೇಷನ್, ಕಂಪೋಸಿಷನ್
- ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯ

ಇವುಗಳ ಬಗ್ಗೆ ಇರುವ ಗುಣಾತ್ಮಕವಾದ ಮೌಲ್ಯ ನಿರ್ಣಯ ಗಳಿಸಬೇಕಾದ

**ಕಲಿಕಾ ಹಿರಿಮೆಗಳು**

*ಕೆಳಗೆ ನೀಡಿದ ಕಲಿಕಾ ಹಿರಿಮೆಗಳನ್ನು ಎಷ್ಟರ ಮಟ್ಟಿಗೆ ಅರ್ಜಿಸಲಾಗಿದೆ?*

- ಕಂಪ್ಯೂಟರ್ ಬಳಸುವ ಸಾಮರ್ಥ್ಯ
- Software ಬಳಸಿ ಚಿತ್ರ ರಚಿಸಿ ಬಣ್ಣ ನೀಡಿ, ಅದನ್ನು ಸೇವ್ ಮಾಡಲಿರುವ ಸಾಮರ್ಥ್ಯ
- ಅಪ್ಲೈಡ್ ಆರ್ಟ್‌ನ ಸಾಧ್ಯತೆಗಳನ್ನು ತಿಳಿದುಕೊಳ್ಳುವುದು

# ಯೂನಿಟ್–7 : ಶಿಲ್ಪ ನಿರ್ಮಾಣ

ಆಧುನಿಕ ಶಿಲ್ಪ ಕಲೆಯೆಂಬುದು ಸಮಕಾಲೀನವಾದ ಹಲವಾರು ಬದಲಾವಣೆಗಳನ್ನು ಒಳಗೊಂಡು ರೂಪುಗೊಂಡಿರುವ ಒಂದು ಮಾಧ್ಯಮ ಶೈಲಿಯಾಗಿದೆ. ಶೈಲಿಯಲ್ಲಿ ನಿರಂತರವಾಗಿ ಬದಲಾಗುತ್ತಿರುವ ಬದಲಾವಣೆಗಳನ್ನು ಶಿಲ್ಪ ನಿರ್ಮಾಣ ಸಂದರ್ಭದಲ್ಲಿ ಶಿಲ್ಪಿಯು ಅರಿತು ಕೊಂಡಿರಬೇಕು. ಆದ್ದರಿಂದಲೇ ಶಿಲ್ಪ ಕಲೆಯಲ್ಲಿನ ಹಳೆ ಮತ್ತು ಹೊಸ ಶೈಲಿಗಳನ್ನು ಅರಿತುಕೊಳ್ಳುವುದು, ನೂತನ ಶಿಲ್ಪಗಳ ನಿರ್ಮಾಣದಲ್ಲಿ ವಿದ್ಯಾರ್ಥಿಗಳಿಗೆ ಸಹಾಯಕವಾಗುವುದು. ಅದರ ಜತೆಗೇ ಆಶಯವಿಲ್ಲದ ಶಿಲ್ಪವೂ ಆತ್ಮವಿಲ್ಲದ ಶರೀರದಂತೆ ಎಂಬ ತತ್ವವನ್ನೂ ಚರ್ಚಿಸಬೇಕಾಗಿದೆ. ಆಶಯಕ್ಕೆ ಹೊಂದಿಕೊಂಡು ಶಿಲ್ಪ ರಚನಾ ಸಂದರ್ಭದಲ್ಲಿ ಅತ್ಯಾಧುನಿಕ ಇನ್‌ಸ್ಟಲೇಶನ್ ಇತ್ಯಾದಿ ನೂತನ ವಿಧಾನಗಳನ್ನು ವಿದ್ಯಾರ್ಥಿಗಳು ಅರಿತುಕೊಂಡಿರಬೇಕು. ಕೇವಲ ನಕಲಿಗಳನ್ನುಂಟು ಮಾಡುವುದು ಕಲೆ ಅಲ್ಲವೆಂದೂ,ಶಿಲ್ಪಿಯ ಸೃಜನಾತ್ಮಕತೆಯು ಸೃಷ್ಟಿಯಲ್ಲಿ ಕಂಡು ಬಂದಾಗ, ಮಾತ್ರ ಕಾಲಗಳಿಗೆ ಅತೀತವಾಗಿ ಅದು ನೆಲೆಗೊಳ್ಳುವುದು ಎಂದೂ ಅರ್ಥಮಾಡಿಕೊಳ್ಳಬೇಕು.

## ಕಲಿಕಾ ಸಾಧನೆ

- ಆಶಯಗಳನ್ನು ಅರ್ಥಮಾಡಿಕೊಂಡು ಶಿಲ್ಪಗಳನ್ನು ನಿರ್ಮಿಸುವುದು.

## ಆಶಯ/ತಿಳುವಳಿಕೆ

- ಆಶಯಗಳನ್ನು ಪ್ರಕಟಿಸಲಿರುವ ಒಂದು ಮಾಧ್ಯಮವಾಗಿದೆ ಶಿಲ್ಪಕಲೆ.
- ಶಿಲ್ಪವೆಂಬುದು ತ್ರಿಮಾನತ್ವವನ್ನು ಹೊಂದಿದೆ
- ತ್ರಿಮಾನದಂತೆ ತೋರುವ ದ್ವಿಮಾನ ಚಿತ್ರಗಳನ್ನೂ ನಿರ್ಮಿಸಬಹುದು.
- ಶಿಲ್ಪ ನಿರ್ಮಾಣಕ್ಕೆ ಆವೆಮಣ್ಣು, ಮರ, ಲೋಹ, ಸಿಮೆಂಟ್ ಇತ್ಯಾದಿ. ಪರಂಪರಾಗತ ವಸ್ತುಗಳು ಅಥವಾ ಪೋಪ್, ಫೈಬರ್, ವ್ಯಾಕ್ಸ್ ಇತ್ಯಾದಿ ನೂತನರೀತಿಗಳನ್ನೂ ಉಪಯೋಗಿಸಬಹುದು.
- ಆಧುನಿಕ ಶಿಲ್ಪಗಳಲ್ಲಿ, ಇನ್‌ಸ್ಟಲೇಶನ್‌ಗಳಲ್ಲಿ ಈ ತರದ ಪರಂಪರಾಗತ ನಿಯಮಗಳು/ ನಿರ್ಮಾಣ ವಸ್ತುಗಳು ಯಾವುದೂ ಅಗತ್ಯವಿಲ್ಲ. ಆಶಯ ಪ್ರಕಟಣೆಗೆ ಯಾವ ಮಾಧ್ಯಮವನ್ನು ಬೇಕಾದರೂ ಉಪಯೋಗಿಸಬಹುದು.
- ಶಿಲ್ಪವನ್ನು ನಿಲ್ಲಿಸಲು, ಪೆಡಸ್ಟಲ್, ಆರ್ಮೇಚರ್ ವ್ಯವಸ್ಥೆಗಳನ್ನು ಒದಗಿಸುವುದು ಶಿಲ್ಪಗಳ ಬಾಳ್ವಿಕೆಗೆ ಅಗತ್ಯವಿದೆ.
- ಆಶಯದ ಸ್ವಭಾವಕ್ಕನುಸರಿಸಿ ಮಾಧ್ಯಮ/ವಸ್ತುಗಳನ್ನು ಉಪಯೋಗಿಸಬೇಕು.

## ಕಲಿಕಾ ಚಟುವಟಿಕೆಗಳು

***ಕಲಿಕಾ ಚಟುವಟಿಕೆ–1***

ಚಿತ್ರ (ರೋಯ ಚೌದುರಿಯ 'ಪರಿಶ್ರಮ' ಎಂಬ ಶಿಲ್ಪದ ಚಿತ್ರ)

**ಶಿಲ್ಪ ಓದು**

- ವಿಭಿನ್ನ ಮಾಧ್ಯಮಗಳ ಮೂಲಕ ಆಶಯಕ್ಕನುಸರಿಸಿ ರಚಿಸಿದ ಶಿಲ್ಪಗಳ ಚಿತ್ರ/ ಪ್ರತಿ, ಎಲ್‌ಸಿಡಿಯ ಸಹಾಯದೊಂದಿಗೆ ಪ್ರದರ್ಶಿಸುವುದು.

- ಮಾಧ್ಯಮ, ಶಿಲ್ಪಿ, ಶಿಲ್ಪ ಎಂಬಿವುಗಳನ್ನು ಟೀಚರ್ ಪರಿಚಯಿಸುವುದು.
- ಈ ಶಿಲ್ಪವನ್ನು ಇದಕ್ಕಿಂತ ಮೊದಲು ನೋಡಿದ್ದೀರಾ?
- ಶಿಲ್ಪವು ತಿಳಿಸುವ ಆಶಯವೇನು?
  (ಪ್ರತಿಕ್ರಿಯೆಯು ಒಂದು ವಾಕ್ಯಕ್ಕೆ ಸೀಮಿತಗೊಳಿಸದೆ ವಿವರಿಸಿ ಹೇಳಬೇಕು)
- ಮಕ್ಕಳಿಗೆ ಪ್ರತಿಕ್ರಿಯಿಸಲು ಸಂದರ್ಭ ನೀಡುವುದು.
- ಆಶಯವನ್ನು ಉದ್ದೀಪನಗೊಳಿಸಲು ಶಿಲ್ಪಿ ಉಪಯೋಗಿಸಿದ ರೂಪಗಳು, ರೂಪಗಳ ವಿನ್ಯಾಸ, ನವೀನತೆ, ಶೈಲಿ, ಸೃಜನಾತ್ಮಕತೆ ಎಂಬಿವುಗಳನ್ನು ಚರ್ಚೆ ಮಾಡಿ ಟೀಚರ್ ಕ್ರೋಡೀಕರಿಸುವರು.

***ಕಲಿಕಾ ಚಟುವಟಿಕೆ–2***

**ಶಿಲ್ಪ ರಚನೆ**

- ಶಿಲ್ಪ ನಿರ್ಮಾಣಕ್ಕೆ ಅಗತ್ಯವಾಗಿರುವ ಆಶಯಗಳ ಬಗ್ಗೆ ಚರ್ಚೆ ನಡೆಸಿದ ಬಳಿಕ ಆಶಯಗಳನ್ನು ಕ್ರೋಡೀಕರಣ ಮಾಡುವುದು
- ಶಿಲ್ಪಕ್ಕೆ ಸಂಬಂಧಿಸಿದ ರೂಪುರೇಶೆಯನ್ನು ಪೆನ್ಸಿಲಿನಲ್ಲಿ ಸ್ಕೆಚ್ ಮಾಡುವುದು
  (ಶಿಲ್ಪದ ಆರು ನೋಟಗಳನ್ನು ಕೂಡ ಸ್ಕೆಚ್ ಮಾಡಬೇಕು)
- ಮುಂದೆ ಮಾಧ್ಯಮ ಹಾಗೂ ಅಗತ್ಯವಿರುವ ಪೆಡಸ್ಟಲುಗಳನ್ನು ತಯಾರು ಮಾಡುವುದು
- ಶಿಲ್ಪ ರಚನೆ ಮುಂದುವರಿಸುವುದು.
- ಶಿಲ್ಪ ರಚನೆಯಲ್ಲಿ ಅಧ್ಯಾಪಿಕೆಬೇಕಾದ ಸಹಾಯಗಳನ್ನು ಮಾಡುವುದು
- ಶಿಲ್ಪದ ಪ್ರದರ್ಶನ

**ಮೌಲ್ಯಮಾಪನ**

- ಆಶಯದ ನಿಖರತೆ
- ಆಕರ್ಷಣೆ
- ತಾಂತ್ರಿಕ ಹಿರಿಮೆ
- ಸೃಜನಾತ್ಮಕತೆ, ರೂಪ

## ಯೂನಿಟ್–8: ಕಾರ್ಟೂನ್

ಭಾರತದಲ್ಲಿ ಕಾರ್ಟೂನ್ ರಚನೆಯಲ್ಲಿ ಮುಂದಿರುವ ರಾಜ್ಯವು ಕೇರಳವಾಗಿದೆ. ಕಾರ್ಟೂನ್ ಚಿತ್ರ ಕಲೆಯ ಒಂದು ಭಾಗವಾಗಿದೆ. ಇದು 18ನೇಶತಮಾನದಿಂದಲೇ ಸಮಾಜದ ಕೆಡುಕುಗಳನ್ನು ಎದುರಿಸುವ ರೀತಿಯಲ್ಲಿ ಬೆಳೆದು ಬಂದಿದೆ. ಈ ಕಲಾ ವಿಭಾಗವು ಭಾವನೆಗಳಿಗೆ ಹಾಗೂ ಹಾಸ್ಯರಸಕ್ಕೆ ಮಹತ್ವವನ್ನು ನೀಡುವುದು. ವಿಷಯವು ಮಾತು ಹಾಗೂ ಗೆರೆಗಳಾಗಿ ಬದಲಾಗುವಾಗ ಅಲ್ಲಿ ಕಾರ್ಟೂನ್ ರೂಪುಗೊಳ್ಳುವುದು. ಸಭ್ಯವಾದ ಭಾಷೆ ಹಾಗೂ ರಚನಾ ರೀತಿ ಈ ವಿಭಾಗಕ್ಕೆ ಹೊಳಪನ್ನು ನೀಡುವುದು. ಇದು ಕೆಡುಕುಗಳ ವಿರುದ್ಧ ಉಪಯೋಗಿಸುವ ಒಂದು ಆಯುಧವಾಗಿದೆ. ವಿಶ್ವದ ಚರಿತ್ರೆಯಲ್ಲಿ ಸಮಾಜದ ಬದಲಾವಣೆಗಾಗಿ ರಚಿಸಿದ ಅನೇಕ ರಚನೆಗಳಿವೆ. ತಿಳಿಸಲಿರುವ ವಿಷಯವನ್ನು ಚೊಕ್ಕದಾಗಿ ತಿಳಿಸಿ ಕಡಿಮೆ ಗೆರೆಯನ್ನು ಎಳೆದು ಪೂರ್ತಿ ಮಾಡುವ ರಚನೆಗಳು ಹಿರಿಮೆಯನ್ನು ಗಳಿಸುವುದು.

## ಕಲಿಕಾ ಸಾಧನೆ

- ಕಾರ್ಟೂನ್ ರಚನೆ, ಕಾರ್ಟೂನಿನ ಚರಿತ್ರೆಯನ್ನು ಅಧಿಕೃತವಾಗಿ ಕಲಿಯುವುದು.

## ಒಳ ಹೂರಣ

- ಓದುವಿಕೆಯ ಜೊತೆಗೆ ಆಶಯವನ್ನು ಗಮನದಲ್ಲಿಟ್ಟುಕೊಳ್ಳಬೇಕು
- ಕಾರ್ಟೂನಿನ ಚರಿತ್ರೆಯನ್ನು ತಿಳಿಯಬೇಕು
- ರಚನಾ ರೀತಿ ಮತ್ತು ಸಮಯದ ಅರಿವಿರಬೇಕು
- ಶೈಲಿ ಯಾವುದಾಗಿರಬೇಕೆಂದು ತಿಳಿಯಬೇಕು
- ರಚಿಸುವ ಸಮಯದ ಸಾಮಾಜಿಕ ಸಮಸ್ಯೆ ಏನೆಂದು ತಿಳಿದುಕೊಳ್ಳಬೇಕು
- ಕಾರ್ಟೂನಿಸ್ಟ್‌ಗಳನ್ನು ಅರಿತಿರಬೇಕು
- ಕಾರ್ಟೂನಿನ ಚರಿತ್ರೆಯನ್ನು ಅರ್ಥೈಸಿಕೊಂಡಿರಬೇಕು
- ಕಾರ್ಟೂನಿನ ಮೂಲಕ ಸಮಾಜದ ಬದಲಾವಣೆಯು ಸಾಧ್ಯ ಎಂದು ತಿಳಿಯುವುದು
- ಕಾರ್ಟೂನ್ ಚರಿತ್ರೆಯ ಅಧ್ಯಯನವು ಹೆಚ್ಚು ಆಸ್ವಾದನಾತ್ಮಕವಾಗಿಸಲು ರಾಜಕೀಯ–ಸಾಮಾಜಿಕ ಸಮಸ್ಯೆಗಳು ಹಾಗೂ ವರ್ತಮಾನಕಾಲ ಸಾಮಾಜಿಕ–ರಾಜಕೀಯ ಸಮಸ್ಯೆಗಳನ್ನು ತಿಳಿಯಬೇಕಾಗಿದೆ.

## ಕಲಿಕಾ ಚಟುವಟಿಕೆಗಳು

**ಹಂತ–1**

- ಕಾರ್ಟೂನ್ ಅಧ್ಯಯನ ಶಿಬಿರ ಹಾಗೂ ಕಾರ್ಟೂನ್ ಪ್ರದರ್ಶನ
- ಭಾರತದ ಹಾಗೂ ಇತರ ದೇಶಗಳ ಕಾರ್ಟೂನ್‌ಗಳ ಪ್ರದರ್ಶನ ನಡೆಸುವುದು
- ಪ್ರದರ್ಶನ ಏರ್ಪಡಿಸಲು ವಿಶಾಲವಾದ ಸ್ಥಳವನ್ನು ಆಯ್ದು ಕೊಳ್ಳಬೇಕು
- ಐ.ಟಿ. ಸಾಧ್ಯತೆಯನ್ನು ಉಪಯೋಗಿಸಿ ಅಂತರಾಷ್ಟ್ರೀಯ ಕಾರ್ಟೂನ್‌ಗಳ ಪ್ರಿಂಟ್‌ಗಳನ್ನು ಸಂಗ್ರಹಿಸಲು ಹೇಳುವುದು2

**ಹಂತ–2**

- ಒಂದು ಗ್ಯಾಲರಿಯಂತೆ ಮನೋಹರವಾಗಿ ಹಾಗೂ ಕ್ರಮಬದ್ಧವಾಗಿ ಚಿತ್ರಗಳನ್ನು ಕ್ರಮೀಕರಿಸುವುದು
- ಕಾರ್ಟೂನ್‌ಗಳ ಕುರಿತು ಅಧಿಕೃತವಾಗಿ ತರಗತಿ ನಡೆಸಲು ಸಾಧ್ಯವಿರುವಂತಹ ಕಾರ್ಟೂನಿಸ್ಟ್‌ನ್ನು ಕಂಡು ಹಿಡಿದು ಪ್ರಾತ್ಯಕ್ಷಿಕ ಕಾರ್ಟೂನ್ ರಚನೆಯನ್ನು ನಡೆಸಿ ಮಕ್ಕಳಿಗೆ ಕಾಣುವಂತಹ ಸಂದರ್ಭವನ್ನು ಒದಗಿಸಿಕೊಡುವುದು
- ಕಾರ್ಟೂನಿಸ್ಟ್‌ನ ಜೊತೆ ಆಲವಾದ ಚರ್ಚೆ, ರಚನೆಗಳಿಗೆ ಸಂದರ್ಭವೊದಗಿಸಬೇಕು
- ಕಾರ್ಟೂನ್ ಹಾಗೂ ಕಾರಿಕೇಚರ್‌ನ ನಡುವೆ ಇರುವ ವ್ಯತ್ಯಾಸಗಳೇನು ಎಂಬುದು ಮಕ್ಕಳಿಗೆ ಮನದಟ್ಟು ಮಾಡುವುದು.
- ಹೊಸದಾದ ಯಾವುದಾದರೂ ಒಂದು ವಿಷಯವನ್ನಿಟ್ಟುಕೊಂಡು ಮಕ್ಕಳಲ್ಲಿ ಕಾರ್ಟೂನ್ ರಚಿಸಲು ಹೇಳಬೇಕು. ಅದರ ಮೌಲ್ಯ ನಿರ್ಣಯ ಹಾಗೂ ಚರ್ಚೆಯನ್ನು ನಡೆಸುವುದು

- ಕಲಿಕಾ ಶಿಬಿರಗಳಿಂದ ಲಭಿಸಿದ ಮಕ್ಕಳ ಉತ್ಪನ್ನಗಳನ್ನು ಪ್ರದರ್ಶಿಸುವುದು. ಸಂಗ್ರಹಿಸಿ ಆಲ್ಬಂ ತಯಾರಿಸಿ ತೆಗೆದಿರಿಸುವುದು
- ಕೇರಳದಲ್ಲಿ 225ಕ್ಕಿಂತ ಹೆಚ್ಚು ಸಂಖ್ಯೆಯ ಕಾರ್ಟೂನಿಸ್ಟ್‌ಗಳು ಒಟ್ಟು ಸೇರಿ ಕೇರಳ ಕಾರ್ಟೂನ್ ಅಕಾಡೆಮಿ ಎಂಬ ಸಂಘಟನೆಯನ್ನು ರಚಿಸಿದ್ದಾರೆ.

  (cartoonacademy.blogspot.in)

# 7.2



# ಸಂಗೀತ



# ಸಂಗೀತ

## ಮುನ್ನುಡಿ

ಎಲ್ಲ ಕಲೆಗಳು ಮನಸ್ಸನ್ನು ಮುದಗೊಳಿಸಲಿಕ್ಕಿರುವವುಗಳಾಗಿವೆ. ಆ ಆನಂದವು ಚರಾಚರ ಗಳೊಂದಿಗಿನ ಪ್ರೀತಿಯಾಗಿ ಬೆಳೆಯುವುದೇ ಸಂಸ್ಕೃತಿ. ಪ್ರಕೃತಿ ಮತ್ತು ಮನುಷ್ಯನನ್ನು ಪ್ರತ್ಯೇಕಿಸಿ ಕಾಣದೆ ಅನ್ಯೋನ್ಯತೆಯ ಸಮನ್ವಯಭಾವ ನಮಗೆ ಲಭಿಸುವುದು. ಎಲ್ಲ ಜೀವಜಾಲಗಳಿಗೂ ಒಂದೇ ರೀತಿ ಆಸ್ವಾದಿಸಬಹುದಾದ ಕಾರಣ ಸಂಗೀತವು ಇತರ ಕಲೆಗಳಿಗಿಂತ ಭಿನ್ನವಾಗಿದೆ. ಮನುಷ್ಯನ ಮನಸ್ಸನ್ನು ನಿರ್ಮಲಗೊಳಿಸಿ ಅಮೂರ್ತವಾದ ಧನ್ಯತೆಯೆಡೆಗೆ ಕೊಂಡೊಯ್ದು ಶಾಂತಗೊಳಿಸಲು ಸಾಮರ್ಥ್ಯವಿರುವ ಕಲೆಯೆ ಸಂಗೀತ. ಸಾರ್ವತ್ರಿಕವಾಗಿ ಮನುಷ್ಯನನ್ನು ಒಂದಾಗಿ ಕಾಣುವ ವಿಶಾಲವಾದ ದೃಷ್ಟಿಕೋನ ಸಂಗೀತ ಸಂಸ್ಕೃತಿಯಿಂದ ಕೈಗೂಡುವುದು. ಆದ್ದರಿಂದಲೇ ಸಂಗೀತ ಕಲಿಕೆಯು ವ್ಯಕ್ತಿತ್ವದ ವಿಕಾಸ ಹಾಗೂ ಸಾಮಾಜಿಕ ಹೊಂದಾಣಿಕೆಗೆ ಅನಿವಾರ್ಯವಾಗಿದೆ.

ಸುತ್ತುಮುತ್ತಲಿನ ಕುರಿತು ತಿಳುವಳಿಕೆ ಉಂಟಾಗುವ ಕಾಲಕ್ಕಿಂತ ಮೊದಲೇ ನಿಸರ್ಗದ ಸಂಗೀತವು ಮಗುವಿನ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ವೈಜ್ಞಾನಿಕವಾದ ಅಧ್ಯಯನದಿಂದ ಸಾಬೀತಾಗಿದೆ. ಶಾಲಾಶಿಕ್ಷಣದ ಕಾಲಘಟ್ಟದಲ್ಲಿ ಮಕ್ಕಳಲ್ಲಿ ಉಂಟಾಗಬಹುದಾದ ಮಾನಸಿಕ ಸಂಘರ್ಷವನ್ನು ಹೋಗಲಾಡಿಸಿ ಮನಸ್ಸನ್ನು ಪ್ರಸನ್ನಗೊಳಿಸಿ ಜ್ಞಾನಾರ್ಜನೆಗೆ ಪ್ರೇರೇಪಿಸಲು ಸಂಗೀತ ಕಲಿಕೆಯಿಂದ ಸಾಧ್ಯವಿದೆಯೆಂದು ಸಂಶೋಧನೆಗಳಿಂದ ಸಾಬೀತಾಗಿದೆ. ಸಂಗೀತವನ್ನು ಆಸ್ವಾದಿಸುವ ಮಗುವಿಗೆ ತಾನು ಮಾಡುವ ಯಾವುದೇ ಕಾರ್ಯದಲ್ಲಿ ನಿಗೂಢವಾಗಿ ಸ್ಥಿತವಾಗಿರುವ ತಾಳವನ್ನು ಕಂಡುಹಿಡಿಯಲು ಸಾಧ್ಯವಾಗುವುದರ ಮೂಲಕ ಜೀವನದ ಪರಮ ಸತ್ಯವನ್ನು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಾಗುವುದು. ಈ ಆಸ್ವಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ನಿಖರವಾದ ಅಧ್ಯಯನದ ಅಗತ್ಯವಿದೆ. ಇದರಿಂದ ಪ್ರತಿಯೊಬ್ಬನಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಸ್ವತಃ ತಿಳಿದುಕೊಳ್ಳಲು ಅದನ್ನು ವಿಕಾಸಗೊಳಿಸಲು ಸಾಧ್ಯವಾಗುವುದು. ಇದು ಮಕ್ಕಳಲ್ಲಿ ಅತಿಯಾದ ಆತ್ಮವಿಶ್ವಾಸವನ್ನು ಉಂಟುಮಾಡುವುದಲ್ಲದೆ ಎಲ್ಲ ವಿಷಯಗಳ ಕಲಿಕೆಯಲ್ಲಿ ಅತ್ಯಾಸಕ್ತಿಯಿಂದ ವ್ಯವಹರಿಸಲು ಸಾಧ್ಯವಾಗುವ ರೀತಿಯಲ್ಲಿ ಉತ್ಸಾಹಭರಿತರನ್ನಾಗಿಸುತ್ತದೆ.

ಅತಿ ಮಹತ್ತರವಾದ ಶಂಗೀತ ಪರಂಪರೆ ನಮಗಿತ್ತು. ಸಂಗೀತವನ್ನು ಅದರ ಔನತ್ಯಕ್ಕೆ ತಲುಪಿಸಿದ ಅನೇಕವಾಹಿನಿಗಳು ಆ ಪ್ರದೇಶದಲ್ಲಿದೆ. ಜನಸಾಮನ್ಯರ ಮನಸ್ಸಿನಲ್ಲಿಯೂ ಜೀವನಾಡಿಯಾಗಿ ಸಂಗೀತವು ಹಾಸುಹೊಕ್ಕಾದ ಪರಂಪರೆ ನಮ್ಮದು. ಇಲ್ಲಿ ಅವಿಶ್ರಾಂತವಾಗಿ ನೆಲೆದಗೊಂಡ ಆ ಸಂಗೀತ ಸಂಸ್ಕೃತಿಯು ನಮ್ಮನ್ನು ಯಾವಾಗಲೂ ಪ್ರಚೋದಿಸುತ್ತಿತ್ತು. ಲೋಕ ಸಂಗೀತದ ಎಲ್ಲ ಗುಣಾತ್ಮಕ ಅಂಶಗಳನ್ನು ಸ್ವೀಕರಿಸಿ ಭಾರತದ ಸಂಗೀತ ವಿಕಾಸಗೊಂಡ ಕಾರಣ ಅದಕ್ಕೆ ಸಾರ್ವತ್ರಿಕ ಮನ್ನಣೆ ದೊರೆತಿದೆ.

# ಕಲಿಕಾ ಸಾಧನೆಗಳು

### 8ನೇ ತರಗತಿ

- ಅಭಿನಯ ಪ್ರಾಧಾನ್ಯವಿರುವ ಪದಗಳನ್ನು ಹಾಡುವುದು.
- ವಿಭಿನ್ನ ತಾಳದಲ್ಲಿರುವ ಪದ್ಯಗಳನ್ನು ಹಾಡುವುದು
- ಪ್ರಾದೇಶಿಕ ಸಂಗೀತೋಪಕರಣಗಳನ್ನು ಪರಿಚಯಿಸುವುದು, ಅವುಗಳ ಬಗ್ಗೆ ಪ್ರತಿಕ್ರಿಯಿಸುವುದು.
- ಸಂಗೀತ ಕಚೇರಿಗಳಲ್ಲಿ (ಪ್ರದರ್ಶನ) ಉಪಯೋಗಿಸುವ ಪಕ್ಕ ವಾದ್ಯಗಳು, ಉಪ ಪಕ್ಕ ವಾದ್ಯಗಳ ಕುರಿತು ಟಿಪ್ಪಣಿ ತಯಾರಿಸಿ ಮಂಡಿಸುವುದು.
- ಲಘು ಕೀರ್ತನೆಗಳು, ಭಜನೆಗಳು, ಅಷ್ಟಪದಿ, ದೋಣಿ ಹಾಡುಗಳು, ಘಸಲ್ ಇವುಗಳನ್ನು ಆರಿಸಿ ಹಾಡುವುದು.
- ವಿಭಿನ್ನ ಸಂಗೀತ ಶಾಖೆಗಳಲ್ಲಿರುವ ವಿಭಿನ್ನ ತಾಳಗಳಲ್ಲಿರುವ ಪದ್ಯಗಳನ್ನು ಒಟ್ಟು ಸೇರಿಸಿ ಹಾಡುವುದು.

### 9ನೇ ತರಗತಿ

- ಜಾನಪದ ಸಂಗೀತ ಮಾದರಿಗಳನ್ನು ಮಕ್ಕಳು ಹಾಡುವರು.
- ಕರ್ನಾಟಕ ಸಂಗೀತ, ಹಿಂದುಸ್ತಾನಿ ಸಂಗೀತ ಎಂಬೀ ಕ್ಲಾಸಿಕಲ್ ಸಂಗೀತಧಾರೆಗಳಿಂದ ಕೆಲವು ಗೀತೆಗಳನ್ನು ಹಾಡುವುದು.
- ಸೋಪಾನ ಸಂಗೀತ ವಿಭಾಗದ ಕೆಲವು ಹಾಡುಗಳನ್ನು ಹಾಡುವುದು.
- ಪರಿಚಿತವಾದ ಕೆಲವು ಚಲನಚಿತ್ರಗಳ ಭಾವಗೀತೆಗಳಲ್ಲಿ ಉಪಯೋಗಿಸಿರುವ ರಾಗಗಳನ್ನು ತಿಳಿಯುವುದು.
- ಸ್ವರಜತಿ, ವರ್ಣಗಳು, ಕೀರ್ತನೆಗಳು, ಪದಗಳು, ಘಸಲ್, ಭಜನೆಗಳು ಮುಂತಾದವುಗಳಿಂದ ಇಷ್ಟವಿರುವ ಕೆಲವು ವಿಭಾಗಗಳ ಹಾಡುಗಳನ್ನು ಹಾಡುವುದು.
- ವಿವಿಧತೆಯಿಂದ ದಿನಾಚರಣೆಗಳಲ್ಲಿ ಆಯ್ಕೆಮಾಡಿದ ಗಾನಗಳಿಗೆ ರಾಗ ನೀಡಿ ಹಾಡುವುದು.

### 10ನೇ ತರಗತಿ

- ಹಿಂದುಸ್ಥಾನಿ ಸಂಗೀತ ವಿಭಾಗದಲ್ಲಿ ಉಪಯೋಗಿಸುವ ವಾದ್ಯೋಪಕರಣಗಳ ಬಗ್ಗೆ ಇರುವ ತಿಳುವಳಿಕೆಗಳನ್ನು ಹಂಚುವುದು.
- ಕರ್ನಾಟಕ ಸಂಗೀತ ಹಾಗೂ ಹಿಂದುಸ್ಥಾನಿ ಸಂಗೀತದಲ್ಲಿ ಇರುವ ಪ್ರಸಿದ್ಧರಾದ ಸಂಗೀತಜ್ಞರ ಬಗ್ಗೆ ಟಿಪ್ಪಣಿ ತಯಾರಿಸಿ ಮಂಡಿಸುವುದು.
- ಕರ್ನಾಟಕ ಸಂಗೀತದಲ್ಲಿರುವ ಕೃತಿ, ಪದಗಳು, ಘಸಲುಗಳು ಇವುಗಳಲ್ಲಿ ಯಾವುದಾದರೂ ಕೆಲವನ್ನು ಮಂಡಿಸುವುದು.
- ಪ್ರಸಿದ್ಧರಾದ ವಾದ್ಯೋಪಕರಣ ವಿದ್ವಾಂಸರ ಬಗ್ಗೆ ತಿಳಿಯುವುದು ಮತ್ತು ವಿಷಯಗಳನ್ನು ಮಂಡಿಸುವುದು.
- ಶಾಸ್ತ್ರೀಯ ಸಂಗೀತವೊಳಗೊಂಡಂತಹ ದೇಶಭಕ್ತಿಗೀತೆಗಳನ್ನು ಹಾಡುವುದು.
- ವಿವಿಧ ವಿಭಾಗದಲ್ಲಿ ಒಳಗೊಂಡಂತಹ ಗೀತೆಗಳಿಗೆ ರಾಗ ಹಾಕಿ ಹಾಡುವುದು. (ಜಾನಪದ ಗೀತೆ, ಭಾವಗೀತೆ, ಶಾಸ್ತ್ರೀಯ ಸಂಗೀತ ಮುಂತಾದವು)

# ಎಂಟನೇ ತರಗತಿ

## ಯೂನಿಟ್–1 : ಹಾಡೋಣ – ಅಭಿನಯಿಸೋಣ

ನಮ್ಮ ಸಂಗೀತ ಪರಂಪರೆಯಲ್ಲಿ ನೃತ್ಯರೂಪಗಳಿಗೆ ಬೇಕಾಗಿ ರಚಿಸಲ್ಪಟ್ಟ ಅನೇಕ ಪದಗಳು, ಕೃತಿಗಳು ಹಾಗೂ ಕೀರ್ತನೆಗಳಿವೆ. ಈ ಗೀತೆಗಳು ಪ್ರತಿಯೊಂದು ಸಂದರ್ಭಕ್ಕೆ ಹೊಂದಿಕೊಂಡು ವಿವಿಧ ಭಾವನೆಗಳನ್ನು, ಆಲಾಪನೆಯ ಸಹಾಯದೊಂದಿಗೆ ನೃತ್ಯ ಹೆಜ್ಜೆಗಳನ್ನು ಆವಿಷ್ಕರಿಸಲು ಸಾಧ್ಯವಾಗುವಂತವುಗಳೂ ಆಗಿವೆ. ಎಲ್ಲಾ ನೃತ್ಯ ಶಾಖೆಗಳಲ್ಲೂ ಅಭಿನಯ ಪ್ರಧಾನವಾದ ಹಾಡುಗಳು ಬಹಳ ಇವೆ. ನೃತ್ಯಗಳಲ್ಲದೆ ನಾಟಕ, ಹರಿಕಥೆ ಎಂಬೀ ಕಲಾರೂಪಗಳಿಗೂ ಆಲಾಪನೆಯಿಂದೊಡಗೂಡಿದ ಭಾವಾಭಿನಯವು ಅತಿ ಪ್ರಧಾನವಾಗಿದೆ. ಆಲಾಪನಕ್ಕೆ ವಿಶೇಷ ಪ್ರಯೋಗಗಳನ್ನು ನೀಡುವುದರಿಂದ ಅಭಿನಯ ಪ್ರಾಧಾನ್ಯತೆಯಿಂರುವ ಕಲಾ ವಿಭಾಗಗಳಿಗೂ ಪೂರ್ಣತೆ ಲಭಿಸುವುದು. ಅಭಿನಯವೂ, ಸಂಗೀತವೂ ಏಕರೀತಿಯಲ್ಲಿ ಸಂಗಮಿಸುವಾಗ ಆಸ್ವಾದಕನಿಗೆ ಪ್ರತಿಯೊಂದು ಮಂಡನೆಯೂ ಉತ್ತಮ ಅನುಭವವಾಗುವುದು.

### ಒಳಪುಟಗಳಲ್ಲಿ

ವಿವಿಧ ನೃತ್ಯವಿಭಾಗಳಿಗೆ ಉಪಯೋಗಿಸುವ ಗೀತೆಗಳು, ಪದಗಳು, ವರ್ಣಗಳು ಇವುಗಳ ಪರಿಚಯ, ತರಬೇತಿ, ಆಲಾಪನೆ.

ಕೇರಳದಲ್ಲಿರುವ ಕಲಾರೂಪಗಳ ಸಂಗೀತದ ಬಗ್ಗೆ ಹೆಚ್ಚಿನ ಮಾಹಿತಿಗಳಿಸುವುದು, ಅವುಗಳಲ್ಲಿರುವ ಸಂಗೀತಕ್ಕೆ ಸಂಬಂಧಿಸಿದ ವಿಶೇಷತೆಗಳನ್ನು ತಿಳಿಯುವುದು ಮೊದಲಾದವುಗಳನ್ನು ಇದರಲ್ಲಿ ಪ್ರತಿಪಾದಿಸಲಾಗಿದೆ.

### ಕಲಿಕಾ ಸಾಧನೆ

ಅಭಿನಯ ಸಾಧ್ಯತೆಯಿರುವ ಗೀತೆಗಳನ್ನು ಹಾಡುವುದು

### ಪ್ರಕ್ರಿಯೆ

- ಪ್ರಕೃತಿಯಲ್ಲಿ ವಿವಿಧ ಶಬ್ಧಗಳಿವೆ.
- ಪ್ರಕೃತಿಯ ನೈಜತೆಯನ್ನು ಉಳಿಸುವಲ್ಲಿ ಶಬ್ಧಗಳಿಗೆ ಪಾತ್ರವಿದೆ.
- ಶಬ್ಧಗಳನ್ನು ಅನುಕರಿಸಲು ಸಾಧ್ಯವಾಗುವುದು.

### ಪ್ರಕ್ರಿಯೆ

- ಓಟಂ ತುಳ್ಳಲ್, ಯಕ್ಷಗಾನ, ಹರಿಕಥೆ, ಕಥಕ್ಕಳಿ, ಮೋಹಿನಿಯಾಟ್ಟಂ ಎಂಬ ನೃತ್ಯ ರೂಪಗಳನ್ನು ವೀಕ್ಷಿಸುವುದು. ಸಾಮ್ಯತೆ ಮತ್ತು ವ್ಯತ್ಯಾಸಗಳ ಚರ್ಚೆ.
- ವರ್ಗೀಕರಣೆ, ಆಲಾಪನೆ.

## ಮೌಲ್ಯಮಾಪನ

- ಸರಳ ಪ್ರಶ್ನೆಗಳ ಸಹಾಯದೊಂದಿಗೆ ಮೌಲ್ಯ ನಿರ್ಣಯ ಮಾಡುವುದು. ಶೈಲಿಯ ಆಧಾರದಲ್ಲಿ ಆಲಾಪನೆಯ ಮೌಲ್ಯ ನಿರ್ಣಯ

## ಕಲಿಕಾ ಚಟುವಟಿಕೆಗಳು

### ಚಟುವಟಿಕೆ–1

- ಕೇರಳದ ಕಲಾರೂಪವಾದ ಓಟ್ಟಂತುಳ್ಳಲಿನ ಸಿಡಿಯನ್ನು ತೋರಿಸುವುದು. ಆಸ್ವಾದನೆಗೆ ಅವಕಾಶ ನೀಡಿ ಟಿಪ್ಪಣಿ ತಯಾರಿಸಲು ಹೇಳುವುದು.

**ಸೂಚನೆಗಳು**

- ❖ ಆಕರ್ಷಣೀಯವಾದ ಮಂಡನೆ
- ❖ ಸಂಗೀತದಲ್ಲಿ ಈ ಪ್ರದರ್ಶನಕ್ಕಿರುವ ಪ್ರಾಧಾನ್ಯತೆ
- ❖ ಪ್ರದರ್ಶನದಲ್ಲಿ ಉಪಯೋಗಿಸಿರುವ ಸಂಗೀತದ ಆಲಾಪನಾ ರೀತಿ
- ❖ ಪ್ರತ್ಯೇಕತೆ, ಭಾಷಾ ವಿಶೇಷತೆ, ಗ್ರಾಮೀಣ ಭಾಷಾ ಪ್ರಯೋಗಗಳು

- ತಯಾರು ಮಾಡಿದ ಟಿಪ್ಪಣಿಗಳು–ಮಂಡನೆ (ವೈಯಕ್ತಿಕವಾಗಿ)
- ವೇಷ ವಿಧಾನ ಮತ್ತು ನೃತ್ಯದ ಹೆಜ್ಜೆಗಳಿಂದ ಇದು ಆಕರ್ಷಣೀಯವಾಗುವುದು.
- ಪದ್ಯಕ್ಕೆ ಹೊಂದಿಕೊಂಡು ನೃತ್ಯದ ಹೆಜ್ಜೆ ಹಾಗೂ ಅಭಿನಯವಿರುವುದು.
- ತಾಳಬದ್ಧವಾದ ಹಾಗೂ ಸರಳವಾದ ರಾಗದೊಂದಿಗಿನ ಆಲಾಪನೆಯು ಆಶಯವನ್ನು ಬೇಗನೆ ಅರ್ಥಮಾಡಿಸುವುದು.
- ಗ್ರಾಮೀಣ ಭಾಷಾ ಪ್ರಯೋಗಗಳು ಧಾರಾಳ ಉಪಯೋಗಿಸಲ್ಪಡುತ್ತದೆ.
- ಮಕ್ಕಳ ಟಿಪ್ಪಣಿಯನ್ನು ಇಟ್ಟುಕೊಂಡು ಅಧ್ಯಾಪಕನ ಹೆಚ್ಚಿನ ವಿವರಣೆ.

- ಕೇರಳದ ಪ್ರಧಾನವಾದ ಜನಪರ ಕಲೆಯಾಗಿದೆ.
- ಹಾಸ್ಯಾತ್ಮಕವಾದ ಮಂಡನೆ
- ಪ್ರಸ್ತುತವಿರುವ ಹಲವು ಸಾಮಾಜಿಕ ಸಮಸ್ಯೆಗಳಿಗೆ ಸಂಗೀತ, ನೃತ್ಯ, ಹೆಜ್ಜೆ ಹಾಗೂ ಆಕ್ಷೇಪ ಹಾಸ್ಯಗಳ ಸ್ಪರ್ಶ ನೀಡಿ ಪ್ರಶ್ನಿಸುವುದು
- ಕೇರಳದಲ್ಲಿ ಹಿಂದಿನಿಂದಲೇ ಪ್ರಚಾರದಲ್ಲಿರುವ ಹಲವು ರಾಗಗಳನ್ನೂ ತಾಳಗಳನ್ನೂ ಇದರ ಗಾನಾಲಾಪನೆಯಲ್ಲಿ ಉಪಯೋಗಿಸಲಾಗುವುದು.
- ಸಂಕೀರ್ಣವಲ್ಲದ, ಯಾರಿಗೂ ಆಸ್ವಾದಿಸಬಹುದಾದ, ಅನುಕರಿಸಬಹುದಾದ ರಾಗಗಳು.

### ಚಟುವಟಿಕೆ–2

ಸಂಗೀತ ಪ್ರಧಾನವಾಗಿರುವ ವಿವಿಧ ಕಲಾರೂಪಗಳನ್ನು ಪರಿಚಯಿಸುವುದು.

**ಹಂತ–1**

- ವಿವಿಧ ನೃತ್ಯ ರೂಪಗಳ ಸಿಡಿ ಪ್ರದರ್ಶನ ಆಯಾ ನೃತ್ಯ ವಲಯದಲ್ಲಿ ಪ್ರಶಸ್ತರಾದವರ ಪ್ರದರ್ಶನದ ಸಿಡಿಯಾಗಬಹುದು. ಮೋಹಿನಿಯಾಟ್ಟ, ಭರತನಾಟ್ಯ, ಕಥಕ್ಕಳಿ)
- ಮೋಹಿನಿಯಾಟ್ಟ ಪದವನ್ನು ಆಯ್ಕೆ ಮಾಡುವಾಗ ಪರಿಚಿತವಾದಂತಹವುಗಳನ್ನು ಒಳಗೊಳ್ಳಿಸಬೇಕು. ಉದಾ: ಪನಿಮತಿ, ಸುಮಸಾಯಕ, ಓಮನತಿಂಕಳ್

- ಆಶಯವನ್ನು ವಿವರಿಸಬೇಕು.
- ಕಥಕ್ಕಳಿ–ಪಾಠಪುಸ್ತಕದಲ್ಲಿ ಒಳಗೊಳ್ಳಿಸಿದ ಪದಗಳನ್ನು ಪರಿಚಯಪಡಿಸುವುದು.
- ಸಿನಿಮಾದಲ್ಲಿ ಬಂದಂತಹ ಕಥಕ್ಕಳಿ ದೃಶ್ಯಗಳು ಆಗಬಹುದು (ಆನಂದ ಭೈರವಿ, ವಾನಪ್ರಸ್ಥಂ)
- ಭರತನಾಟ್ಯ–ಮಕ್ಕಳಿಗೆ ಅತಿ ಹೆಚ್ಚು ಪರಿಚಿತವಾದುದನ್ನು ಒಳಪಡಿಸಲು (ಶಾಲಾಮಟ್ಟದಲ್ಲಿ ಕಂಡು ಪರಿಚಿತವಾದುದು) ಗಮನಿಸಬೇಕು.
- ಸಿಡಿಯಲ್ಲಿ ನೋಡಿದ ಬಳಿಕ ಪ್ರತಿಯೊಂದು ಕಲಾರೂಪದ ಪ್ರತ್ಯೇಕತೆಗಳನ್ನು ಮತ್ತು ಸಂಗೀತ ಪ್ರಯೋಗ ರೀತಿಯು ಹೇಗೆಂದು ಕೇಳಬೇಕು.
- ಮಕ್ಕಳ ಪ್ರತಿಕ್ರಿಯೆ
  - ಶೈಲಿ ಚರಿತ್ರೆ
  - ಸಂಗೀತ–ವೇಷದಲ್ಲಿರುವ ವೈಶಿಷ್ಟ್ಯತೆ
  - ಪ್ರತಿಕ್ರಿಯೆಗಳನ್ನು ಆಧಾರವಾಗಿಟ್ಟುಕೊಂಡು ಸರಳ ವಿವರಣೆ ತಯಾರಿ

**ಕಥಕ್ಕಳಿ:**

- 'ಮಣಿಪ್ರವಾಳ' ಶೈಲಿಯಲ್ಲಿರುವ ಸಾಹಿತ್ಯ. ಕೇರಳೀಯ ಸಂಗೀತ ಶೈಲಿಯ ಸೋಪಾನ ಸಂಗೀತದ ಮೂಲಕ ಹೆಜ್ಜೆಯನ್ನು ಇಡುವಂತಹ ಆಲಾಪನೆಯಲ್ಲಿ ಬರುವುದು.

- ಕಥಕ್ಕಳಿಯ ಹಾಡನ್ನು 'ಕಥಕ್ಕಳಿ ಪದ' ಎನ್ನುವರು.
- ಹಿಮ್ಮೇಳದಲ್ಲಿ ಬರುವಂತಹ ಸಂಗೀತೋಪಕರಣಗಳು ಚಕ್ರತಾಳ (ಚೆಂಗಿಲ), ಇಲತಾಳ, ಮದ್ದಳೆ, ಚೆಂಡೆ, ಶ್ರುತಿ ಪೆಟ್ಟಿಗೆ
- ಪೊನ್ನಾನಿ (ಪ್ರಧಾನ ಭಾಗವತ) ಹಾಡುವ ಒಬ್ಬರು ಮತ್ತು ಶಿಂಗಿಡಿ (ಉಪಭಾಗವತ) ಹಾಡುವ ಒಬ್ಬರು

**ಮೋಹಿನಿಯಾಟ್ಟಂ:**

- ಕೇರಳದ ಕಲಾ ರೂಪವಾಗಿದೆ. ಶಾಸ್ತ್ರೀಯತೆಯು ಅತಿ ಹೆಚ್ಚು ಒಳಗೊಂಡ ಗಾನರೂಪಗಳು. ಹೆಚ್ಚು ಅಭಿನಯ ಸಾಧ್ಯತೆಯಿದೆ.
- ಮಂದಗತಿಯ ತಾಳಗಳನ್ನೊಳಗೊಂಡ ಆಲಾಪನೆ.
- ರಾಗಭಾವಗಳು ಅತಿ ಹೆಚ್ಚು ಉಪಯೋಗಿಸಲ್ಪಡುತ್ತದೆ.

**ಭರತನಾಟ್ಯ:**

- ತಮಿಳುನಾಡಿನ ಕಲಾರೂಪವಾಗಿದೆ.
- ಮೋಹಿನಿಯಾಟ್ಟಕ್ಕೆ ಹೋಲಿಸುವಾಗ ಆಲಾಪನೆಯಲ್ಲಿ ಹಾಗೂ ಪ್ರದರ್ಶನದಲ್ಲಿ ವೇಗತೆಯನ್ನು ಹೊಂದಿದೆ.
- ವರ್ಣಗಳು, ಪದಗಳು, ಕೃತಿಗಳು, ಜತಿಸ್ವರಗಳು, ತಿಲ್ಲಾನಗಳು ಎಂಬಿವುಗಳು ಹಿನ್ನಲೆಯಾಗಿ ಕಂಡುಬರುವುದು.
- ಹೆಚ್ಚು ಶಾಸ್ತ್ರೀಯತೆ ಒಳಗೊಂಡಂತಹ ಆಲಾಪನೆ
- ಹಾಡುಗಳನ್ನು ತಿಳಿಯಲು ಬೇಕಾದ ತರಬೇತಿ.
- ಮೇಲೆ ಹೇಳಿದ ಕಲಾರೂಪಗಳಲ್ಲಿರುವ ಸರಳವಾದ ಹಾಡುಗಳನ್ನು ಆಯ್ಕೆ ಮಾಡುವುದು.
- ಆಯಾ ಸಾಲುಗಳನ್ನು ಹಾಡಿ ಕೇಳಿಸಿದ ಬಳಿಕ ಗುಂಪಾಗಿ ಹಾಡಲು ಸೂಚಿಸುವುದು. ಗುಂಪಿನಲ್ಲಿ ಹಾಡಿದ ಬಳಿಕ ಮಾರ್ಗಂಕಳಿ, ಒಪ್ಪನ, ತಿರುವಾದಿರಕ್ಕಳಿ ಎಂಬಿವುಗಳ ಹಾಡುಗಳನ್ನು ಕೇಳಿಸಿ ತರಬೇತಿ ನೀಡಬಹುದು.

**ರಫರನ್ಸ್ (ಮಲಯಾಳ)**

ನೂಪುರ ದೀಪಿಕ – ಪಿ.ಜಿ. ಜನಾರ್ಧನ್
ಕೇರಳೀಯ ಕಲಾಪಠನ – ಎನ್.ಪಿ. ವಿಜಯಕೃಷ್ಣನ್
ಅಭಿನಯ ಸಂಗೀತ – ಡಾ. ಲೀಲಾ
ವಂಶೀಯ ಸಂಗೀತ – ಡಾ. ಎ.ಕೆ. ನಂಬಿಯಾರ್ (ಎಡಿ), ಓಂ ಚೇರಿ

**ಚಟುವಟಿಕೆ – 3**

- ಕಲಾರೂಪಗಳ ಹೆಸರನ್ನು ನೀಡಿ ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು. ಹೆಚ್ಚಿನ ತರಬೇತಿಗೆ ಮಕ್ಕಳಿಗೆ ಸಮಯ ನೀಡುವುದು.
- ಅಭ್ಯಾಸ ಮಾಡಿದ ಹಾಡುಗಳನ್ನು ಗುಂಪಿನಲ್ಲಿ ಮಂಡಿಸಲು ಸಂದರ್ಭ ನೀಡುವುದು.
- ಮೌಲ್ಯನಿರ್ಣಯ ಪರಸ್ಪರ – ಅಧ್ಯಾಪಕ
- ಹಾಡಿದ ಹಾಡಿನಲ್ಲಿರುವ ಕೊರತೆಗಳನ್ನು ಪುನಃ ಹಾಡಿ ಸ್ಪಷ್ಟಗೊಳಿಸಿ ಮಂಡಿಸುವುದು.
- ಉತ್ತಮ ಪಿರಿಮೆಗಳನ್ನು ಹಾಡಿನಲ್ಲಿ ತೋರಿಸಿದ ಮಕ್ಕಳಿಗೆ ವೈಯಕ್ತಿಕವಾಗಿ ಮಂಡಿಸಲು ಸಂದರ್ಭ ನೀಡುವುದು.

**ಮುಂದುವರಿದ ಚಟುವಟಿಕೆ**

- ಅಭಿನಯಕ್ಕೆ ಪ್ರಾಧಾನ್ಯತೆ ಇರುವ ಕಥಾಪ್ರಸಂಗ, ನಾಟಕ ಕೆಲವು ಸಿನೆಮಾ ಹಾಡುಗಳನ್ನು ಮಂಡಿಸುವುದು.
- ಒಂದು ಕಥಾಪ್ರಸಂಗದ ಸಿ.ಡಿ. ಪ್ರದರ್ಶನ ಮಾಡುವುದು.
- ಕಥಾಪ್ರಸಂಗದ ಪ್ರಶಸ್ತವಾದ ಮೂರು ಹಾಡುಗಳನ್ನು ಹಾಡಿಸುವುದು.
- ಸರಳ ವಿವರಣೆ ನೀಡುವುದು.
- ಒಂದೇ ಸಮಯದಲ್ಲಿ ಕಥೆ, ಅಭಿನಯ, ಮನೋಹರವಾದ ಸರಳ ಚಲನೆಗಳು ಮತ್ತು ಹಾಡುಗಳನ್ನು ಒಟ್ಟು ಸೇರಿಸಿ ಮಂಡಿಸುವ ಕಲಾರೂಪವಾಗಿದೆ ಇದು. ಹಿಮ್ಮೇಳದಲ್ಲಿ ಹಾರ್ಮೋನಿಯಾ, ತಬಲ ಕ್ಲಾರ್‌ನೆಟ್, ವಯಲಿನ್, ಸಿಬಲ್ ಮೊದಲಾದವುಗಳನ್ನು ಉಪಯೋಗಿಸಬಹುದು.
- ನಾಟಕಗಳ ಹಾಡುಗಳನ್ನು ಕೇಳಿಸುವುದು. ಸರಳ ವಾದ್ಯಗಳನ್ನು ಅಭ್ಯಸಿಸಿ ಮಂಡಿಸುವುದು.

**ಮೌಲ್ಯನಿರ್ಣಯ.**

- ಗಾನರೂಪಗಳನ್ನು ಗುರುತಿಸುವುದು
- ಶೈಲಿಯನ್ನು ಅಳವಡಿಸಿಕೊಂಡಿರುವ ಆಲಾಪನೆ
- ಗುಂಪಿನಲ್ಲಿ ಹಾಡುವುದು
- ಟಿಪ್ಪಣಿಗಳ ಸಮಗ್ರತೆ

## ಕ್ರೋಡೀಕರಣ

- ನಾವು ವೀಕ್ಷಿಸುವ ಹೆಚ್ಚಿನ ಕಲಾರೂಪಗಳೂ ಕೂಡ ಹಿನ್ನಲೆಗಾನದೊಂದಿಗೆ ಇದ್ದರೆ ಮಾತ್ರ ಪೂರ್ಣವಾಗುವುದು. ಅಭಿನಯಕ್ಕೂ, ನೃತ್ಯದ ಹೆಜ್ಜೆಗೂ ಅವಕಾಶ ನೀಡುವ ರೀತಿಯಲ್ಲಿ ವಿನ್ಯಾಸಗೊಳಿಸಿದಂತಹ ಈ ಹಾಡುಗಳ ಶೈಲಿ ಹಾಗೂ ಆಲಾಪನೆಯ ಪ್ರತ್ಯೇಕತೆಗಳನ್ನು ತಿಳಿದುಕೊಂಡು ಹಾಡಬೇಕು ಹಾಗೂ ಆಸ್ವಾದಿಸಬೇಕು. ಕೇರಳದ ಸಂಗೀತ ಶೈಲಿಯನ್ನು ಪೂರ್ತಿಯಾಗಿ ಬಳಸಿದ ಗಾನರೂಪಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಗಳಿಸುವುದಕ್ಕೆ ಈ ಕಲಿಕೆಯು ಸಹಾಯಕವಾಗುವುದು.

# ಯೂನಿಟ್ – 2 ತಾಳವೈವಿಧ್ಯತೆ

ಭಾರತೀಯ ಸಂಗೀತದಲ್ಲಿ ತಾಳಗಳಿಗೆ ವಿಶಿಷ್ಟವಾದ ಸ್ಥಾನವಿದೆ. ತಮಿಳು ಸಂಗೀತವನ್ನು ವೇದಗಳಲ್ಲಿ ಕೂಡ ಅತಿ ಪ್ರಾಚೀನ ಸಂಗೀತ ಸಂಪ್ರದಾಯವೆಂದು ಬಣ್ಣಿಸಲಾಗಿದೆ. ಈ ತಮಿಳು ಸಂಗೀತದಲ್ಲಿ ವಿವಿಧ ರೀತಿಯ ವಾದ್ಯೋಪಕರಣಗಳ ಬಗ್ಗೆ ವಿವರವಾಗಿ ಪರಾಮರ್ಶಿಸಲಾಗಿದೆ. ಪ್ರತಿಯೊಂದು ಗಾನ ರೂಪಗಳಲ್ಲಿವ ವಿಶೇಷತೆಗಳನ್ನು ತಿಳಿದುಕೊಂಡು ಅವುಗಳಿಗ ಹೊಂದಿಕೆಯಾಗುವಂತಹ ತಾಳಗಳನ್ನು ಹಾಕಿ ಕೃತಿಗಳನ್ನು ಮಾಡಿದಂತಹ ಅನೇಕ ಸಂಗೀತ ಪಂಡಿತರು ನಮ್ಮ ಸಂಗೀತ ಸಂಪ್ರದಾಯದ ಅಮೂಲ್ಯ ರತ್ನಗಳಾಗಿರುವರು. ಈ ಪಾಠಭಾಗದ ಚಟುವಟಿಕೆಗಳ ಮೂಲಕ ತಾಳವೈವಿಧ್ಯವನ್ನೂ ಪರಿಚಿಟವಾದ ರಾಗಗಳನ್ನೂ, ಸಂಗೀತ ಕೃತಿಗಳನ್ನೂ ಪರಿಚಯಿಸುವುದು ಮತ್ತು ಅವುಗಳ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯಲು ಉದ್ದೇಶಿಸಲಾಗುವುದು.

## ಒಳಹೂರಣ

ಈ ಅಧ್ಯಾಯದಲ್ಲಿ ತಾಳವೈವಿಧ್ಯತೆ, ಅವುಗಳ ಪ್ರತ್ಯೇಕತೆ, ಅವುಗಳ ಹೊಂದಿಕೆಯಾಗುವ ಗಾನರೂಪಗಳು, ತಾಳ ಬದಲಾವಣೆಯಲ್ಲಿರುವ ವೈವಿಧ್ಯತೆ, ಅವುಗಳ ನೀಡುವ ಆಸ್ವಾದನಾ ಮಟ್ಟ ಇವುಗಳನ್ನು ಒಳಗೊಳ್ಳಿಸಲಾಗಿದೆ. ತಾಳ ವಿಶೇಷತೆಗಳನ್ನು, ವೈವಿಧ್ಯತೆಗಳನ್ನು ನಿರೀಕ್ಷಿಸಿ, ಕೇಳಿ ಗುರುತಿಸಲಿರುವ ಕೆಲವು ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿದೆ.

## ಕಲಿಕಾ ಸಾಧನೆ

ವಿಭಿನ್ನ ಸಂಗೀತ ಶಾಖೆಗಳ, ವ್ಯತ್ಯಸ್ತ ತಾಳಗಳ ಹಾಡುಗಳನ್ನು ಬೆಸೆದುಕೊಂಡು ಮಂಡಿಸುವುದು.

## ಆಶಯ, ತಿಳುವಳಿಕೆ

- ವಿವಿಧ ರೀತಿಯ ತಾಳಗಳಿವೆ.
- ಹಾಡುಗಳ ರಾಗ, ತಾಳಗಳಲ್ಲಿ ಸಂದರ್ಭ, ಆಶಯ ಮತ್ತು ಪ್ರಮೇಯಗಳನ್ನು ಉಜ್ವಲಗೊಳಿಸುವುದು.
- ರಾಗ, ತಾಳಗಳು ವೈವಿಧ್ಯಮಯವಾಗಿದ್ದರೂ ಪರಸ್ಪರ ಸಂಬಂಧವಿರುವುದು.

## ಪ್ರಕ್ರಿಯೆ

- ವಿವಿಧ ತಾಳಗಳಲ್ಲಿರುವ ಹಾಡುಗಳನ್ನು ಕೇಳುವುದು.
- ಅನುಕರಿಸುವುದು.
- ಹೋಲಿಸುವುದು.
- ವಿಭಿನ್ನ ತಾಳಗಳಲ್ಲಿರುವ ಹಾಡುಗಳನ್ನು ಸಂಗ್ರಹಿಸುವುದು
- ಮಕ್ಕಳ ಭಾವನೆಗನುಸರಿಸಿ ಹಾಡುಗಳನ್ನು ಆಯ್ಕೆ ಮಾಡಿ ಹಾಡುವುದು.
- ಚರ್ಚೆ

## ಮೌಲ್ಯಮಾಪನ

- ಮಕ್ಕಳು ಪರಸ್ಪರ ಮೌಲ್ಯನಿರ್ಣಯ ಮಾಡುವುದು
- ಚರ್ಚೆಗಳ ಮೂಲಕ ಬಂದ ಬದಲಾವಣೆಗಳನ್ನು ಟೀಚರ್ ಮೌಲ್ಯನಿರ್ಣಯ ಮಾಡುವುದು.
- ಗಾನರೂಪಗಳು, ತಾಳಗಳು ಎಂಬಿವುಗಳನ್ನು ಒಳಗೊಂಡ ಗಾನತಾಳ ಮಾಲಿಕೆಗಳ ರೂಪೀಕರಿಸುವುದು.

## ಕಲಿಕಾ ಚಟುವಟಿಕೆಗಳು

### ಚಟುವಟಿಕೆ – 1

ವಿವಿಧ ಸಂಸ್ಕೃತಿ/ವಿವಿಧ ಶೈಲಿಯ ಹಾಡುಗಳನ್ನು ಒಟ್ಟು ಸೇರಿಸಿ ವಿಭಿನ್ನ ತಾಳಕ್ರಮದಲ್ಲಿ ವ್ಯವಸ್ಥೆಗೊಳಿಸಿದ ಒಂದು ಹಾಡಿನ VCD/CD ಯನ್ನು ಕೇಳಿಸುವುದು. (ಕಲೋತ್ಸವ ವೇದಿಕೆಗಳಲ್ಲಿ ಪ್ರದರ್ಶಿಸುವ ಸಮೂಹ ನೃತ್ಯ, ಓಣಂ ಹಾಡುಗಳು, ದೂರದರ್ಶನ ಇತರ ಚಾನಲ್‌ಗಳಲ್ಲಿ ಪ್ರಸಾರವಾಗುವ ದೇಶಭಕ್ತಿಗೀತೆಗಳು, ಚಾನೆಲ್‌ಗಳ ಶೀರ್ಷಿಕಾ ಗೀತೆಗಳು)

- ಆಲಿಸಿದ ಹಾಡಿನ ವೈವಿಧ್ಯತೆಯನ್ನು ಅರಿತು ಆಸ್ವಾದಿಸುವುದು.
- ವೈಯಕ್ತಿಕವಾಗಿ ಆಸ್ವಾದನಾ ಟಿಪ್ಪಣಿಯನ್ನು ಬರೆಯುವುದು.
- ಆಸ್ವಾದನಾ ಟಿಪ್ಪಣಿಯನ್ನು ಮಂಡಿಸುವುದು – ವೈಯಕ್ತಿಕ.

**ಮಕ್ಕಳು ಬರೆದ ಟಿಪ್ಪಣಿಗಳ ಒಳಹೂರಣ ಈ ಕೆಳಗಿನಂತಿರಬೇಕು.**

- ಆಲಾಪನೆಯಲ್ಲಿ ಸಾಲುಗಳು ಬದಲಾವಣೆಯಾಗುವಾಗ ಅನುಭವಕ್ಕೆ ಬರುವ ವೈವಿಧ್ಯ, ತಾಳವೈವಿಧ್ಯ.
- ವಿಭಿನ್ನ ರಾಗಗಳ ಮತ್ತು ತಾಳಗಳ ಹೊಂದಾಣಿಕೆಯು ಪದ್ಯವನ್ನು ಆಲಿಸಲು ಆಸ್ವಾದಕರವಾಗಿರುವುದು.
- ಒಂದೇ ಆಲಾಪನಾ ಪ್ರದರ್ಶನದಲ್ಲಿ ವಿಭಿನ್ನತೆಯನ್ನು ಒಳಗೊಳ್ಳಿಸಿರುವ ಆಲಾಪನೆಯು ಮನೋಹರವಾಗಿರುವುದು.
- ಚೆನ್ನಾಗಿ ಆಸ್ವಾದಿಸಲು ಸಾಧ್ಯವಾಗುವಂತಹ ರಾಗ ಸಂಯೋಜನೆ.
- ವೈವಿಧ್ಯಮಯವಾದ ರಾಗಗಳು, ತಾಳಗಳೂ ಒಂದೇ ಹಾಡಿನಲ್ಲಿ ಒಳಗೊಂಡು ಕೇಳುಗನಿಗೆ ಹೊಸತನ ಅನುಭವಕ್ಕೆ ಬರುವುದು. (ವಿಕಸತೆಯನ್ನು ಅಗಲಿಸುವುದು)

### ಚಟುವಟಿಕೆ – 2

- ಬೇರೆ ಬೇರೆ ತಾಳಗಳಲ್ಲಿರುವ ವಿಭಿನ್ನ ಹಾಡುಗಳನ್ನು ಹಾಡುವುದು.
- ಜಾನಪದಗೀತೆ, ಭಕ್ತಿಗೀತೆ, ಉತ್ಸವಗೀತೆಗಳು, ಲಘು ಸಂಗೀತ ಹಾಡುಗಳು, ಶಾಸ್ತ್ರೀಯ ಹಾಡುಗಳು, ದೇಶಭಕ್ತಿಗೀತೆಗಳು ಇವುಗಳನ್ನು ಒಟ್ಟು ಸೇರಿಸಿದ (ಸಂಯೋಜಿಸಿದ)ಒಂದು ಕೇಳಿಸುವುದು. ಮಕ್ಕಳಲ್ಲಿ ಆಸ್ವಾದನಾ ಟಿಪ್ಪಣಿ ಬರೆಯಲು ಸೂಚಿಸುವುದು.
- ಕೇರಳೀಯ ತಾಳವಾದ್ಯಗಳ ಒಂದು ಪ್ರಕ್ರಿಯೆ ತಯಾರಿಸಲು ಸೂಚಿಸುವುದು.
- ಟಿಪ್ಪಣಿ ತಯಾರಿಸಲು ಸಹಾಯಕವಾಗುವ ಪ್ರಶ್ನೆಗಳು.
  - ಮಂಡನೆಯಲ್ಲಿ ಒಳಗೊಳ್ಳಿಸಿದ ಹಾಡುಗಳು ಒಂದೇ ವಿಭಾಗದಲ್ಲಿರುವುದೇ?
  - ಯಾವೆಲ್ಲಾ ವಿಭಾಗದಲ್ಲಿರುವ ಹಾಡುಗಳು ಇದರಲ್ಲಿದೆ?
  - ಕೇಳಿದ ಮಂಡನೆಯ ಗಾನವಿಭಾಗಗಳೊಳಗೆ ಸಾಮ್ಯತೆ ಇದೆಯೇ?
  - ತಾಳ ಹಾಗೂ ರಾಗಗಳಲ್ಲಿ ವೈವಿಧ್ಯತೆ ಇದೆಯೇ?

- ತಾಳ ವೈವಿಧ್ಯತೆ ಹಾಗೂ ರಾಗವೈವಿಧ್ಯತೆ ಈ ಮಂಡನೆಯನ್ನು ಹೆಚ್ಚು ಆಕರ್ಷಕಗೊಳಿಸಿದೆಯೇ?
- ಹೊಸತನ ಸೃಷ್ಟಿಸಿದೆಯೇ?

- ಮಕ್ಕಳು ತಯಾರಿಸಿದ ಟಿಪ್ಪಣಿಯನ್ನು ಮಂಡಿಸುವುದು.
    - ವಿಭಿನ್ನ ಹಾಡುಗಳಾಗಿವೆ.
    - ಜಾನಪದಗೀತೆ, ಶಾಸ್ತ್ರೀಯ ಹಾಡುಗಳು, ನೃತ್ಯಹಾಡುಗಳು ಎಂಬೀ ವಿವಿಧ ರೀತಿಗಳಿವೆ.
    - ವೈವಿಧ್ಯಮಯವಾದ ರಾಗ, ತಾಳ ಇದೆ.
    - ಪ್ರಕಟಣೆ ಉತ್ತಮವಾಗಿದೆ, ಆಸ್ವಾದಕರವಾಗಿದೆ.
- **ವಿವರಣೆ**

  ಗಾನವಿಭಾಗಗಳು ವಿಭಿನ್ನವಾಗಿದ್ದರೂ, ರಾಗ – ತಾಳ ವೈವಿಧ್ಯಮಯವಾಗಿದ್ದರೂ, ಇವು ಎರಡೂ ಸಂಯೋಜಿಸಿ ಹಾಡುವಾಗ ಯೋಗ್ಯವೂ ಮನೋಹರವೂ ಅನುಭವವಾಗುವುದು. ಸಂಗೀತದ ಏಕೀಕರಣ ಭಾವವಾಗಿದೆ. ಇಂತಹ ವೈವಿಧ್ಯತೆ ಹೊರಹೊಮ್ಮುವುದು. ಇಂತಹ ವೈವಿಧ್ಯಮಯವಾದ ಸಂಯೋಜನೆಯು ವಿಭಿನ್ನವಾದ ಆಸ್ವಾದನಾ ಮಟ್ಟವನ್ನು ಸೃಷ್ಟಿಸುತ್ತದೆ.

**ಚಟುವಟಿಕೆ – 3**

- ವಿವಿಧ ಗಾನಶೈಲಿಗಳು, ವಿಭಿನ್ನ ತಾಳಗಳಲ್ಲಿ ಸಂಯೋಜಿಸಿ ಹಾಡುವುದಕ್ಕೆ ಮಕ್ಕಳನ್ನು ನಾಲ್ಕು ಗುಂಪುಗಳಾಗಿ ಮಾಡುವುದು.
- ಸೂಚನೆ

  ಹಾಡುಗಳನ್ನು ಸಂಯೋಜಿಸುವಾಗ ತಾಳವೈವಿಧ್ಯತೆ ಇರಬೇಕು. ಆಸ್ವಾದಕರವಾಗಿರಬೇಕು.
- ತರಬೇತಿಗೆ ಸಮಯವನ್ನು ನೀಡುವುದು.
- ಮಂಡನೆ (ಗುಂಪು)
- ಅಧ್ಯಾಪಕ ಹಾಗೂ ಉಳಿದ ಗುಂಪಿನವರು ಮೌಲ್ಯನಿರ್ಣಯ ಮಾಡಬೇಕು.
- ಮಂಡನೆಯ ಬಳಿಕ ಇಂತಹ ಪ್ರದರ್ಶನಗಳನ್ನು ಉತ್ತಮಪಡಿಸಲಿರುವ ಚರ್ಚೆಗಳನ್ನು ಗುಂಪಿನಲ್ಲಿ ನಡೆಸುವುದು.
- ಪ್ರತಿ ಗುಂಪಿನವರು ಹೆಚ್ಚಿನ – ತಾಳ – ಗಾನ ಸಂಕಲನಗಳನ್ನು ಕಂಡು ಹಿಡಿದು ಅಭ್ಯಸಿಸುವುದು. ಯೋಗ್ಯ ಶಂಧರ್ಭಗಳಲ್ಲಿ ಹಾಡುವುದು.
- ವೈವಿಧ್ಯವಾದ ಇಂತಹ ಗಾನಪ್ರದರ್ಶನಗಳು ಹೆಚ್ಚು ಆಲಿಸಲಿರುವ ಅವಕಾಶವನ್ನು ಒದಗಿಸುವುದು.

## ಮೌಲ್ಯನಿರ್ಣಯ

- ವೈವಿಧ್ಯಮಯವಾದ ಗಾನವಿಭಾಗಗಳನ್ನು ಆಯ್ಕೆ ಮಾಡುವುದು.
- ತಾಳ ವೈವಿಧ್ಯವನ್ನು ಪತ್ತೆ ಹಚ್ಚುವುದು.
- ಹಾಡುಗಾರಿಕೆ
- ಅಭಿಪ್ರಾಯ ಟಿಪ್ಪಣಿಗಳು, ಆಸ್ವಾದನಾ ಟಿಪ್ಪಣಿಗಳಲ್ಲಿರುವ ಸಮಗ್ರತೆ.

## ಕ್ರೋಢೀಕರಣ

ನಮ್ಮ ಸಂಗೀತವು ವಿವಿಧ ಶೈಲಿಗಳ ಸಂಗಮವಾಗಿದೆ. ಪ್ರತಿಯೊಂದು ಗಾನಶೈಲಿಯೂ ವೈವಿಧ್ಯಮಯವಾದ ರಾಗ– ತಾಳಗಳನ್ನು ಒಳಗೊಂಡಿವೆಯಾದರೂ ಅವು ತಮ್ಮೊಳಗೆ ಸಾಮ್ಯತೆಯನ್ನು ಹೊಂದಿವೆ. ವೈವಿಧ್ಯತೆಗಳನ್ನು ಒಳಗೊಂಡಿರುವ ಪ್ರದರ್ಶನಗಳು ಆಸ್ವಾದನಾಕರವೂ ಹೊಸತನದಿಂದ ಕೂಡಿದವೂ ಆಗಿರುತ್ತದೆ. ವಿಭಿನ್ನ ಸಂಗೀತ ಸಂಪ್ರದಾಯದ ಯೋಗ್ಯವಾದ ಸಂಯೋಜನೆಯ ನೀಡುವ ಇಂಪು ಆಸ್ವಾದಕರವಾಗಿದೆ. ಆಸ್ವಾದಕನನ್ನು ಸಂಗೀತ ಮಾಯಾಲೋಕಕ್ಕೆ ಕೊಂಡೊಯ್ಯುವುದು.

## ಯೂನಿಟ್ –3

ಪ್ರತಿಯೊಂದೂ ಪ್ರದೇಶಕ್ಕೂ ಆ ಪ್ರದೇಶದ ಕಲಾ ಸಂಸ್ಕೃತಿಯನ್ನು ಸಾರಿ ಹೇಳುವ ಕಲಾರೂಪಗಳಿರುತ್ತದೆ. ಇಂತಹ ಕಲಾ ರೂಪಗಳು ಅಲ್ಲಿನ ಜನರ ನಿತ್ಯಜೀವನದೊಂದಿಗೆ ಭೇದಿಸಲಾಗದ ಸಂಬಂಧವನ್ನಿಟ್ಟುಕೊಂಡಿರುತ್ತದೆ. ಆಲಾಪನೆಗೂ, ವಾದನೆಗೂ, ನೃತ್ಯಹೆಜ್ಜೆಗಳಲ್ಲಿಯೂ, ಇನ್ನೊಂದೂ ಪ್ರದೇಶದ ಕಲಾರೂಪಗಳಿಂದ ಪೂರ್ಣವಾಗಿ ವ್ಯತ್ಯಾಸ ಹೊಂದಿರುವ ಈ ಕಲಾರೂಪಗಳಿಗೆ ಅದರದ್ದೇ ಆದ ಸೌಂದರ್ಯ ಹಾಗೂ ಚರಿತ್ರೆಯೂ ಇದೆ. ಪ್ರಾದೇಶಿಕ ಕಲಾರೂಪಗಳಲ್ಲಿ ಸಹವಾದ್ಯಗಳಾಗಿ ಉಪಯೋಗಿಸುವ ಆದರೆ ಇನ್ನಿತರ ಪ್ರದೇಶಗಳಲ್ಲಿ ಪ್ರಚಾರದಲ್ಲಿರದ ಹಲವು ವಾದ್ಯೋಪಕರಣಗಳನ್ನು ಮತ್ತು ವಾದಕರನ್ನು ಗುರುತಿಸಿ ಅವುಗಳ ವೈಶಿಷ್ಟ್ಯತೆ ಕಲಾ ಸಮೂಹಕ್ಕೆ ತಿಳಿಯಪಡಿಸುವುದು ಹಾಗೂ ಮುಖ್ಯ ಕಲಾ ಸಾಂಸ್ಕೃತಿಕ ವಿಸ್ತರಣೆಗೆ ಈ ವಾದ್ಯವಾದಕರನ್ನು ಕಲಾ ರೂಪಗಳನ್ನು ತಲುಪಿಸುವ ಎಂಬ ಉದ್ದೇಶವಾಗಿದೆ ಈ ಪಾಠಭಾಗದಲ್ಲಿರುವುದು.

### ಒಳಹೂರಣ

ಪ್ರಾದೇಶಿಕ ಕಲಾರೂಪಗಳಲ್ಲಿ ಉಪಯೋಗಿಸುವ ವಿವಿಧ ವಾದ್ಯೋಪಕರಣಗಳು ಅವುಗಳನ್ನು ವರ್ಗೀಕರಿಸುವುದು, ವಾದನಧಾರ ತತ್ವಗಳು. ಪ್ರತಿಯೊಂದು ವಿಭಾಗಗಳಲ್ಲಿ ಪ್ರಖ್ಯಾತರಾದ ಕಲಾವಿದರು ಮುಂತಾದವುಗಳ ಕುರಿತು ಈ ಪಾಠದಲ್ಲಿ ಪ್ರತಿಬಿಂಬಿಸುತ್ತದೆ.

### ಕಲಿಕಾಸಾಧನೆ

ಪ್ರಾದೇಶಿಕ ಸಂಗೀತೋಪಕರಣಗಳನ್ನು ಪರಿಚಯಿಸುವುದು ಹಾಗೂ ಅವುಗಳ ಕುರಿತು ಪ್ರತಿಕ್ರಿಯಿಸುವುದು.

### ಆಶಯ/ತಿಳುವಳಿಕೆ

- ಪ್ರಾದೇಶಿಕವಾದ ಕೆಲವು ಸಂಗೀತೋಪಕರಣಗಳಿವೆ.
- (ಪ್ರಾದೇಶಿಕ ಸಂಗೀತೋಪಕರಣಗಳನ್ನು ನುಡಿಸುವ ವಿದ್ವಾಂಸರಿದ್ದಾರೆ.
- ಇವುಗಳನ್ನು ಉಪಯೋಗಿಸಲು ತರಬೇತಿಯ ಅಗತ್ಯವಿದೆ.

### ಪ್ರಕ್ರಿಯೆ

- ಪ್ರಾದೇಶಿಕ ಸಂಗೀತೋಪಕರಣಗಳ ಕುರಿತು ಸಂಶೋಧನೆ.
- ಪ್ರಾದೇಶಿಕ ಸಂಗೀತೋಪಕರಣಗಳನ್ನು ವರ್ಗೀಕರಿಸುವುದು.
- ಪ್ರದರ್ಶನ.
- ವಿದ್ಯಾಂಸರೊಂದಿಗೆ ಆಶಯ ವಿನಿಮಯ.

### ಮೌಲ್ಯಮಾಪನ

- ಪ್ರಶ್ನೆಗಳ ಮೂಲಕ ಮೌಲ್ಯನಿರ್ಣಯ.
- ಟಿಪ್ಪಣಿಗಳ ಸಮಗ್ರತೆ
- ಚಿತ್ರ ಸಂಗ್ರಹಗಳ ಮೇಲ್ಮೈ
- ವೈವಿಧ್ಯತೆಗನುಸರಿಸಿದ ತಿಳುವಳಿಕೆ

### ಕಲಿಕಾ ಚಟುವಟಿಕೆಗಳು

**ಚಟುವಟಿಕೆ – 1**

- ಕೆಲವು ಪ್ರಾದೇಶಿಕ ಕಲಾರೂಪಗಳ ವಿ.ಸಿ.ಡಿ. ಪ್ರದರ್ಶಿಸುವುದು (ಅವರವರ ಪ್ರದೇಶದಲ್ಲಿ ಪ್ರಚಾರವಿರುವ ಯಾವುದಾದರೂ ಕಲಾರೂಪವನ್ನು ಆಯ್ಕೆ ಮಾಡಬೇಕು)
- ನೋಡಿದ ಕಲಾರೂಪದಲ್ಲಿ ಉಪಯೋಗಿಸಿರುವ ಸಂಗೀತೋಪಕರಣಗಳ ಪಟ್ಟಿ ತಯಾರಿಸಲು ಹೇಳುವುದು. ವೈಯಕ್ತಿಕವಾಗಿ ಮಂಡಿಸುವುದು.

- ಅಧ್ಯಾಪಕ ಕರಿಹಲಗೆ/ಚಾರ್ಟ್‌ನಲ್ಲಿ ದಾಖಲಿಸುವುದು.
- ತಾಳವಾದ್ಯ/ತಂತಿವಾದ್ಯ/ಸುಶಿರವಾದ್ಯ ಹೀಗೆ ವರ್ಗೀಕರಿಸಿ ಬರೆಯುವುದು. ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕ ಕರಿಹಲಗೆಯಲ್ಲಿ ಬರೆದ ಕಾಲಂಗಳಲ್ಲಿ ಯೋಗ್ಯವಾದ ವಾದ್ಯಗಳ ಹೆಸರುಗಳನ್ನು ಬರೆಯುವುದು.

  ಉದಾ:

  ತಾಳವಾದ್ಯ – ಉಡುಕ್, ತಂತಿವಾದ್ಯ – ಪುಳ್ಳುವ ವೀಣ, ಸುಶಿರವಾದ್ಯ – ಟೀನಿ ಕುಯಲ್
- ವಾದ್ಯೋಪಕರಣಗಳ ವಿಶೇಷತೆಗನುಸರಿಸಿ ವರ್ಗೀಕರಿಸುವುದು, ವಿವರಿಸುವುದು.

  **ತಂತಿವಾದ್ಯ** - ಮರದಲ್ಲಿಯೋ ಲೋಹದಂಟಿನಲ್ಲಿಯೋ ಅಳವಡಿಸಿ ತಂತಿಗಳನ್ನು ಮಾಡಿ ಶಬ್ದ ಹೊರಡಿಸುವುದು. ಉಪಕರಣಗಳು ಕಂಪನದ ಮೂಲಕ ನಾದವನ್ನು ಹೊರಡಿಸುವುದು.

  **ತಾಳವಾದ್ಯಗಳು**- ಒಳಭಾಗ ಪೊಳ್ಳಾದ ಮರದ ತುಂಡನ್ನು, ಲೋಹವನ್ನು, ಪ್ರಾಣಿಗಳ ಚರ್ಮವನ್ನು ಅಥವಾ ಅದಕ್ಕೆ ಸಮಾನವಾದ ಮೃದುವಾದ ಮೇಲ್ಪದರನ್ನು ಬಿಗಿಯಾಗಿ ಎಳೆದು ಕಟ್ಟಿ, ಅದಕ್ಕೆ ಕೈಗಳಿಂದ ಅಥವಾ ಕೋಲುಗಳಿಂದ ಬಡಿದಾಗ ಶಬ್ದವನ್ನು ಉಂಟು ಮಾಡುವಂತಹ ಸಂಗೀತೋಪಕರಣಗಳನ್ನು ತಾಳವಾದ್ಯಗಳನ್ನುವರು.

  **ಸುಶಿರವಾದ್ಯಗಳು**- ರಂಧ್ರಗಳ ಮೂಲಕ ಗಾಳಿಯನ್ನು ಊದಿ ಶಬ್ದವನ್ನು ಉಂಟು ಮಾಡುವ ವಾದ್ಯೋಪಕರಣಗಳಾಗಿವೆ.

**ಚಟುವಟಿಕೆ – 2**

- ಪ್ರಾದೇಶಿಕವಾದ ವಾದ್ಯೋಪಕರಣಗಳ ಬಗ್ಗೆ ತಿಳಿಯುವುದು. ಅವುಗಳ ಕುರಿತಾದ ಸಂಸ್ಕೃತಿಯನ್ನು ಗುರುತಿಸುವುದು.
- ಮಕ್ಕಳನ್ನು 4 ಗುಂಪುಗಳಾಗಿ ಮಾಡಿ ಅಧ್ಯಯನ ನಡೆಸುವುದು.
- ತಾವು ಸಂಗ್ರಹಿಸಿದ ಕಲಾಪ್ರಕಾರಗಳಲ್ಲಿ ಉಪಯೋಗಿಸಿದ ಉಪಕರಣಗಳ ಪಟ್ಟಿಯನ್ನು ಮಾಡುವುದು. (ಗುಂಪಾಗಿ ಹೊರಪ್ರದೇಶಗಳಿಗೆ ಭೇಟಿ, ಕಲಾಕಾರ್ಯಕ್ರಮಗಳನ್ನೊಳಗೊಂಡ ವಿಷಯ ಸಂಗ್ರಹಣೆಯ ಮಾಧ್ಯಮಗಳನ್ನ ಸಂಗ್ರಹಿಸುವುದು)
- ಕಂಡು ಹಿಡಿದ ವಾದ್ಯೋಪಕರಣಗಳ ವಾದನಾರೀತಿ, ವಿಶೇಷತೆಗಳನ್ನು ತಿಳಿಯುವುದು.
- ಈ ವಾದ್ಯೋಪಕರಣಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ ಕಲಾವಿದರ ಕಛೇರಿಗಳನ್ನು ವೀಕ್ಷಿಸುವುದು.
- ಕಲಾವಿದರೊಂದಿಗೆ ಸಂದರ್ಶನ, ಸಂಭಾಷಣೆ ನಡೆಸುವುದು.
- ಪ್ರಾದೇಶಿಕ ಕಲಾವಿದರ ಸಹಾಯದೊಂದಿಗೆ ಶಾಲೆಯಲ್ಲಿ ಕೆಲವು ವಾದ್ಯೋಪಕರಣಗಳ ಕಛೇರಿಯನ್ನು ನಡೆಸುವುದು.

**ಚಟುವಟಿಕೆ – 3**

- ಕೇರಳದಲ್ಲಿ ವಿವಿಧ ಸ್ಥಳಗಳಲ್ಲಿ ಪ್ರಚಾರದಲ್ಲಿರುವ ಪ್ರಾದೇಶಿಕವಾದ ವಾದ್ಯಗಳ ಸಿ.ಡಿ. ಪ್ರದರ್ಶನ (ಡಯಡಣಿ, ಭೂತಕೋಲ, ಕುತ್ತಿಯೋಟ್ಟಂ, ವೇಲಕ್ಕಳಿ, ಪೂತನಂ ತಿರಿಯನಂ)
- ವಾದ್ಯೋಪಕರಣಗಳ ಚಿತ್ರಗಳನ್ನೊಳಗೊಂಡ ಆಲ್ಬಂ ತಯಾರಿಸುವುದು (ಗುಂಪಿನಲ್ಲಿ)
- ಪ್ರಾದೇಶಿಕ ಕಲಾವಿದರೊಂದಿಗೆ ನಡೆಸಿದ ಸಂದರ್ಶನವನ್ನು ದಾಖಲಿಸಿ ಅದರ ಸಂಗ್ರಹವನ್ನು ಮಾಡುವುದು.
- ವಿಭಿನ್ನ ಗುಂಪುಗಳಲ್ಲಿ ತಯಾರಿಸಿದ ಸಂಚಿಕೆ, ಚಾರ್ಟ್ ಎಂಬಿವುಗಳ ಪ್ರದರ್ಶನ ಮತ್ತು ಓದುವಿಕೆಗೆ ಅವಕಾಶ ನೀಡುವುದು.

### ಮೌಲ್ಯನಿರ್ಣಯ

- ವಾದ್ಯೋಪಕರಣಗಳನ್ನು ಗುರುತಿಸುವುದು.
- ಸಂಗ್ರಹದ ಹಿರಿಮೆ.
- ಪ್ರತಿಕ್ರಿಯೆಗಳ ಕೃತ್ಯತೆ.
- ಸಂದರ್ಶನಗಳ ಹಿರಿಮೆ.

### ಕ್ರೋಡೀಕರಣ

ಈ ಚಟುವಟಿಕೆಗಳು ವಿವಿಧ ಪ್ರದೇಶಗಳಲ್ಲಿರುವ ಹಾಗೂ ಅಲ್ಲಿ ಆಚರಿಸಲ್ಪಡುತ್ತಿರುವ ವಾದ್ಯ ಸಂಸ್ಕೃತಿ, ವಾದಕರು ಮತ್ತು ಕಲಾರೂಪಗಳು ಮತ್ತು ಅವುಗಳ ವಿಶೇಷತೆ, ಪ್ರಯೋಗ ರೀತಿ ಎಂಬಿವುಗಳ ಕುರಿತು ಹೆಚ್ಚಿನ ಜ್ಞಾನ ಗಳಿಸುವುದಕ್ಕೆ ಸಹಾಯ ಮಾಡುವುದು.
ಪ್ರಾದೇಶಿಕ ವಾದ್ಯಗಳಾದ ಉಡುಕ್, ತಕಿಲ್, ಪುಳಳುವಾಕ್ಕುಡಂ, ಕರಿಮಿರ್ರ ಮೊದಲಾದವುಗಳೂ ಕುರುಂಗುಯಲ್, ಪುಳ್ಳುವ, ವೀಣೆ ಮೊದಲಾದವುಗಳ ಕುರಿತು ಇಲ್ಲಿ ತಿಳಿಸಬೇಕಾಗಿದೆ.

## ಯೂನಿಟ್ –4 ಪಕ್ಕವಾದ್ಯ

ಭಾರತೀಯ ಶಾಸ್ತ್ರೀಯ ಸಂಗೀತ ಶಾಖೆಗೆ ಅದರದ್ದೇ ಆದ ವಿಶೇಷತೆಗಳಿವೆ. ಕ್ರಮಬದ್ಧವಾದ ಕಲಿಕೆ, ನಿರಂತರ ಅಭ್ಯಾಸಗಳಿಂದ ಲಭಿಸುವ ಆಲಾಪನಾ ನೈಪುಣ್ಯತೆ ಇದಕ್ಕಿರುವ ಉದಾಹರಣೆಯಾಗಿದೆ. ಈ ಪಾಠಭಾಗದ ಚಟುವಟಿಕೆಗಳ ಮೂಲಕ ಮನೋಧರ್ಮ ಸಂಗೀತದ ಅಲಂಕಾರಿಕವಾದ ಸೌಂದರ್ಯವು ಹೆಚ್ಚು ಒಳಗೊಂಡಂತಹ ವಾದ್ಯಗಳ ಕುರಿತಾದ ವಿವರವಾದ ಅಧ್ಯಯನ ಮಾಡಲು ಸಾಧ್ಯವಿದೆ.
ಯಾವುದೇ ಸಂಗೀತ ಶಾಖೆಗಳೊಂದಿಗೆ ಹೋಲಿಸಿದರೂ ನಮಗೆ ಅತೀ ಹೆಚ್ಚು ವಿಶೇಷತೆಗಳನ್ನು ಕಾಣುವುದು. ಕರ್ನಾಟಕ ಸಂಗೀತದಲ್ಲಾಗಿದೆ. ರಾಗ, ತಾಳ, ಭಾವ, ಗಮಕಗಳು ಪ್ರಧಾನವಾಗಿರುವಂತಹ ಹಾಡುಗಾರಿಕೆಗಳನ್ನು ಹೆಚ್ಚು ಉತ್ತಮಗೊಳಿಸುವಂತಹ ವಾದ್ಯೋಪಕರಣಗಳ ಸಂದರ್ಭೋಚಿತವಾದಿ ವಾದನಾ ಪ್ರಕ್ರಿಯೆಯನ್ನು ನಿಖರವಾಗಿ ಅರ್ಥೈಸಲು ಈ ಪಾಠಭಾಗ ಮಾಡುವುದು.

### ಒಳಹೂರಣ

ಈ ಅಧ್ಯಾಯದಲ್ಲಿ ಪಕ್ಕವಾದ್ಯಗಳು, ಅವುಗಳನ್ನು ನುಡಿಸಲಿರುವ ವಿಶೇಷತೆಗಳು, ಉಪ ಪಕ್ಕವಾದ್ಯಗಳು, ಪ್ರದರ್ಶನಾ ರೀತಿ, ಸಂದರ್ಭ, ವಾದ್ಯೋಪಕರಣಗಳ ವಿಶೇಷತೆಗಳು, ಅವುಗಳು ಒಳಗೊಳ್ಳುವಂತಹ ವಾದ್ಯ ಶಾಖೆ ಇವುಗಳ ಕುರಿತು ವಿವರವಾಗಿ ವಿವರಿಸಲಾಗಿದೆ.

### ಕಲಿಕಾಸಾಧನೆ

ಸಂಗೀತ ಕಛೇರಿಗಳಲ್ಲಿ ಉಪಯೋಗಿಸುವ ಪಕ್ಕವಾದ್ಯ, ಉಪಪಕ್ಕವಾದ್ಯ ಇವುಗಳ ಕುರಿತು ಟಿಪ್ಪಣಿ ತಯಾರಿಸಿ ಮಂಡಿಸುವುದು.

### ಆಶಯ/ತಿಳುವಳಿಕೆ

- ಪಕ್ಕವಾದ್ಯ, ಉಪಪಕ್ಕವಾದ್ಯಗಳ ಕುರಿತು ತಿಳುವಳಿಕೆ.
- ಪ್ರತಿಯೊಂದರ ಯೋಗ್ಯ ರೀತಿಯ ಉಪಯೋಗ.
- ಪಕ್ಕವಾದ್ಯ, ಉಪಪಕ್ಕವಾದ್ಯಗಳನ್ನು ಗುರುತಿಸುವುದು.

# ಕಲಾಶಿಕ್ಷಣ

## ಪ್ರಕ್ರಿಯೆ

- ಪಕ್ಕ, ಉಪಪಕ್ಕವಾದ್ಯಗಳನ್ನು ಉಪಯೋಗಿಸಿರುವಂತ ಸಂಗೀತ ಕಾರ್ಯಕ್ರಮಗಳನ್ನು ವೀಕ್ಷಿಸಲು, ಕೇಳಲು ಇರುವ ಸಂದರ್ಭ ಶ್ರವಣ – ನೀರಿಕ್ಷಣೆ, ಚರ್ಚೆ, ಟಿಪ್ಪಣಿಗಳು.

## ಮೌಲ್ಯನಿರ್ಣಯ

- ಟಿಪ್ಪಣಿಯ ಸಮಗ್ರತೆ – ಪರಸ್ಪರ ಮೌಲ್ಯನಿರ್ಣಯ ಮಾಡುವುದು. ಸ್ವ – ಮೌಲ್ಯಮಾಪನ ಮಾಡುವುದು.

## ಕಲಿಕಾ ಚಟುವಟಿಕೆಗಳು

- ಕರ್ನಾಟಕ ಸಂಗೀತ ಕಛೇರಿಯ ವಿಸಿಡಿ ತರಗತಿಯಲ್ಲಿ ಪ್ರದರ್ಶಿಸುವುದು. ಸಂಗೀತ ಕಛೇರಿಯಲ್ಲಿ ಹಾಡುಗಾರನೊಂದಿಗೆ ನುಡಿಸುವ ಉಪಕರಣಗಳ ಕುರಿತು ಅನ್ವೇಷಿಸುವುದು.

  **ಸೂಚಕಗಳು**

  - ದೃಶ್ಯದಲ್ಲಿ ಎಷ್ಟು ಸಂಗೀತೋಪಕರಣಗಳನ್ನು ಕಾಣಲು ಸಾಧ್ಯವಿದೆ?
  - ಅವುಗಳ ಯಾವುದೆಂದು ಹೇಳಲು ಸಾಧ್ಯವಿದೆ?
  - ಉಪಕರಣಗಳನ್ನು ನುಡಿಸುವವರು ಹಾಡುಗಾರನ ಯಾವ ಯಾವ ಬದಿಗಳಲ್ಲಾಗಿ ಕುಳಿತಿದ್ದಾರೆ?
- ಸೂಚಕಗಳ ಆಧಾರದಲ್ಲಿ ಟಿಪ್ಪಣಿಯನ್ನು ತಯಾರಿಸಲು ಹೇಳುವುದು.
- ವೈಯಕ್ತಿಕವಾಗಿ ಮಂಡಿಸಲಿರುವ ಅವಕಾಶ ನೀಡುವುದು.
  - ದೃಶ್ಯದಲ್ಲಿ, ಮೃದಂಗ, ವಯಲಿನ್, ಘಟಂ, ಮೌತ್ ಓರ್ಗನ್, ಗಂಜಿರ ಎಂಬ ಉಪಕರಣಗಳು.
  - ತಂಬೂರಿ, ಮೃದಂಗ ಎಂಬೀ ಉಪಕರಣಗಳು ಹಾಡುಗಾರನ ಎರಡು ಬದಿಗಳಲ್ಲಾಗಿಯೂ ಉಳಿದವುಗಳು ಹಿಂಬದಿಯಲ್ಲಿ ಕುಳಿತುಕೊಳ್ಳುತ್ತಾರೆ.
  - ವಯಲಿನ್, ಮೃದಂಗ ಎಂಬೀ ಉಪಕರಣಗಳು ಹಾಡುಗಾರನ ಎರಡು ಬದಿಗಳಲ್ಲಾಗಿಯೂ, ಉಳಿದವುಗಳು ಹಿಂಬದಿಯಲ್ಲಿ ಕುಳಿತುಕೊಳ್ಳುತ್ತಾರೆ.
- ಮಕ್ಕಳು ಮಂಡಿಸಿದ ಟಿಪ್ಪಣಿಗಳಿಗೆ ಅನುಬಂಧವಾಗಿ ಹೆಚ್ಚಿನ ವಿಶದೀಕರಣವನ್ನು ಅಧ್ಯಾಪಕ ನೀಡುವುದು.
  - ತುಂಬುರು, ಶ್ರುತಿ ಉಪಕರಣವಾಗಿದೆ.
  - ತಂತಿವಾದ್ಯ ವಿಭಾಗದಲ್ಲಿ ಸೇರಿಕೊಂಡಿವೆ.
  - ನಾಲ್ಕು ತಂತಿಗಳಿವೆ.
  - ಮಡಿಲಲ್ಲಿ ನೆಟ್ಟಗೆ ಇರಿಸಿ ತಂತಿಗಳಲ್ಲಿ ಬೆರಳಿನಿಂದ ಶಬ್ದವನ್ನು ಹೊರಡಿಸುತ್ತದೆ.
  - ಮೊದಲಿನ ತಂತಿಯನ್ನು ನಡುಬೆರಳಿನಿಂದಲೂ, ಉಳಿದ ಮೂರು ತಂತಿಗಳನ್ನು ತೋರ್ಬೆರಳಿನಿಂದಲೂ ಮೀಟುತ್ತಾರೆ.
  - ವಲಯಲಿನ್ ಒಂದು ತಂತಿವಾದ್ಯವಾಗಿದೆ. ತಂತಿಗಳಿಗೆ ಬೋ (ಬಿಲ್ಲು)ವನ್ನು ಮೀಟಿ ಶಬ್ದವನ್ನುಂಟು ಮಾಡುತ್ತದೆ. ಮದ್ದಳೆ, ಘಟ, ಮುಖಶಂಖ, ಗಂಜಿರ ಇವುಗಳು ತಾಳವಾದ್ಯಗಳಾಗಿವೆ. ಘಟ ಮಣ್ಣಿನಿಂದ ನಿರ್ಮಿಸಿದ್ದಾಗಿದೆ.
- ಟಿಪ್ಪಣಿಗಳನ್ನು ಉತ್ತಮಪಡಿಸಲು ಮಕ್ಕಳಲ್ಲಿ ಹೇಳುವುದು.
- ಅಧ್ಯಾಪಕರು ಕೆಲವು ಪ್ರಶ್ನೆಗಳನ್ನು ಪುನಃ ಕೇಳುವುದು.
  - ಎಲ್ಲಾ ಸಂಗೀತೋಪಕರಣಗಳನ್ನು ಹಾಡುಗಾರನೊಂದಿಗೆ ಆರಂಭದಿಂದ ಕೊನೆಯವರೆಗೂ ನುಡಿಸಲಾಗುತ್ತಿದೆಯೇ?

- ಯಾವ ವಾದ್ಯೋಪಕರಣಗಳನ್ನು ಕೊನೆಯವರೆಗೂ ನುಡಿಸುತ್ತಾರೆ?
- ಯಾವುದೆಲ್ಲ ಇಲ್ಲ?

- ಸಂಗೀತ ಕಛೇರಿಯ ದೃಶ್ಯವನ್ನು ಅಧ್ಯಾಪಕ ಪುನಃ ಪ್ರದರ್ಶಿಸುವುದು.
- ನುಡಿಸುವ ರೀತಿಯನ್ನು ವೀಕ್ಷಿಸಿ ನೋಟ್‌ಪುಸ್ತಕದಲ್ಲಿ ಬರೆಯಲು ಮಕ್ಕಳಲ್ಲಿ ಹೇಳುವುದು.
- ಟಿಪ್ಪಣಿಗಳನ್ನು ವೈಯಕ್ತಿಕವಾಗಿ ಮಂಡಿಸುವುದು.
    - ಎಲ್ಲಾ ವಾದ್ಯೋಪಕರಣಗಳು ಆರಂಭದಿಂದ ಕೊನೆಯವರೆಗೆ ನುಡಿಸುವುದಿಲ್ಲ. ವಯಲಿನ್, ಮದ್ದಳೆ ಇವುಗಳು ಆಲಾಪನೆಯ ವೇಳೆ ಕೊನೆಯವರೆಗೂ ನುಡಿಸಲಾಗುವುದು. ಉಳಿದವುಗಳನ್ನು ಕೆಲ ಸಮಯಗಳಲ್ಲಿ ನುಡಿಸುವುದಿಲ್ಲ.
    - ಹಾಡುಗಾರ ಹಾಡದ ಸಮಯಗಳಲ್ಲಿ ತಂಬೂರಿ ನುಡಿಸುತ್ತಾರೆ.
- ಹೆಚ್ಚಿನ ಸ್ಪಷ್ಟತೆ ಉಂಟಾಗಲು ಅಧ್ಯಾಪಕರನ್ನು ಕೆಲವು ವಿಚಾರಗಳನ್ನು ಸೇರಿಸಿ ಹೇಳುವುದು.
    - ತಂಬೂರಿ ಒಂದು ಶ್ರುತಿ ಉಪಕರಣವಾದ್ದರಿಂದ ಆರಂಭದಿಂದ ಕೊನೆಯವರೆಗೂ ಹಾಡುಗಾರ ಹಾಡದ ವಿರಾಮ ವೇಳೆಗಳಲ್ಲೂ ಸಹ ಮೀಟುತ್ತಾ ಇರುತ್ತದೆ.
    - ವಯಲಿನ್, ಮದ್ದಳೆ ಎಲ್ಲಾ ಸಮಯದಲ್ಲೂ ಹಾಡುಗಾರನೊಂದಿಗಿರುವುದು.
    - ಶ್ರುತಿ ಉಪಕರಣ, ವಯಲಿನ್, ಮದ್ದಳೆ ಇಲ್ಲದೆ ಕಳೆಯನ್ನು ಆಸ್ವಾದನಾ ರಸವನ್ನು ನೀಡುತ್ತದೆ.
    - ಗಂಜೀರ, ಮುಖಶಂಖ, ಘಟ ಕಛೇರಿಗೆ ಹೆಚ್ಚು ಕಳೆಯನ್ನು ಆಸ್ವಾದನಾ ರಸವನ್ನು ನೀಡುತ್ತದೆ.
    - ಮನೋಧರ್ಮ ಸಂಗೀತ ವಿಭಾಗದ ರಾಗಾಲಾಪನೆಯ ಸಮಯದಲ್ಲಿ ವಯಲಿನ್ ಮಾತ್ರ ಹಾಡುಗಾರನೊಂದಿಗೆ ಸೇರುವುದು. ಮನೋಧರ್ನಸ್ವರ ಆಲಾಪಿಸುವಾಗ ಮೃದಂಗದ ಸಂಗೀತದೊಂದಿಗೆಯಾದರೆ, ಮನೋಧರ್ಮಸ್ವರ ವಯಲಿನ್ ನುಡಿಸುವುದಾಗ ಉಳಿದ ಮೂರು ತಾಳವಾದ್ಯಗಳ ವಯಲಿನ್ ನುಡಿಸುವರೊಂದಿಗೆ ಇರುವುದು.
    - ಹಾಡುಗಾರನೊಂದಿಗೆ ಕಚೇರಿಗಳಲ್ಲಿ ಆರಂಭದಿಂದ ಕೊನೆಯವರೆಗೂ ಇರುವ (ವಯಲಿನ್, ಮೃದಂಗ) ವಾದ್ಯಗಳನ್ನು ಪಕ್ಕವಾದ್ಯಗಳು ಎಂದು ಕರೆಯುತ್ತಾರೆ. ಉಳಿದ ತಾಳವಾದ್ಯಗಳು ಸಂಗೀತ ಕಚೇರಿಯ ಪಕ್ಕವಾದ್ಯಗಳಾಗಿವೆ. ಪ್ರಧಾನ ತಾಳವಾದ್ಯಗಳನ್ನು ಹಿಂಬಾಲಿಸುವ ವಾದ್ಯೋಪಕರಣಗಳಾಗಿವೆ ಉಪಪಕ್ಕವಾದ್ಯಗಳು. ತಾಳವಾದ್ಯಗಳಲ್ಲಿ ಮೃದಂಗಕ್ಕೆ ರಾಜನ ಸ್ಥಾನವಿದೆ ಎಂದು ಹೇಳುತ್ತಾರೆ. ಅಧ್ಯಾಪಿಕ ನೀಡಿದ ವಿವರಗಳನ್ನು ಉಪಯೋಗಿಸುವ ಪಕ್ಕ, ಉಪಪಕ್ಕವಾದ್ಯೋಪಕರಣಗಳನ್ನು ಮಕ್ಕಳು ಅರಿತುಕೊಳ್ಳುವುದು.

## ಮುಂದುವರಿದ ಚಟುವಟಿಕೆ

- ಪಕ್ಕಮೇಳ, ಉಪಪಕ್ಕಮೇಳ ಇವುಗಳ ಚರಿತ್ರೆ ಹಿನ್ನಲೆಯ ಕುರಿತು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಪ್ರದರ್ಶಿಸುವುದು.
- ಇವುಗಳ ಚಿತ್ರಗಳನ್ನು ಸಂಗ್ರಹಿಸುವುದು.
- ಈ ವಾದ್ಯಗಳಲ್ಲಿ ಪ್ರಸಿದ್ಧರಾದ ವಾದಕರ ಬಗ್ಗೆ ಮಾಹಿತಿ ಸಂಗ್ರಹ. ಚಿತ್ರ ಸಂಗ್ರಹ ಮಾಡುವುದು.

## ಮೌಲ್ಯನಿರ್ಣಯ

- ವಾದ್ಯೋಪಕರಣಗಳನ್ನು ಗುರುತಿಸುವುದು.

- ಟಿಪ್ಪಣಿಗಳ ಸಮಗ್ರತೆ, ಸಂಪನ್ನತೆ.
- ಪಕ್ಕ, ಉಪಪಕ್ಕಮೇಳಗಳನ್ನು ಗುರುತಿಸುವುದು.

## ಕ್ರೋಡೀಕರಣ

- ಶಾಸ್ತ್ರೀಯ ಸಂಗೀತ ಕಚ್ಚೇರಿಗಳಲ್ಲಿ ಬಿಡಲಾಗದ ಎರಡು ವಾದ್ಯೋಪಕರಗಳಾಗಿವೆ ವಯಲಿನ್ ಹಾಗೂ ಮೃದಂಗ, ಮದ್ದಳೆ. ಆದುದರಿಂದ ಇವುಗಳ ಪಕ್ಕವಾದ್ಯಗಳೆಂದೂ ತಿಳಿಯಲ್ಪಡುತ್ತದೆ.

# ಯೂನಿಟ್ – 5 ಸಂಗೀತರೂಪಗಳು

ವೈವಿಧ್ಯಮಯವಾದ ಸಂಗೀತರೂಪಗಳಿಂದ ಸಂಪನ್ನವಾಗಿದೆ. ಕರ್ನಾಟಿಕ್ ಸಂಗೀತ ದೀರ್ಘಕಾಲದ ಕಲಿಕೆಯಿಂದಲೂ, ಪ್ರಯತ್ನದಿಂದಲೂ ಸ್ವಾಯತ್ತಮಾಡುವ ಗಾನರೂಪಗಳು, ಸ್ವಲ್ಪ ಕಾಲದ ಕಲಿಕೆಯಿಂದ ಹಾಡಲು ಸಾಧ್ಯವಿರುವ ಲಘು ಸಂಗೀತರೂಪಗಳು ನಮ್ಮ ಸಂಗೀತ ಸಂಪ್ರದಾಯದಲ್ಲಿ ಒಳಗೊಂಡಿವೆ. ಸಂಗೀತ ಕಲಿಕಾ ವಿಷಯವಾಗಿ ಆಯ್ಕೆ ಮಾಡಿದ ಕಲಿಕೆದಾರನಿಗೆ ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ಹಾಡಲು ತಯಾರಿಸಿದ ಕೆಲವು ಸಂಗೀತರೂಪಗಳನ್ನು ಈ ಅಧ್ಯಾಯದಲ್ಲಿ ಒಳಗೊಳ್ಳಿಸಲಾಗಿದೆ. ಕರ್ನಾಟಕ ಸಂಗೀತ ಸಂಪ್ರದಾಯದ ಕೆಲವು ಮನೋಹರ ಲಘು ಸಂಗೀತ ಸೃಷ್ಟಿಗಳ ಮತ್ತು ಅರ್ಧಶಾಸ್ತ್ರೀಯ ಗಾನರೂಪಗಳ ಪರಿಚಯಗೊಳಿಸಿ ಈ ಅಧ್ಯಾಯದಲ್ಲಿ ನೀಡಲಾಗಿದೆ.

## ಒಳಹೂರಣ

ಗೀತೆ, ಲಘುಕೀರ್ತನೆಗಳು, ಭಕ್ತಿರಸ ಪ್ರಧಾನವಾದ ಭಜನೆ, ಆಲಾಪನೆ ಮಾಧುರ್ಯ ಹೆಚ್ಚಿರುವ ಗಸಲ್, ಇವುಗಳ ಆಲಾಪನೆ, ತರಬೇತಿ ಎಂಬಿವುಗಳಿಗಿರುವ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಕೇರಳದ ಸ್ವಂತ ಗಾನರೂಪವಾದ ದೋಣಿಹಾಡು ಹಾಗೂ ಅದರ ವಿಭಿನ್ನವಾದ ಆಲಾಪನಾ ಶೈಲಿ, ಸೋಪಾನ ಶೈಲಿಯಲ್ಲಿ ಹಾಡುವ ಅಷ್ಟಪದಿ ಹಾಡುಗಳನ್ನು ಇದರ ಆಲಾಪನಾ ರೀತಿ ಅಭ್ಯಸಿಸುವ ಚಟುವಟಿಕೆಗಳನ್ನು ಈ ದಅಯಾಯದಲ್ಲಿ ನೀಡಲಾಗಿದೆ.

## ಕಲಿಕಾ ಸಾಧನೆಗಳು

ಗೀತೆಗಳು, ಲಘುಸಂಗೀತಗಳು, ಭಜನೆ, ಅಷ್ಟಪದಿ, ವಂಚಿಪಾಟ್ಟು, ಗಸಲ್ ಇವುಗಳನ್ನು ಆಯ್ಕೆ ಮಾಡಿ ಆಲಾಪಿಸುವುದು.

## ಆಶಯ, ತಿಳುವಳಿಕೆ

- ಭಾರತೀಯ ಸಂಗೀತಕ್ಕೆ ಹಲವು ಗಾನಶಾಖೆಗಳಿವೆ.
- ವೈವಿಧ್ಯಮಯವಾದ ಗಾನರೂಪಗಳು.
- ಗಾನಶಾಖೆಗಳಲ್ಲಿ ಪ್ರತಿಯೊಂದಕ್ಕೂ ಅದರದ್ದೇ ಆದ ಶೈಲಿಗಳಿವೆ.
- ವೈವಿಧ್ಯ ಹಾಗೂ ಸ್ವಂತಿಕೆ ಹಾಡುವುದು.

## ಪ್ರಕ್ರಿಯೆ

- ಶ್ರವಣ – ಆಲಾಪನೆ
- ಆಸ್ವಾದನೆ

## ಮೌಲ್ಯನಿರ್ಣಯ

- ಆಲಾಪನೆಯನ್ನು ಮೌಲ್ಯನಿರ್ಣಯ ಮಾಡುವುದು.
- ಗಾನರೂಪ ವೈವಿಧ್ಯವನ್ನು ಗುರುತಿಸುವುದನ್ನು ಮೌಲ್ಯನಿರ್ಣಯ ಮಾಡುವುದು.

## ಕಲಿಕಾ ಚಟುವಟಿಕೆಗಳು

**ಚಟುವಟಿಕೆಗಳು–1**

- ಆಲಾಪನೆಯಲ್ಲಿ ಒಳಗೊಂಡಿರುವ ಒಂದು ಹಾಡು ಹಾಡಿ ಕೇಳಿಸುವುದು/ಸಿ.ಡಿ ಕೇಳಿಸುವುದು.

**ಪಲ್ಲವಿ**

*ಸರಿಗಮಪಾ ಗಮಪಾ ಪಾ*

*ಪವನರಚ್ಚೆಳುತುನ್ನು ಕೋಲಜ್ಜಳೆನ್ನುಂ*

*ಕಿಳಕ್ಕಿನಿ ಕೋಲಾಯಿಲರುಣೋದಯಂ*

**ಅನುಪಲ್ಲವಿ**

*ಸರಿಗಮಪದನಿಸ ಸಾ ಸಾ*

*ಪುಳಯೋರು ಪೂಣುಲಾಯ್*

- ◆ ಪದ್ಯವನ್ನು ಆಧಾರವಾಗಿರಿಸಿರುವ ಪ್ರಶ್ನೆಗಳು. ಈ ಹಾಡಿನ ಆರಂಭದಲ್ಲಿ ಹಾಗೂ ಅನುಪಲ್ಲವಿಯ ಮೊದಲು ಹಾಡಿದ ಸ್ವರಾವಳಿಗಳು ಯಾವ ವಿಭಾಗದಲ್ಲಿ ಸೇರಿಕೊಂಡಿವೆ?
- ◆ ಸಾಲುಗಳ ರಾಗವೂ, ಸ್ವರಾವಳಿಗಳೊಳಗೆ ಸಾಮ್ಯತೆ ಇದೆಯೇ ?
- ◆ ವರಸೆಗಳ ಸ್ವರಾವಳಿಗಳೊಂದಿಗೆ ಕಲಿತ ಇತರ ಸ್ವರಾವಳಿಗಳು ನೆನಪಿದೆಯೇ?

- ಬಾಯ್ದೆರೆಯಾಗಿ ಉತ್ತರಿಸುವುದು.
- ಮೊದಲು ಕಲಿತ ವರಸೆಗಳ ಹಾಗೂ ಅಲಂಕಾರಗಳಲ್ಲಿ ಕೆಲವು ಹಾಡುವುದು.
- ಹಾಡುವುದು, ಅಧ್ಯಾಪಕರೊಂದಿಗೆ ಹಾಡುವುದು. ಎಲ್ಲರೂ ಒಟ್ಟಿಗೆ ಹಾಡುವುದು.
- ಹಾಡಿದ ನಂತರ ರಾಗಗಳಲ್ಲಿರುವ ಸಾಮ್ಯತೆ ಕುರಿತು ಲಘು ಚರ್ಚೆ.

**ಸೂಚಕಗಳು**

- ◆ ವರಸೆಗಳು ಹಲವಾಗಿದ್ದರೂ ರಾಗಗಳೊಳಗೆ ಸಾಮ್ಯತೆ ಇದೆ.
- ◆ ಸ್ವರಸ್ಥಾನಗಳು ಒಂದೇ ರೀತಿಯಾಗಿದೆ.

**ಚಟುವಟಿಕೆ – 2**

ಕರ್ನಾಟಿಕ್ ಸಂಗೀತ ಶಾಖೆಯ ಕೆಲವು ರಾಗಗಳಲ್ಲಿರುವ ಸಂಗೀತ ರೂಪಗಳನ್ನು ಪರಿಚಯ ಮಾಡಿಕೊಳ್ಳೋಣ. (ರಾಗ ವೈವಿಧ್ಯ)

- ಕರ್ನಾಟಿಕ್ ಸಂಗೀತ ಕಲಿಕೆಯ ವಿವಿಧ ಹಂತಗಳನ್ನು ತೋರಿಸುವ ಲಘು ಚಿತ್ರೀಕರಣ.

**ಸಪ್ತಸ್ವರಗಳು**

ಸರಳ ವರಸೆಗಳು, ಜಂಟಿ ವರಸೆಗಳು, ದಾಟುವರಸೆಗಳು, ಮಧ್ಯಸ್ಥಾಯಿ ವರಸೆಗಳು ಮಂದ್ರಸ್ಥಾಯಿ ವರಸೆಗಳು ಅಲಂಕಾರಗಳ ಗೀತೆಗಳು.

**ಗೀತೆಗಳು ಎಂದರೇನು?**

ಗೀತೆಗಳು, ರಾಗ ಮತ್ತು ತಾಳಗಳ ಸರಳವಾದ ಆದರೆ ಸಾಮಾನ್ಯವಾದ ರೂಪಗಳನ್ನು ಒಳಗೊಂಡ ಸಾಹಿತ್ಯ ಪ್ರಕಾರಗಳಾಗಿವೆ.

**ಸವಿಶೇಷತೆಗಳು**

ನಿಶ್ಚಿತ ತಾಳಕ್ಕನುಸರಿಸಿ ಸ್ವರಗಳನ್ನು ಹಾಡಿದ ಬಳಿಕ ಅದರೊಂದಿಗೆ ಸಾಹಿತ್ಯವನ್ನು ಹಾಡುವುದು. ಗೀತೆಗಳಲ್ಲಿ ಸರಳವಾದ ಸಾಹಿತ್ಯವಿದೆ. (ದೇವಿ ದೇವ ಸ್ತುತಿಗಳು ಸಾಹಿತ್ಯಗಳಾಗಿವೆ) ಅಲಂಕಾರಗಳನ್ನು ಕಲಿಯಲು ಮೂಲಭೂತವಾಗಿ ಮಾಯಾ ಮಾಳವಗೌಳ ರಾಗವನ್ನು ಉಪಯೋಗಿಸುವುದಾದರೆ, ಗೀತೆಯಿಂದ ವಿವಿಧ ರಾಗಗಳನ್ನು ತಾಳಗಳನ್ನು ಉಪಯೋಗಿಸಿಕೊಂಡು ಬಂದಿದ್ದಾರೆ. ಇದು ರಾಗಗಳ ಪರಿಚಯಕ್ಕೂ ಹೆಚ್ಚಿನ ಸಂದರ್ಭ ನೀಡುವುದು. (ಕೀರ್ತನೆಗಳ ಪ್ರಾಥಮಿಕ ರೂಪವಾಗಿದೆ ಗೀತೆಗಳು)

- ಆಯ್ದ ಎರಡು ಗೀತೆಗಳು ಪರಿಚಯಿಸುವುದು.

1. ರಾಗ – ಮಲಹರಿ 15ರಲ್ಲಿ ಜನ್ಯ
   ತಾಳ – ರೂಪಕ – ಶ್ರೀಗಣನಾಥ
2. ರಾಗ – ಸಾವೇರಿ 15ರಲ್ಲಿ ಜನ್ಯ
   ತಾಳ – ರೂಪಕ ಜನಕಸುಧ
3. ರಾಗ – ಶುದ್ಧನ್ಯಾಸಿ 8–22ರಲ್ಲಿ ಜನ್ಯ. (8 – ಜನಕರಾಗಮಾಯ ಹನುಮತೊಡಿ)
   ತಾಳ – ಆದಿ ಅತುಲಿತ ವೈಭವ

(ಪಾಠಗಳನ್ನು ದಕ್ಷಿಣ ಭಾರತದ ಸಂಗೀತದಿಂದ ಸಂಗ್ರಹಿಸಬೇಕು)

- ಹಾಡುವುದು.
- ರಾಗದ ಆರೋಹಣ – ಅವರೋಹಣ ಸ್ವರಗಳನ್ನು ಹಾಡಿ ಗಟ್ಟಿಗೊಳಿಸಬೇಕು. ಗೀತೆಯ ಸ್ವರಗಳನ್ನು ಚೌಕಕಾಲದಲ್ಲಿ ಹಾಡುವುದು.
- ಆವರ್ತಿಸಿ ಹಾಡಿಸುವುದು.
- ಪ್ರತಿಯೊಂದು ಸಾಲನ್ನು ಸೇರಿಸಿ ಸಾಹಿತ್ಯವನ್ನು ಹಾಡಲು ತರಬೇತಿ ನೀಡುವುದು.
- ಗುಂಪಾಗಿ/ವೈಯಕ್ತಿಕ/ತರಗತಿಯಲ್ಲಿ ಎಲ್ಲರೂ ಸೇರಿ ಹಾಡುವುದು.
- ಕರ್ನಾಟಕ ಸಂಗೀತದ ಇತರ ಸರಳಗಾನರೂಪಗಳು.

**ಕೀರ್ತನೆ** – (ಕೀರ್ತನೆಯ ನಿರ್ವಚನೆಯು ಕೆಳಗಿನ ತರಗತಿಗಳಲ್ಲಿ ನೀಡಲಾಗಿದೆ)

ಭಕ್ತಿರಸ ಪ್ರಧಾನವಾಗಿರುವ ಸಾಹಿತ್ಯವನ್ನೊಳಗೊಂಡ ರಾಗ, ತಾಳ, ಭಾವಗಳಿಂದೊಡಗೂಡಿದ ಗಾನರೂಪವಾಗಿದೆ. ಸರಳ ಕೀರ್ತನೆಗಳನ್ನು ಆಯ್ದುಕೊಳ್ಳುವುದು.

- ಕಾಲಹರಣ ಮೇಳರಾಹರೆ – ಶುದ್ಧ ಸಾವೇರಿ
- ಗಜಾನನಯುತಂ – ಚಕ್ರವಾಕಂ
- ಭಜನಂ ಚೆಯ್‌ವಿನ್ – ಭಾಗೇಶ್ರಿ

- ಅವುಗಳ ಆಲಾಪನೆ.
- ಹಾಡಿ ಕೇಳಿಸುವುದು.
- ಆವರ್ತಿಸಿ ಹಾಡುವುದು.
- ಸಾಹಿತ್ಯದ ಆಶಯ, ಭಾವ ಇವುಗಳನ್ನು ವಿವರಿಸುವುದು.
- ರಾಗದ ಭಾವ ವಿಶೇಷತೆಯನ್ನು ವಿವರಿಸುವುದು.

ಭಜನೆಗಳು, ಶಾಸ್ತ್ರೀಯ ಹಾಡುಗಳು, ರಾಗಭಾವ ಒಳಗೊಂಡಂತಹ ಗಾನರೂಪಗಳು.

ಮಾಧವಲೋಕ

ಭಾರತ ಸಾಮ್ರಾಜ್ಯ

ವಂದೇ ಮಾತರಂ

ಸಂಕಡನೇ ಜಗಂ

ಜಯ ಜನನಿ ಭಗವತಿ ಸುರಭಾರತಿ ತವ ಶರಣಂ

- ಇವುಗಳಲ್ಲಿ ದೇಶಭಕ್ತಿಗೀತೆಗಳು, ಸರಳ ಭಜನೆ ಹಾಡುಗಳು/ಭಕ್ತಿ ಗೀತೆಗಳು, ತಾಳಾತ್ಮಕವಾದ ಗೀತೆಗಳು ಒಳಗೊಂಡಿವೆ.
- ಇವುಗಳ ಸಾಲುಗಳನ್ನು ಪರಿಚಯಿಸುವುದು.
- ರಾಗ, ತಾಳ, ರಚನಕಾರ ಇವುಗಳ ಬಗ್ಗೆ ಸರಳ ವಿವರಣೆ ನೀಡುವುದು.
- ಹಾಡುವುದು.
- ರಾಗದ ವಿಶೇಷತೆ ಅರ್ಥೈಸಿಕೊಳ್ಳಲು ರಾಗದ ಸರಳ ಆಲಾಪನೆ
- ಸಾಲನ್ನು ಒಂದೊಂದಾಗಿ ಹಾಡುವುದು. ಪುನರಾವರ್ತಿಸಿ ಹಾಡುವುದು
- ಹಾಡಿ ಅಭ್ಯಸಿಸಿದ ನಂತರ ಎಲ್ಲಾ ಮಕ್ಕಳಿಗೆ ಒಟ್ಟಾಗಿ ಹಾಡಲು ಅವಕಾಶ ನೀಡುವುದು.

**ಅಷ್ಟಪದಿ ತರಬೇತಿ**

- ಅಷ್ಟಪದಿ ಕಛೇರಿಯ ಸಿಡಿ (ಅಧ್ಯಾಪಕ ಅಷ್ಟಪದಿ ಹಾಡುವರು)ಯನ್ನು ಕೇಳಿಸಿ ಆಲಾಪನಾ ಶೈಲಿಯನ್ನು ಪರಿಚಯಿಸುವುದು.
- ಅಷ್ಟಪದಿಯ ಚರಿತ್ರೆ, ರಚನಾ ಹಿನ್ನಲೆ ಎಂಬಿವುಗಳನ್ನು ವಿವರಿಸುವುದು.

12ನೇ ಶತಮಾನದಲ್ಲಿ ಒರಿಸ್ಸಾದ ಕಿಂದುಬಿಲ್ವಂ ಎಂಬ ಸ್ಥಳದಲ್ಲಿ ಜೀವಿಸಿದ್ದ ಕೃಷ್ಣ ಭಕ್ತನಾದ ಜಯ ದೇವರ್ ಎಂಬವರು ಅಷ್ಟಪದಿಯನ್ನು ರಚಿಸಿದವರು. ತದನಂತರ ಕೇರಳದಲ್ಲಿ ಸೋಪಾನ ಸಂಗೀತದೊಂದಿಗೆ ವಾದ್ಯಗಳೊಂದಿಗೆ ಆಲಾಪಿಸಲು ಆರಂಭಿಸಿದರು.

ಪಶ್ಯತಿ ದಿಶಿ ದಿಶಿ ರಹಸಿಭವಂತಂ

ತ್ವಥದರಮಥುರ ಮಧುನಿ ಪಿಬಂತಂ

- ಮೊದಲಾದ ಪರಿಚಿತವಾದ ಸಾಲುಗಳನ್ನು ಹಾಡಿ ಅಭ್ಯಸಿಸುವುದು.

  ವಂದೇ ಮುಕುಂದ ಹರೇ

  (ದೇವಾಸುರಂ ಎಂಬ ಸಿನೆಮಾ ಹಾಡು)

**ದೋಣಿಹಾಡಿನ ತರಬೇತಿ**

- ದೋಣಿ ಹಾಡಿನ ಸಿಡಿಯನ್ನು ಕೇಳಿಸುವುದು (ವಿಸಿಡಿ)
- ದೋಣಿ ಹಾಡಿನ ಬಾಯಿತಾಳಗಳನ್ನು ಹಾಡುವುದು.
- ಅಧ್ಯಾಪಕರು ಬಾಯಿತಾಳಗಳ ವೇಗ ಕಡಿಮೆ ಮಾಡಿ ಹಾಗೂ ಹೆಚ್ಚು ಮಾಡಿ ಹಲವು ಹಾರಿ ಆವರ್ತಿಸುವುದು.
- ಹಾಡಿದ ಬಾಯಿತಾಳಗಳ ವೇಗತೆಗೆ ಅನುಸರಿಸಿ ಸಾಲನ್ನು ಸೇರಿಸಿ ಹಾಡುವುದು.
- ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡುವುದು.
- ಒಂದು ಗುಂಪು ಬಾಯಿತಾಳಗಳನ್ನು ಹಾಡುವಾಗ ಇನ್ನೊಂದು ಗುಂಪು ಸಾಲುಗಳನ್ನು ಹಾಡುವುದು.
- ತರಗತಿಯ ಉತ್ತಮ ಹಾಡುಗಾರನನ್ನು ಮುಖ್ಯ ಗಾಯಕನಾಗಿ ಆರಿಸಿ ಪ್ರಾರಂಭದ ಭಾಗಲನ್ನು ಹಾಡಲು ಹೇಳುವುದು.

- ಉಳಿದ ಮಕ್ಕಳು ಆವರ್ತಿಸಿ ಹಾಡುವರು.
- ದೋಣಿಹಾಡಿನ ಎರಡು ಪ್ರಧಾನ ಶೈಲಿಯನ್ನು ಪರಿಚಯಿಸುವುದು.
- ಆರನ್ಮುಳ ಶೈಲಿ, ಕುಟ್ಟನಾಡನ್ ಶೈಲಿ.
- ಸಿ. ಡಿ. ಕೇಳಿಸುವುದು.

**ಗಝಲ್**

- ಹಿಂದೂಸ್ಥಾನಿ ಸಂಗೀತದ ಪ್ರಭಾವವಿರುವ ಸರಳ ಗಾನರೂಪ

  **ವಿಶೇಷತೆಗಳು**

  ಸುಲಲಿತವೂ ಆಲಾಪನಾ ಮಾಧುರ್ಯವಿರುವ ಜನಪ್ರಿಯವಾಗಿರುವ ಗಾನರೂಪವಾಗಿದೆ. ಸಾಹಿತ್ಯ ಸಂಗೀತ ಹೆಚ್ಚಿರುವ ಸಂಗೀ ಸೃಷ್ಟಿ.

  ಹಿಂದಿ, ಉರ್ದು, ಹಿಂದಿ ಮಿಶ್ರಿತ ಉರ್ದು, ಮಲಯಾಳ ಎಂಬೀ ಭಾಷೆಗಳಲ್ಲಿ ಗಝಲ್‌ಗಳಿವೆ. ದ್ವಿಪದಿಗಳ ಸಂಗ್ರಹವಾಗಿದೆ ಗಝಲ್.
- ಪ್ರಖ್ಯಾತರಾದ ಗಝಲ್ ನಾಯಕರನ್ನು ಪರಿಚಯಿಸುವುದು.

  ಗುಲಾಂ ಅಲಿ, ಮಹದಿ ಹಸನ್, ಬೀಗಂ ಅಖ್ತರ್, ತಲತ್ ಮುಹಮ್ಮದ್ ಅಝೀಸ್, ಹರಿಹರನ್, ಚಿತ್ರಾಸಿಂಗ್, ಪಂಕಜ್ ಉಧಾಸ್, ಜಗಜಿತ್ ಸಿಂಗ್
- ಆಯ್ದು ಗಝಲ್‌ಗಳನ್ನು ಹಾಡುವುದು.

- ಸಾಲುಗಳನ್ನು ಪರಿಚಯಿಸುವುದು.
- ಹಾಡಿ ಕೇಳಿಸುವುದು, ಸಿಡಿ ಕೇಳಿಸುವುದು, ತರಬೇತಿ ನೀಡುವುದು.

## ಮೌಲ್ಯನಿರ್ಣಯ

- ಆಲಾಪನೆ
- ವೈವಿಧ್ಯತೆಯನ್ನು ಗುರುತಿಸುವುದು

## ಕ್ರೋಡೀಕರಣ

- ಕರ್ನಾಟಕ ಸಂಗೀತ ಶಾಖೆಗೆ ಮತ್ತು ಹಿಂದೂಸ್ಥಾನಿ ಸಂಗೀತ ಶಾಖೆಗೂ ವಿವಿಧಗಾನ ರೂಪಗಳಿವೆ.
- ರಾಗ ಮತ್ತು ತಾಳಗಳ ಪೂರ್ಣತೆ ಒಳಗೊಳ್ಳುವಂತಹ ಗಾನರೂಪಗಳ ತರಬೇತಿ ಹಾಗೂ ಆಲಾಪನೆ ಮಾಡುವುದರ ಮೂಲಕ ಸಂಗೀತ ಸಂಸ್ಕೃತಿಯನ್ನು ಮತ್ತು ಅವುಗಳ ಮೌಲ್ಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

# ಒಂಭತ್ತನೇ ತರಗತಿ

## ಯೂನಿಟ್ – 1 ಭಾರತೀಯ ಸಂಗೀತ

### ಮುನ್ನುಡಿ

ವಿಶ್ವ ಸಂಗೀತ ಚರಿತ್ರೆಯಲ್ಲಿ ಆಲಾಪನಾ ಶೈಲಿಯಿಂದಲೂ ಆಕರ್ಷಣೀಯವಾದ ವೈವಿಧ್ಯತೆಗಳಿಂದಲೂ ಪ್ರಜ್ವಲಿಸುವ ಸಂಗೀತ ಪರಂಪರೆಯು ಭಾರತೀಯ ಸಂಗೀತಕ್ಕಿದೆ. ಭಾರತೀಯ ಸಂಗೀತದಲ್ಲಿರುವ ಶೃತಿ, ತಾಳವೈವಿಧ್ಯಗಳು ಹಾಗೂ ಉತ್ತಮ ಸಂಗೀತೋಪಕರಣಗಳೆಲ್ಲಾ ಅತ್ಯಂತ ಮೌಲ್ಯವನ್ನು ಒಳಗೊಂಡ ಒಂದು ಸಂಗೀತ ಸಂಸ್ಕೃತಿಯ ಪುರಾವೆಗಳಾಗಿವೆ. ಪಾಶ್ಚಾತ್ಯ ಸಂಗೀತ ಪ್ರೇಮಿಗಳು ಇದನ್ನು ಮೌಲ್ಯನಿರ್ಣಯ ಮಾಡಿದ್ದಾರೆ. ಈ ಅಧ್ಯಾಯದಲ್ಲಿ ನಮ್ಮ ಸಂಗೀತದ ಪ್ರಧಾನ ಶಾಖೆಗಳಾದ ಹಿಂದೂಸ್ಥಾನಿ ಸಂಗೀತದ ಕುರಿತು ಮತ್ತು ಕರ್ನಾಟಕ ಸಂಗೀತದ ಕುರಿತು ಇನ್ನು ಹೆಚ್ಚು ತಿಳಿಯಲಿದ್ದೇವೆ.

### ಒಳಹೂರಣ

ಭಾರತೀಯ ಸಂಗೀತ ಚರಿತ್ರೆ ಶೈಲಿ, ಶೈಲಿಗಳ ವ್ಯತ್ಯಾಸ, ಸಾಮ್ಯತೆಗಳು ಆಯಾ ಕ್ಷೇತ್ರದ ಪ್ರಸಿದ್ಧರು, ಸರಳ ಗಾನರೂಪಗಳು ಎಂಬಿವುಗಳನ್ನು ಈ ಪಾಠಭಾಗದಲ್ಲಿ ಸೇರಿಸಲಾಗಿದೆ.

### ಕಲಿಕಾ ಸಾಧನೆ

- ಕರ್ನಾಟಕ ಸಂಗೀತ ಹಿಂದೂಸ್ಥಾನಿ ಸಂಗೀತ ಎಂಬೀ ಭಾರತೀಯ ಸಂಗೀತಗಳ ಕುರಿತು ತಿಳಿಯುವುದು. ಕೆಲವು ಸಂಗೀತ ರೂಪಗಳನ್ನು ಆಲಾಪಿಸುವುದು.

### ಆಶಯ/ ತಿಳುವಳಿಕೆ

- ಕರ್ನಾಟಕ ಸಂಗೀತ ಮತ್ತು ಸಂಗೀತ ಹಿಂದೂಸ್ಥಾನಿ ಸಂಗೀತಗಳು ಭಾರತದ ಶಾಸ್ತ್ರೀಯಗಾನ ಶಾಖೆಗಳಾಗಿವೆ.
- ಕರ್ನಾಟಕ ಸಂಗೀತದಲ್ಲಿ ಹಲವಾರು ರಾಗಗಳೂ ತಾಳಗಳೂ ಇವೆ.
- ಕರ್ನಾಟಕ ಸಂಗೀತವು ಗಮಕ ಪ್ರಧಾನವಾಗಿದೆ.
- ಎರಡು ಸಂಗೀತ ಶಾಖೆಗಳಿಗೂ ವಿಭಿನ್ನವಾದ ಆಲಾಪನಾ ಶೈಲಿಯಿದೆ.
- ಎರಡೂ ಶೈಲಿಗಳು ಪರಸ್ಪರ ಸಾಮ್ಯತೆಯಿದೆ ಮತ್ತು ವ್ಯತ್ಯಾಸವಿದೆ.

### ಪ್ರಕ್ರಿಯೆ

- ಹಿಂದೂಸ್ಥಾನಿ ಸಂಗೀತ, ಕರ್ನಾಟಕ ಸಂಗೀತವನ್ನು ಕೇಳಲು ಅವಕಾಶ ಒದಗಿಸುವುದು.
- ಗುಂಪಾಗಿಯೂ, ಒಂಟಿಯಾಗಿಯೂ ಹಾಡುವುದು.

## ಮೌಲ್ಯಮಾಪನ

- ಸರಳ ಪ್ರಶ್ನೆಗಳ ಮೂಲಕ ಮೌಲ್ಯನಿರ್ಣಯ ಮಾಡುವುದು.
- ಸಂಗೀತ ಶೈಲಿಯನ್ನು ಗುರುತಿಸುವುದು
- ಹಾಡುವಿಕೆಯನ್ನು ಮೌಲ್ಯ ನಿರ್ಣಯ ಮಾಡುವುದು

## ಕಲಿಕಾ ಚಟುವಟಿಕೆಗಳು

**ಚಟುವಟಿಕೆ–1**

- ಹಿಂದೂಸ್ಥಾನಿ ಸಂಗೀತ ಕಚೇರಿಯ ಮತ್ತು ಕರ್ನಾಟಕ ಸಂಗೀತ ಕಛೇರಿಯ ಕೆಲವು ಪ್ರಮುಖವಾದ ಭಾಗಗಳನ್ನು ಕೇಳಲು ಅವಕಾಶ ನೀಡುವುದು.
(ಸಿಡಿ/ಹಾಡಿ ಕೇಳುವುದು)
- ಎರಡೂ ಶೈಲಿಗಳನ್ನು ಮೌಲ್ಯ ನಿರ್ಣಯ ಪ್ರತಿಕ್ರಿಯೆ ನೀಡಲು ಹೇಳುವುದು.
- **ಮೌಲ್ಯಮಾಪನ ಸೂಚಕಗಳು**
  - ಈ ಆಲಾಪನಾ ಶೈಲಿಯಲ್ಲಿರುವ ಸಂಗೀತ ಪ್ರಕಟಣೆಗಳು ನಿಮಗೆ ಪರಿಚಿತವೇ?
  - ಈ ಶೈಲಿಗಳು ಯಾವ ಸಂಗೀತ ಸಂಪ್ರದಾಯಗಳನ್ನು ಸೂಚಿಸುವುದು?
  - ನಮಗೆ ಪರಿಚಿತವಾದ, ಜನಪ್ರಿಯವಾದ ಹಾಡುಗಳು ಹೆಚ್ಚಾಗಿ ಇವುಗಳಲ್ಲಿ ಯಾವ ಶೈಲಿಯ ಹಾಡು ಕೇಳಬಹುದಾಗಿದೆ?
  - ಎರಡು ಶೈಲಗಳ ಪರಸ್ಪರ ವ್ಯತ್ಯಾಸವೇನು?

ಉತ್ತರಗಳು

- ಚಾನೆಲ್‌ಗಳಲ್ಲಿ ಸಿ.ಡಿಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಈ ಎರಡು ಶೈಲಿಗಳಲ್ಲಿರುವ ಹಾಡುಗಳನ್ನು ಕೇಳಲಾಗಿದೆ.
- ಕರ್ನಾಟಕ ಸಂಗೀತ ಶೈಲಿ, ಹಿಂದೂಸ್ಥಾನಿ ಸಂಗೀತ ಶೈಲಿ.
- ಕರ್ನಾಟಕ ಸಂಗೀತ ಶೈಲಿ.
- ಆಲಾಪನಾ ರೀತಿಯಲ್ಲಿ ಮತ್ತು ವೇಗತೆಯಲ್ಲಿ.

ವಿವರಣೆ

(ಎರಡು ಪ್ರಧಾನಶೈಲಿಗಳ ಕುರಿತು)

ಭಾರತದಲ್ಲಿ ಪ್ರಧಾನವಾದ ಎರಡು ಸಂಗೀತ ಶಾಖೆಗಳಿವೆ.

- ಹಿಂದೂಸ್ಥಾನಿ ಸಂಗೀತ

  ಪರ್ಶ್ಯನ್ ಸಂಗೀತದೊಂದಿಗೆ ಒಟ್ಟು ಸೇರಿ ಉಂಟಾದ ಸಂಗೀತ ಶಾಖೆ. ಭಾರತದ ಉತ್ತರ ಭಾಗದಲ್ಲಿ ಹೆಚ್ಚಾಗಿ ಪ್ರಚಾರದಲ್ಲಿದೆ. 13ನೇ ಶತಮಾನದ ಕೊನೆಯಲ್ಲಿ ಈ ಹೊಸ ಸಂಗೀತ ಶಾಖೆಗಳು ಉಗಮವಾಯಿತು. ಚೌಕಕಾಲದಲ್ಲಿ ಆರಂಭಿಸುವ ಆಲಾಪನೆ ಕ್ರಮೇಣ ಮಧ್ಯಮ ಕಾಲ ದಾಟಿ ದೃತ ಕಾಲಕ್ಕೆ ತಲುಪುವುದು. 14ನೇ ಶತಮಾನದಲ್ಲಿ ರಚಿಸಲ್ಪಟ್ಟ ಹರಿಪಾಲನ ಸಂಗೀತ ಸುಧಾಕರದಲ್ಲಿ ಹಿಂದೂಸ್ಥಾನಿ ಸಂಗೀತ ನಿಖರವಾಗಿ ನಿರ್ವಹಿಸಲಾಗಿದೆ. ಹಿಂದೂಸ್ಥಾನಿ ಸಂಗೀತದ ರಾಗ ಸಂಪ್ರದಾಯದಲ್ಲಿ ಪ್ರಧಾನವಾಗಿ10 ದಾಟಗಳು (ರಾಗಗಳು) ಇವೆ.

- ಕರ್ನಾಟಕ ಸಂಗೀತ

ಭಾರತೀಯ ಸಂಗೀತ ಪರಂಪರೆಯನ್ನು ಹೆಚ್ಚು ಒಳಗೊಂಡಂತಹ ಸಂಗೀತ ಶೈಲಿ. ದಕ್ಷಿಣ ಭಾರತದಲ್ಲಿ ಪ್ರಚಾರ ಪಡೆದ ಸಂಗೀತ.

ಹಿಂದೂಸ್ಥಾನಿ ಸಂಗೀತದ ಹುಟ್ಟಿನ ನಂತರ ದಕ್ಷಿಣ ಭಾರತದಲ್ಲಿ ಹಳೆಯ ಶೈಲಿಯನ್ನೇ ಉಪಯೋಗಿಸಿಕೊಂಡು ಬಂದ ಈ ಸಂಗೀತ ಶೈಲಿ ಕ್ರಮೇಣ ಪುರಂದರದಾಸರು ಕ್ರಮೀಕರಿಸಿ ತ್ರಿಮೂರ್ತಿಗಳಾದ ತ್ಯಾಗರಾಜ ಸ್ವಾಮಿ, ಮುತ್ತು ಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು ಇವರ ಕೊಡುಗೆಗಳಿಂದ ಸಂಪದ್ಭರಿತವಾಯಿತು. ಗಮಕ ಪ್ರಾಧಾನ್ಯವೂ, ತಾಳ ಪ್ರಾಧಾನ್ಯವೂ ಹೆಚ್ಚಿರುವ ಸಂಗೀತವಾಗಿದೆ.

ಮಧ್ಯಮಾಂಕದಲ್ಲಿ ಸಂಗೀತ ರಚನೆಗಳನ್ನು ಸಾಮಾನ್ಯ ರೀತಿಯಲ್ಲಿ ಹಾಡಾಲಾಗುವುದು. ಕೃತಿಗಳು, ಕೀರ್ತನೆಗಳು, ಭಕ್ತಿರಸಕ್ಕೆ ಹೆಚ್ಚಿನ ಒತ್ತು ನೀಡುವುದು. ಇದರಲ್ಲಿ ರಾಗ ಸಂಪ್ರದಾಯ ವ್ಯವಸ್ಥೆಯು ಮತ್ತು ವೈವಿಧ್ಯವಾದ ತಾಳಗಳು ಹಲವಾರು ಇವೆ.

- ಹೆಚ್ಚಿನ ವಿವರ ಸಂಗ್ರಹಕ್ಕಾಗಿ ಆಧಾರ ಗ್ರಂಥಗಳನ್ನು ನೀಡಲಾಗಿದೆ.

    ಸಂಗೀತ ಶಾಸ್ತ್ರಾಮೃತಂ - ಎ.ಡಿ. ಮಾಧವನ್

    ಹಿಂದೂಸ್ಥಾನಿ ಸಂಗೀತ - ಎ.ಡಿ. ಮಾಧವನ್

    ಕರ್ನಾಟಕ ಸಂಗೀತ ಚರಿತ್ರೆ- ಕೆ.ಟಿ. ರವೀಂದ್ರನಾಥ್

    ಸಂಗೀತ ಶಾಸ್ತ್ರ ನವಸುಧ -ಜಿ. ದೇವರಾಜನ್

    ದಕ್ಷಿಣ ಭಾರತ ಸಂಗೀತ- ಎ.ಕೆ. ರವೀಂದ್ರನಾಥ್

- ವಿವರ ಸಂಗ್ರಹಕ್ಕಾಗಿ ಕೆಳಗೆ ಹೇಳುವಂತಹ ಸೂಚಕಗಳನ್ನು ಉಪಯೋಗಿಸಬಹುದು.

    ಉಗಮ, ಚರಿತ್ರೆ
    ಶೈಲಿ ವ್ಯತ್ಯಾಸ
    ವಿಶೇಷತೆಗಳು
    ಪ್ರಖ್ಯಾತರು

- ಈ ವಿಭಾಗದಲ್ಲಿ ಪ್ರಸಿದ್ಧರಾದ ಗಾಯಕರಾದ ಚಿತ್ರ ಸಂಗ್ರಹ.
- ಸಂಗ್ರಹಿಸಿದ ವಿವರಗಳನ್ನು ವೈಯಕ್ತಿಕ ಮಂಡನೆ.
- ಪ್ರತಿಯೊಬ್ಬರೂ ಕಂಡು ಹಿಡಿದ ವಿಷಯಗಳನ್ನು ಕ್ರೋಢೀಕರಿಸಿ ಸಂಚಿಕೆ ತಯಾರಿಸಲು ತರಗತಿಯ ಆರ್ಟ್ಸ್ ಕನ್ವೀನರ್ ಜವಾಬ್ದಾರಿ ನೀಡುವುದು. ಈ ಸಂಚಿಕೆಯನ್ನು ತರಗತಿ ಲೈಬ್ರರಿಯಿಂದ ಹೆಚ್ಚಿನ ಓದುವಿಕೆಗಾಗಿ ನೀಡುವುದು.

**ಚಟುವಟಿಕೆ – 2**

- ಹಿಂದೂಸ್ಥಾನಿ ಸಂಗೀತದ ಮತ್ತು ಕರ್ನಾಟಕ ಸಂಗೀತದ ಸಾಮ್ಯ, ವ್ಯತ್ಯಾಸಗಳನ್ನು ಗುರುತಿಸುವುದು.
- ಸಪ್ತಸ್ವರಗಳನ್ನು ಎರಡು ರೀತಿಯಲ್ಲಿ ಹಾಡಿ ಕೇಳಿಸುವುದು, ಮಕ್ಕಳಿಂದ ಹಾಡಿಸುವುದು.
- ಸರಳ ಸಂಗೀತ ರೂಪಗಳು (ಎರಡು ಶೈಲಿಯಲ್ಲಿರುವುದು) ಕೇಳಿಸುವುದು (ಭಜನೆ, ಗಝುಲ್, ತಿಲ್ಲಾನ, ಪದಗಳು, ಸರಳ ಕೀರ್ತನೆಗಳು) ಇವುಗಳನ್ನು ಸೇರಿಸಬೇಕು.
- ಸಾಮ್ಯತೆ, ವ್ಯತ್ಯಾಸಗಳನ್ನು ಕಂಡುಹಿಡಿಯಲಿರುವ ಚರ್ಚೆ.
- ನಾಲ್ಕು ಗುಂಪುಗಳಾಗಿ ನಡೆಸುವ
- ಗುಂಪಿನ ನಾಯಕನು ಚರ್ಚಿಸಿದ ಆಶಯಗಳನ್ನು ಕ್ರೋಢೀಕರಿಸಿ ಬರೆದು ಓದುವನು.
- ಅಧ್ಯಾಪಕರಿಂದ ಹೆಚ್ಚು ವಿವರಣೆ

ಸಾಮ್ಯತೆ

- ಮೂಲ ಸ್ವರ ಸ್ಥಾನಗಳು ಒಂದೇ ಆಗಿವೆ.
- ಸಮಾನತೆಯಿರುವ ರಾಗ, ತಾಳಗಳಿವೆ.
- ಸಂಗೀತ ರೀತಿಯ ಹೆಸರುಗಳಲ್ಲಿ ಬದಲಾವಣೆಯಿದ್ದರೂ ಸಮಾನ ಸ್ವಭಾವವುಳ್ಳದ್ದಾಗಿವೆ.
- ತಾಳಗಳಲ್ಲಿ ಸಮಾನತೆ ಕಾಣಬಹುದು.
- ಸಂಗೀತಗೋಷ್ಠಿಗಳಲ್ಲಿ ಕೆಲವು ಉಪಕರಣಗಳನ್ನು ಎರಡೂ ಶೈಲಿಗಳಲ್ಲಿ ಉಪಯೋಗಿಸುತ್ತಾರೆ.

ವ್ಯತ್ಯಾಸ

ಸ್ವರ ಸ್ಥಾನಗಳು ಒಂದಾದರೂ ಆಲಾಪನಾ ರೀತಿ ವ್ಯತ್ಯಾಸವಾಗಿರುತ್ತದೆ.

- ಹಿಂದೂಸ್ಥಾನಿಯಲ್ಲಿ ಚೌಕಕಾಲದಲ್ಲಿ ಆಲಾಪನೆ ನಡೆಸುವಾಗ ಕರ್ನಾಟರ ಸಂಗೀತದಲ್ಲಿ ಮಧ್ಯಮ ಕಾಲದಲ್ಲಿ ಆಲಾಪನೆ ಆರಂಭಗೊಳ್ಳುವುದು.
- ಕರ್ನಾಟಕ ಸಂಗೀತದಲ್ಲಿ ವೈವಿಧ್ಯಮಯ ಸಂಗೀತ ರೂಪಕ್ಕೆ ಒಂದೇ ತಾಳ ಪ್ರಯೋಗಿಸಲಾಗುತ್ತದೆ. ಉದಾ : ರೂಪಕ ತಾಳ (ಗೀತೆ – ಶ್ರೀ ಗಣನಾಥ, ಮಲಹರಿರಾಗ) ರೂಪಕತಾಳ (ಕೃತಿ ದೇವ ದೇವ)ರೂಪಕತಾಳ (ಜಾವಳಿ ಸಾರ ಮೈನಾ, ಬಿಹಾಗ್)
- ಹಿಂದೂಸ್ಥಾನಿ ಸಂಗೀತದಲ್ಲಿ ಒಂದೇ ಸಂಗೀತ ರೂಪಕ್ಕೆ (ಗಾನರೂಪಕ್ಕೂ) ಪ್ರತ್ಯೇಕವಾಗಿ ತಾಳಗಳನ್ನು ಉಪಯೋಗಿಸಲಾಗುತ್ತದೆ. ಉದಾ : ದ್ರುಪದ್ ಆಲಾಪಿಸುವಾಗ ಚೌತಲ್, ತೀವ್ರತಾಳ. ಖಾಯಲ್ ಆಲಾಪಿಸುವಾಗ ತಿನ್‌ತಾಳ, ಏಕತಾಳ ಝುಂಪತಾಳ ಎಂಬಿವುಗಳಲ್ಲಿ ಉಪಯೋಗಿಸಲಾಗುತ್ತದೆ.
- ರಾಗಭಾವಗಳ್ಲೂ, ರಾಗಕಾಲಗಳಲ್ಲೂ ವ್ಯತ್ಯಾಸ ಕಾಣಬಹುದು.

- ಹೆಚ್ಚು ವಿವರಗಳನ್ನು ಮೊದಲು ಸೂಚಿಸಿದ ರೆಫರೆನ್ಸ್ ಗ್ರಂಥಗಳಿಂದ ಸಂಗ್ರಹಿಸಬೇಕು.

**ಚಟುವಟಿಕೆ – 3**

- ಎರಡು ಶೈಲಿಗಳಲ್ಲಿರುವ ಲಘುಗಾನರೂಪಗಳು, ತರಬೇತಿ, ಮಂಡನೆ.
  ಹಿಂದೂಸ್ಥಾನಿ – ಚಲಿಯೇ ಕುಂಜನುಮೋ
  ಕರ್ನಾಟಕ – ಅಲೈಪಾಯುದೇ ..........
- ಸಾಲುಗಳನ್ನು ಹೇಳಿಕೊಡುವುದು
- ಗಾನರೂಪಗಳನ್ನು ಸಂಯೋಜಿಸಿದ ರಾಗ, ತಾಳ ಎಂಬಿವುಗಳ ಕುರಿತು ವಿವರಣೆ.
- ರಾಗಭಾವ ಅರ್ಥಮಾಡಲು ರಾಗದ ಲಘು ಆಲಾಪನೆ.
- ಇದೇ ರಾಗದಲ್ಲಿ ಬರುವ ಸಿನೆಮಾ ಹಾಡುಗಳನ್ನು ವಿಮರ್ಶಿಸುವುದು. ಪ್ರತಿಯೊಂದು ಸಾಲನ್ನು ತಾಳವಿಲ್ಲದೆ ಆಲಾಪಿಸುವುದು.
- ಪುನರಾವರ್ತಿಸಿ ಹಾಡುವುದು.
- ರಾಗ ಮನಸ್ಸಿನಲಲಿ ಮೂಡಿದ ಬಳಿಕ ತಾಳದಲ್ಲಿ ಆಲಾಪಿಸಿ ತರಬೇತುಗೊಳಿಸುವುದು.
- ಗುಂಪಾಗಿ ಹಾಡುವುದು.
- ವೈಯಕ್ತಿಕವಾಗಿ ಹಾಡುವುದು.
  (ಎರಡು ಹಾಡುಗಳು ಈ ರೀತಿಯ ಚಟುವಟಿಕೆಯ ಮೂಲಕ ಹಾಡಿ ತರಬೇತಿಗೊಳಿಸುವುದು)

## ಮೌಲ್ಯನಿರ್ಣಯ

- ಸಂಗೀತಶೈಲಿ ತಿಳಿಯುವುದು.
- ವಿವರ ಸಂಗ್ರಹ.
- ಮಂಡನೆ.
- ಆಲಾಪನೆ.

### ಮುಂದುವರಿದ ಚಟುವಟಿಕೆ

- ಎರಡು ಶೈಲಿಗಳಲ್ಲಿರುವ ಗಾನಗಳನ್ನು ಕೇಳುವುದು.
- ಕಲಿತ ಎರಡು ಹಾಡಿನೊಂದಿಗೆ ಸಾಮ್ಯತೆಯಿರುವ ಗಾನಗಳನ್ನು ಕಂಡುಕೊಳ್ಳುವುದು.

### ಕ್ರೋಡೀಕರಣ

ಭಾರತದ ಸಂಗೀತ ಸಂಪ್ರದಾಯಗಳಲ್ಲಿ ಹಿಂದೂಸ್ಥಾನಿ ಮತ್ತು ಕರ್ನಾಟಕ ಸಂಗೀತ ಪ್ರಧಾನ ಹಾಗೂ ಸವಿಶೇಷತೆಗಳುಳ್ಳ ಎರಡು ಶಾಖೆಗಳಾಗಿವೆ. ಈ ಎರಡು ಶಾಖೆಗಳಲ್ಲೂ ಅದರದ್ದೇ ಆದ ವ್ಯತ್ಯಾಸಗಳಿದ್ದರೂ ಕೆಲವು ಸಾಮ್ಯತೆಗಳನ್ನು ಕಂಡುಕೊಳ್ಳಲು ಸಾಧ್ಯವಾಗುವುದು. ಮನೋರಂಜನೆಗಾಗಿ ಇರುವ ಈ ಎರಡು ಶೈಲಿಗಳ ಕುರಿತು ಹೆಚ್ಚು ತಿಳಿಯಬೇಕಾದುದು ಮುಂದಿನ ಪೀಳಿಗೆಗೆ ಅಗತ್ಯವಾಗಿದೆ. ನಮ್ಮ ಭಾರತದ ಅಮೂಲ್ಯವಾದ ಈ ಎರಡು ಶೈಲಿಗಳು ಜಗತ್ತಿನ ಸಂಗೀತ ಚರಿತ್ರೆಯಲ್ಲಿ ಗಣನೀಯ ಸ್ಥಾನವನ್ನು ವಹಿಸುತ್ತದೆ.

## ಯೂನಿಟ್ 2 : ರಾಗಗಳು

ಕಿವಿಗಳಿಗೆ ಮಾಧುರ್ಯ ನೀಡಿ ಮನುಷ್ಯ ಹೃದಯಗಳಲ್ಲಿ ವಿವಿಧ ಭಾವತರಂಗವನ್ನುಂಟು ಮಾಡಲು ರಾಗಗಳಷ್ಟು ಸಾಧ್ಯತೆಗಳಿರುವ ಮತ್ತೊಂದು ಘಟಕ ಸಂಗೀತದಲ್ಲಿಲ್ಲ. ರಾಗಗಳು ಸಂಗೀತ ಲೋಕಕ್ಕೆ ಭಾರತದ ವಿಶಿಷ್ಟ ಉಡುಗೊರೆಯಾಗಿದೆ. ಮೋಡಗಳು ಆಕಾಶಕ್ಕೆ ಸೌಂದರ್ಯವನ್ನು ನೀಡುವಂತೆ ರಾಗಕ್ಕೆ ಜೀವತುಂಬುವ ಸ್ವರ ಸಮೂಹಗಳಿವೆ. ಸೂಕ್ತವಾದ ಸ್ವರಗಳೊಡನೆ ಸಂಯೋಜನೆಯ ಹಾದಿಯಲಿ ಒಂದು ರಾಗವು ಹುಟ್ಟಿಕೊಳ್ಳುತ್ತದೆ. ಒಂದು ಹಾಡಿನಿಂದ ಇನ್ನೊಂದು ಹಾಡನ್ನು ಪ್ರತ್ಯೇಕಿಸುವುದು ಅದರ ಸ್ವರ ವೈವಿಧ್ಯವಾಗಿದೆ. ಸ್ವರಗಳು ಜನಿಸುವುದು ರಾಗಗಳಿಂದಾಗಿದೆ. ನಮ್ಮ ಸಂಗೀತಕ್ಕೆ ರಾಗವೈವಿಧ್ಯ ಧಾರಾಳ ವಿರುವುದರಿಂದ ಇಷ್ಟೊಂದು ಧ್ವನಿ ವೈವಿಧ್ಯಗಳು ನಮಗೆ ಲಭಿಸಿವೆ. ಪ್ರತಿಯೊಂದು ರಾಗಗಳು ಭಾಷಾ ಸಹಾಯವಿಲ್ಲದಿದ್ದರೂ ಅರ್ಥಮಾಡಿಕೊಳ್ಳಲು ಸ್ಪಷ್ಟವಾದ ಭಾವವನ್ನು ನೀಡುತ್ತದೆ. ನಿತ್ಯಜೀವನದ ಮರೆಯ ಲಾಗದ ಅನುಭವದೊಂದಿಗೆ ಸೇರಿ ಒಂದು ಧ್ವನಿ ಪ್ರತಿಯೊಂದು ಮನಸ್ಸಿನಲ್ಲೂ ಅಡಗಿದೆ.

### ಒಳಹೂರಣ

ನಮ್ಮ ಸಂಗೀತ ಸರಣಿಯ ಹೆಚ್ಚು ಪರಿಚಿತ ಮತ್ತು ಮನೋರಂಜನೀಯವಾದ ರಾಗ ಪರಿಮಿತವಾದ ಗಾನಗಳ ಮೂಲಕ, ರಾಗಗಳ ಮೂಲಕ ತಿಳಿಯುವುದು ಹಾಗೂ ಹಾಡಲಿರುವ ಚಟುವಟಿಕೆಯಾಗಿದೆ ಈ ಅಧ್ಯಾಯದಲ್ಲಿರುವುದು.

### ಕಲಿಕಾ ಸಾಧನೆ

ಪರಿಚಿತವಾದ ಹಾಡುಗಳನ್ನು ಗುರುತಿಸುವುದು (ಸಿನೆಮಾ, ನಾಟಕ, ಭಾವಗೀತೆಗಳು)

### ಆಶಯ/ತಿಳುವಳಿಕೆ

- ಹಾಡುಗಳು ರಾಗವನ್ನು ಹೊಂದಿರುತ್ತದೆ.
- ರಾಗಗಳಿಂದ ಸಂಗೀತ ಉಂಟಾಗುವುದು.
- ಒಂದೇ ರಾಗದಲ್ಲಿ ವಿಭಿನ್ನ ಭಾವದಲ್ಲಿರುವ ಸಂಗೀತವನ್ನು ಸೃಷ್ಟಿಸಬಹುದು.
- ರಾಗ ಪರಿಚಯ – ಹಾಡುಗಳಲ್ಲಿರು ರಾಗವನ್ನು ಗುರುತಿಸುವುದು.

## ಪ್ರಕ್ರಿಯೆ

- ಪರಿಚಿತವಾದ ಸಿನೆಮಾ – ಭಾವಗೀತೆಗಳನ್ನು ಕೇಳಿಸುವುದು.
- ಒಂದೇ ರಾಗದಲ್ಲಿದಲ್ಲಿರುವ ಸಂಗೀತ ವೈವಿಧ್ಯತೆ ಮತ್ತು ಭಾವ ವೈವಿಧ್ಯತೆಯನ್ನು ಗುರುತಿಸುವುದು
- ಸಾಮ್ಯತೆ ಇರುವ ಸಂಗೀತವನ್ನು ಗುರುತಿಸುವುದು.
- ರಾಗ ಯಾವುದೆಂದು ನಿರ್ಣಯಿಸುವುದು.

## ಮೌಲ್ಯ ಮಾಪನ

- ವೈವಿಧ್ಯವನ್ನು ಅರ್ಥಮಾಡುವುದು
- ಸಾಮ್ಯತೆ, ಆಸ್ವಾದನೆ
- ಅಭ್ಯಾಸ

## ಕಲಿಕಾ ಚಟುವಟಿಕೆ

### ಚಟುವಟಿಕೆ–1

- ಮಕ್ಕಳು ಕೇಳಿ ಪರಿಚಯವಿರುವ ಸಿನೆಮಾ ಹಾಡುಗಳನ್ನು ಹಳೆ ಹಾಗೂ ಹೊಸ) ಕೇಳಲು ಸಂದರ್ಭ ನೀಡುವುದು.

  1. ನಮ್ಮೂರ ಮಂದಾರ ಹೂವೆ...
  2. ಅನಿಸುತ್ತಿದೆ ಯಾಕೋ ಇಂದು ನೀನೇನೇ ನನ್ನವಳೆಂದು..
  3. ಹಸಿರು ಸಿರಿಯಲಿ ಮನಸು ಮರೆಯಲಿ...
  4. ಸುಮಂಗಲಿ ನೀ.....
  5. ಅಮ್ಮಮಳಕ್ಕಾರಿನ್......
  6. ಮನೆಯೇ ಮಂತ್ರಾಲಯ...
  7. ಚಂದನಮಣಿವಾದಿಲ್....
  8. ಬಣ್ಣಾ ನನ್ನ ಒಲವಿನ ಬಣ್ಣ...
  9. ಸ್ವರ್ಣಚಾಮರಂ.....
  10. ಜೇನಿನ ಹೊಳೆಯೋ..
  11. ಕಳಿವೀಡುರಜಿಯಲ್ಲೋ....
  12. ಚಂದ್ರ ಕಂಪು ಲಾಲಿ...

- ಹಾಡುಗಳ ಪಲ್ಲವಿ ಹಾಗೂ ಅನುಪಲ್ಲವಿಯನ್ನು ಕೇಳಿದರೆ ಸಾಕು.
- ಹಾಡುಗಳನ್ನು ಕೇಳಿದ ನಂತರ ಅಧ್ಯಾಪಕರ ನಿರ್ದೇಶಕ್ಕೆ ಅನುಸರವಾಗಿರುವ ಸೂಚಕಗಳಗೆ ಮಕ್ಕಳು ಪ್ರತಿಕ್ರಿಯಿಸಿರುವರು.
- ನೀವು ಕೇಳಿದ ಹಾಡುಗಳಲ್ಲಿ ಒಂದೇ ರಾಗದಲ್ಲಿರುವ ಹಾಡುಗಳು ಯಾವುವು ಎಂದು ಬರೆದಿಡುವಿರಾ?
- ವೈಯಕ್ತಿಕವಾಗಿ ಹಾಡಲು ಸಂದರ್ಭ ನೀಡುವುದು.
- ಮಕ್ಕಳ ಉತ್ತರಗಳನ್ನು BB ಯಲ್ಲಿ ಅಧ್ಯಾಪಕರು ಬರೆಯುವರು.
- ಬಾಕಿ ಉಳಿದ ಮಕ್ಕಳ ಅಭಿಪ್ರಾಯದೊಂದಿಗೆ, ಅಧ್ಯಾಪಕನ ಸಹಾಯದಿಂದ ಉತ್ತರಗಳನ್ನು ನಿಖರಗೊಳಿಸುವುದು.

  1. ಮೋಹನ
  2. ಹಿಂದೋಳ
  3. ಕಲ್ಯಾಣಿ
  4. ಅನುರಾಗಿಣಿ....

     ಸ್ವರ್ಣಚಾಮರಂ....

     ಕಾಣುಂಬೋಳ್ ಪರಯಾಮೋ...

- **ಅಧ್ಯಾಪಕನ ಪ್ರಶ್ನೆ**
  - ನೀವು ಪಟ್ಟಿಮಾಡಿದ ಹಾಡುಗಳು ಒಂದೇ ರಾಗದಲ್ಲಿರಲು ಕಾರಣವೇನು?
  - ನಮ್ಮ ತರಗತಿಯ ಸಹೋದರರಾದ ನಿರಂಜನ್ ಹಾಗೂ ನಿವೇದನೆಗೆ ಸಾಮ್ಯತೆಯಾಗಿ ಕಾಣಲು ಕಾರಣವೇನು?
- ಮಕ್ಕಳು ಬಾಯ್ದೆರೆಯಾಗಿ ಪ್ರತಿಕ್ರಿಯಿಸಲು ಸಂದರ್ಭ
- **ಅಧ್ಯಾಪಕನ ವಿವರಣೆ**

  *ರಾಗವೆಂಬುದು ವಿಶ್ವ ಸಂಗೀತ ಸಂಸ್ಕೃತಿಗೆ ಭಾರತೀಯ ಸಂಗೀತವು ನೀಡಿದ ಅತ್ಯಮೂಲ್ಯ ಕೊಡುಗೆಯಾಗಿದೆ. ಪ್ರತಿಯೊಂದು ಸಂಗೀತವು ಹುಟ್ಟುವುದು ರಾಗಗಳಿಂದಾಗಿದೆ. ಸ್ವರಗಳು ಒಟ್ಟು ಸೇರುವುದರಿಂದ ರಾಗಗಳು ಉಂಟಾಗುವುದು. ಹಾಡುಗಳ ಸಂಗೀತಕ್ಕೆ ಸಾಮ್ಯವಿದ್ದಲ್ಲಿ ಆ ಸಂಗೀತ ಹುಟ್ಟಿರುವುದು ಒಂದೇ ರಾಗದಿಂದಾಗಿರುತ್ತದೆ. ಒಂದೇ ರಾಗದಿಂದ ಹುಟ್ಟುವ ಸಂಗೀತಗಳಲ್ಲಿ ಸಾಮ್ಯತೆಯುಂಟಾಗಿರುವುದು. ಇದುವೇ ನಿವೇದ್ ಹಾಗೂ ನಿರಂಜನಿಗೆ ಸಾಮ್ಯತೆಯುಂಟಾಗಲು ಕಾರಣವಾಗಿದೆ. ಇವರು ಇಬ್ಬರೂ ಕೂಡಾ ಒಂದೇ ಹೆತ್ತವರ ಮಕ್ಕಳಾಗಿದ್ದಾರೆ.*

**ಚಟುವಟಿಕೆ – 2**

- ಹಾಗಾದರೆ ಇದೇ ರಾಗದಲ್ಲಿ ರಚಿಸಿದ ಹೆಚ್ಚಿನ ಹಾಡುಗಳನ್ನು ನಮಗೆ ಗಮನಿಸೋಣ.
- ಮೊದಲೇ ತಯಾರು ಮಾಡಿದ ಪೆಟ್ಟಿಗೆ ಇನ್ನು ಕೇಳುವಂತೆ ಹಾಡುಗಳನ್ನು ಸೇರಿಸಬಹುದೇ?
- ಹಾಡುಗಳನ್ನು ಕೇಳಿಸುವುದು.

1. ಓರ್ಮಕಳೇ....
2. ದ್ವಾದಶಿಯಿಲ್....
3. ಇನ್ನಲೆ ಮಯಂಗುಂಬೋಳ್....
4. ದೇವಾಂಗಣಕಳ್ ....
5. ಒರುಮ ಮಯಿಲ್‌ಪ್ಪೀಲಿಯಾಯ್ ಇಞಾನ್
6. ಮೌಲಿಯಿಲ್ ಮಯಿಲ್‌ಪ್ಪೀಲಿ....
7. ಕಣಿಕ್ಕಾಣುನ್ನೇರಂ....
8. ಮಞಲ್‌ಪ್ರಸಾದಂ.....
9. ಕನಕಚಿಲಂಗ್ ಕಿಲುಙಿಕ್ಕಿಲುಙ್ಙಿ...
10. ವ್ಯತ್ಯಸ್ತನಾಮೊರು...
11. ಸತ್ಯ ಶಿವಸೌಂದರ್ಯ...
12. ಸ್ವರ್ಗನಂದಿನಿ....
13. ಓಂ ನಮಶಿವಾಯ....
15. ದ್ವಾರಕೇ....
16. ಕರಿಮುಗಿಲ್‌ಕಾಟ್ಟಿಲೆ....
17. ಸನ್ಯಾಸಿನಿ....
18. ಸ್ವರ್ಣಮುಗಿಲೇ....

- ಮಕ್ಕಳು ಪಟ್ಟಿಯನ್ನು ಮಾಡುವರು
- ನಾಲ್ಕು ರಾಗಗಳಲ್ಲಿ ರಚಿಸಲ್ಪಟ್ಟ ಹಾಡುಗಳನ್ನು ನೀವು ಈಗ ಪಟ್ಟಿ ಮಾಡಿರುವಿರಿ. ಈ ರಾಗಗಳು ಯಾವುದೆಂದು ಹೇಳಬಹುದೇ?
- ಅಧ್ಯಾಪಕ ರಾಗಗಳ ಕುರಿತಾದ ಸರಳ ವಿವರಣೆಯನ್ನು ನೀಡುವರು.

  ನಾಲ್ಕನೇಯ ಗುಂಪಿನಲ್ಲಿ ನೀವು ಒಳಗೊಳ್ಳಿಸಿದ ಹಾಡುಗಳನ್ನು ರಚಿಸಿರುವುದು.

ಕಲ್ಯಾಣಿ ರಾಗದಲ್ಲಾಗಿದೆ. 72 ಮೇಳ ಕರ್ತಾ (ಜನಕ ರಾಗಗಳು, ಸಂಪೂರ್ಣರಾಗಗಳು ಎಂಬಿವುಗಳು ಇವೆ ಎಂದು ಮೊದಲೇ ನಾವು ತಿಳಿದುಕೊಂಡಿದ್ದೇವೆ. ಇದರಲ್ಲಿ 65ನೇ ರಾಗವಾಗಿದೆ ಮೇಚ ಕಲ್ಯಾಣಿ ರಾಗ ಎಂದು ತಿಳಿಯಲ್ಪಡುವ ಕಲ್ಯಾಣಿ. ಆರೋಹಣ, ಅವರೋಹಣ, ಸ್ವರ ಸ್ಥಾನಗಳು ಇವುಗಳಾಗಿವೆ. ಷಡ್ಜಂ, ಚತುರಶ್ರುತಿ, ಯಷಭಂ, ಅಂತರಗಂಧಾರಂ, ಪ್ರತಿ ಮಧ್ಯಮಂ, ಪಂಚಮಂ, ಚತುರ್ ಶ್ರುತಿ ದೈವತಂ, ಕಾಕಳಿ ನಿಷಾದಂ.

ಪೂರ್ತಿ ಸ್ವರಗಳು ಕೂಡ ತೀವ್ರವಾಗಿರುವ ಒಂದು ರಾಗವಾಗಿದೆ ಕಲ್ಯಾಣಿ. 122ರಷ್ಟು ಜನ್ಯ ರಾಗಗಳು ಕಲ್ಯಾಣಿ ರಾಗದಲ್ಲಿದೆ.

ಶಾಸ್ತ್ರೀಯ ಸಂಗೀತ ಅಭ್ಯಸಿಸುವ ವಿದ್ಯಾರ್ಥಿಗಳು ಈ ರಾಗದಲ್ಲಿರುವ ಗೀತೆಗಳನ್ನು , ಜತಿ ಸ್ವರಗಳನ್ನು ವರ್ಣಗಳನ್ನು ಕೃತಿಗಳನ್ನು ಮತ್ತು ಕೀರ್ತನೆಗಳನ್ನು ಬೇಕಾದಷ್ಟು ಕಲಿಯುತ್ತಾರೆ.

ಗೀತೆ

ಕಮಲ ಜಾದಳ ವಿಮಲ ಸುನಯನಾ .........

(ತಿಶ್ರಜಾತಿ ತ್ರಿಪುಟ ತಾಳ)

ಜತಿಸ್ವರ – ಸಾ.....ನೀ ದಾ ಪಾ ದಾ ಮಾ ಗಾ ರೀ ನೀ ರೀ

ರೂಪಕತಾಳ

ವರ್ಣ – ವನಜಾಕ್ಷಿ

| | |
|---|---|
| 1.<br>ಸ್ವರ್ಣಮುಗಿಲೇ...<br>ಕರಿಮಿಳಿಕ್ಕುರುವಿಯೆ...<br>ಮೌನಸರೋವರಂ...<br>ಸುಮಂಗಲೀ ನೀ...<br>ಓರ್ಮಗಳೇ...<br>ದ್ವಾರಕೇ...<br>ಸನ್ಯಾಸಿನೀ... | 3.<br>ಅಮ್ಮಮಳಕ್ಕಾರಿನ್ ...<br>ಚಂದನಮಣಿವಾದಿಲ್...<br>ಓಂ ನಮಶಿವಾಯ....<br>ದ್ವಾದಶಿಯಿಲ್.... |
| 2. ನೀಲಗಿರಿಯುಡೆ....<br>ಕಳಿವೀಟುರಜಿಯಲ್ಲೋ...<br>ಮಾರಿವಿಲ್ಲಿನ್...<br>ಎನಿಯ್ಯೊರು ಪೆಣ್ಣುಂಡು...<br>ಮೌಲಿಯಿಲ್ ಮಯಿಲ್ಪೀಲಿ....<br>ಕಣಿಕಾಣುನ್ನೇರಂ...<br>ಮಂಞಲ್ಪ್ರಸಾದವುಂ...<br>ಕನಕಚ್ಚಿಲಜ್<br>ವ್ಯತ್ಯಸ್ತನಾಮೊರು...<br>ಕರಿಮುಗಿಲ್ | 4.<br>ಅನುರಾಗಿಣಿ....<br>ಸ್ವರ್ಣಚಾಮರಂ...<br>ಕಾಣುಂಬೋಲ್ ಪರಯಾಮೋ...<br>ಇನ್ನಲೆ ಮಯಂಬುಬೋಲ್<br>ದೇವಾಂಗಣಗಳ್<br>ಒರು ಮಯಿಲ್ಪೀಲಿಯಾಯ್ ಞಾನ್...<br>ಸತ್ಯ ಶಿವ ಸೌಂದರ್ಯ...<br>ಸ್ವರ್ಗನಂದಿನಿ.... |

ಕೀರ್ತನೆಗಳು, ಕೃತಿಗಳು-

1. ಉನ್ನೆಯಲ್ಲಾನ್ – ಆದಿತಾಳ
2. ಹಿಮಾದ್ರಿಸುತೆ – ರೂಪಕತಾಳ
3. ನಿಧಿತ್ತಾಲ ಸುಖಮೋ – ಮಿಶ್ರಚಾಪ್

---

ಮೂರನೇ ಗುಂಪಿನ ಹಾಡುಗಳನ್ನು ಹಿಂದೋಳರಾಗದಲ್ಲಿರುವವುಗಳಾಗಿ ಹಿಂದೋಳವು ಒಂದು ಜನ್ಯರಾಗವಾಗಿದೆ.

ಪಂಚಮಸ್ವರ ಇಲ್ಲದ ರಾಗ – ಪಂಚಮವರ್ಜ್ಯರಾಗ

ಆರೋಹಣ : ಸಗಮದನೀಸ ಅವರೋಹಣ : ಸನೀದಮೆಗಸ

ಷಡ್ಜ, ಸಾಧಾರಣ ಗಾಂಧಾರ, ಶುದ್ಧ ಮಧ್ಯಮ, ಶುದ್ಧದೈವತ, ಕೈಶಿಕನಿಷಾದ ಇವುಗಳು ಸ್ವರ ಸ್ಥಾನಗಳು

ಮೇಳ ಕತಾನಿರಾಗವಾದ ಹನುಮತ್ತೋಡಿಯಲ್ಲಿ ಜನ್ಯವಾಗಿದೆ.

ಮಾಮವಧು ಶ್ರೀ ಸರಸ್ವತಿ (ಆದಿತಾಳ)

ಪದ್ಮನಾಭ ಪಾಹಿ (ಆದಿತಾಳ)

ಸಾಮಾಜ ವರಗಮನಾ (ಆದಿತಾಳ)

ಈ ಕೃತಿಗಳೆಲ್ಲಾ ಸಾಧಾರಣವಾಗಿ ಕಛೇರಿಗಳಲ್ಲಿ ಹಾಡಿ ಕೇಳಲು ಸಂದರ್ಭವಿರುವಂತಹವುಗಳಾಗಿವೆ. ಪ್ರಾಚೀನ ಕಾಲದ ಗ್ರಂಥಗಳಲ್ಲಿ 'ಮಾಳವಕೌಶಿಕ' ಎಂಬ ಹೆಸರಿನಲ್ಲಿ ಈ ರಾಗ ತಿಳಿಯಲ್ಪಡುವುದು. ಇದು ಅತೀ ಪುರಾತನ ರಾಗಗಳಲ್ಲಿ ಒಂದಾಗಿದೆ.

(ಭಾರತೀಯ ಸಂಗೀತದಲ್ಲಿ)

ಎರಡನೇಯ ಗುಂಪಿನಲ್ಲಿ ಒಳಗೊಳ್ಳಿಸಿರುವ ಹಾಡುಗಳು ಮೋಹನ ರಾಗಗಳಲ್ಲಿರುವವುಗಳಾಗಿವೆ. ಇದು ಜನಪ್ರಿಯ ರಾಗವಾಗಿದೆ.

ಹಿಂದಿನ ನಾಟಕ ಹಾಡುಗಳು ಜನಪ್ರಿಯವಾಗಲು ಈ ರಾಗದ ಪಾತ್ರ ಮಹತ್ತರವಾದುದು.

ಈಗಿನ ತಲೆಮಾರಿನ ಜನರು ಕೂಡ ಹಾಡುತ್ತಿರುವ ಹಲವಾರು ಚಲನ ಚಿತ್ರ ಹಾಡುಗಳೂ ಕೂಡಾ ಈ ರಾಗದಲ್ಲಿ ಸೃಷ್ಟಿಯಾದವುಗಳಾಗಿವೆ.

ಆರೋಹಣದಲ್ಲಿ ಸ ರಿ ಗ ಮ ಪ ದ ಸ

ಅವರೋಹಣದಲ್ಲಿ ಸ ದ ಪ ಗ ರಿ ಸ

ಷಡ್ಜ, ಚತುರ್‌ಶ್ರುತಿ, ಋಷಭ, ಅಂತರಗಾಂಧಾರ, ಪಂಚಮ, ಚತುರ್‌ಶ್ರುತಿದೈವತ ಎಂಬಿವುಗಳು ಸ್ವರಸ್ಥಾನಗಳಾಗಿವೆ. ಈ ರಾಗವು ಹರಿಕಾಂಬೋಜಿ ಎಂಬ ಮೇಳಕರ್ತಾದ ಜನ್ಯರಾಗವೆಂದು ಹೇಳುತ್ತಾರೆ. ವರವೀಣಾ ಮೃದುವಾಣಿ.... ಎಂಬ ಗೀತೆ (ರೂಪಕತಾಳ), ನಿನ್ನುಕೋರಿ... ಎಂದು ಆರಂಭವಾಗುವ ಆದಿತಾಳವರ್ಣ, ಸದಾಪಾಲಾಯ... ಎಂಬ ಆದಿತಾಳ ಕೀರ್ತನೆ, ಹರಿಪಾಹಿಮಾಂ ನೃಹರೆ ಮುರಾಶೆ.... ಎಂಬ ಕೃತಿ, ರಾಮನಿನ್ನುನಮ್ಮನಾ... ಎಂಬ ಆದಿತಾಳಕೃತಿಗಳು ಹೀಗೆ ಈ ಧಾರಾಳ ಕೃತಿಗಳು ಈ ರಾಗದಲ್ಲಿದೆ.

ರಾಗಭಾವವು ರಾಗದ ಹೆಸರಿನಂತೆಯೇ ಮನಮೋಹನವಾಗಿದೆ.

ಒಂದನೇ ಗುಂಪಿನಲ್ಲಿ ಒಳಗೊಂಡ ಹಾಡುಗಳು (ಕಾಪ್ಪಿ) ರಾಗದಲ್ಲಿ ಹುಟ್ಟಿದವುಗಳಾಗಿವೆ.

ಇಪ್ಪತ್ತೆರಡನೆ ಮೇಳಕರ್ತರಾಗದಲ್ಲಿ ಜನ್ಯ.

ಆರೋಹಣ – ಸರಿಗಮಪದನಿಸ

ಅವರೋಹಣ – ಸನಿದನಿಪಗಾರಿಸ

ಅನ್ಯ ಸ್ವರಗಳು ಮೂರು – ಅಂತರಗಾಂಧಾರ, ಚತುರಶ್ರುತಿ ದೈವತಂ, ಕಾಕಳಿನಿಷಾದ

ಸ್ವರ ಸ್ಥಾನಗಳು – ಷಡ್ಜ, ಚತುರಶ್ರುತಿ ಋಷಭ, ಕೈಶಿಕನಿಷಾದ ಮಿಶ್ರಕಾಪಿ ಎಂದು ಈ ರಾಗವನ್ನು ಕರೆಯುತ್ತಾರೆ. ಭಕ್ತಿ, ಕರುಣೆ, ಶೋಕ ಈ ಭಾವನೆಗಳು ಈ ರಾಗದಲ್ಲಿದೆ.

ಕೃತಿಗಳು – ಮಾಯಾಗೋಪಬಾಲ...
ವಿಹರಮಾನಸಕರಾಮ...
ಎನ್ನ ನವಂ ಶೈತನೆ....
ಸುಮಪಾಯಕ...

ಸಂಗೀತ ನಿರ್ದೇಶಕರು ಈ ರಾಗಗಳನ್ನು ಉಪಯೋಗಿಸಿ ಅನಗತ್ಯವಾದ ಸ್ವರಗಳನ್ನು ಸೇರಿಸಿ ಸಿನೆಮಾ ಹಾಡುಗಳನ್ನು, ಲಘು ಸಂಗೀತದ ಹಾಡುಗಳನ್ನು ನಿರ್ಮಿಸುತ್ತಾರೆ.

**ಚಟುವಟಿಕೆ – 3**

- ನಾಲ್ಕು ರಾಗಗಳಲ್ಲಾಗಿ ಪಟ್ಟಿ ಮಾಡಿದ ಹಾಡುಗಳನ್ನು ಪುನಃ ರಾಗಗಳ ಕ್ರಮದಲ್ಲಿ ಮಕ್ಕಳಿಗೆ ಕೇಳಿಸುವುದು.

- ಒಂದೇ ರಾಗದಲ್ಲಿ ಸಿದ್ಧಪಡಿಸಿದ ಹಾಡುಗಳಿಗೆ ಒಂದೇ ಭಾವವಿರುವುದೋ?
  (ಉದಾ : ಮೋಹನರಾದಲ್ಲಿರುವ ಹಾಡುಗಳನ್ನು ಬರೆಯಬೇಕು)
  - ಸಮಾನ ಭಾವನೆಗಳನ್ನು ಒಳಗೊಳ್ಳುವ ಹಾಡುಗಳು ನೀವು ಕಂಡುಹಿಡಿದ ನಾಲ್ಕು ರಾಗಗಳಲ್ಲೂ ಬರುವುದಿಲ್ಲವೇ?
  - ಪ್ರತಿಯೊಂದು ಗಾನದ ಆಶಯಕ್ಕನುಸಾರವಾದ ಎಲ್ಲಾ ರಾಗಗಳಿವೆಯೋ ?
  - ನೀವು ಕೇಳಿದ ಹಾಡುಗಳಲ್ಲಿ ಯಾವೆಲ್ಲಾ ಭಾವಗಳಿವೆ?
  - ಆ ರೀತಿಯಲ್ಲಿ ಹಾಡುಗಳನ್ನು ಪಟ್ಟಿ ಮಾಡಬಹುದೇ?
- ಅಧ್ಯಾಪಕರು B.B ಯಲ್ಲಿ ದಾಖಲಿಸುವರು.
  - ಒಂದೇ ರಾಗವನ್ನು ನೀಡಿದ ವಿವಿಧ ಹಾಡುಗಳಿಗೆ ವಿಭಿನ್ನವಾದ ಸಂಗೀತಗಳಿವೆ.
  - ಸಮಾನ ಭಾವಗಳಿರುವ ಹಾಡುಗಳು, ನಾಲ್ಕು ರಾಗಗಳಲ್ಲೂ ಬರುತ್ತದೆ.
  - ಎಲ್ಲವೂ ಆಶಯಕ್ಕೆ ಹೊಂದಿಕೊಂಡ ಸಂಗೀತ ಸಂಯೋಜನೆಯಾಗಿದೆ.
  - ನಾವು ಕೇಳಿದ ಹಾಡುಗಳಲ್ಲಿ ಸಂತೋಷವೂ, ಬೇಸರವೂ, ಪ್ರೀತಿಯೂ, ಭಕ್ತಿಯೂ ಇವೆ.
- ಒಂದೇ ಭಾವಗಳನ್ನೊಳಗೊಂಡ ಹಾಡುಗಳನ್ನು ಪಟ್ಟಿ ಮಾಡುವುದು.
  ಸಂತೋಷ : ಉಲ್ಲಾಸದ ಹೂಮಳೆ ಜಿನುಗುತಿದೆ ಮೆಲ್ಲಗೆ, ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು., ನಮ್ಮ ಮನೆಯಲಿ ದಿನವು ಬೆಳಗೋ ಚೈತ್ರವೇ
  ಬೇಸರ : ಬಾನಲ್ಲೂ ನೀನೇ ಭೂವಿಯಲ್ಲೂ ನೀನೇ..., ನೀ ಮೀಟಿದ ನೆನಪೆಲ್ಲವೂ, ತುತ್ತು ಅನ್ನ ತಿನ್ನೋಕೇ
  ಭಕ್ತಿ : ಕೃಷ್ಣ ನೀ ಬೇಗನೇ ಬಾರೋ, ಅಂಬಿಗ ನಾ ನಂಬಿದೆ
  ವಿರಹ : ವಿರಹಾ ನೂರು ನೂರು ತರ, ನಾನೊಂದು ತೀರ ನೀನೊಂದು ತೀರ
  ಪ್ರಣಯ, ಪ್ರೀತಿ : ಬಣ್ಣಾ ನನ್ನ ಒಲವಿನ ಬಣ್ಣಾ, ಮೆಲ್ಲ ಮೆಲ್ಲನೆ ಬಂದ

### ಕ್ರೋಡೀಕರಣ

ಭಾರತೀಯ ಸಂಗೀತದಲ್ಲಿ ಯಾವುದೇ ಭಾವವನ್ನಳವಡಿಸಲು ಅನೇಕ ರಾಗಗಳಿವೆ. ಇಂದು ಯಾವುದೇ ವಲಯಗಳಲ್ಲಿ, ಪ್ರಯೋಗಗಳು, ನಡೆಯುವಂತೆಯೇ ಸಂಗೀತದಲ್ಲೂ ರಂಗ ಪ್ರಯೋಗಗಳಲ್ಲಿಯೂ ಅನೇಕ ಪ್ರಯೋಗಗಳು ನಡೆಯುತ್ತದೆ. ಒಂದೇ ರಾಗವನ್ನು ವಿವಿಧ ಭಾವಗಳಲ್ಲಿ ಪ್ರಕಟಿಸುವ ರೀತಿಯಲ್ಲಿ ಸಿದ್ಧಪಡಿಸಲು ಸಾಧ್ಯವಿರುವ ಅನೇಕ ಸಂಗೀತಜ್ಞರು ನಮ್ಮಲ್ಲಿದ್ದಾರೆ.

### ಮೌಲ್ಯನಿರ್ಣಯ

- ಹಾಡುಗಳಲ್ಲಿನ ಸಾಮ್ಯತೆ
- ಆಸ್ವಾದನೆ
- ವೈವಿಧ್ಯತೆಗಳನ್ನು ತಿಳಿಯುವುದು
- ಭಾವ
- ಹಾಡುವಿಕೆ

### ಮುಂದುವರಿದ ಚಟುವಟಿಕೆ

- ಇನ್ನೂ ಕೇಳುತ್ತಿರುವ ಹಾಡುಗಳ ಧ್ವನಿಸಾಮ್ಯತೆ ಕಂಡು ಹಿಡಿದು ಯಾವ ರಾಗಗಳಲ್ಲಿ ಜನ್ಯವಾಯಿತೆಂದು ಅಧ್ಯಾಪಕರ ಸಹಾಯದಿಂದ ಕಂಡುಹಿಡಿಯುವುದು.
- ಒಂದೇ ರಾಗದಲ್ಲಿ ಬರುವ ವೈವಿಧ್ಯಭಾವಗಳಿರುವ ಹಾಡುಗಳನ್ನು ಕಂಡುಹಿಡಿಯಿರಿ.

### ರೆಫರೆನ್ಸ್

- ರಾಗಲಕ್ಷಣದೀಪಿಕ – ಡಾ. ಎಸ್. ಭಾಗ್ಯಲಕ್ಷ್ಮಿ
- ರಾಗ ಸುಧಾರ್ಣವಂ – ಕೆ.ಟಿ. ರವೀಂದ್ರನಾಥ್

## ಯೂನಿಟ್ – 3 ದಕ್ಷಿಣ ಭಾರತದ ಸಂಗೀತ

**ಕ**ರ್ನಾಟಕ ಸಂಗೀತ ಅಥವಾ ದಕ್ಷಿಣ ಭಾರತದ ಸಂಗೀತವು ಪೌರಾಣಿಕ ಭಾರತೀಯ ಸಂಗೀತ ಸಂಪ್ರದಾಯದಿಂದ ಪುರೋಗತಿ ಪಡೆದು ಬಂದ ಸಂಗೀತ ಶಾಖೆಯಾಗಿದೆ. ಕರ್ನಾಟಕ ಸಂಗೀತಾಭ್ಯಾಸಕ್ಕೆ ಕ್ರಮಬದ್ಧ ನಿಖರತೆ ಮತ್ತು ಸೌಕರ್ಯಪ್ರದವಾಗದ ರೀತಿಯ ಕಲಿಕಾ ಕ್ರಮವನ್ನು ಆವಿಷ್ಕರಿಸಿದ ಪುರಂದರದಾಸರು ಈ ಸಂಗೀತದ ಪಿತಾಮಹಾನೆಂದು ತಿಳಿಯಲ್ಪಡುವರು. ಕರ್ನಾಟಕ ಸಂಗೀತ ಲೋಕಕ್ಕೆ ಅಮೂಲ್ಯವಾದ ಕೊಡುಗೆಗಳನ್ನು ನೀಡಿದ ತ್ರಿಮೂರ್ತಿಗಳು, ಬಳಿಕ ಬಂದಂತಹ ಎಲ್ಲಾ ಸಂಗೀತ ಪಂಡಿತರು ಕೂಡಾ ಮೂಲಭೂತವಾಗಿ ಸ್ವೀಕರಿಸಿದ ಕಲಿಕಾ ಕ್ರಮವು ಪುರಂದರದಾಸರದ್ದಾಗಿತ್ತು. ಕರ್ನಾಟಕ ಸಂಗೀತ ಶಾಖೆಯಲ್ಲಿ ವೈವಿಧ್ಯತೆಗಳೂ, ರಾಗ – ಭಾವಗಳೂ ಹಾಗೂ ಇತರ ಸಂಗೀತಾಂಶಗಳನ್ನು ಪೂರ್ತಿಯಾಗಿ ಒಳಗೊಂಡ ಅನೇಕ ಸಂಗೀತ ರೂಪಳಿವೆ. ಪ್ರಾಥಮಿಕವಾಗಿ ಕೀರ್ತನೆ ಇವುಗಳೆಲ್ಲವನ್ನು ಒಳಗೊಂಡು ತಯಾರು ಮಾಡಿದ ಈ ಪಾಠಭಾಗವು ಸಂಗೀತ ವಿದ್ಯಾರ್ಥಿಗಳಿಗೆ ಶಿಸ್ತುಬದ್ಧವಾಗಿ ಸಂಗೀತ ಪಾಠಗಳನ್ನು ಕಲಿಯಲಿರುವ ಸೌಕರ್ಯವನ್ನು ಒದಗಿಸುವುದು.

### ಒಳಹೂರಣ

ಸ್ವರಜತಿ, ವರ್ಣಗಳು, ಕೀರ್ತನೆಗಳು ಇವುಗಳನ್ನು ಹಾಡಲು ಬೇಕಾಗಿರುವ ಚಟುವಟಿಕೆಗಳನ್ನು ಈ ಯೂನಿಟಿನಲ್ಲಿ ಒಳಗೊಳ್ಳಿಸಲಾಗಿದೆ. ಪ್ರತಿಯೊಂದು ಸಂಗೀತ ರೂಪದ ವಿಶೇಷತೆಗಳನ್ನು ಮತ್ತು ಹಾಡುವಾಗ ಪಾಲಿಸಬೇಕಾದ ನಿಯಮಗಳ ಬಗ್ಗೆ ವಿವರವಾಗಿ ಇಲ್ಲಿ ಪ್ರತಿಪಾದಿಸಲಾಗಿದೆ.

### ಕಲಿಕಾ ಸಾಧನೆ

ಸ್ವರಜತಿ, ವರ್ಣಗಳು, ಕೀರ್ತನೆಗಳು ಪದಗಳು, ಭಜನೆ ಎಂಬಿವುಗಳನ್ನು ಹಾಡುವುದು.

## ಆಶಯ, ತಿಳುವಳಿಕೆ

- ಸ್ವರಜತಿ, ವರ್ಣಗಳು, ಕೀರ್ತನೆಗಳು ಪದಗಳು, ಗಝಲ್‌ಗಳು, ಭಜನೆ ಎಂಬಿವುಗಳು ಕರ್ನಾಟಕ ಸಂಗೀತ ರೂಪಗಳಾಗಿವೆ.
- ಗಝಲ್, ಹಿಂದೂಸ್ಥಾನಿ ಸಂಗೀತ ಶಾಖೆಯ ಸರಳವಾದ ಸಂಗೀ ರೂಪವಾಗಿದೆ. ದಕ್ಷಿಣ ಭಾರತದ ಸಂಗೀತ ಲೋಕದಲ್ಲಿ ಈ ಸಂಗೀತ ರೂಪವು ಪ್ರಚಾರದಲ್ಲಿದೆ.
- ಸ್ವರಜತಿ, ವರ್ಣ, ಇವುಗಳು ನೃತ್ಯ ಪ್ರದರ್ಶನಕ್ಕೆ ಸಾಧ್ಯವಿರುವಂತಹವುಗಳೂ ಅಭ್ಯಾಸಗಾನಗಳೂ ಆಗಿವೆ.
- ವಿಭಿನ್ನ ರಾಗಗಳಲ್ಲಿ ಹಾಗೂ ತಾಳಗಳಲ್ಲಿ ಇವುಗಳನ್ನೂ ಹಾಡಲಾಗುವುದು.

## ಪ್ರಕ್ರಿಯೆ

- ಸ್ವರಜತಿ, ವರ್ಣಗಳು ಮೊದಲಾದವುಗಳನ್ನು ಕೇಳುವುದು.
- ವಿಶೇಷತೆಗಳನ್ನು ಕಂಡುಹಿಡಿಯುವುದು.
- ಅನುಕರಿಸಿ ಹಾಡುವುದು.
- ಸ್ವರಜತಿ, ಜತಿಸ್ವರ ಎಂಬಿವುಗಳ ಸಾಮ್ಯತೆ ವ್ಯತ್ಯಾಸಗಳನ್ನು ತಿಳಿಯುವುದು.
- ಪದವರ್ಣ, ದರುವರ್ಣ, ತಾನವರ್ಣ ಎಂಬಿವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು.

## ಮೌಲ್ಯಮಾಪನ

- ಹಾಡುವಿಕೆ ಹಿರಿಮೆ
- ಸರಳ ಪ್ರಶ್ನೆಗಳು
- ಪರಸ್ಪರ ಮೌಲ್ಯನಿರ್ಣಯ

## ಕಲಿಕಾ ಚಟುವಟಿಕೆಗಳು

ಚಟುವಟಿಕೆ – 1

- ಗೀತೆ, ಸ್ವರಜತಿ, ಜತಿಸ್ವರ ಇವುಗಳ ಸಿ.ಡಿಗಳನ್ನು ಕೇಳಿಸುವುದು. (ಮೊದಲಿನ ತರಗತಿಗಳಲ್ಲಿ ಪರಿಚಯಿಸಿದ ಕಲಿಕ ಗೀತೆಗಳನ್ನು ಒಳಗೊಳ್ಳಿಸಬೇಕು)
- ಪರಿಚಿತವಾದ ಸಂಗೀತ ರೂಪವನ್ನೂ ಆಯ್ದುಕೊಳ್ಳಲು ಹೇಳುವುದು. ಉಳಿದ ಎರಡು ಸಂಗೀತ ರೂಪಗಳ ವಿಶೇಷತೆಗಳ ಟಿಪ್ಪಣಿ ತಯಾರಿಸಲು ಹೇಳುವುದು. ಪರಿಚಿತವಾದ ಸಂಗೀತ ರೂಪಕ್ಕಿಂತ ಉಳಿದ ಎರಡು ಹಾಡುಗಳಿಗಿರುವ ಸಾಮ್ಯತೆ ವ್ಯತ್ಯಾಸಗಳನ್ನು ಬರೆಯಲು ಹೇಳುವುದು. ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸುವುದು.
- ಮಕ್ಕಳು ಟಿಪ್ಪಣಿಯನ್ನು ವಿವರಿಸುವುದು.
- ಟಿಪ್ಪಣಿಗಳ ವಿವರಣೆಯ ಭಾಗವಾಗಿ ಎರಡು ಸಂಗೀತ ರೂಪಗಳನ್ನು ಪರಿಚಯಿಸುವುದು.

ಜತಿಸ್ವರಗಳ ಎಂದರೇನು?

ಸಾಹಿತ್ಯವಿಲ್ಲದೆ ಸ್ವರ ಮಾತ್ರ ಉಪಯೋಗಿಸಿರುವಂತೆ ಒಂದು ರೀತಿಯ ಅಭ್ಯಾಸಗಾನ ರೂಪವಾಗಿದೆ. ಜತಿಸ್ವರ ಇದು ಒಂದು ನಿಶ್ಚಿತ ಕಾಲಕ್ಕನುಸಾರವಾಗಿ ಒಂದೇ ರೀತಿಯಲ್ಲಿಲ್ಲದ ಹಲವು ಜತಿಗಳಲ್ಲಿ ಬರುವ ಒಂದು ಗಾನರೂಪವಾಗಿದೆ. ಒಂದು ಹಾಡಿನ ರಾಗಾನುಭವ ಪೂರ್ತಿಯಾಗಿ ಅನುಭವಕ್ಕೆ ಬರುವ ರೀತಿಯಲ್ಲಿ ಹಾಡುಗಾರಿಕೆಯನ್ನು ಕ್ರಮಬದ್ಧಗೊಳಿಸಿರುವುದು ನೃತ್ಯಕ್ಕಾಗಿರುವ ಸಂಗೀತವೆಂಬ ನೆಲೆಯಲ್ಲಿ ತಿಳಿಯಲ್ಪಡುವುದು. ಕೆಲವು ಜತಿಸ್ವರಗಳು ನಂತರ ಸಾಹಿತ್ಯವನ್ನು ಒಳಗೊಂಡು ಸ್ವರಜತಿಗಳಾಗಿ ಬದಲಾಗುವುದು.

- ಕಲ್ಯಾಣಿ, ಶಂಕರಾಭರಣ, ತೋಡಿ ಎಂಬೀ ಜತಿಸ್ವರಗಳನ್ನು ಕೇಳಿಸುತ್ತದೆ.
- ಪ್ರತಿಯೊಂದು ಜತಿಸ್ವರಗಳನ್ನು ಹಾಡುವಾಗಲೂ ಅವುಗಳ ರಾಗದ ಬಗ್ಗೆ, ತಾಳದ ಬಗ್ಗೆ ವಿವರಣೆಯನ್ನು ನೀಡಬೇಕಾಗಿದೆ.

  ಜತಿಸ್ವರ ರಚನೆಕಾರರು – ಶ್ಯಾಮಶಾಸ್ತ್ರಿಗಳು, ಚಿನ್ನಕೃಷ್ಣಯ್ಯರ್
- ಹಾಡಬೇಕಾದ ಕ್ರಮ- ಆದಿಯಷ್ಟ ......, ಚೌಕಕಾಲದಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಇವುಗಳನ್ನು ಸ್ವರ ಸಂಚಾರ, ನಿಖರವಾಗುವಂತೆ ತಾಳವನ್ನು ಹಾಕಿ ಗಟ್ಟಿಗೊಳಿಸುವುದು.
- ಮಧ್ಯಮ ಕಾಲದಲ್ಲಿ ಹಾಡುವುದು
- ಸ್ವರ ಸೌಂದರ್ಯಕ್ಕಾಗಿ ಜತಿಸ್ವರಗಳನ್ನು ಅಕಾರದಿ ಸ್ವರಗಳಲ್ಲಿ ಚೌಕಕಾಲದಲ್ಲಿಯೂ (ವೇಗತೆ ಕಡಿಮೆ) ಮಧ್ಯಮ ಕಾಲದಲ್ಲೂ ಹಾಡಿ ತರಬೇತಿ ನೀಡಬೇಕು.
- ವಾದ್ಯೋಪಕರಣಗಳೊಂದಿಗೆ ಮತ್ತು ನೃತ್ಯದ ಹಿನ್ನಲೆ ಹಾಡಾಗಿಯೂ ಜತಿಸ್ವರಗಳನ್ನು ಹಾಡಿದ ವಿಸಿಡಿಗಳನ್ನು ಕೇಳಿಸುವುದು/ತೋರಿಸುವುದು.
- ಕಲಿತ ಜತಿಸ್ವರಗಳನ್ನು ಗುಂಪಿನಲ್ಲೂ, ವೈಯಕ್ತಿಕವಾಗಿಯೂ ಹಾಡುವುದು.
- ಹೆಚ್ಚಿನ ಜತಿಸ್ವರಗಳನ್ನು (ವಿವಿಧ ಸಂಗೀತಜ್ಞರ) ಕೇಳುವುದು. ಆಲಾಪನಾ ಶೈಲಿ, ರಾಗ ಸಂಚಾರ ಎಂಬಿವುಗಳನ್ನು ತಿಳಿಯುವುದು.

ಚಟುವಟಿಕೆ – 2 ಸ್ವರಜತಿ

- ಕೇಳಿ ಕಲಿತ ಬಿಲಹರಿ ರಾಗದಲ್ಲಿರುವ ರಾಗವೇಣು ಎಂಬ ಸ್ವರಜತಿ ಕೇಳಿಸುವುದು. ಕೇಳಿದ ಸಂಗೀತ ರೂಪದ ವಿಶೇಷತೆಗಳ ಬಗ್ಗೆ ಸರಳವಾದ ಚರ್ಚೆ

  ಚರ್ಚೆಯ ಸೂಚಕಗಳು–

  ಸಾಹಿತ್ಯ, ಸ್ವರ, ಜತಿ ಎಂಬಿವುಗಳ ಘಟಕ ವಿಶೇಷತೆಗಳು ಎಂಬಿವುಗಳ ಆಧಾರದಲ್ಲಿ ಚರ್ಚೆ.
- ಚರ್ಚೆಯ ಮೂಲಕ ತಲುಪಿದ ನಿಗಮನಗಳಿಗೆ ಪೂರಕವಾಗುವಂತೆ ಸ್ವರ, ಜತಿಯ ಬಗ್ಗೆ ಇರುವ ಮೌಖಿಕ ವಿವರಣೆ ನೀಡುವುದು.

  ಸ್ವರಜತಿ ರಚನೆಕಾರರು :- ಶ್ಯಾಮ ಶಾಸ್ತ್ರಿಗಳು, ವಾಲಾಜಪೇಟ, ಕೃಷ್ಣಸ್ವಾಮಿ ಭಾಗವತರು, ಸ್ವಾಮಿ ತಿರುನಾಳ್, ಚಿನ್ನಕೃಷ್ಣದಾಸರು, ಪೊನ್ನಯ್ಯಪಿಳ್ಳ ಸ್ವರಜತಿಗಳು ಗೀತೆಗಳಿಗಿಂತಲು ಆಸ್ವಾದಕರವಾಗಿದೆ. ಸಂಗೀತ ರೂಪ ಹಾಗೂ ಹಾಡುವ ರೀತಿಗೆ ಹೋಲಿಸಿದರೆ ಇವುಗಳಿಗೆ ವರ್ಣಗಳೊಂದಿಗೆ ಹೆಚ್ಚಿನ ಸಾಮ್ಯತೆಗಳಿವೆ.

ಕೆಲವು ಸ್ವರಜತಿಗಳಲ್ಲಿ ಸೋಲ್‌ಕಟ್ಟು ಸ್ವರಗಳೂ ಮಿಶ್ರಿತಗೊಂಡಿರುತ್ತದೆ. ಪಲ್ಲವಿ, ಅನುಪಲ್ಲವಿ, ಚರಣ ಎಂಬೀ ಭಾಗಗಳಿವೆ. ಕೆಲವು ಸ್ವರಜತಿಗಳಲ್ಲಿ ಪಲ್ಲವಿ ಕಳೆದರೆ ಚರಣಗಳು ಮಾತ್ರ ಇರುವುದು.

ಸ್ವರ ಸಂಚಾರಕ್ಕೆ ಅನುಸರಿಸಿ ಸಾಹಿತ್ಯವನ್ನು ಆಲಾಪಿಸುವ ರೀತಿ, ಸಾಹಿತ್ಯ ದೇವಸ್ತುತಿ, ವೀರಾರಾಧನೆ ಅಥವಾ ಶೃಂಗಾರವೋ ಆಗಿರಬಹುದು. ನೃತ್ಯಕ್ಕಾಗಿರುವ ಒಂದು ರೀತಿಯ ಸಂಗೀತವೆಂಬ ನೆಲೆಯಲ್ಲಿ ಸ್ವರಜತಿಯ ಜನನವಾಗಿರುವುದು.

- ಸ್ವರಜತಿ ಆಲಾಪನೆಯ ತರಬೇತಿ
- ಸ್ವರಜತಿ ಸ್ವರಾನುಕ್ರವಾಗಿ ಬರೆಯುವುದು
- ಪ್ರತಿಯೊಂದು ಗೆರೆಯನ್ನು ಸ್ವರಗಳಾಗಿ ಹಾಡುವುದು
- ಸ್ವಂತವಾಗಿ ಹಾಡುವುದು.
- ಪಲ್ಲವಿ/ಅನುಪಲ್ಲವಿ/ ಚರಣಗಳು ಎಂಬೀ ಕ್ರಮದಲ್ಲಿ ಹಾಡಿಸುವುದು (ಸರಿಯಾದ ತಾಳದೊಂದಿಗೆ)
- ಸ್ವರ ಹಾಡಿ ಗಟ್ಟಿಯಾದ ಬಳಿಕ ಅವುಗಳಿಗೆ ಯೋಗ್ಯವಾದ ಗೆರೆಗಳನ್ನು ಒಟ್ಟು ಸೇರಿಸಿ ಹಾಡುವುದು. ಚೆನ್ನಾಗಿ ಹಾಡಿದ ಬಳಿಕ ಚೌಕಕಾಲ, ಮಧ್ಯಮಕಾಲ, ಮೃತಕಾಲ ಎಂಬೀ ವೇಗಗಳಲ್ಲಿ ಹಾಡುವುದು.
- ವಿವಿಧ ಸ್ವರಜತಿಗಳು – ಹಾಡುವುದು

  ರಾಗ – ಭೈರವಿ

  ರಾಗ – ಖಮಾಸ್

  ರಾಗ – ತೋಡಿ

ರಾಗ – ಯದುಕುಲಕಾಂಬೋಜಿ

ರಾಗ – ಆನಂದ ಭೈರವಿ

- ವಿವಿಧ ಸಂಗೀತಜ್ಞರ ಸ್ವರಜತಿ ಆಲಾಪನೆಯನ್ನು ಕೇಳುವುದು.
- ನೃತ್ಯಕ್ಕೆ ಬೇಕಾಗಿ ಹಾಡಿದ ಸ್ವರಜತಿಗಳನ್ನು ಕೇಳುವುದುಟ.
- ಸ್ವರಜತಿ, ಜತಿಸ್ವರದ ವ್ಯತ್ಯಾಸಗಳೇನು?
- ಸಾಹಿತ್ಯವಿರುವವುಗಳು, ಸಾಹಿತ್ಯವಿಲ್ಲದವುಗಳು, ಹೆಚ್ಚು ಶಾಸ್ತ್ರೀಯವಾದ ಸಂಗೀತ ರಚನೆ

ಚಟುವಟಿಕೆ – 3 : ವರ್ಣಗಳ ಹಾಡುವಿಕೆ/ಪರಿಚಯಿಸುವುದು

- ಸ್ವರಜತಿ/ವರ್ಣಗಳನ್ನು ಕೇಳಿಸುವುದು
- ಎರಡು ಸಂಗೀತ ರೂಪದ ಪ್ರತ್ಯೇಕತೆಗಳನ್ನು ತಿಳಿದುಕೊಳ್ಳುವುದು
- (ಕೇಳಿದುದನ್ನು ಆಧಾರವಾಗಿರಿಸಿ ಸರಳ ಪ್ರಶ್ನೆಗಳನ್ನು ಕೇಳುವುದು)
- ಇದರಲ್ಲಿ ಯಾವ ಗಾನರೂಪಕ್ಕೆ ಹೆಚ್ಚಿನ ಸ್ವರಗಳು, ಸಾಹಿತ್ಯ ರೂಪಗಳು ಒಳಗೊಂಡಿವೆ?
- ಹಾಡುಗಾರಿಕೆಯಲ್ಲಿ ಧೈರ್ಘ್ಯವಿರುವುದು ಯಾವುದು?
- ಕೇಳಿದ ಯಾವ ಸಂಗೀತ ರೂಪಕ್ಕೆ ಬಹಳ ಬೇಗನೆ ಸುಗಮವಾಗಿ ಹಾಡಿ ತರಬೇತಿ ನೀಡಲು ಬೇಗನೆ ಸಾಧ್ಯವಾಗುವುದು?
- ಮೊದಲು ಸ್ವರಜತಿ, ಎರಡನೇಯದಾಗಿ ವರ್ಣ ಎಂಬೀ ಕ್ರಮದಲ್ಲಿ ಕೇಳಿಸುವುದು.
- ವೈಯಕ್ತಿಕವಾಗಿ ಮಂಡಿಸುವುದು.

  ಉದಾಹರಣೆ

  ಗೀತೆ

  ವರ್ಣ (ಎರಡನೇಯದಾಗಿ ಕೇಳಿದ)

  ಎರಡನೇಯದ್ದರಲ್ಲಿ (ಸ್ವರಜತಿ)
- ಮಂಡನೆಯ ಆಧಾರದಲ್ಲಿ ಅಧ್ಯಾಪಕನ ವಿವರಣೆ
- ಎರಡನೆಯ ಗಾನರೂಪವು ವರ್ಣವಾಗಿದೆ. ಅಭ್ಯಾಸ ಗಾನರೂಪಗಳು ಒಳಗೊಂಡಂತಹವುಗಳು

ಚಟುವಟಿಕೆ – 4 :

- ಎರಡನೇಯದಾಗಿ ಕೇಳಿದ ಸಂಗೀತ ರೂಪವನ್ನು ಹಾಡಲು ತರಬೇತಿ ನೀಡುವುದು.
- ವಿಶೇಷತೆಗಳನ್ನು ತಿಳಿಯುವುದು.

- ವರ್ಣದ ವಿಶೇಷತೆಗಳನ್ನು ವಿವರಿಸುವುದು. (ಬಿ.ಬಿಯಲ್ಲಿ ದಾಖಲಿಸುವುದು)

  ಅಭ್ಯಾಸ ಗಾನಗಳಲ್ಲಿ ಅತಿ ಪ್ರಾಧಾನ್ಯ ಹೊಂದಿರುವವುಗಳಾಗಿವೆ ವರ್ಣಗಳು. ಇವುಗಳು ರಾಗದ ಭಾವವನ್ನು ಸಂಪುಷ್ಟಗೊಳಿಸುವುದು. ಅಪೂರ್ಣವಾದ ಪ್ರಯೋಗಗಳು, ವಿಶೇಷ ಪ್ರಯೋಗಗಳು, ಜಂಟಿ ದಾಟು, ವರಸೆ ಪ್ರಯೋಗಗಳು, ಮೊದಲಾದವುಗಳು ಅಡಗಿರುವ ಸಂಗೀತ ರೂಪವಾಗಿದೆ. ಆದ್ದರಿಂದ ಗಮನವಿಟ್ಟುಕೊಂಡು ವರ್ಣಗಳನ್ನ ಹಾಡಲು, ಸಂಗೀತೋಪಕರಣಗಳನ್ನು ನುಡಿಸಲು. ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಮುಂದೆ ಬರುವ ಸಂಗೀತಾಭ್ಯಾಸವು ಬಹಳ ಕಲಾತ್ಮಕವಾಗಿ ಅನಾಯಾಸದಿಂದ ಮುಂದುವರಿಸಲು ಸಾಧ್ಯವಾಗುವುದು.
- ವರ್ಣಗಳು–ಪದವರ್ಣ, ತಾನವರ್ಣ, ದರುವರ್ಣ(ವಿವರಣೆ)

  ಪದವರ್ಣ

  ಪದವರ್ಣಗಳು ನೃತ್ಯಕ್ಕೆ ಬೇಕಾಗಿ ರಚಿಸಿದವುಗಳಾಗಿವೆ. ಇವುಗಳನ್ನು ಭಾವಸ್ಪುರಣಕ್ಕೂ, ನೃತ್ಯಕ್ಕೂ ಹೊಂದಿಕೆಯಾಗುವಂತೆ ವಿಳಂಬ ಲಯದಲ್ಲಿ ಹಾಡುವ ಕಾರಣ ಚೌಕವರ್ಣಗಳೆಂದು ಹೇಳುವರು. ಇವುಗಳಲ್ಲಿ ಕೊನೆಯವರೆಗೂ ಸಾಹಿತ್ಯಗಳಿರುವುದು. ಪಲ್ಲವಿ, ಅನುಪಲ್ಲವಿ, ದೀಕ್ಷಿತರ್, ಇರಯಿಮ್ಮನ್

ತಂಬಿ, ವಡಿವೇಲು ಎಂಬಿವರು ಮನೋಹರವಾದ ಪದವರ್ಣಗಳನ್ನು ರಚಿಸಿದ್ದಾರೆ.

ತಾನವರ್ಣ

ತಾನವರ್ಣದಲ್ಲಿ ಪಲ್ಲವಿ, ಅನುಪಲ್ಲವಿ, ಚರಣಗಳು ಎಂಬೀ ಭಾಗಗಳು ಮಾತ್ರ ಸಾಹಿತ್ಯ ಗುಣವಿರುವುದು. ಬಾಕಿ ಉಳಿದವು ಸ್ವರಗತ ಮಾತ್ರವಾಗಿ ಹಾಡಬೇಕು. ತಾನವರ್ಣಗಳು ಅಭ್ಯಾಸ ಗಾನಗಳು ಎಂಬ ನೆಲೆಯಲ್ಲಿ ತ್ರಿಕಾಲಗಳಲ್ಲಿ ಸಾಧಾರಣವಾಗಿ ಹಾಡಲಾಗುವುದು. ಕಛೇರಿಗಳಲ್ಲಿ ಸಾಧಾರಣವಾಗಿ ಒಂದು, ಎರಡು ಕಾಲಗಳಲ್ಲಿ ಹಾಡುವರು. ವರ್ಣದ ನಡೆ ತಾನರೂಪದಲ್ಲಿರುವುದು ಎಂಬುದೇ ಇದರ ವಿಶೇಷತೆ. ಚತುರಿಶ್ರಜಾತಿ ತ್ರಿಪುಟ (ಆದಿ), ಮಿಶ್ರಜಾತಿ ಝಂಪ, ಖಂಡಜಾತಿ ಆಟ ಮೊದಲಾದ ತಾಳಗಳಿವೆ. ಇದರ ಸಾಹಿತ್ಯವು ಭಕ್ತಿರಸವಾಗಿದ್ದರೆ ಭುವಿನ ಬಗ್ಗೆ ಇರುವ ಸುತ್ತಿ ಅಥವಾ ಶೃಂಗಾರ ಭಾವವಿರುವವುಗಳೋ ಆಗಿರಬಹುದು. ನವರಾಗ ಮಾಲಿಕ ವರ್ಣ, ದಿನರಾಗ ಮಾಲಿಕ ವರ್ಣ, ಘನರಾಗ ಮಾಲಿಕ ವರ್ಣ ಎಂಬಿವುಗಳು ಸುಪ್ರಸಿದ್ಧವಾದವುಗಳಾಗಿವೆ.

ಪಚ್ಚಮರಿಯಂ ಆದಿಯಪ್ಪ, ವೀಣಾ ಕುಪ್ಪಯ್ಯರ್, ಪಲ್ಲವಿ ಗೋಪಾಲಯ್ಯರ್, ತಿರುವಟ್ಟಿಯೂರ್ ತ್ಯಾಗಯ್ಯರ್, ಪಟ್ಟಣ ಸುಬ್ರಹ್ಮಣ್ಯರ್, ಕೋದವಾಸಲ್ ವೆಂಕಿಡರಾಮಯ್ಯರ್, ಸ್ವಾತಿ ತಿರುನಾಳ್, ವಡಿವೇಲು, ಪರಮೇಶ್ವರ ಭಾಗವತರ್ ಹಾಗೂ ಮುತ್ತಯ್ಯ ಭಾಗವತರ್ ಎಂಬಿವರು ತಾನವರ್ಣಗಳನ್ನು ರಚಿಸಿದ್ದಾರೆ.

ದರುವರ್ಣ

ಆದರುವರ್ಣವೆಂಬುದು ಪದವರ್ಣವು, ತಾನವರ್ಣವೂ ಒಟ್ಟು ಸೇರಿದ ಸಂಗೀತವಾಗಿದೆ. ಇದರಲ್ಲಿ ಸ್ವರ, ಸಾಹಿತ್ಯ ಎಂಬಿವುಗಳಲ್ಲದೆ ಜತಿಗಳು ಒಟ್ಟು ಸೇರಿರುವುದು. ಇದಕ್ಕೆ ಪಲ್ಲವಿ, ಅನುಪಲ್ಲವಿ, ಬೆಟ್ಟಸ್ವರ, ಚರಣ, ಚರಣ ಸ್ವರಗಳು ಎಂಬೀ ವಿಭಾಗಗಳಿವೆ. ಕೆಲವೊಂದರಲ್ಲಿ ಸ್ವರಗಳಲ್ಲಿ ಜತಿಗಳೂ ಸಾಹಿತ್ಯಗಳೂ ಒಳಗೊಂಡಿರುತ್ತದೆ.

(ಉದಾ: ಮಾತೆ ಮಲಯಧ್ವಜ ಎಂಬ ಖಮಾಸಿನಲ್ಲಿರುವ ವರ್ಣ) ಮುಕ್ತಯ್ಯ ಭಾಗವತರ ದರುವರ್ಣ ಇದಕ್ಕೆ ಉದಾಹರಣೆಗಳಾಗಿವೆ.

- ಪದವರ್ಣ, ತಾನವರ್ಣ, ದರುವರ್ಣ ಪ್ರತಿಯೊಂದನ್ನು ಉಪಯೋಗಿಸುವ ಮಟ್ಟ ವಿವರಿಸುವುದು. ಕಛೇರಿಗಳಲ್ಲಿ ಆರಂಭದಲ್ಲಿ ಹಾಡುವ ವರ್ಣ ದುರವರ್ಣ
- ತರಬೇತಿ ನೀಡುವುದು
    - ಮೋಹನ
    - ಅಭೋಗಿ
    - ಹಂಸಧ್ವನಿ
    - ಕಲ್ಯಾಣಿ
    - ಪಂದುವರಾಶಿ
- ಆಯ್ದ ಒಂದು ವರ್ಣವನ್ನು ಆಲಾಪನೆ ಮಾಡುವುದು (ಅಧ್ಯಾಪಕ)
- ಹಾಡುವ ರೀತಿ ವಿವರಿಸುವುದು

  ಪಲ್ಲವಿ, ಅನುಪಲ್ಲವಿ, ಬೆಟ್ಟೆಸ್ವರ, ಮುಕ್ತಾಯಿ ಸ್ವರಗಳು, ಚರಣ ಹಾಡಿದ ಬಳಿಕ ಅದರದ್ದೇ ಆದ ಸಾಹಿತ್ಯವನ್ನು ಸೇರಿಸಿ ಹಾಡುವುದು. ವರ್ಣಗಳು ಅಭ್ಯಾಸ ಮಾಡಲು ಬೇಕಾಗಿ ಅಕಾರಾದಿಗಳನ್ನು ಸೇರಿಸಿ ವೇಗತೆಯನ್ನು ಹೆಚ್ಚು ಮಾಡಿ ಕಮ್ಮಿ ಮಾಡಿ ತರಬೇತಿ ನೀಡಬೇಕು.
- ವರ್ಣಗಳ ವ್ಯತ್ಯಾಸವನ್ನು ಗುರುತಿಸುವುದು
- ನೃತ್ಯರೂಪಗಳಲ್ಲಿ ಉಪಯೋಗಿಸುವ ಕೆಲವು ಪದವರ್ಣಗಳನ್ನು ಕೇಳಿಸುವುದು.

  ವರ್ಣಗಳು ಸಂಗೀತ ಕಚೇರಿಗಳಲ್ಲಿ ಆರಂಭದಲ್ಲಿ ಹಾಡಿ ಗಾಯಕನ ಜ್ಞಾನವನ್ನು ತಿಳಿಸಲಿರುವ ಸಂಗೀತ ಸೃಷ್ಟಿಯಾಗಿದೆ.

- ಕೆಲವು ಕಚೇರಿಗಳಲ್ಲಿನ ಮೊದಲಿನ ಭಾಗದಲ್ಲಿರುವ ವರ್ಣಗಳ ಆಲಾಪನೆಯನ್ನು ಕೇಳಿಸುವುದು.
- ವರ್ಣದ ಬಗ್ಗೆ ಹೆಚ್ಚಿನ ವಿವರಗಳು

  ವರ್ಣಗಳು ವಿಜ್ಞಾನ ಪ್ರದವಾದ ಸಾಹಿತ್ಯ ಸೃಷ್ಟಿಗಳಾಗಿವೆ. ವರ್ಣದ ಬಗ್ಗೆಗಿನ ಪೂರ್ಣಜ್ಞಾನ ಹಾಗೂ ನಿಖರವಾಗಿ ವರ್ಣಗಳನ್ನು ಹಾಡಲು ಅಥವಾ ಸಂಗೀತೋಪಕರಣಗಳನ್ನು ನಡೆಸಲು ಅಭ್ಯಾಸಮಾಡಿ ವಿದ್ಯಾರ್ಥಿಗಳಿಗೆ ಮುಂದೆ ಇರುವ ಸಂಗೀತಾಭ್ಯಾಸವನ್ನು ಸುಗಮವಾಗಿ ಮುಂದುವರಿಸಲು ಸಾಧ್ಯವಾಗುವುದು.

  ವರ್ಣದ ರಚನೆಗಾರರು

  ಪಟ್ಟಣ ಸುಬ್ರಹ್ಮಣ್ಯಯ್ಯರ್, ಮಾನಂ ಪುಚ್ಚಾವಡಿ ವೆಂಕಿಡಸುಬ್ಬಯ್ಯರ್, ತಿರುವಟ್ಟಿಯೂರ್ ತ್ಯಾಗಯ್ಯರ್, ವೀಣ ಕುಪ್ಪಯ್ಯರ್, ಪಚ್ಚಿಮಿರಿಯಂ

  ಆದಿಯಪ್ಪಯ್ಯ

  ಕರ್ನಾಟಕ ಸಂಗೀತ ಶಾಖೆಯಲ್ಲಿ ವರ್ಣಗಳಿರುವ ಪ್ರಾಧಾನ್ಯತೆ. ಅಭ್ಯಾಸಗಾನಗಳಲ್ಲಿ ಅತಿಹೆಚ್ಚು ಪ್ರಾಧಾನ್ಯತೆಯನ್ನು ಹೊಂದಿದ ವಿಭಾಗ ರಾಗಭಾವವನ್ನು ಸ್ಪಷ್ಟ ಮಾಡುವ ಸಂಗೀತರೂಪ.

  ವಿಶೇಷ ಸಂಚಾರಗಳು, ವಿಶೇಷ ಗತಿಗಳು, ಜಿಂಟಿ, ದಾಟ್ ಮೊದಲಾದವುಗಳೆಲ್ಲ ಸೇರಿದ ಸಂಗೀತರೂಪವಾಗಿದೆ.

ಚಟುವಟಿಕೆ – 5 : ಕೃತಿಗಳ ಪರಿಚಯ

- ಒಂದು ಸಂಗೀತ ಕಛೇರಿಯ ಸಿ.ಡಿ. ಕೇಳುವುದು.
- ಕೇಳಿದ ಸಿಡಿಯಲ್ಲಿರುವ ಹಾಡುಗಳನ್ನು ವರ್ಗೀಕರಿಸುವುದು (ವೈಯಕ್ತಿಕ) ವರ್ಣ, ಕೃತಿಗಳು, ಕೀರ್ತನೆಗಳು, ಭಜನೆ, ತಿಲ್ಲಾನ, ಪದ ಎಂಬೀ ಕ್ರಮದಲ್ಲಿ
- ಸಂಗೀತ ಕಛೇರಿಗಳಲ್ಲಿ ಹೆಚ್ಚು ಒಳಗೊಂಡಿರುವುದು ಕೀರ್ತನೆಗಳು/ಕೃತಿಗಳಾಗಿವೆ ಎಂಬ ಸತ್ಯಾಂಶವನ್ನು ತಿಳಿಯುವುದು.
- ಕೀರ್ತನೆಗಳನ್ನು ಪರಿಚಯಿಸುವುದು
- ಹಿಂದಿನ ತರಗತಿಗಳಲ್ಲಿ ಕಲಿತ ವಿಷಯಗಳನ್ನು ಪುನಃ ಸ್ಪಷ್ಟವಾಗಿ ವಿವರಿಸುವುದು.

  ಭಕ್ತಿರಸ ಪ್ರಧಾನವಿರುವ ಸಂಗೀತಭಾಗ

  ರಾಗಭಾವ ತುಂಬಿದ ಹಾಗೂ ತಾಳದಿಂದೊಗೂಡಿದ ಸಂಗೀತರೂಪ ಪಲ್ಲವಿ, ಅನುಪಲ್ಲವಿ, ಚರಣ ಎಂಬೀ ಭಾವಗಳು ಇದರಲ್ಲಿವೆ.

ಕೀರ್ತನೆ

ಭಕ್ತಿರಸ ಪ್ರಧಾನವಾಗಿರುವ ಎಲ್ಲಾ ಸಂಗೀತ ಸೃಷ್ಟಿಗಳು ಕೀರ್ತನೆಗಳಾಗಿವೆ. ಪರಮಭಕ್ತರಾದ ಸಂಗೀತಜ್ಞರುಗಳು ತಮ್ಮ ಇಷ್ಟದೇವರ ಬಗ್ಗೆ ಭಕ್ತ್ಯಾದರಗಳಿಂದ ಧಾರ್ಮಿಕ ಭಾವನೆಗಳನ್ನು ಸಂಗೀತ ರೂಪದಲ್ಲಿ ಪ್ರತಿಪಾದಿಸಿದವುಗಳಾಗಿವೆ ಕೀರ್ತನೆಗಳು. ಇವುಗಳಿಗೆ ಸಂಗೀತ ಪರವಾದ ರೂಪಕ್ಕಿಂತ ಸಾಹಿತ್ಯ ಪರವಾದ ಒಳಹೂರಣಕ್ಕೆ ಪ್ರಾಧಾನ್ಯಯಿದೆ.

ಕೀರ್ತನೆಗಳಿಗೆ ಪಲ್ಲವಿ, ಅನುಪಲ್ಲವಿ, ಚರಣ ಎಂಬೀ ಭಾಗಗಳಿವೆ. ಕೆಲವೊಂದರಲ್ಲಿ ಅನುಪಲ್ಲವಿ ಇರುವುದಿಲ್ಲ. ಚರಣಗಳು ಒಂದಕ್ಕಿಂತ ಹೆಚ್ಚು ಇರಬಹುದು.

ಕೃತಿಗಳು

ಕೀರ್ತನೆಗಳಿಗಿಂತ ವಿಭಿನ್ನವಾಗಿ ಸಾಹಿತ್ಯ ಪರವಾದ ಒಳಹೂರಣವನ್ನೊಳಗೊಂಡ ಸಂಗೀತ ಪರವಾದ ರೂಪದಲ್ಲಿ ಹೆಚ್ಚಿನ ಪ್ರಾಧಾನ್ಯತೆಯನ್ನು ಹೊಂದಿರುವ ಸಂಗೀತ ಸೃಷ್ಟಿಗಳಾಗಿವೆ ಕೃತಿಗಳು. ಬೇರೆಯವುಗಳಿಗೆ ಹೋಲಿಸಿದರೆ ಕಡಿಮೆ ಸಾಹಿತ್ಯ ಪದಗಳು. ಇವುಗಳು ರಾಗಭಾವವನ್ನು ಅದರ ಪರಿಪೂರ್ಣ ಶೈಲಿಯೊಂದಿಗೆ ಮಂಡಿಸುವಂತಹ ಸಾಹಿತ್ಯ ಸೃಷ್ಟಿಗಳಾಗಿವೆ. ಕೀರ್ತನೆಗಳಿಗಿಂತ ಭಿನ್ನವಾಗಿ ಕೃತಿಗಳಲ್ಲಿ ಸಂಗತಿಗಳು, ಕ್ರಮಬದ್ಧ ಸ್ವರಗಳು, ಮಧ್ಯಮ ಕಾಲದ ಸಾಹಿತ್ಯ ಮೊದಲಾದ ಅಂಶಗಳಲ್ಲಿ ಕೆಲವು ವಿಶೇಷತೆಗಳಿವೆ.

ಪದ, ಭಜನೆ, ಗಝಲ್

ಸಂಗೀತ ಪರಂಪರೆಯಲ್ಲಿರುವ ಎಲ್ಲಾ ಆಸ್ವಾದಕರಿಗೂ ಇಷ್ಟವಾಗುವಂತಹ ಸುಲಲಿತವಾದ ಸಂಗೀತರೂಪವಾಗಿದೆ.

ಪದ

ನಾಯಕ ನಾಯಕಿ ಭಾವ ಪ್ರಾಧಾನ್ಯತೆಯನ್ನು ಹೊಂದಿದ ಸಂಗೀತದ ರಚನೆ. ನೃತ್ಯದಲ್ಲಿ ಹೆಚ್ಚಾಗಿ ಉಪಯೋಗಿಸುವರು. ಕಚೇರಿಗಳಲ್ಲಿ ಒಂದು ಪದ ನಿರ್ಬಂಧವಾಗಿದೆ.

ಪದರಚನೆಗಾರರು : ಪುರಂದರದಾಸರು, ಕನಕದಾಸರು, ಕ್ಷೇತ್ರಜ್ಞರು, ಸ್ವಾತಿ ತಿರುನಾಳ್, ಇರಯಿಮ್ಮನ್ ತಂಬಿ, ಕುಟ್ಟಿ ಕುಂಞಿತಂಗಚ್ಚಿ

- ಪರಿಚಿತವಾದ ಪದಗಳನ್ನು ಕೇಳಲು ಅವಕಾಶ ನೀಡುವುದು.

  ಅಳಿವೇಣಿ

  ಪೂಂತೇನ್ ನೀರ್‌ಮೊಳಿ

- ಆಯ್ದ ಕೆಲವು ಪದಗಳನ್ನು ಅಭ್ಯಸಿಸುವುದು. ಸರಿಯಾದ ರೀತಿಯಲ್ಲಿ ಹಾಡಿ ತರಬೇತಿ ಪಡೆಯುವುದು.

ಭಜನೆ

ಪೂರ್ತಿಯಾಗಿಯೂ ಭಕ್ತಿರಸ ಪ್ರಧಾನವಾಗಿರುವ ಅರ್ಧಶಾಸ್ತ್ರೀಯ ಸಂಗೀತ ರೂಪಗಳಾಗಿವೆ. ಇವು ರಾಗಭಾವ ಭಕ್ತಿಯು ತುಂಬಿರುವ ಸರಳವಾದ ಗಾನರೂಪಗಳಾಗಿವೆ.

ಉದಾ-

* ಹಿಮಗಿರಿ ತನಯೇ
* ರಾ
* ನಚಲಿಯ ಕುಂಜನವಲ
* ಆಜ್ ಆಯೆ
* ಶ್ರೀರಾಮಚಂದ್ರ ಕಿಲಾಲ್
* ಕೃಷ್ಣಾ ನೀ ಬೇಗನೇ ಬಾರೋ
* ಕರುಣೈ ದೈವಮೇ
* ಅಡಿಮಲರಿಣತನ್ನೆ
* ಕೃಷ್ಣಾ ನೀ ಬೇಗನೇ

- ಪರಿಚಿತವಾದ ಕೆಲವನ್ನು ಆಯ್ದು ಅಭ್ಯಸಿಸುವುದು. ಆಲಾಪನಾ ರೀತಿ ಹೆಚ್ಚು ದೃಷ್ಟವಾಗಲು ಸಾಲುಗಳನ್ನು ಸ್ವರದನುಸಾರವಾಗಿ ಬರೆದು ಕೊಡಬಹುದಾಗಿದೆ. ಓದುವಿಕೆಯ ಬಳಿಕ ಗುಂಪಿನಲ್ಲಿ ಅಥವಾ ವೈಯಕ್ತಿಕವಾಗಿ ಹಾಡುವುದು.

ಗಝಲ್

ಇದು ಹಿಂದೂಸ್ಥಾನಿ ಸಂಗೀತದಲ್ಲಿ ಜನಪ್ರಿಯವಾದಂತಹ ಒಂದು ಸಂಗೀತ ಶಾಖೆಯಾಗಿದೆ. ಪ್ರಣಯ, ವಿರಹ ಮತ್ತು ವಾತ್ಸಲ್ಯ ಎಂಬಿವುಗಳ ಕಾಲ್ಪನಿಕವಾದಂತಹ ಸಾಲುಗಳಿಗೆ ಆಕರ್ಷಕವಾದಂತಹ ರಾಗಗಳನ್ನು ನೀಡುವುದರ ಮೂಲಕ ಗಝಲ್‌ನ ಸೃಷ್ಟಿಯಾಗುವುದು. ಅರಬಿ, ಉರ್ದು, ಹಿಂದಿ ಎಂಬೀ ಭಾಷೆಗಳಲ್ಲೂ ಪ್ರಾದೇಶಿಕ ಭಾಷೆಗಳಲ್ಲೂ ಗಝಲ್‌ನ್ನು ರಚಿಸಲಾಗುವುದು.

ಗಝಲ್ ಎಂದರೆ ಷೆಪರುಗಳ ಸಂಗ್ರಹವಾಗಿದೆ, ದ್ವಿಪದಿಗಳ ಸಂಗ್ರಹ.

- ಆಯ್ದು ಗಝಲುಗಳ ತರಬೇತಿ.

ಭಾರತದಲ್ಲಿ ಗಝಲ್‌ಗೆ ಆರಂಭವನ್ನು ಮಾಡಿದ ವ್ಯಕ್ತಿ ಅಮೀರ್‌ಖುಸ್ರುಖಾನ್ (1253–1395) ಆಗಿದ್ದಾರೆ. ಗುಲಾಂ ಅಲಿ, ಮೊಹದಿ ಹಸನ್, ಚಿತ್ರಾಸಿಂಗ್, ಜಗಜಿತ್ ಸಿಂಗ್, ಬೇಗಂ ಅಕ್ತರ್ ಮೊದಲಾದ ಪ್ರಸಿದ್ಧರಾದ ಗಝಲ್ ಗಾಯಕರನ್ನು ಪರಿಚಯಿಸುವುದು, ಹಾಡುಗಳನ್ನು ಕೇಳುವುದು.

- ಆಯ್ದವುಗಳನ್ನು ತರಗತಿ ಕೋಣೆಯಲ್ಲಿ ಹಾಡಲು ಅಭ್ಯಾಸ ಮಾಡುವುದು.

- ಸಿ.ಡಿ. ಉಪಯೋಗಿಸುವುದು.
- ಆಲಾಪನೆ ವೈಯಕ್ತಿಕವಾಗಿ.
- ಈ ಗಾನರೂಪಗಳನ್ನು ಭಾವನಾತ್ಮಕವಾಗಿ ಹಾಡಬೇಕಾದ ಕಾರಣ ಸಾಲುಗಳ ಆಶಯಗಳನ್ನು ವಿವರಿಸಬೇಕಾಗಿದೆ.

## ಮೌಲ್ಯನಿರ್ಣಯ

- ಸಂಗೀತ ರೂಪಗಳನ್ನು ಗುರುತಿಸುವುದು
- ಸಂಗೀತ ರೂಪಗಳ ಸ್ವಂತಿಕೆಯನ್ನು ಕಾಪಾಡಿಕೊಂಡಿರುವ ಆಲಾಪನೆ
- ಆಸ್ವಾದಿಸುವುದು.

## ಕ್ರೋಡೀಕರಣ

ಕರ್ನಾಟಕ ಸಂಗೀತವು ಹಲವಾರು ವೈವಿಧ್ಯ ಕಲಾರೂಪಗಳಿಂದ ಸಂಪನ್ನವಾಗಿದೆ. ವಿವಿಧ ರಾಗ ಭಾವಗಳು ಹಾಗೂ ತಾಳ ವೈವಿಧ್ಯಗಳಿರುವ ಈ ಸೃಷ್ಟಿಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಬೇಕಾಗಿದೆ.

ನಮ್ಮ ಸಂಗೀತ ಚರಿತ್ರೆ ಮತ್ತು ಸಂಗೀತ ರಚನಾ ವೈಶಿಷ್ಟ್ಯತೆಗಳನ್ನು ಅಳವಡಿಸಿಕೊಂಡಿರುವ ಪ್ರತಿಯೊಂದು ನಿರಂತರವಾದ ಸಾಧನೆಯ ಅಗತ್ಯವಾಗಿದೆ. ಪ್ರತಿಯೊಂದು ಗಾನರೂಪಗಳನ್ನು ಅದರದ್ದೇ ಆದ ವಿಶೇಷತೆ ಮತ್ತು ಸ್ವಂತಿಕೆಗಳನ್ನು ಕಾಪಾಡಿಕೊಂಡು ಹಾಡಿದರೆ ಮಾತ್ರ ಆಸ್ವಾದಕನಿಗೆ ಪೂರ್ಣ ತೃಪ್ತಿ ನೀಡಲು ಗಾಯಕನಿಗೆ ಸಾಧ್ಯವಾಗುವುದು.

# ಯೂನಿಟ್ –4 : ರಾಗ ನೀಡುವುದು

ಜೀವನಶೈಲಿಯೊಂದಿಗೆ (ಸಂದರ್ಭ) ಅತಿ ಹೆಚ್ಚು ಹತ್ತಿರವಿರುವ ಕಲೆಯಾಗಿದೆ ಸಂಗೀತ. ಉತ್ಸವಗಳಲ್ಲೂ, ದಿನಾಚರಣೆಗಳಲ್ಲೂ ಸಂಗೀತಕ್ಕೆ ಹೆಚ್ಚಿನ ಪ್ರಾಧಾನ್ಯವಿದೆ. ಕೆಲವು ಸಂದರ್ಭಗಳನ್ನು ಸಂಪನ್ನಗೊಳಿಸಲು ಕೆಲವು ಭಾವನಾತ್ಮಕ ಸಂದರ್ಭಗಳಿಗೆ ಹೆಚ್ಚಿನ ಭಾವವನ್ನೂ ತೀವ್ರತೆಯನ್ನೂ ನೀಡಲು ಕೆಲವು ಸಂದರ್ಭಗಳನ್ನು ನೆನಪಿಸಿ ವಿನಯ ಮತ್ತು ಪೂರ್ಣತೆಯನ್ನೂ ನೀಡಲು, ತಿಳುವಳಿಕೆಯನ್ನು ನೀಡಲೂ ಸಂಗೀತಕ್ಕೆ ಸಾಧ್ಯವಾಗುವುದು. ವಿದ್ಯಾಲಯಗಳಲ್ಲಿ ದಿನಾಚರಣೆಗಳಿಗೆ, ಆಚರಣೆಗಳಿಗೆ ಇರುವ ಸ್ಥಾನವು ಅತಿದೊಡ್ಡದಾಗಿದೆ. ಈ ಸಂದರ್ಭಗಳನ್ನು ಹೆಚ್ಚು ಪ್ರಫುಲ್ಲಗೊಳಿಸಲು ಹಾಗೂ ಸಂದರ್ಭೋಚಿತ ಭಾವನಾ ಮಟ್ಟವನ್ನು ಸೃಷ್ಟಿಸಲು, ಆಯಾ ವೇಳೆಗನುಸರಿಸಿರುವ ಹಾಡುವಿಕೆಗೆ ಸಾಧ್ಯವಾಗುವುದು. ಸಂಗೀತವು ಏಕ ಸಂದರ್ಭದಲ್ಲಿಯೇ ಆನಂದದಾಯಕವೂ ಆಶಯದಾಯಕವೂ, ಸಂದೇಶ ವಾಹಕವೂ ಆಗಿ ಬದಲಾಗುವುದು.

## ಒಳಹೂರಣ

ದಿನಾಚರಣೆಗಳ ಸಂದರ್ಭಕ್ಕನುಸರಿಸಿದ ಹಾಡುಗಳನ್ನು ಆರಿಸಿ ಹಾಡುವುದು. ಸಂದರ್ಭಕ್ಕೆ ಹೊಂದಿಕೊಂಡಿರುವ ಹಾಡುಗಳನ್ನು ರಚಿಸುವುದು, ರಾಗ ನೀಡುವುದು, ಹಾಡುವುದು.

ದಿನಾಚರಣೆಗಳ ಪ್ರಧಾನ್ಯತೆಗಳನ್ನು ಮನಗಂಡು ಹಾಡುಗಳ ಮಂಡನೆಗೆ ಸಂದರ್ಭವನ್ನು ನೀಡಿರುವ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

## ಕಲಿಕಾ ಸಾಧನೆ

ವಿವಿಧ ದಿನಾಚರಣೆಗಳನ್ನು ಆರಿಸಿಕೊಂಡು ಹಾಡುಗಳಿಗೆ ರಾಗ ಹಾಕಿ ಹಾಡುವುದು.

## ಆಶಯ/ತಿಳುವಳಿಕೆ

- ಪ್ರತಿಯೊಂದು ಸಂದರ್ಭಕ್ಕೂ ಹೊಂದಿಕೊಂಡಿರುವ ಹಾಡುಗಳು ಇವೆ.
- ಭಾವನೆಗನುಸಾರವಾದ ರಾಗವನ್ನು ಕಂಡುಹಿಡಿಯಲಿರುವ ನೈಪುಣ್ಯ
- ಸಂದರ್ಭಕ್ಕನುಸರವಾಗಿ ಹಾಡುಗಳು, ಆಶಯೋಧಿಷ್ಟಿತವಾದ ರಾಗಗಳು

## ಪ್ರಕ್ರಿಯೆ

- ದಿನಾಚರಣೆಯ ಚರ್ಚೆಗಳು
- ದಿನಾಚರಣೆಯ ಆಶಯಗಳನ್ನು ಇಟ್ಟುಕೊಂಡು ಸಾಲುಗಳಿಗೆ ರಾಗ ಹಾಕುವುದು
- ಹಾಡುವುದು
- ಪರಸ್ಪರ ಮೌಲ್ಯಮಾಪನ ಮಾಡುವುದು.
- ಉತ್ತಮಪಡಿಸುವುದು.

## ಕಲಿಕಾ ಚಟುವಟಿಕೆಗಳು

- ಪ್ರವೇಶೋತ್ಸವ ದಿನ, ಪರಿಸರ ದಿನ, ಓದುವ ದಿನ, ಲೋಕ ಸಂಗೀತ ದಿನ ಎಂಬೀ ದಿನಾಚರಣೆ ದಿವಸಗಳಲ್ಲಿ ಆಲಾಪಿಸುವ ಗಾನಗಳನ್ನು ಕೇಳುವುದು (ಸಿ.ಡಿ.) ಪ್ರಶ್ನೆಗಳ ಆಧಾರದಲ್ಲಿ ಚರ್ಚೆ.
- ಪ್ರಶ್ನೆಗಳು –
    - ಆಲಿಸಿದ ಗಾನಗಳು ಯಾವ ದಿನಾಚರಣೆಗಳಿಗೆ ಸಂಬಂದಿಸಿದುದವುಗಳಾಗಿವೆ?
    - ಇಂತಹ ಗಾನಗಳು ಸಂದರ್ಭಗಳೊಂದಿಗೆ ಹೆಚ್ಚಾಗಿ ಇಂಪಾಗಿರುತ್ತವೆಯೇ? ಆಸ್ವಾದಕರವಾಗಿದೆಯೇ?
    - ದಿನಾಚರಣೆಗಳಲ್ಲಿ ಯೋಗ್ಯವಾದ ಗಾನ ಆಲಾಪನೆಯ ಔಚಿತ್ಯ ಯಾವುದು?
- ಮಕ್ಕಳನ್ನು ನಾಲ್ಕು ಗ್ರೂಪಾಗಿ ಮಾಡುತ್ತಾರೆ. ರಾಗಗಳ ಹೆಸರಿನ ಆಧಾರದಲ್ಲೋ ವಿವಿಧ ದಿನಾಚರಣೆಗಳ ಹೆಸರಿನಲ್ಲೋ ಆಗಬಹುದು.
- ಕೊಡಲಾದ ಪ್ರಶ್ನೆಗಳ ಉತ್ತರಗಳನ್ನು ಬರೆದು ಗುಂಪಾಗಿ ಚರ್ಚೆ ಮಾಡುತ್ತಾರೆ. ಗುಂಪಾದ ಮಂಡನೆ
- ಒಂದೊಂದು ಗುಂಪಿನ ಮಂಡನೆಯು ಚಾರ್ಟಿನಲ್ಲಿ ದಾಖಲಿಸರಿಬೇಕು.
- ಗುಂಪಿನಲ್ಲಿ ಮಂಡಿಸಿದ ಒಳ್ಳೆಯ ಆಶಯಗಳ ಆಧಾರದಲ್ಲಿ ಅಧ್ಯಾಪಕರ ವಿಶದೀಕರಣ.

  *ವಿಶದೀಕರಣ ಸೂಚಕಗಳು*

    - ದಿನಾಚರಣೆಗಳ ಶಾಲೆ ಮಟ್ಟದ ಪ್ರಾಧಾನ್ಯ
    - ದಿನಾಚರಣೆಗಳಲ್ಲಿ ಹಾಡುಗಳ ಔಚಿತ್ಯ
    - ಸಂಗೀತ ಯಾವ ಸಂದರ್ಭಗಳಲ್ಲಿಯೂ ಯೋಗ್ಯವೂ ಆಶಯಗಳನ್ನು ಮತ್ತು ಸಂದೇಶಗಳನ್ನು ವಿನಿಮಯಗೊಳಿಸುವ ಉತ್ತಮ ಕಲಾ ಮಾಧ್ಯಮವಾಗಿದೆ. ದಿನಾಚರಣೆಯ ಪ್ರಾಧಾನ್ಯಕ್ಕನುಸರಿಸಿ ರಾಗ ಕೊಡುವ ಪ್ರಸಕ್ತಿ.
- ಗುಂಪಾದ ಚರ್ಚೆ ಆಶಯ
- ಪ್ರವೇಶನೋತ್ಸವ, ವಾಯನಾದಿನ, ಲೋಕಸಂಗೀತ ದಿನ ಪರಿಸ್ಥಿತಿ ದಿನ ಎಂಬೀ ದಿವಸಗಳಲ್ಲಿ ಆಲಾಪಿಸಬೇಕಾದ ಹಾಡುಗಳು ಸಂದರ್ಭಕ್ಕನುಸರಿಸಿ ಆಸ್ವಾದಿಸಲು ಸಾಧ್ಯವಾಗುತ್ತದೆ.

ಹಾಡುಗಳ ಆಲಾಪನೆಗಳು ಹಬ್ಬಗಳಲ್ಲಿ/ ದಿನಾಚರಣೆಗಳಲ್ಲಿ

- ವಿವಿಧ ದಿನಾಚರಣೆಗಳನ್ನು ಕಂಡುಹಿಡಿಯುವುದು (ಗುಂಪಾಗಿ)
- ಕಂಡುಹಿಡಿದ ದಿನಾಚರಣೆಗಳನ್ನು ಪಟ್ಟಿ ಮಾಡಿ (ಕ್ಲಾಸ್ ಹಂತದಲ್ಲಿ, ಅಧ್ಯಾಪಕರ ಮೇಲ್ನೋಟದಲ್ಲಿ)
- ತರಗತಿಯಲ್ಲಿ ತಯಾರಿಸಿದ ದಿನಾಚರಣೆಗಳ ವಾರ್ಷಿಕ ಕಾಲೆಂಡರ್ ತಯಾರಿ. (ಎಲ್ಲಾ ಕ್ಲಾಸುಗಳಲ್ಲಿ ತಯಾರಿಸಿದ ದಿನಾಚರಣೆಯ ಪಟ್ಟಿ ಕ್ರೊಡೀಕರಿಸಿ ಕಾಲೆಂಡರ್ ತಯಾರಿಸಬೇಕು)

ರಾಗ ಕೊಡುವ ಚಟುವಟಿಕೆಗಳನ್ನು ಬರೆದು ತಯಾರಿಸಿದನ್ನು ಒಳಗೊಂಡಿರಬೇಕು.

# ಹತ್ತನೇ ತರಗತಿ

## ಯೂನಿಟ್–1 : ದೇಶಭಕ್ತಿ ಗೀತೆಗಳು

ಪ್ರತಿಯೊಂದು ದೇಶದ ರಾಷ್ಟ್ರೀಯ ಸಂಘಟನೆಗಳಿಗೆ ಎಂದಿಗೂ ಉತ್ಸಾಹದಿಂದ ಕಾರ್ಯ ನಿರ್ವಹಿಸಲು ಶಕ್ತಿ ನೀಡುವ ಹಾಡುಗಳೇ ದೇಶಭಕ್ತಿ ಗೀತೆಗಳು. ಸಮಾಜದಲ್ಲಿ ಸ್ವಾತಂತ್ರ್ಯಪ್ರಜ್ಞೆ ಇರುವವರೂ, ದೇಶಪ್ರೇಮಿಗಳೂ ಆದ ಕವಿಗಳು ತಮ್ಮ ಆಶಯಗಳಿಗನುಸರಿಸಿ ಲೇಖನಿಯನ್ನು ಚಲಿಸಿ ರಚಿಸಿದ ಸಾಲುಗಳಿಗೆ ರಾಗ, ತಾಳ ಸೇರಿಸಿ ಜನ ಸಮೂಹಕ್ಕೆ ತಲಪಿಸಿದವರು ನಮ್ಮ ಸಂಗಿತ ನಿರ್ದೇಶಕರು ಮತ್ತು ಗಾಯಕರು ಆಗಿದ್ದಾರೆ. ಈ ರೀತಿಯಾಗಿ ಜನ ಹೃದಯವನ್ನು ಗೆದ್ದ ಈ ಗೀತೆಗಳು ಅವುಗಳ ಸಂಗೀತ ಸವಿಶೇಷತೆಗಳಿಂದಲೂ, ಆಶಯ ಹಿರಿಮೆಗಳಿಂದಲೂ ಸಮೃದ್ಧವಾಗಿ ಜನಮನಸ್ಸುಗಳಲ್ಲಿ ಅಚ್ಚಳಿಯದೆ ಉಳಿದಿದೆ. ಭಾರತದ ಸ್ವಾತಂತ್ರ್ಯ ಹೋರಾಟಗಾರರಲ್ಲಿ, ಸಾಧಾರಣ ಪ್ರಜೆಗಳಲ್ಲಿ ಆತ್ಮಧೈರ್ಯ ಮತ್ತು ಸ್ವಾತಂತ್ರ್ಯ ಪ್ರಜ್ಞೆಯನ್ನು ಮೂಡಿಸಲು ಇಂತಹ ಗೀತೆಗಳು ಸಹಾಯಕವಾಗಿವೆ. ನಮ್ಮ ದೇಶಪ್ರೇಮ ಮನೋಭಾವವನ್ನು ಹೆಚ್ಚಿಸಲು, ಸಾಮರ್ಥ್ಯವನ್ನು ನೀಡುವ ಅರ್ಧ ಶಾಸ್ತ್ರೀಯ ಶೈಲಿಯಲ್ಲಿರುವ ಹಾಡುಗಳನ್ನು ಈ ಅಧ್ಯಾಯದಲ್ಲಿ ಪ್ರತಿಪಾದಿಸಲಾಗಿದೆ.

### ಕೇಂದ್ರಾಶಯ

ವಿವಿಧ ಭಾಷಾ ದೇಶಭಕ್ತಿಗೀತೆಗಳ ವೈವಿಧ್ಯಮಾಯವಾದ ರಾಗ ಸವಿಶೇಷತೆಗಳನ್ನು ತಿಳಿದುಕೊಳ್ಳಲು, ಸಂದರ್ಭೋಚಿತವಾಗಿ ಹಾಡಲು ಯೋಗ್ಯವಾದ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಅರ್ಧ ಶಾಸ್ತ್ರೀಯ ಶೈಲಿಯ ರಾಗಕ್ಕೆ ಒತ್ತು ನೀಡಿದ ರಾಗಗಳನ್ನು ಒಳಗೊಳ್ಳಿಸಿ ಎಲ್ಲಾ ಮಕ್ಕಳನ್ನು ಸೇರಿಸಿ ಹಾಡುವಂತಹ ಹಾಡುಗಳನ್ನು ಸ್ವೀಕರಿಸಲಾಗಿದೆ.

### ಕಲಿಕಾ ಸಾಧನೆ

ಶಾಸ್ತ್ರೀಯ ಸಂಗೀತದಲ್ಲಿ ಸೇರಿಕೊಂಡ ದೇಶಭಕ್ತಿ ಗೀತೆಗಳನ್ನು ಹಾಡುವುದು.

### ಆಶಯ, ತಿಳುವಳಿಕೆ

- ವಿವಿಧ ಭಾಷೆಗಳಲ್ಲಿ, ರಾಗಗಳಲ್ಲಿ, ಭಾವಗಳಲ್ಲಿ, ದೇಶಪ್ರೇಮ ಹುಟ್ಟಿಸುವ ಶಾಸ್ತ್ರೀಯ ದೇಶಭಕ್ತಿ ಗೀತೆಗಳಿವೆ.
- ಶ್ರುತಿಗನುಸಾರವಾಗಿ ಅರ್ಧ ಶಾಸ್ತ್ರೀಯ ಗೀತೆಗಳನ್ನು ಹಾಡಬೇಕಾಗಿದೆ.
- ಹಾಡುಗಾರಿಕೆ.

## ಪ್ರಕ್ರಿಯೆ

- ಹಾಡುವುದು, ಹಾಡು ಹೇಳಿಕೊಡುವುದು, ಪರಸ್ಪರ ಮೌಲ್ಯನಿರ್ಣಯ.
- ರಾಗ ಪರಿಚಯ, ಹಾಡುಗಾರಿಕೆಯ ಸಾಧ್ಯತೆಗಳು, ಚರ್ಚೆ.
- ಮೌಲ್ಯನಿರ್ಣಯ
- ಹಾಡುಗಾರಿಕೆಯ ಮೌಲ್ಯನಿರ್ಣಯ

## ಕಲಿಕಾ ಚಟುವಟಿಕೆಗಳು

- ಲಘು ಸಂಗೀತ ಶೈಲಿಯ ಲಾಲಿತ್ಯ ಮತ್ತು ಶಾಸ್ತ್ರೀಯ ಗಾನ ಶೈಲಿಯ ಸಂಗೀತಾಂಶಗಳ ಪೂರ್ಣತೆಯನ್ನು ಒಳಗೊಂಡ ಹಾಡುಗಾರಿಕೆಯಲ್ಲಿರುವ,
    1. ಮಿಲೇ ಸುರ್ ಮೇರಾ ತುಮಾರಾ ............... (ಎ.ಆರ್. ರಹ್‌ಮಾನ್)
    2. ವಂದೇ ಮಾತರಂ (ಸ್ವಾಭಾವಿಕ ಶೈಲಿಯಲ್ಲಿರುವ)

  ಅಧ್ಯಾಪಕರು ಸಿ.ಡಿ./ವಿ.ಸಿ.ಡಿ. ಉಪಯೋಗಿಸಿ ಆಲಿಸಲು ಅವಕಾಶ ನೀಡುವುದು.
- ಆಲಿಸಿದ ಹಾಡಿನ ಆಸ್ವಾದನಾ ಟಿಪ್ಪಣಿ – ವೈಯಕ್ತಿಕ ರಚನೆ
- ಅಧ್ಯಾಪಕರು – ಮಕ್ಕಳು ಚರ್ಚೆ – ಟಿಪ್ಪಣಿಯ ಆಧಾರದಲ್ಲಿ.
- ಕೇಳಿದ ಹಾಡು ನಮ್ಮಲ್ಲುಂಟುಮಾಡಿದ ಭಾವನೆಗಳೇನು?
- ಯಾವ ವಿಭಾಗಕ್ಕೆ ಸೇರಿದುದಾಗಿದೆ?
- ದೇಶಪ್ರೇಮ ಸೃಷ್ಟಿಸುವ ಇತರ ಪರಿಚಿತವಾದ ಗೀತೆಗಳನ್ನು ಆಲಿಸುವುದು.
- ಈ ಹಾಡು ಒಳಗೊಂಡ ರಾಗ, ಇದರ ಸಾರ, ಆಶಯ.
- ಯಾವ ಶೈಲಿ / ಲಘು / ಅರ್ಧ ಶಾಸ್ತ್ರೀಯ / ಶಾಸ್ತ್ರೀಯ
- ಗುಂಪು ಚರ್ಚೆ – ಚರ್ಚೆಯ ಮೂಲಕ ಮೂಡಿಬಂದ ಆಶಯಗಳನ್ನು ಅಧ್ಯಾಪಕರು B.B. ಯಲ್ಲಿ ದಾಖಲಿಸುವುದು. ಅಧ್ಯಾಪಕರು ಮಕ್ಕಳ ಸಂಶಯಕ್ಕೆ ಪರಿಹಾರ ಸೂಚಿಸುವುದು ಮತ್ತು ವಿವಿಧ ಹಾಡುಗಳು, ರಾಗಗಳ ಬಗ್ಗೆ ತಿಳಿಸುವುದು.

    ದೇಶ್

    ಸಿಂಧುಭೈರವಿ

    ವೃಂದಾವನಸಾರಂಗ
- ಮಕ್ಕಳ ಅಭಿಪ್ರಾಯಗಳಿಗೆ ಹೆಚ್ಚಿನ ವಿವರಣೆ ನೀಡುವುದು.
- ಸಂಗೀತದ ಸರಳಸೌಂದರ್ಯದ ಜೊತೆಗೆ ಶಾಸ್ತ್ರೀಯ ಶೈಲಿಯನ್ನು ಪ್ರತಿಪಾದಿಸುವ ಹಾಡುಗಳು ಎಲ್ಲಾ ವಿಭಾಗದ ಶ್ರೋತೃಗಳನ್ನು ಮನತಣಿಸುವ ಸಂಗೀತಸೃಷ್ಟಿ.
- ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ಬಹಳಷ್ಟು ಕವಿಗಳು ಬರೆದ ಹಾಡುಗಳು ರಾಗ, ತಾಳ, ಲಯ, ದೇಶಪ್ರೇಮ ಎಂಬೀ ಪೂರ್ಣ ಜ್ಞಾನದೊಂದಿಗೆ ರಚಿತವಾದ ಹಾಡುಗಳಲ್ಲಿ ಮಹಾಕವಿ ಸುಬ್ರಹ್ಮಣ್ಯ ಭಾರತಿಯವರ ಹಾಡುಗಳು ಉಲ್ಲೇಖನೀಯ.
- ಭಾರತೀಯ ಹಾಡುಗಳು ಎನ್ನುತ್ತಾರೆ.

- ಪರಿಚಿತವಾದ ಕೆಲವು ಹಾಡುಗಳು
    - ಕದಂ ಕದಂ ಬಡಾಯೆ ಜಾ
    - ಧರೆಗವತರಿಸಿದೆ
    - ಎದ್ದು ನಿಲ್ಲು ವೀರ
    - ಜಯಜನ ಭಾರತ್ ಜನಮನ ಅಭಿಮತ್
    - ಜಯ ಜಯತೆ ಭಗವತಿ ಸುರಭಾರತಿ
    - ಜನಗಣ ತಂತ್ರ ವಿಧಾತಾ
    - ಎನ್ನೆದೆಯ ಬಿಸಿರಕ್ತ
    - ಹಿಮಗಿರಿಯ ಶೃಂಗ
    - ಕಟ್ಟ ಬನ್ನಿ ತರುಣರೇ
    - ಎಲ್ಲಾ ಬೇಧ ಮರೆತು
    - ಯಾವ ನೆಲೆದ ಗಂಧ ಗಾಳಿ
- ಸಂಗೀತಪರವಾದ ಆಶಯಗಳು ಮಕ್ಕಳಲ್ಲಿ ಮೂಡಿಸುವ ರೀತಿಯಲ್ಲಿ ತರಗತಿ ಕೋಣೆಯ ಚಟುವಟಿಕೆಗಳನ್ನು ಕ್ರಮೀಕರಿಸುವುದು. ದೇಶಭಕ್ತಿ ಗೀತೆಗಳನ್ನು ರಚಿಸುವವರು ರಚನಾ ಸಂದರ್ಭದಲ್ಲಿಯೂ ಸಂಗೀತಜ್ಞರು, ಸಂಗೀತ ಅಳವಡಿಸವಾಗಲೂ ಹೆಚ್ಚು ಆಸ್ವಾದಕರನ್ನು ಗಮನದಲ್ಲಿಟ್ಟುಕೊಳ್ಳುವರು.

**ಚಟುವಟಿಕೆ 2**

- ವಿವಿಧ ರಾಗಗಳಲ್ಲಿರುವ ಹಾಡುಗಳನ್ನು ಕೇಳಲು ಅವಕಾಶ ಒದಗಿಸುವುದು.
- ಅವುಗಳಲ್ಲಿ ಕೆಲವನ್ನು ಆರಿಸಿ ಹೆಚ್ಚಿನ ತರಬೇತಿ ನೀಡುವುದು.
- ನಾಡಗೀತೆಗಳು
- ಸ್ಥಳೀಯ (ನಾಡ) ಹಾಡುಗಳ ರಚನೆಗಾರರು, ಇವರ ಪದ್ಯಗಳನ್ನು ಹಾಡುವುದು. ಕೆ.ಸಿ. ಕೇಶವ ಪಿಳ್ಳೆ, ಜಿ. ಲಕ್ಷ್ಮಣನ್ ಪಿಳ್ಳೆ, ಚೇರ್ತಲ ಗೋಪಾಲ ನಾಯರ್, ವಳ್ಳತ್ತೋಳ್, ಮಧುರಕಾನನ, ಕುವೆಂಪು, ಕಯ್ಯಾರ ಕಿಂಞಣ್ಣ ರೈ, ಮಂಜೇಶ್ವರ ಗೋವಿಂದ ಪೈ, ಬೋಧೇಶ್ವರ್ ಮೊದಲಾದವರ ಸಾಲುಗಳನ್ನು ಪರಿಚಯಿಸುವುದು.
- ಆಶಯಗಳನ್ನು ವಿಶ್ಲೇಷಿಸುವುದು, ರಾಗಗಳನ್ನು ಪರಿಚಯಿಸುವುದು.
- ರಾಗಗಳ ಲಘು ವಿವರಣೆ
- ರಾಗದ ವಿಶೇಷ ಪ್ರಯೋಗಗಳು
- ಸಾಲುಗಳನ್ನು ಕ್ರಮವಾಗಿ, ತಾಳಾತ್ಮಕವಾಗಿ ಹಾಡಿ ಕೇಳಿಸುವುದು.
- ಎಲ್ಲಾ ಪಲ್ಲವಿಗಳನ್ನು ಹಾಡುವುದು.
- ಅನುಪಲ್ಲವಿ, ಚರಣ, ಹಾಡಲು ತರಬೇತಿ ನೀಡುವುದು.
- ಬಳಿಕ ಪೂರ್ತಿ ಹಾಡನ್ನು ಒಟ್ಟಾಗಿ ಹಾಡುವುದು.
- ಸಂಪೂರ್ಣವಾಗಿ ಕಲಿತು ಹಾಡಿದ ನಂತರ ತರಗತಿ ಕೋಣೆಯಲ್ಲಿ ಎಲ್ಲರನ್ನು ಒಳಪಡಿಸಿಕೊಂಡು ಮೌಲ್ಯನಿರ್ಣಯ ನಡೆಸುವುದು.
- ಹಾಡುವುದು, ಆಸ್ವಾದನಾ ಟಿಪ್ಪಣಿ, ವಾದ್ಯೋಪಕರಣಗಳ ಪ್ರಯೋಗ ಗುಂಪು.
- ಹಲವಾರು ಸಂದರ್ಭಗಳಲ್ಲಿ ಹಾಡಿ ಅಭ್ಯಾಸ ಮಾಡಿದ ಹಾಡುಗಳನ್ನು ವಾದ್ಯೋಪಕರಣಗಳ ಸಹಾಯದೊಂದಿಗೆ ತರಗತಿಗಳಲ್ಲಿ ಮಂಡನೆ.
- ವಿಶೇಷ ದಿನಾಚರಣೆಗಳ ಸಂದರ್ಭಗಳಲ್ಲಿ ಶಾಲೆಯ ವೇದಿಕೆಗಳಲ್ಲಿ ಹಾಡುವುದು.
- ಗಾನ ರಚನೆಗಾರರ ವಿವಿಧ ಭಾಷೆ, ವಿವಿಧ ರಾಗ, ವಿಭಿನ್ನ ತಾಳ ಮೊದಲಾದವುಗಳನ್ನು ಒಳಪಡಿಸುವುದು.
- ನೃತ್ಯ ಶಿಲ್ಪ, ನಾಟಕ.

### ಕ್ರೋಢೀಕರಣ

ದೇಶಭಕ್ತಿ ಗೀತೆಯು ಯಾವುದೇ ನಾಡಿನ ಮತ್ತು ಗಾನಶಾಖೆಯ ಅವಿಭಾಜ್ಯ ಅಂಗವಾಗಿದೆ. ದೇಶಭಕ್ತಿ ಗೀತೆಯ ಸಂಗೀತ ವೈವಿಧ್ಯ ತಿಳಿಯಲೂ, ಅದನ್ನು ಹಾಡಲೂ ಇಂತಹ ಚಟುವಟಿಕೆಗಳು ಅತೀ ಅಗತ್ಯವಾಗಿದೆ. ದೇಶಪ್ರೇಮ ಹುಟ್ಟಿಸುವುದು, ಯಾವುದೇ ವಿಭಾಗದ ಆರಾಧಕರನ್ನೂ ಇಷ್ಟಪಡಿಸಲು (ಲಘು, ಕರ್ನಾಟಕ ಸಂಗೀತ), ವಿಶೇಷ ಸಂಗೀತಾಶಯಗಳು ಆಲಾಪನೆಯಲ್ಲಿ ಒಳಪಡಿಸುವುದರ ಮರ್ಮವನ್ನು ತಿಳಿಯಲು ಈ ಕಲಿಕಾ ತಂತ್ರಗಳ ಮೂಲಕ ಸಾಧ್ಯವಾಗುವುದು.

## ಯೂನಿಟ್ 2 : ಹಾಡುಗಾರಿಕೆ

### ಮುನ್ನುಡಿ

ಯಾವುದೇ ಒಂದು ಆಶಯವನ್ನು ಪೂರ್ಣವಾಗಿ ತಿಳಿಸಲು, ಹಂಚಲು ಸಂಗೀತವು ಒಂದು ಉತ್ತಮ ವಾಹಿನಿಯಾಗಿದೆ. ಸಾಲುಗಳಲ್ಲಿನ ಆಶಯವು ಹಾಡಿನ ರಾಗ ಸಂಯೋಜನೆಯಿಂದ ಆಸ್ವಾದಕರನ್ನು ತಲಪುವುದು. ಇಂತಹ ರಾಗಗಳು ಹಾಡುಗಳನ್ನು ಹಾಡಲು ನೀಡುವ ಪ್ರೇರಣೆ ಅಷ್ಟಿಷ್ಟಲ್ಲ. ರಾಗ ಸಂಯೋಜನೆ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ವಿಷಯಗಳನ್ನು ಈ ಪಾಠಭಾಗದಲ್ಲಿ ತಿಳಿಯಬಹುದು.

### ಕೇಂದ್ರಾಶಯ

ಸಾಲುಗಳಿಗೆ ಸೂಕ್ತವಾದ ರಾಗ ಸಂಯೋಜನೆ, ವಿವಿಧ ಗಾನರೂಪಗಳ ಶೈಲಿಗನುಸಾರವಾಗಿ ರಾಗ ಸಂಯೋಜನೆ, ಪಾಲಿಸಬೇಕಾದ ನಿಯಮಗಳು, ಇವುಗಳ ಕುರಿತಾದ ವಿವರಣೆಗಳನ್ನು ಈ ಅಧ್ಯಾಯದಲ್ಲಿ ಒಳಪಡಿಸಲಾಗಿದೆ.

### ಕಲಿಕಾ ಸಾಮರ್ಥ್ಯ

- ಹಾಡುಗಳನ್ನು ರಾಗ ಸಂಯೋಜನೆ ಮಾಡಿ ಮಂಡಿಸುವುದು.

### ಆಶಯ, ತಿಳುವಳಿಕೆ

- ಆಶಯಕ್ಕೆ ಪೂರಕವಾದ ರಾಗ ಸಂಯೋಜಿಸಬೇಕಾಗಿದೆ. ಸ್ವರಭಾರದೊಂದಿಗೆ ಭಾವ ಶೈಲಿಯನ್ನು ಹೆಚ್ಚಿಸಬಹುದು.
- ಯೋಗ್ಯ ತಾಳವನ್ನು ಅಳವಡಿಸಬೇಕು.
- ರಾಗ ಸಂಯೋಜಿಸಿ ಮಂಡಿಸಬೇಕು.

### ಪ್ರಕ್ರಿಯೆ

- ಹಾಡು ಕ್ರಮೀಕರಿಸುವಾಗ ಗಮನಿಸಬೇಕಾದ ಅಂಶಗಳ ಚರ್ಚೆ
- ಈ ಮೊದಲೇ ಸಂಗೀತ ನೀಡಿದ ಹಾಡಿನ ಆಲಿಸುವಿಕೆ.
- ರಾಗ ನೀಡಿ ಹಾಡುವುದು.

## ಮೌಲ್ಯಮಾಪನ

- ರಾಗವನ್ನು ಮೌಲ್ಯನಿರ್ಣಯ ಮಾಡುವುದು.
- ಮಂಡನೆಯನ್ನು ಮೌಲ್ಯನಿರ್ಣಯ ಮಾಡುವುದು.

## ಕಲಿಕಾ ಚಟುವಟಿಕೆಗಳು

### ಚಟುವಟಿಕೆ 1

- ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡುವುದು. ಚಲನಚಿತ್ರದಲ್ಲಿ ಹಾಡಿ ಪ್ರಸಿದ್ಧವಾದ ಕವಿತೆಯ ಗೆರೆಗಳನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸುವುದು.

  ಜೇನಿನ ಹೊಳೆಯೋ ಹಾಲಿನ ಮಳೆಯೋ
  ಸುಧೆಯೋ ಕನ್ನಡ ಸವಿನುಡಿಯೋ
  ವೀಣೆಯ ವಾಣಿಯ ಸ್ವರಮಾಧುರ್ಯವೂ
  ಸುಮಧುರ ಸುಂದರ ನುಡಿಯೋ.........ಆಹಾ!!

- ಒಂದನೇ ಗುಂಪಿನಲ್ಲಿ ಈ ಗೆರೆಗಳನ್ನು ಗಟ್ಟಿಯಾಗಿ ಓದಲು ಹೇಳುವುದು
- ಇದೇ ಸಾಲುಗಳನ್ನು ಚಲನಚಿತ್ರದಲ್ಲಿ ಹಾಡಿದಂತೆ ಅಧ್ಯಾಪಕರೊಂದಿಗೆ ಹಾಡಲು ಇನ್ನೊಂದು ಗುಂಪಿನಲ್ಲಿ ಹೇಳುವುದು.
- ಮೂರೂ ಚಟುವಟಿಕೆಗಳನ್ನು ಮೌಲ್ಯನಿರ್ಣಯ ಮಾಡುವುದು.
- ಮಕ್ಕಳು ಸೂಚಕಗಳ ಆಧಾರದಲ್ಲಿ ಈ ಮೂರು ರೀತಿಗಳ ಮೌಲ್ಯನಿರ್ಣಯ ನಡೆಸುವುದು.

***ಪ್ರಶ್ನೆಗಳು***

- ಮೊದಲು ಹಾಡಿದಾಗ ರಾಗ ಸಂಯೋಜಿಸಲ್ಪಟ್ಟಿತ್ತೇ?
- ಎರಡನೇ ಗುಂಪಿನ ಮಂಡನೆಯ ಪ್ರತ್ಯೇಕತೆಯೇನು?
- ಅಧ್ಯಾಪಕನ ಹಾಡು ಮತ್ತು ಎರಡನೇ ಗುಂಪಿನ ಹಾಡು ಇವುಗಳೊಳಗಿನ ಸಾಮ್ಯ ವ್ಯತ್ಯಾಸಗಳೇನು?
- ಹೆಚ್ಚು ಆಸ್ವಾದಕರವಾದ ರಾಗ ಯಾವುದು ?

***ಉತ್ತರಗಳು***

- ಮೊದಲನೇ ಗುಂಪು ಸಾಲುಗಳನ್ನು ಓದಿದರು.
- ಎರಡನೇ ಗುಂಪು ಸಾಲುಗಳನ್ನು ಸಿನಿಮಾದಲ್ಲಿ ಹಾಡಿದಂತೆ ಹಾಡಿದರು.
- ಅಧ್ಯಾಪಕರ ಆಲಾಪನೆ ಬೇರೊಂದು ರಾಗದಲ್ಲಾಗಿತ್ತು.
- ಸಿನೆಮಾದಲ್ಲಿ ಕೇಳಿದ ರಾಗ ಹೆಚ್ಚು ಆಸಕ್ತಿದಾಯಕವಾಗಿತ್ತು.

***ವಿವರಣೆ***

- ಸಾಲುಗಳಿಗೆ ರಾಗ ಸಂಯೋಜಿಸಿದಾಗ ಅದು ಹಾಡಾಗಿ ಬದಲಾಗುವುದು. ಸಾಲುಗಳ ಆಶಯಕ್ಕೆ ಪೂರಕವಾದ ರಾಗ ಸಂಯೋಜಿಸಿದಾಗ ಅದು ಹೆಚ್ಚು ಆಕರ್ಷಕದಾಯಕವಾಗುವುದು.
- ಹೆಚ್ಚು ಹೆಚ್ಚು ಅಸ್ವಾದಕರನ್ನು ಆಸ್ವಾದಿಸುವ ರೀತಿಯಲ್ಲಿ ಹಾಡನ್ನು ಸಾಕಷ್ಟು ಮನೋರಂಜನೆಗೊಳಿಸುವ ರೀತಿಯಲ್ಲಿ, ಆಶಾಯ ಆಧಾರಿತವಾಗಿ ರಾಗ ಸಂಯೋಜಿಸಲಾಗುವುದು.

- ರಾಗ ಸಂಯೋಜನೆಯು ಹೆಚ್ಚು ಗಮನವಿಟ್ಟು ಮಾಡಬೇಕಾದ ಪ್ರಕ್ರಿಯೆಯಾಗಿದೆ.

***ಚಟುವಟಿಕೆ 2***

- ಮಕ್ಕಳನ್ನು ನಾಲ್ಕು ಗುಂಪುಗಳನ್ನಾಗಿ ಮಾಡುವುದು. ಪ್ರತಿಯೊಂದು ಗುಂಪಿಗೂ ಸಂಗೀತ ನಿರ್ದೇಶಕರ ಹೆಸರನ್ನು ನೀಡುವುದು. ವಿ. ಮನೋಹರ್ ಜಿ.ಕೆ. ವೆಂಕಟೇಶ್, ಗುರುಕಿರಣ್, ಹಂಸಲೇಖ, ಎಂಬೀ ಹೆಸರುಗಳು)
- ವಿಭಿನ್ನವಾದ ನಾಲ್ಕು ಕವಿತೆಗಳನ್ನು ನೀಡುವುದು, ರಾಗ ಸಂಯೋಜಿಸಲು ಕೆಲವು ಸೂಚನೆ ನೀಡುವುದು.
- ಲಘುಸಂಗೀತದ ರೀತಿಯಲ್ಲಿ ರಾಗ ನೀಡಬೇಕು.
- ಗೆರೆಗಳು ಮತ್ತು ರಾಗ ಪರಸ್ಪರ ಹೊಂದಾಣಿಕೆಯಿರಬೇಕು.
- ತಾಳಬದ್ದವಾಗಿ ಕ್ರಮೀಕರಿಸಬೇಕು.
- ರಾಗ ಹಾಕಲು ಗುಂಪುಗಳಿಗೆ ಸಾಕಷ್ಟು ಸಮಯ ನೀಡಬೇಕು.
- ಪ್ರತಿಯೊಂದು ಗುಂಪು ಅವರು ಸಂಯೋಜಿಸಿದ ರಾಗ ಮಂಡಿಸುವುದು. (ಮಂಡಿಸುವ ಗುಂಪುಗಳಲ್ಲಿ ಹಾಡುವ ಸಾಮರ್ಥ್ಯವಿರುವವರು ಮಾತ್ರ ಸಾಕು)
- ಮಂಡಿಸುವಾಗ ಅಧ್ಯಾಪಕರು ಮತ್ತು ಇತರ ಗುಂಪುಗಳು ಸೂಚಕಗಳ ಆಧಾರಗಲ್ಲಿ ಮೌಲ್ಯ ನಿರ್ಣಯ ನಡೆಸುವುದು.

***ಸೂಚಕಗಳು***

- ಸಾಲುಗಳಿಗೆ ಮತ್ತು ರಾಗಕ್ಕೆ ಪರಸ್ಪರವಿರುವ ಸಂಬಂಧ
- ಕಂಡುಕೊಂಡ ರಾಗದ ಮಾಧುರ್ಯ
- ಅಕ್ಷರ ಸ್ಪಷ್ಟತೆಯೊಂದಿಗೆ ಆಕರ್ಷಕವಾದ ಹಾಡುಗಾರಿಕೆ.

ಕ್ರೋಢೀಕರಣ

ಪ್ರತಿಯೊಂದು ಹಾಡಿಗೂ ಅದರದ್ದೇ ಆದ ಶೈಲಿ ಇದೆ. ಹಾಡುಗಳ ಸವಿಶೇಷತೆಗಳಿಗೆ ಹೊಂದಿಕೊಂಡು ರಾಗ ಸಂಯೋಜಿಸಿದರೆ ಮಾತ್ರವೇ ಹೆಚ್ಚು ಮಧುರವಾಗುವುದು. ರಾಗ, ಸಾಲು, ತಾಳವು ಪರಸ್ಪರ ಹೊಂದಿಕೆಯಾದಾಗ ಹಾಡು ಭಾವನಾತ್ಮಕವಾಗುವುದು.

***ಚಟುವಟಿಕೆ 3***

- ವಿವಿಧ ರಾಗರೂಪಗಳಿಗೆ ರಾಗಸಂಯೋಜನೆ. (ಆಶಯಕ್ಕನುಸಾರವಾಗಿ)
- ನಾಲ್ಕು ಗುಂಪುಗಳಿಗೆ ವಿವಿಧ ಗಾನರೂಪಗಳ ಸಾಲುಗಳನ್ನು ನೀಡುವುದು.

  ಗುಂಪು 1– ಸಮೂಹಗಾನ<br>
  ಗುಂಪು 2– ದೇಶಭಕ್ತಿ ಗೀತೆಗಳು<br>
  ಗುಂಪು 3– ಪರಿಸರ ಗೀತೆಗಳು<br>
  ಗುಂಪು 4– ಭಕ್ತಿ ಗೀತೆಗಳು
- ಸಾಲುಗಳಿಗೆ ರಾಗ ನೀಡಲು ಸಮಯ ನೀಡುವುದು. ರಾಗ ಸಂಯೋಜನೆಯ ಮೊದಲು ಅಧ್ಯಾಪಕ ಕೆಲವು ಸೂಚನೆಗಳನ್ನು ನೀಡುವುದು. ಪ್ರತಿಯೊಂದು ಗಾನರೂಪಗಳಿಗೂ ಅದರದ್ದೇ ಆದ ಸಂಗೀತ ಸಂಯೋಜನೆ ಮಾಡಬೇಕು.
- ಭಾವನೆಗೆ ಆದ್ಯತೆ ನೀಡಬೇಕು
- ಸಾಲುಗಳು ಮತ್ತು ರಾಗ ಪರಸ್ಪರ ಹೊಂದಿಕೆಯಾಗಬೇಕು.
- ಮಂಡನೆ – ಗುಂಪಾಗಿಯೂ, ವೈಯಕ್ತಿಕವಾಗಿಯೂ ಆಗಬಹುದು.

### ಮೌಲ್ಯ ನಿರ್ಣಯ

*ಸೂಚಕಗಳು*

- ರಾಗದ ಇಂಪು
- ಸಾಲುಗಳು ಮತ್ತು ರಾಗದ ಪರಸ್ಪರ ಹೊಂದಿಕೆ.
- ಹಾಡುಗಾರಿಕೆಯ ಹಿರಿಮೆ.

### ಕ್ರೋಡೀಕರಣ

ಸಾಲುಗಳ ಅರ್ಥವನ್ನು ತಿಳಿದುಕೊಂಡು ಭಾವನಾತ್ಮಕ ರೀತಿಯಲ್ಲಿ ರಾಗಸಂಯೋಜಿಸಿದಾಗದ ಎಲ್ಲಾ ಹಾಡುಗಳು ಇಂಪಾಗುವುವು ಮತ್ತು ಸಮಯೋಚಿತ ಸೃಷ್ಟಿಗಳಾಗುವುವು. ರಾಗಗಳನ್ನು ಆರಿಸುವಾಗ ಅವುಗಳ ಪ್ರತ್ಯೇಕತೆಗಳು, ಅವುಗಳು ತಿಳಿಸುವ ಭಾವನೆಗಳ ಕುರಿತು ಹೆಚ್ಚು ತಿಳಿಯಬೇಕಾಗಿದೆ. ರಾಗ ಸಂಯೋಜನೆಯು ಸೃಜನಾತ್ಮಕತೆಯ ಉತ್ತಮ ಪ್ರದರ್ಶನ ಪ್ರಕ್ರಿಯೆಯಾಗಿದೆ.

## ಯೂನಿಟ್ – 3

### ಮುನ್ನುಡಿ

ವಿಶ್ವ ಸಂಗೀತ ಕ್ಷೇತ್ರದಲ್ಲಿ ಭಾರತೀಯ ಸಂಗೀತವು ಹಲವು ವೈಶಿಷ್ಟ್ಯಗಳಿಂದ ಗಮನ ಸೆಳೆದಿದೆ. ಭಾರತೀಯ ಸಂಗೀತದ ಪ್ರಧಾನವಾದ ಎರಡು ಶಾಖೆಗಳಲ್ಲಿ ಹಲವಾರು ಸಂಗೀತರೂಪಗಳು ವಿವಿಧ ತರದ ಸಂಗೀತೋಪಕರಣಗಳೂ ಇವೆ. ಪೌರಾಣಿಕ ಕಾಲದಲ್ಲಿಯೇ ಭಾರತೀಯ ಸಂಗೀತವು ವಾದ್ಯೋಪಕರಣಗಳಿಂದ ಪ್ರಸಿದ್ಧವಾಗಿದೆ. ಆಕರ್ಷಣೆಯವೂ ಆಗಿದೆ. ಲೋಕಪ್ರಸಿದ್ಧರಾದ ಹೆಚ್ಚಿನ ವಾದ್ಯಕಲಾವಿದರ ಮತ್ತು ಅವರ ಕ್ಷೇತ್ರವನ್ನು ತಿಳಿದುಕೊಳ್ಳಬೇಕಾದುದು ಪ್ರತಿಯೊಬ್ಬ ಆಸ್ವಾದಕನ ಕರ್ತವ್ಯವಾಗಿದೆ. ಭಾರತೀಯ ಸಂಗೀತವನ್ನು ಉನ್ನತ ಶಿಖರಕ್ಕೆರಿಸಲು ಕಾರಣೀಭೂತರಾದವರ ಕುರಿತು, ಅವರು ನೀಡಿದ ಕೊಡುಗೆಯ ಕುರಿತು ಈ ಅಧ್ಯಾಯದಲ್ಲಿ ನೀಡಲಾಗಿದೆ.

### ಕೇಂದ್ರಾಶಯ

ಭಾರತೀಯ ಸಂಗೀತ ಸಂಸ್ಕೃತಿಗೆ ದಾರಿದೀಪವಾದ ವಾದ್ಯೋಪಕರಣಗಳೂ, ಅವುಗಳ ವಾದನಾರೀತಿ, ರಚನಾರೀತಿ ಎಂಬಿವುಗಳ ಕುರಿತು ಈ ಅಧ್ಯಾಯದಲ್ಲಿ ಪ್ರತಿಪಾದಿಸಲಾಗಿದೆ. ಪ್ರತಿಯೊಂದು ವಾದ್ಯೋಪಕರಣಗಳಲ್ಲಿಯೂ ಪ್ರಸಿದ್ದರಾದ ವಾದಕರ ಕುರಿತಾದ ಲಘು ವಿವರಣೆಯು ಈ ಅಧ್ಯಾಯದಲ್ಲಿದೆ.

### ಕಲಿಕಾ ಸಾಧನೆ

- ಭಾರತೀಯ ಸಂಗೀತದಲ್ಲಿನ ವಾದ್ಯೋಪಕರಣಗಳ ಮತ್ತು ವಾದ್ಯೋಪಕರಣ ಪ್ರತಿಭೆಗಳ ಕುರಿತು ತಿಳಿಯುವುದು. (ಹಿಂದುಸ್ಥಾನಿ ಸಂಗೀತ, ಕರ್ನಾಟಕ ಸಂಗೀತ)

## ಆಶಯ, ತಿಳುವಳಿಕೆ

- ಹಲವಾರು ವಾದ್ಯೋಪಕರಣ ವಿದ್ವಾಂಸಕರು ಇದ್ದಾರೆ.
- ವಾದ್ಯೋಪಕರಣಗಳನ್ನು ಚೆನ್ನಾಗಿ ಉಪಯೋಗಿಸಬೇಕಾದರೆ ದೀರ್ಘಕಾಲದ ತರಬೇತಿ ಮತ್ತು ಸಾಧನೆಯ ಅಗತ್ಯವಿದೆ.
- ವಿದ್ವಾಂಸರ ಕುರಿತು ಹೆಚ್ಚಿನ ತಿಳುವಳಿಕೆ ಪಡೆಯುವುದು.
- ಹಲವು ವಾದ್ಯೋಪಕರಣಗಳು ಇವೆ.

## ಪ್ರಕ್ರಿಯೆ

- ಸಂಗ್ರಹಿಸಿದ ಮಾಹಿತಿಗಳನ್ನು ಟಿಪ್ಪಣಿಗಳಾಗಿ ಮಂಡಿಸಿ ಮೌಲ್ಯನಿರ್ಣಯ ಮಾಡುವುದು.
- ಚರ್ಚೆಗಳು

## ಮೌಲ್ಯಮಾಪನ

- ಸಂಶೋಧನಾ ಸಾಮರ್ಥ್ಯ
- ಟಿಪ್ಪಣಿಗಳು

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ 1***

- ಯಾವುದಾದರೂ ಕೆಲವು ವಾದ್ಯೋಪಕರಣಗಳ ವಾದನವನ್ನು ಕೇಳಲು ಅವಕಾಶ ಒದಗಿಸುವುದು, ತೋರಿಸುವುದು. (ಹಿಂದುಸ್ಥಾನಿ, ಕರ್ನಾಟಕ ಸಂಗೀತ ಶಾಖೆಗಳಲ್ಲಿ ಪ್ರಚಲಿತದಲ್ಲಿರುವವುಗಳನ್ನೂ ಒಳಪಡಿಸುವುದು)
- ಸಿತಾರ್, ವೀಣೆ, ತಬಲ, ಮೃದಂಗ, ಹಾರ್ಮೋನಿಯಂ, ವಯಲಿನ್ ಎಂಬಿವುಗಳು ಆಗಬಹುದು. ಆಲಿಸಿದ/ಕಂಡ ವಾದ್ಯೋಪಕರಣಗಳ ವಿಶೇಷತೆಗಳನ್ನು ದಾಖಲಿಸಬೇಕು. (ವೈಯಕ್ತಿಕ)
- ಟಿಪ್ಪಣಿಗಳ ಆಧಾರದಲ್ಲಿ ವಿಶ್ಲೇಷಣೆ

  (ಟಿಪ್ಪಣಿಗಳಲ್ಲಿ ಬರುವಂತಹುದು)

  ಉತ್ತರ ಸೂಚಕ

  - ತಂತಿವಾದ್ಯಗಳು
  - ತಾಳವಾದ್ಯಗಳು
  - ಕರ್ನಾಟಕ ಸಂಗೀತಗಳಲ್ಲಿ ಉಪಯೋಗಿಸುವವುಗಳು/ಹಿಂದುಸ್ಥಾನಿ ಸಂಗೀತದಲ್ಲಿ ಉಪಯೋಗಿಸುವವುಗಳು.
  - ಎರಡರಲ್ಲಿಯೂ ಏಕರೀತಿಯಲ್ಲಿ ಉಪಯೋಗಿಸುವವುಗಳು.
- ವಿಶೇಷತೆಗಳನ್ನು ದಾಖಲಿಸುವುದು – ಕೆಲವು ಪ್ರಶ್ನೆಗಳ ಆಧಾರದಲ್ಲಿ.
- ಯಾವ ವಿಭಾಗಕ್ಕೆ ಸೇರಿದ ಉಪಕರಣಗಳು? ಯಾವ ಸಂಗೀತ ಶೈಲಿಗೆ ಇದನ್ನು ಉಪಯೋಗಿಸಲಾಗಿದೆ?
- ವಾದನವನ್ನು ಕೇಳುವಾಗ ಕಂಡುಬರುವ ಪ್ರತ್ಯೇಕತೆಗಳು, ಸಾಮ್ಯತೆಗಳು, ವ್ಯತ್ಯಾಸಗಳು ಯಾವುವು?
- ಟಿಪ್ಪಣಿಗಳನ್ನು ಓದುವುದು. (ವೈಯಕ್ತಿಕ)

- ಅಧ್ಯಾಪಕರು B.Bಯಲ್ಲಿ ಬರೆಯುವುದು. – ವಿಪುಲೀಕರಿಸುವುದು. (ಆಶಯ)
- ವಿವರಣೆ ನೀಡುವುದು.
- ಭಾರತೀಯ ಸಂಗೀತೋಪಕರಣಗಳ ವೈವಿಧ್ಯತೆ.
- ಕಂಡ/ಕೇಳಿದ ವಾದ್ಯೋಪಕರಣದ ವಿಶೇಷತೆಗಳು.
    - ಸಿತಾರ್, ವೀಣೆ – ತಂತಿವಾದ್ಯಗಳು. (ಸಿತಾರ್ – ಹಿಂದುಸ್ಥಾನಿ ಸಂಗೀತ, ವೀಣೆ – ಕರ್ನಾಟಕ ಸಂಗೀತ.)
    - ವಯಲಿನ್ – ಎರಡು ಸಂಗೀತಶಾಖೆಗಳ ಏಕರೀತಿಯಲ್ಲಿ ಉಪಯೋಗಿಸುವುದು.
    - ತಬಲ – ಹಿಂದೂಸ್ಥಾನಿ ಸಂಗೀತ ಪ್ರಯೋಗಗಳಲ್ಲಿ ಅನಿವಾರ್ಯ, ಕರ್ನಾಟಕ ಲಘುಸಂಗೀತ ಶಾಖೆಗಳಲ್ಲಿ ಮುಖ್ಯವಾದ್ಯ.
    - ಮೃದಂಗ – ಕರ್ನಾಟಕ ಶಾಸ್ತ್ರೀಯ ಸಂಗೀತದ ಅವಿಭಾಜ್ಯ ತಾಳವಾದ್ಯ.
    - ಪಖಾವಜ – ಹಿಂದೂಸ್ಥಾನಿ ಶಾಸ್ತ್ರೀಯ ಗಾನರೂಪಗಳಲ್ಲಿ (ಧೂಪದ್, ಧಮಾರ್) ಮೃದಂಗಕ್ಕೂ, ಪಕ್ಕವಾದ್ಯಕ್ಕೂ ರೂಪಸಾದೃಶ್ಯವಿದೆ.

***ಚಟುವಟಿಕೆ 2***

- ವಿವಿಧ ವಾದ್ಯೋಪಕರಣಗಳ ಚಿತ್ರಗಳು, ಸಿಡಿಗಳನ್ನು ತೋರಿಸುವುದು.
- ತೋರಿಸಿದ ಉಪಕರಣಗಳನ್ನು ಗುರುತಿಸುವುದು. (ಬಾಯ್ದೆರೆಯಾಗಿ)
- ಅಧ್ಯಾಪಕನ ಸಹಾಯದೊಂದಿಗೆ ಅಥವ ವಿವರಣೆಗಳನ್ನೊಳಗೊಂಡ ಪುಸ್ತಕಗಳ ಸಹಾಯದೊಂದಿಗೆ.
- ಪ್ರಧಾನವಾದ ಮತ್ತು ಅತೀ ಹೆಚ್ಚು ಉಪಯೋಗಿಸಲ್ಪಡುವ ಕೆಲವು ಉಪಕರಣಗಳನ್ನು ಕಂಡುಕೊಂಡು ಅವುಗಳ ಘಟನೆ, ನುಡಿಸುವ ರೀತಿ, ಈ ಉಪಕರಣ ಕ್ಷೇತ್ರದಲ್ಲಿರುವ ಪ್ರಸಿದ್ದರು, ಎಂಬಿವುಗಳ ಕುರಿತಾದ ವಿಶ್ಲೇಷಣೆ, ಅಧ್ಯಯನ.
- ವಾದ್ಯೋಪಕರಣಗಳು – ಕರ್ನಾಟಕ ಸಂಗೀತದಲ್ಲಿಯೂ ಹಿಂದೂಸ್ಥಾನಿ ಸಂಗೀತದಲ್ಲಿಯೂ ಸಂಗೀತ ಕಛೇರಿಗಳಿಂದ, ಇತರ ಸಂಗೀತ ಪ್ರದರ್ಶನಗಳಿಂದ ಮಕ್ಕಳು, ಕಂಡು, ಕೇಳಿ, ಪರಿಚಿತಗೊಂಡ ಉಪಕರಣಗಳನ್ನು ಒಳಪಡಿಸಬೇಕು. ಉಪಕರಣಗಳ ಘಟನಾ ಪ್ರತ್ಯೇಕತೆ ಇವುಗಳ ಲಘು ವಿವರಣೆ.

***ವಾದ್ಯೋಪಕರಣಗಳು***

| ಕರ್ನಾಟಕ ಸಂಗೀತ | ಹಿಂದೂಸ್ಥಾನಿ ಸಂಗೀತ |
|---|---|
| ವಯಲಿನ್ | ಸಿತಾರ್ |
| ಮೃದಂಗ | ಪಖಾವಜ |
| ವೀಣೆ | ತಬಲ |
| ಗಂಜೀರ | ಸಂತೂರ್ |
| ಘಟ | ಷಹನಾಯ್ |
| ಕೊಳಲು | ಸರೋದ್ |
| ಮಾಂಡೋಲಿನ್ | ಬಾನ್‌ಸುರೀ |
| ಮುಖರ್‌ಶಂಖ್ | ಸಾರಂಗಿ |

### ವಯಲಿನ್

ವಯಲಿನ್‌ನ ಜನನ ಪಾಶ್ಚಾತ್ಯದಲ್ಲಾದರೂ, ಕರ್ನಾಟಕ ಸಂಗೀತ ಕಛೇರಿಗಳ ಅವಿಭಾಜ್ಯ ಘಟಕವಾಗಿದೆ. ಸ್ವಾತೀ ತಿರುನಾಳ್ ಮಹಾರಾಜನ ಆಡಳಿತ ಕಾಲದಲ್ಲಿ ಪ್ರಪ್ರಥಮವಾಗಿ ವಯಲಿನ್ ಕೇರಳದಲ್ಲಿ ಉಪಯೋಗಿಲ್ಪಟ್ಟಿತು. ವಯಲಿನ್‌ಗೆ ನಾಲ್ಕು ತಂತಿಗಳಿವೆ. ಮನುಷ್ಯ ಶರೀರಕ್ಕೆ ಪ್ರಕಟಿಸಲ್ಪಡಲು ಸಾಧ್ಯವಿರುವ ಎಲ್ಲಾ ಗಮಕಗಳನ್ನು ಮತ್ತು ದ್ರುತಕಾಲ ಪ್ರಯೋಗಗಳನ್ನು ಹೃದಯಸ್ಪರ್ಷಿಯಾಗಿಯೂ ಮನೋಹರವಾಗಿಯೂ ವಯಲಿನ್ ವಾದನದ ಮೂಲಕ ಪ್ರಕಟಿಸಲು ಸಾಧ್ಯ. ಇತರ ಸಂಗೀತೋಪಕರಣಗಳಿಗೆ ಅಸಾಧ್ಯವಾದ ರೀತಿಯಲ್ಲಿ ಸ್ವರಗಳ ಘನವು, ವೇಗತೆಯು ಯಾವುದೇ ಸ್ಥಾಯಿಯಲ್ಲೂ ಪ್ರಕಟಿಸಲು ಸಾಧ್ಯವೆಂಬುದು ಸಂಗೀತೋಪಕರಣದ ಹಿರಿಮೆ. ವಯಲಿನ್ ಮುಖ್ಯ ಕಛೇರಿವಾದನಕ್ಕಾಗಿಯೂ ಉಪಯೋಗಿಸುವರು.

<u>ವಯಲಿನ್ ವಾದನದಿಂದ ಪ್ರಸಿದ್ಧರಾದವರು</u>

ಬಾಲಸ್ವಾಮೀ ದೀಕ್ಷಿತರ್
ಮೈಸೂರ್ ಮಂಜುನಾಥ್
ಮೈಸೂರ್ ಚೌಡಕ್ಯ
ಎಲ್. ವೈದ್ಯನಾಥನ್
ಎಲ್. ಸುಬ್ರಹ್ಮಣ್ಯಂ
ವಡಿವೇಲು
ಡಾ। ಎಲ್. ಶಂಕರ್
ಸುಂದರಂ ಅಯ್ಯರ್
ಚಾಲಕುಡಿ ನಾರಾಯಣ ಸ್ವಾಮಿ
ಕರೂರ್ ಚಿನ್ನಸ್ವಾಮಿ ಅಯ್ಯರ್
ವಿ. ಶಶಿಕುಮಾರ್
ಟಿ.ಎನ್. ಕೃಷ್ಣನ್
ಟಿ.ಪಿ. ರಮಣಿ
ಲಾಲ್‌ಗುಡಿ ಜಯರಾಮನ್
ವಿ.ವಿ. ರವಿ
ಎಂ.ಎಸ್. ಗೋಪಾಲಕೃಷ್ಣನ್
ಗಣೇಶ ಮತ್ತು ಕುಮರೇಶ್
ಕುಂಟ್ರಕುಡಿ ವೈದ್ಯನಾಥನ್
ವೆಂಕಟಸ್ವಾಮಿ ನಾಯ್ಡು
ಅಣ್ಣಾ ಶಾಸ್ತ್ರಿ
ನಾಗೈ ಮುರಳೀಧರನ್
ಡೆಲ್ಲಿ ಸುಂದರರಾಜನ್
ತಿರುವಿಯ ಶಿವಾನಂದನ್
ಪಾಲಕ್ಕಾಡ್ ಆರ್. ರಘು
ಉಮಯಾಲ್‌ಪುರಂ ಶಿವರಾಮನ್
ಟಿ.ಪಿ. ಗೋಪಾಲಕೃಷ್ಣನ್
ಕಾರೈಕುಡೀ ಮಣಿ
ಟ್ರಿಚ್ಚೀ ಶಂಕರನ್
ತಿರುವನಂತಪುರ ಸುರೇಂದ್ರನ್
ಬಿ. ಹರಿಕುಮಾರ್
ಮಾವೇಲಿಕ್ಕರ್ ಕೃಷ್ಣನ್ ನಾಯರ್

ಮಾವೇಲಿಕ್ಕರ್ ವೇಲ್‌ಕುಡಿ ನಾಯರ್
ಚೆಲ್ಲ ವೆಂಕಟರಾವ್
ಪಾಲಕ್ಕಾಡ್ ರಾಜಮಣಿ
ಕೆ.ವಿ. ಪ್ರಸಾದ್
ಪಾರಶ್ಯಾಲ ರವಿ

### ವೀಣೆ

ವೀಣೆ ಭಾರತೀಯ ಸಂಗೀತ ಕ್ಷೇತ್ರದ ಅಭಿಮಾನ ಸಂಪತ್ತಾಗಿದೆ. ಪೌರಾಣಿಕ ಸಂಗೀತೋಪಕರಣಗಳಲ್ಲಿ ಪ್ರಧಾನ ತಂತಿವಾದ್ಯವಾಗಿದೆ ವೀಣೆ. ಭಾರತೀಯ ಸಂಗೀತ ಸೌಂದರ್ಯವನ್ನು ಪರಾಕಾಷ್ಠೆಯ ಮೂಲಕ ಪೂರ್ಣವಾಗಿ ಪ್ರಕಟಿಸಲು ಸಾಧ್ಯವಿರುವ ಒಂದೇ ಒಂದು ತಂತಿವಾದ್ಯವಾಗಿದೆ ವೀಣೆ. ತಂತಿವಾದ್ಯಗಳ ಮಾತೆ ಎಂದೂ ವೀಣೆಯನ್ನು ಕರೆಯುತ್ತಾರೆ. ಪ್ರಾಚೀನ ವೀಣೆಗಳು ನಾನಾರೂಪದಲ್ಲಿ ಕಂಡುಬಂದರೂ ಅವು ಮುಖ್ಯವಾಗಿ ಬಿದಿರು ಇಲ್ಲವೇ ಮರದ ಉದ್ದವಾದ **'ದಂಡಿ'**ಯನ್ನು ಹೊಂದಿ ಈ ದಂಡಿಯ ಎರಡು ತುದಿಗಳಿಗೆ ಬಿಗಿಯಲ್ಪಟ್ಟ ಮರದ ಅಥವಾ ಕೊಂಬಿನ **'ಮೇರು'**ಗಳ ಮೇಲೆ ಹಾದುಹೋಗುವ ತಂತಿಗಳನ್ನು ಹೊಂದಿದ್ದವು. 4 ತಂತಿಗಳು ಮೀಟುವುದಕ್ಕೂ ಮೂರು ತಂತಿಗಳು ತಾಳಕ್ಕೂ ಉಪಯೋಗಿಸಲ್ಪಡುವುದು. **ವಿಚಿತ್ರವೀಣೆ, ಗಾಯತ್ರಿವೀಣೆ , ರುದ್ರವೀಣೆ** ಮೊದಲಾದ ವಿಭಿನ್ನ ರೀತಿಯ ವೀಣೆಗಳೂ ಇವೆ.

ವೀಣಾವಾದನೆಯಲ್ಲಿ ಪ್ರಸಿದ್ಧರಾದ ಪ್ರತಿಭೆಗಳು

ವೀಣೆ ಶೇಷಣ್ಣ
ವೀಣೆ ಧನಮ್ಮಾಳ್
ಎಸ್. ಬಾಲಚಂದ್ರರ್
ಕೆ.ಎಸ್. ನಾರಾಯಣ ಸ್ವಾಮಿ
ಬೆಟ್ಟಿ ಬಾಬು
ಎಮನಿ ಶಂಕರಶಾಸ್ತ್ರಿ
ಎಂ.ಕೆ. ಕಲ್ಯಾಣಕೃಷ್ಣ ಭಾಗವತರ್
ಆರ್. ವೆಂಕಟರಾಮನ್
ಎಸ್. ರುಕ್ಮಿಣಿ
ಎ. ಅನಂತ ಪದ್ಮನಾಭನ್
ಗೋಮತಿ ಚಿದಂಬರಂ
ಜಯಂತಿ ಕುಮರೇಶ್

### ಮಾಂಡೋಲಿನ್

ಪಾಶ್ಚಾತ್ಯ ತಂತಿವಾದ್ಯದ ಮಾಂಡೋಲಿನ್ ಎರಡು ಅಡಿ ಉದ್ದವಿದೆ. 4 ಜೊತೆ ಲೋಹತಂತಿಗಳು ಇದರಲ್ಲಿವೆ. ಸಣ್ಣ ಪ್ಲಕ್ಟ್ರಂ ಉಪಯೋಗಿಸಿ ಇದನ್ನು ಬಾರಿಸಲಾಗುವುದು. ಅಕೋಸ್ಟಿಕ್ ಮಾಂಡೋಲಿನ್, ಇಲೆಕ್ಟ್ರಿಕ್ ಮಾಂಡೋಲಿನ್ ಎಂಬ ಎರಡು ವಿಧಗಳಿವೆ. ಕರ್ನಾಟಕ ಸಂಗೀತದಲ್ಲಿ ಯೋಗ್ಯವಾದುದು ಇಲೆಕ್ಟ್ರಿಕ್ ಮಾಂಡೋಲಿನ್ ಆಗಿದೆ. ಅತೀ ಚಿಕ್ಕ ಪ್ರಾಯದಲ್ಲಿಯೇ ಮಾಂಡೋಲಿನ್ ವಾದನದಲ್ಲಿ ಪ್ರತಿಭೆ ಪ್ರಕಟಿಸಿದ ಕರ್ನಾಟಕ ಸಂಗೀತಜ್ಞನಾಗಿದ್ದಾರೆ ಯು. ಶ್ರೀನಿವಾಸ್.

### ಗಂಜೀರ

ಕರ್ನಾಟಕ ಸಂಗೀತ ಕಛೇರಿಯಲ್ಲಿ ಉಪಯೋಗಿಸುವ ಉಪಪಕ್ಕ – ತಾಳವಾದ್ಯವಾಗಿದೆ ಇದು. ಸಾಧಾರಣ 8 ಇಂಚು ವ್ಯಾಸವು ನಾಲ್ಕು ಇಂಚು ಅಗಲ, ಹಗುರವಾದ ಮರದಿಂದ ವೃತ್ತಾಕೃತಿಯಲ್ಲಿರುವ ಒಂದು ಫ್ರೇಮಿನ ಒಂದು ಭಾಗದಲ್ಲಿ ಉಡುವಿನದ್ದೋ ಆಡಿನದ್ದೋ

ಚರ್ಮ ಎಳೆದು ಗಟ್ಟಿಯಾಗಿ ಬಿಗಿದು ಕಟ್ಟಿದರೆ ಗಂಜೀರ ಆಯಿತು. ಎಡಕೈಯಲ್ಲಿ ಗಂಜೀರ ಹಿಡಿದು ಬಲಕೈಯಿಂದ ಚರ್ಮದ ಮೇಲೆ ಬಡಿದು ಬಾರಿಸುವುದು.

ಪ್ರಸಿದ್ಧರಾದ ಗಂಜೀರ ವಾದಕರು :

ಪುದುಕೋಟ್ಟೈ ದಕ್ಷಿಣ ಮೂರ್ತಿ ಪಿಳ್ಳೈ
ನಾಗರಾಜನ್
ಬೆತ್ತೂರ್ ರಾಧಾಕೃಷ್ಣನ್
ವೈಕಂ ಕೃಷ್ಣಯ್ಯರ್
ಹರಿ ಶಂಕರ್
ಎಚ್.ಪಿ. ರಾಮಾಚರ್
ವೈ.ಎನ್. ಶಾಂತರಾಂ
ಶೇಷಗಿರಿರಾವ್
ಪಿ. ಶೆಲ್ವಗಣೇಶ್

## ಘಟ

ಆವೆಮಣ್ಣಿನಲ್ಲಿ ಹಿತ್ತಾಳೆಯೋ ತಾಮ್ರದ ಹುಡಿಯೋ ಸುರಿಸಿ ಮಣ್ಣಿನ ಕೊಡದ ಆಕೃತಿಯಲ್ಲಿ ರೂಪೀಕರಿಸಿದ ಉಪಪಕ್ಕ ತಾಳವಾದ್ಯ. ಮೃದಂಗದೊಂದಿಗೆ ಸಹತಾಳ ವಾದ್ಯವಾಗಿ ಕಛೇರಿಗಳಲ್ಲಿ ಘಟದ ಸ್ಥಾನ. ಅಂಗೈ, ಬೆರಳುಗಳು, ಮಣಿಗಂಟು, ಉಗುರುಗಳು ಇವುಗಳನ್ನೆಲ್ಲಾ ಉಪಯೋಗಿಸಿ ಘಟ ಬಾರಿಸುವುದು. ಮೃದಂಗ ಪಾಠಗಳೇ ಘಟ ಬಾರಿಸಲು ಆಧಾರ.

ಘಟದ ಶ್ರುತಿ ತುಂಬಾ ಹೆಚ್ಚಿಸಲೋ ಕಡಿಮೆಗೊಳಿಸಲೋ ಅಸಾಧ್ಯವಾದರೂ ಸ್ವಲ್ಪ ಸ್ವಲ್ಪ ಮೆಲ್ಲ ಮೆಲ್ಲ ಬಡಿದು ಸಣ್ಣ ಪ್ರಮಾಣದಲ್ಲಿ ಶ್ರುತಿ ಕ್ರಮೀಕರಿಸಲು ಸಾಧ್ಯ. ಘಟ ಬಾರಿಸುವಾಗ ಅದರದ್ದೇ ಅದ ಶ್ರುತಿಗಳಲ್ಲಿರುವ ಘಟ ಉಪಯೋಗಿಸಬಹುದು.

*ಘಟ ವಾದನದ ಪ್ರಸಿದ್ಧರಾದ ಪ್ರತಿಭೆಗಳು*

ಉಮಯಾಲ್‌ಪುರಂ ಕೋದಂಡ ರಾಮಯ್ಯರ್
ಟಿ.ಎಚ್. ವಿನಾಯಕರಾಂ
ಪುದುಕೋಟ್ಟೈ ರಾಮಚಂದ್ರನ್
ವಿ. ಸುರೇಶ್
ಕಾರ್ತಿಕೇಯನ್
ಕಾರ್ತಿಕ್
ವೈಕಂ ಗೋಪಾಲಕೃಷ್ಣನ್
ತೃಪ್ಪಣಿತ್ತೂರ್ ರಾಧಾಕೃಷ್ಣನ್

## *ಮುಖರ್‌ಶಂಖ್ (ಮೌತ್ ಓರ್ಗನ್)*

7 ಅಥವಾ 8 ಸೆ.ಮೀ. ಉದ್ದವಿರುವ ಉಪಕರಣ. ರಾಜಸ್ತಾನದಲ್ಲಿಯೂ ಉತ್ತರಪ್ರದೇಶದ ಕೆಲವು ಸ್ಥಳಗಳಲ್ಲಿನ ಜಾನಪದ ಹಾಡುಗಳಿಗೆ ತಾಳವಾದ್ಯಕ್ಕಾಗಿ ಉಪಯೋಗಿಸುವ ಮುಖರ್‌ಶಂಖ ಕರ್ನಾಟಕ ಸಂಗೀತ ಕಛೇರಿಗಳಲ್ಲಿ ಅಪ್ರಧಾನವಲ್ಲದ ಸ್ಥಾನವಿದೆ. ಬಿದಿರಿನಿಂದಲೋ ಕಬ್ಬಿಣದಿಂದಲೋ ಇದನ್ನು ನಿರ್ಮಿಸಬಹುದು.

## ಹಿಂದುಸ್ಥಾನೀ ವಾದ್ಯೋಪಕರಣಗಳು

### ಸಿತಾರ್

ಉತ್ತರ ಭಾರತದಲ್ಲಿ ಹೆಚ್ಚು ಬಳಕೆಯಲ್ಲಿರುವ ವಾದ್ಯ ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನ ಗಾಯಕನಾಗಿದ್ದ ಅಮೀರ್ ಖುಸ್ತುರ ಈ ವಾದ್ಯದ ನಿರ್ಮಾತೃ. ವೀಣೆಯಂತೆಯೆ ಈ ವಾದ್ಯಕ್ಕೂ ಕಾಯಿ ಮತ್ತು ದಂಡಿಗಳಿವೆ. ಇವು ಹೆಚ್ಚಾಗಿ ಹಲಸಿನ ಮರದಿಂದಲೇ ತಯಾರಾಗುತ್ತವೆ. ಆದರೆ ಈ ವಾದ್ಯ ವೀಣೆಯಷ್ಟು ದೊಡ್ಡದಲ್ಲ. ವೀಣೆಯಂತೆ ಇಷ್ಟೆ ಬಾಗಿದ **ವ್ಯಾಳೀ** ತಲೆ ಮತ್ತು ಎಡಭಾಗದ ಊರುವ ಸೋರೆಬುರುಡೆಯಿಲ್ಲ. ಈ ವಾದ್ಯಕ್ಕೂ ತಂತಿಗಳು ಏಳು. **ನಡೆಗಳು** ಕಂಚಿನಿಂದ ತಯಾರಾಗಿ ಬಾಗಿವೆ. ಈ ಮೆಟ್ಟಲುಗಳು ದಂಡಿಗೆ ತಂತಿಗಳಂದ ಬಿಗಿಯಲ್ಪಟ್ಟು ರಾಗಕ್ಕೆ ತಕ್ಕಂತೆ ಜರಗಿಸಿಕೊಳ್ಳಲು ಅನುಕೂಲವಾಗಿವೆ. ನಡೆಗಳ ಸಂಖ್ಯೆ 16 ರಿಂದ 18 ರ ವರೆಗೆ ನಾಲ್ಕು ತಂತಿಗಳು ಕುದುರೆ ಮತ್ತು ಮೇರುಗಳ ಮೇಲೆ ಹಾದು ದಂಡಿಯ ಬಿಡಿಭಾಗದ ಪಕ್ಕಗಳಲ್ಲಿ ಬಿರಡೆಗಳಿಗೆ ಬಿಗಿಯಲ್ಪಟ್ಟಿರುತ್ತದೆ. ಈ ವಾದ್ಯ ಬೆರಳಿಗೆ ಸಿಕ್ಕಿಸಿಕೊಳ್ಳುವ 'ಉಕ್ಕಿನ' ನಖ ದಿಂದ ಬಾಜಿಸಲ್ಪಡುತ್ತದೆ. ಆಗ ಸೃಷ್ಟಿಸಲ್ಪಡುವ ಧ್ವನಿಯು ವಿಶೇಷ. ಕೇಳುಗರನ್ನು ಆನಂದದತ್ತ ಕೊಂಡೊಯ್ಯುತ್ತದೆ.

ಪ್ರಸಿದ್ಧರು

ನಿಖಿಲ್ ಬಾನರ್ಜಿ
ವಿಲಯತ್ ಖಾನ್
ಪಂಡಿತ್ ರವಿಶಂಕರ್

### *ಪಖಾವಜ*

ಕರ್ನಾಟಕ ಸಂಗೀತದ ಮೃದಂಗರೂಪ ನಿರ್ಮಾಣದಲ್ಲೂ ಸಾಮ್ಯತೆಯಿರುವ ಪಖಾವಜ ಹಿಂದೂಸ್ಥಾನೀ ಸಂಗೀತದ ಧ್ರುಪದ, ಧಮಾರ್ ಎಂಬೀ ರೂಪಗಳಿವೆ. ಆದರೆ ಎರಡರ ನಾದಗಳಿಗೆ ವ್ಯತ್ಯಸವಿದೆ. ಮೃದಂಗಕ್ಕೆ **ತಗ್ಗ್, ಹೆಚ್,** ಎಂಬೀ ರೀತಿಯಲ್ಲಿ ಪುರುಷರಿಗೂ, ಸ್ತ್ರಿಯರಿಗೂ ಬೇರೆ ಬೇರೆ ಇರುವ ಶ್ರುತಿಗಳಲ್ಲಿ ನಿರ್ಮಿಸಲಾಗಿದೆ. ಆದರೆ ಪಖಾವಜಕ್ಕೆ ತಗ್ಗ್ ಎಂಬ ಒಂದೇ ಒಂದು ರೂಪವಿರುವುದು. ಅದ್ದರಿಂದ ದ್ರುಪದ್, ಧಮಾರ್, ಸಂಗೀತರೂಪಗಳನ್ನು ಸಾಧಾರಣ ಆಲಾಪಿಸುವುದು ಪುರುಷರಾಗಿದ್ದಾರೆ. ಪಖಾವಜದ ಬಲಕೈಯಲ್ಲಿ ಬಾರಿಸುವ ಭಾಗಕ್ಕೆ ದಯ, (ತಬಲ) ಎರಡೂ ಎಡಕೈಯಲ್ಲಿ ಬಾರಿಸುವ ಭಾಗಕ್ಕೆ **'ಬಾಯ'** ಎಂದು ಹೇಳುವರು. ಚರ್ಮದಿಂದ ಹೊದಿಸಿದ ಎರಡು ಭಾಗಗಳೂ.

ಪ್ರಧಾನ ಪ್ರತಿಭೆಗಳು

ಘನಶ್ಯಾಂ
ಪುರುಷೋತ್ತಮದಾಸ್
ಗಣೇಶ್ ಚತುರ್ವೇದಿ
ಇಮಾಂ ಬಕ್ಸ್‌ಚುಡಿಯ
ಕಾದಿರ್‌ಬಷ್

### ಸಂತೂರ್

ನೂರು ತಂತಿಗಳಿರುವ ವಾದ್ಯೋಪಕರಣವೆಂದು ಕರೆಯಲ್ಪಡುವ ಸಂತೂರ್ ಕಾಶ್ಮೀರಿ ಜಾನಪದ ನೃತ್ಯದಲ್ಲಿ ಉಪಯೋಗಿಸಲಾಗಿತ್ತು. ಅದನ್ನು ನವೀಕರಿಸಿ ಇಂದು ಕಾಣಲ್ಪಡುವ ರೂಪಕ್ಕೆ ತಲಪಿಸಿರುವುದು ಪಂಡಿತ್ ಶಿವಶಂಕರ್ ಶರ್ಮ ಆಗಿದ್ದಾರೆ. ಗೋಪುರದ ಮಾದರಿಯಲ್ಲಿರುವ ಈ ಉಪಕರಣಕ್ಕೆ ಶ್ರುತಿ ಹೆಚ್ಚಿಸಲು ಬಹಳ ಹೆಚ್ಚು ಸಮಯ

ಬೇಕಾಗಿರುತ್ತದೆ. ತಬಲೆಯು ಮುಖ್ಯವಾಗಿ

ಪೆಟ್ಟಿಗೆಯಲ್ಲಿ ಬಿಗಿಯಲ್ಪಟ್ಟ 25 **ಬ್ರಿಡ್ಜು**ಗಳಲ್ಲಾಗಿ 100 ಕ್ಕಿಂತ ಹೆಚ್ಚು ತಂತಿಗಳ ಎಡೆಗಳಲ್ಲಿ ಕೋಲಿನಂತಹ ದಂಡದಿಂದ ಬಡಿದು ವಿಶಿಷ್ಟವಾದ ನಾದವಿಸ್ಮಯವನ್ನು ಸೃಷ್ಟಿಸುವುದು.

ಪ್ರಸಿದ್ಧರದ ಸಂತೂರ್ ವಾದಕರು:
ಶಿವಕುಮಾರ್ ಶರ್ಮ

*ಸಾರಂಗಿ*

ಬಹಳ ಪುರಾತನವಾದ ಈ ಸಂಗೀತೋಪಕರಣದ ಉಪಯೋಗ ಇಂದೂ ಬಹಳಷ್ಟು ಪ್ರಾಧಾನ್ಯತೆಯೊಂದಿಗೆ ಸಂಗೀತ ಲೋಕದಲ್ಲಿ ಅಸ್ತಿತ್ವದಲ್ಲಿದೆ. ಮನುಷ್ಯ ಶಬ್ದದಲ್ಲಿ ಸೃಷ್ಟಿಸಬಹುದಾದ ಎಲ್ಲಾ ಸಂಗೀತ ಸವಿಶೇಷತೆಯ ಪ್ರಯೋಗಗಳನ್ನು ಈ ಉಪಕರಣದ ಮೂಲಕ ಪ್ರಕಟಿಸಲು ಸಾಧ್ಯ. ಘಟನಾತ್ಮಕವಾಗಿಯೂ ಆಕೃತಿಯಲ್ಲೂ ಇದರೊಂದಿಗೆ ಸಾಮ್ಯತೆ ಇರುವ **ದಿಲ್‌ರುಬಾ ಇಸ್ರೋಜ್‌ತಾವುಸ್** ಎಂಬೀ ಉಪಕರಣಗಳು ಬಿಲ್ಲಿನಿಂದಲೇ ಕಾರ್ಯವೆಸಗುವುದು ಆದರೂ ಸಾರಂಗಿಯಿಂದ ವ್ಯತ್ಯಸ್ತವಾಗಿ ಸಿಕಾರಿನಂತೆ ಇವುಗಳಲ್ಲಿ ಬಹಳಷ್ಟು ಮೆಟ್ಟಿಲುಗಳಿವೆ. ಸಾರಂಗಿಯಲ್ಲಿ **ಮೆಟ್ಟಿಲುಗಳ** ಹೊರತಾಗಿ ಘಟ್ಟಗಳನ್ನು ಘಟಿಸಲಾಗಿದೆ.

ಘಟ್ಟಗಳಲ್ಲಿ ಬಿಲ್ಲುಗಳು ಸ್ಪರ್ಶಿಸುವಾಗ ಅದರ ಮೇಲೆಯೂ ಕೆಳಗೆಯೂ ಸ್ಥಾಪಿಸಿದ ಬಹಳಷ್ಟು **ಅಣುರಣನೆಯ** ತಂತಿಗಳಿಂದ ತನ್ನದೇ ಆದ ನಾದ ವಿಶೇಷ ಅನಾಯಸ ಹೊರಹೊಮ್ಮುವುದು.

ಪ್ರಶಸ್ತರಾದ ಸಾರಂಗಿ ವಾದಕರು:
ಸುಲ್ತಾನ್ ಖಾನ್

*ಕೊಳಲು/ಬಾನ್ಸುರಿ*

ಭಾರತೀಯ ಸಂಗೀತದಲ್ಲಿ ತ್ಯಜಿಸಲಾಗದಂತಹ ಒಂದು ವಾದ್ಯೋಪಕರಣವಾಗಿದೆ ಕೊಳಲು. ಇದನ್ನೆ ಬಾನ್ಸುರಿ ಎಂದೂ ಕರೆಯುವರು.

ಸಾಧಾರಣ ಮೂರಡಿ ಉದ್ದವೂ ಒಳಭಾಗ ಟೊಳ್ಳಾಗಿಯೂ ಇದೆ. ವಾದಲಿರುವ ದ್ವಾರವಲ್ಲದೆ ಸ್ವರನಿಯಂತ್ರಣಕ್ಕಾಗಿ ಏಳು ದ್ವಾರಗಳಿವೆ. ಶ್ರುತಿ ವ್ಯತ್ಯಾಸಕ್ಕೆ ಬೇಕಾದ ಕೊಳಲು ಅಥವಾ ಬಾನ್ಸುರಿ ತೋರ ಮತ್ತು ಉದ್ದದಲ್ಲಿ ವ್ಯತ್ಯಾಸವಾಗಿರುವುದು. ಕೆಳಗಿನ ಶ್ರುತಿ ತೋರ ಮತ್ತು ಉದ್ದ ಹೆಚ್ಚಿದ್ದೂ ಮೇಲಿನ ಶ್ರುತಿಗೆ ತೋರ ಮತ್ತು ಉದ್ದ ಕಡಿಮೆಯಾದುದು ಆಗಿದೆ. ಸೋಳೋ ಕಛೇರಿಗಳಿಗೆ ಬಾನ್ಸುರಿ ಶ್ರೇಷ್ಟವಾದ ವಾದ್ಯವೆಂಬುದರಲ್ಲಿ ಅಭಿಪ್ರಾಯವ್ಯತ್ಯಾಸವಿಲ್ಲ.

ಪ್ರಸಿದ್ಧ ಕೊಳಲು ವಾದಕರು:
ಪಇಲಾಲ್ ಘೋಷ್
ಹರಿಪ್ರಸಾದ್ ಚೌರಸ್ಯ

*ಶಯನಾಯ್*

ಉತ್ತರ ಭಾರತದಲ್ಲಿ ವಿವಾಹ ಸಮಾರಂಭಗಳಿಗೆ ದೇವಸ್ಥಾನಗಳಲ್ಲಿನ ಹಾಡುಗಾರಿಕೆ ಕಾರ್ಯಕ್ರಮಗಳಿಗೂ ಶಯನಾಯ್ ವಾದ್ಯವಾದನವಿದೆ. ಒಂದು ತುದಿಯಲ್ಲಿ **ನಲಿ** ಎಂದು ಕರೆಯಲ್ಪಡುವ ಚೂಪಾದ ಭಾಗವು ಇನ್ನೊಂದು ತುದಿ **ಪ್ಯಾಲ** ಎಂದು ಕರೆಯಲ್ಪಡುವ ಉಗುಳು ಪಾತ್ರಿಯಂತಹ ಭಾಗವಿರುವ ಉದ್ದ ಕಡಿಮೆಯಾದ ಒಂದು ಕೊಳಲೆಯೂ ಶಯನಾಯ್. ಚೂಪಾದ ಭಾಗಕ್ಕೆ **ಪತ್ತೂರ್** ಎಂದೂ ಕರೆಯಲ್ಪಡುವ ಎರಡು ಹುಲ್ಲಿನ ಕೋಲುಗಳನ್ನು ಜೋಡಿಸಲಾಗಿದೆ. ಇದರ ಮೂಲಕ ಊದುವಾಗ ಹೊರಡುವ ನಾದವನ್ನು ಕೊಳಲಿನ ಮದ್ಯಭಾಗದಲ್ಲಿರುವ 7 ತೂತುಗಳ ಮೂಲಕ ಬೆರಳುಗಳನ್ನಾಡಿಸಿ ತೆರೆದು, ಮುಚ್ಚಿ ಸ್ವರಗಳನ್ನು ಹೊರಡಿಸಲಾಗುವುದು.

ಸೋಲೋ ವಾದ್ಯವಾಗಿ ಬಾರಿಸುವ ಶಯನಾಯ್‌ಗೆ ತಬಲ , ಘರ್‌ದಕ್, ಎಂಬೀ ವಾದ್ಯಗಳು ಸಹವಾದ್ಯಗಳಾಗಿರುವುದು. ಕರ್ನಾಟಕ ಸಂಗೀತದಲ್ಲಿನ ನಾಗಸ್ವರವಾಗಿ ರೂಪಸಾದೃಶವಿದ್ದರೂ ನಾಗಸ್ವರಕ್ಕಿಂತ ಸಪೂರವೂ ಮಾಧುರ್ಯವೂ ಆದ ನಾದವು ಇದರಿಂದ ಹೊರಬರುತ್ತದೆ. ಭಾರತರತ್ನ ಪುರಸ್ಕಾರ ಲಭಿಸಿದ ಉಸ್ತಾದ್ ಬಿಸ್‌ಮಿಲ್ಲಾಖಾನ್ ಶಯನಾಯ್ ವಾದನದ ಕಲಾವಿದರಾಗಿದ್ದರು.

ನಂದಲಾಲ್, ಗಣಪತ್ ರಾವ್, ವಸೀಕರ್, ಬಾಬುರಾವ್ ದೇವಾಲಂಕಾರ್, ಆಹಮ್ಮದ್ ಹುಸೈನ್ ಅಲಿ ಎಂಬಿವರು ಪ್ರಸಿದ್ಧರು.

ಭಾರತೀಯ ಸಂಗೀತವು ಪೌರಣಿಕ ಕಾಲದಿಂದಲೇ ವಾದ್ಯೋಪಕರಣಗಳ ನುಡಿಸುವಿಕೆಯಲ್ಲಿ ಗಮನಾರ್ಹ ಸಾಧನೆಮಾಡಿದೆ.

**ವಿಶ್ವ ಪ್ರಸಿದ್ಧ ರಾದ ಕೆಲವು ವಾದ್ಯಕಲಾಗಾರರ ಕುರಿತು ತಿಳಿಯುವುದು.**

*ಪಂಡಿತ್ ರವಿಶಂಕರ್*

ವಿಶ್ವ ಪ್ರಸಿದ್ಧ ಸಿತಾರ್ ವಾದಕರೂ ಕಂಪೋಸರೂ ಆದ ಇವರು ಹೈರುಘರಾನದ ಬಾಬ ಅಲ್ಲಾವುದ್ದೀನ್ ಖಾನ್‌ನ ಶಿಷ್ಯರಾಗಿದ್ದಾರೆ. ಬಂಗಾಳಿಯಾದ ರವಿಶಂಕರ್ ಜನಿಸಿದ್ದು ಬನಾರಸಿಯಲ್ಲಾಗಿತ್ತು. ಎಪ್ರಿಲ್ 7, 1920 ಗುರುಮುಖದ ಕಲಿಕೆಯನ್ನು 1944 ರಲ್ಲಿ ಮುಕ್ತಾಯಗೊಳಿಸಿದರು. ಅದನಂತರ ಮುಂಬೈ ತಲುಪಿದ ಅವರು ಎಚ್.ಎಂ.ವಿಯ ಭಾರತದ ಪ್ರತಿನಿಧಿಗಳೊಂದಿಗೆ ಸಂಘಟನೆ ಬೆಳೆಸಿದರು. 1946ರಲ್ಲಿ ಆಕಾಶವಾಣಿಯಲ್ಲಿ ಮ್ಯೂಸಿಕ್ ಡೈರೆಕ್ಟರಾದರು. 1956ರ ನಂತರ ಪಾಶ್ಚಾತ್ಯರಾಜ್ಯಗಳಲ್ಲೂ ಕಾರ್ಯಕ್ರಮ ನೀಡಲು ಆರಂಭಿಸಿದರು. ಅದರಲ್ಲಿ ಪ್ರಧಾನವಾದುದು ಮೊಂಚೆರಿಲೋವ್ ಫೆಸ್ಟಿವಲ್ ಹಾಲ್‌ನ ಪ್ರದರ್ಶನ . 1967ರಲ್ಲಿ ಈ ಹಾಲ್‌ನಲ್ಲಿ ನಡೆದ ಪೋಪ್‌ಫೆಸ್ಟಿವಲ್ ಉಸ್ತಾದ್ ಅಲ್ಲಾರಖರವರೊಂದಿಗೆ ಸೇರಿ ತನ್ನ ಸಿತಾರ್ ವಾದನವನ್ನು ಪ್ರಸ್ತುತಪಡಿಸಿದರು. ವಿಶ್ವ ಪ್ರಸಿದ್ಧರಾದ ವಯಲಿನಿಸ್ಟ್ ಯಹೂದಿ ಮೆನ್‌ಹೀನ್ ಪ್ಲೂಟಿಸ್ಟ್ ಆದ ಪೇರೇ ರಬಾಲ್, ಘುಕುಹಾಚಿ, ಕಡೋ ವಿದ್ವಾಂಸನಾದ ಮುಸುಮುಖಿ ಯಾಪಿ ಎಂಬಿವರೊಂದಿಗೆ ಸಂಗೀತಕೃತಿಗಳನ್ನು ರಚಿಸಿದರು. ಹಾಗೆ ವಿಶ್ವಪ್ರಸಿದ್ಧರಾದ ಇವರು ಗುರುವಾದ ಅಲಾವುದ್ದೀನ್ ಖಾನ್‌ನ ಮಗಳನ್ನು ವಿವಾಹಿತರಾದರು. ರವಿಶಂಕರರಿಗೆ ಶುಭೇಂದ್ರಶಂಕರ್ ಎಂಬ ಹೆಸರಲ್ಲಿ ಮಗ ಹುಟ್ಟಿದನು. ಪ್ರಪಂಚ ಕಂಡ ಅತ್ಯಂತ ವಿಶಿಷ್ಟವಾದ ಸೀತಾರ್‌ವಾದಕನು ರವಿಶಂಕರ್ ಎಂಬುದರಲ್ಲಿ ಎರಡು ಮಾತಿಲ್ಲ.

ಹೆಚ್ಚಿನ ವಿವರಕ್ಕಾಗಿ

ಎ.ಡಿ. ಮಾಧವನ್‌ರವರ ಹಿಂದುಸ್ಥಾನೀ ಸಂಗೀತ ಎಂಬ ಪುಸ್ತಕ ಡಿ.ಸಿ. ಬುಕ್ಸ್

*ಹರಿಪ್ರಸಾದ್ ಚೌರಸ್ಯ*

ಪಂಡಿತ್ ಹರಿಪ್ರಸಾದ್ ಚೌರಸ್ಯ ಎಂಬ ಲೋಕವಿಖ್ಯಾತನಾದ ಬಾನ್‌ಸುರಿ ವಾದಕನು ಜನಿಸಿದ್ದು ಸಂಗೀತ ಪಾರಂಪರ್ಯವಿಲ್ಲದ ಅಲಹಾಬಾದಿನ ಕುಟುಂಬದಲ್ಲಿ. ನಾಲ್ಕನೇ ವರ್ಷದಲ್ಲಿ ತಾಯಿ ತೀರಿಕೊಂಡರು. ತಂದೆ ಮಲ್ಲನಾಗಿದ್ದನು. ಸ್ವಲ್ಪ ಸಮಯ ತಂದೆಯೊಂದಿಗೆ ಕಳರಿಗೆ ಹೋದರು. ಅಲ್ಲಿಂದ ಲಭಿಸಿದ ಆರೋಗ್ಯ ತನ್ನ ಸಂಗೀತಜೀವನ ಮುಂದುವರಿಸಿಕೊಂಡು ಹೋಗಲು ಸಹಾಯಕವಾಗಿದೆ ಎಂಬುದನ್ನು ಅವರು ಮರೆಯಲಿಲ್ಲ. ಬಾನ್‌ಸುರಿಯ ಪಾರಂಪರ್ಯ ಶೈಲಿಯನ್ನು ಹಿಂಬಾಲಿಸಿದ ಚೌರಸ್ಯ ಅದರಲ್ಲಿ ನಿತ್ಯನೂತನವಾದ ಆಶಯಗಳು ಒಳಗೊಂಡ ಹಲವಾರು ಬದಲಾವಣೆಗಳನ್ನು ತಂದಿದಾರೆ. ಬಾನ್‌ಸುರಿಯಲ್ಲಿ ಅತ್ಯಂತ ಬ್ಯುಸಿಯಾಗಿರುವ ಅವರು ಭಾರತದಾದ್ಯಂತ 2001 ರಲ್ಲಿ ಲೋಕರಾಷ್ಟ್ರಗಳಲ್ಲಿನ ಹೆಚ್ಚಿನ ಸ್ಥಳಗಳಲ್ಲಿ ಸಂಚರಿಸಿ ಬಾನ್‌ಸುರಿ ಕಛೇರಿಗಳನ್ನು ನಡೆಸಿದರು. ಶಿವ್‌ಹರಿ ಎಂಬ ಹೆಸರಿನಲ್ಲಿ ಪಂಡಿತ್ ಶಿವಕುಮಾರ್ ಶರ್ಮ ಅವರೊಂದಿಗೆ ಸೇರಿ ಒಂದು ಸಂಘಟನೆಯನ್ನು ಹುಟ್ಟು ಹಾಕಿದರು. ಹೆಚ್ಚಿನ ಹಿಂದಿ ಚಲನಚಿತ್ರಗಳಲ್ಲಿ ಸಂಗೀತ ನಿರ್ದೇಶನ ಮಾಡಿದರು. ಫ್ಯೂಷನ್ ಸಂಗೀತದ ವಿದ್ವಾಂಸರಾದ ಶಕ್ತಿ ಅಂತಹವರೊಂದಿಗೆ ಸಹಕರಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ ನೆದರ್‌ಲೆಂಡ್‌ನ ರೊಡೋಡರ್‌ಡಾಂ ಮ್ಯೂಸಿಕ್ ಕನ್‌ಸರ್‌ವೇಟಿವ್‌ನ ವಿಶ್ವಸಂಗೀತ ವಿಭಾಗದ ಆರ್ಟ್ ಡಯರೆಕ್ಟರ್ ಆಗಿ ದುಡಿಯುತ್ತಿದ್ದಾರೆ.

ಮೊದಲಗುರು ನೆರೆಕರೆಯವರಾದ ಪಂಡಿತ್ ರಾಜರಾಂ. ಬಳಿಕ ವಾರಣಾಸಿಯ ಪಂಡಿತ್ ಬೋಲಾನಾಥ್ ಶಿಷ್ಯನಾಗಿ ಅಭ್ಯಸಿಸಿದರು.

ಲಭಿಸಿದ ಪ್ರಶಸ್ತಿಗಳು : ಸಂಗೀತ ನಾಟಕ ಆಕಾಡೆಮಿ ಅವಾರ್ಡ್, ಪದ್ಮಭೂಷಣ್, ಯಾಷ್ ಭಾರತೀಯ ಸನ್ಮಾನ, ಪದ್ಮವಿಭೂಷಣ್.

## ಜಕೀರ್ ಹುಸೈನ್

ವಿಶ್ವ ವಿಖ್ಯಾತ ತಬಲವಾದಕನೂ ತಾಳಮೇಳ ವಿದ್ವಾಂಸನೂ ಆದ ಉಸ್ತಾದ್ ಅಲ್ಲಾರಖ ರವರ ಸುಪುತ್ರನೂ ಇದೇ ಸಾಮರ್ಥ್ಯಗಳನ್ನು ಮೈಗೂಡಿಸಿಕೊಂಡಿರುವ ಉಸ್ತಾದ್ ಜಕೀರ್ ಹುಸೈನ್ ಮುಂಬೈಯಲ್ಲಿ ಜನಿಸಿದರು. ಮುಂಬೈ ಸೈಂಟ್ ಸೇವಿಯರ್ಸ್ ಕಾಲೇಜಿನ ಬಿರುದು ಕಲಿಕೆಯ ನಂತರ ತಂದೆಯಿಂದ ತಬಲ ವಾದನದ ತರಬೇತಿಯನ್ನು ಪಡೆದರು. 12 ವರ್ಷ ಪ್ರಾಯದಲ್ಲೇ ತಂದೆಯೊಂದಿಗೆ ಸಂಗೀತ ಮೆಹಫಿಲುಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದರು. 1970ರಲ್ಲಿ ಅಮೇರಿಕ ತಲುಪಿದ ನಂತರ ಅಲ್ಲಿಯೆ ಸಂಗೀತ ಅಭ್ಯಾಸ ಮುಂದುವರಿಸಿದರು. 1971ರಲ್ಲಿ ಶಾಂತಿ ಎಂಬ ಸಂಗೀತಬೇಂಡಲ್ಲಿ ಭಾಗವಹಿಸಿದರು. 1975ರಲ್ಲಿ ಜೋನ್ ಮೆಕ್ಲೋಗ್ಲೀನ್‌ನೊಂದಿಗೆ ಸೇರಿ ಶಕ್ತಿಯಲ್ಲೂ ದುಡಿದರು. ಆ ಸಂದರ್ಭದಲ್ಲಿ ತಂದೆಯೊಂದಿಗೆ ರೋಲಿಂಗ್ ಮ್ಯೂಸಿಕ್ ಎಂಬ ಆಲ್ಬಂ ಬಿಡುಗಡೆಗೊಳಿಸಿದರು. ಪದ್ಮಶ್ರೀ ಲಭಿಸಿದ ಅತ್ಯಂತ ಎಳೆಯ ವಯಸ್ಸಿನ ಕಲಾವಿದ ಎಂಬ ಬಿರುದು ಪಡೆದರು (1988ರಲ್ಲಿ). 1991ರಲ್ಲಿ ಸಂಗೀತ ಅಕಾಡಮಿ ಪ್ರಶಸ್ತಿಯೂ ಲಭಿಸಿತು.

1992ರಲ್ಲಿ ಜಕೀರ್ ಮ್ಯೂಸಿಕ್ ಡೈಯರೆಕ್ಟರ್ ಆಗಿ ಮಿಕಿ ಹೋರ್ಟುಂ, ಜಕೀರ್ ಹುಸೈನ್ ಸೇರಿಕೊಂಡು ಪ್ಲಾನೆಟ್‌ಡ್ರಂ ಎಂಬ ಆಲ್ಬಂಗೆ ಗ್ರಾಮಿ ಬಿರುದು ಲಭಿಸಿತು. ಮ್ಯೂಸಿಕೋಲಜಿಯಲ್ಲಿ ಡಾಕ್ಟರೇಟ್ ಪಡೆದ ಜಕೀರ್ ಹುಸೈನ್ ಪ್ರಿನ್‌ಸೆಸ್ಟನ್, ಸ್ಟಾನ್ ಪೋರ್ಡ್ ಯುನಿವರ್ಸಿಟಿಗಳಲ್ಲಿ ವಿಸಿಟಿಂಗ್ ಪ್ರೊಫೆಸರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಪಾಲಕ್ಕಾಡ್ ಮಣಿ ಅಯ್ಯರ್

ಮೃದಂಗ ವಾದನದಲ್ಲಿ ಶ್ರೇಷ್ಠ ಪ್ರಶಸ್ತಿ ಪಡೆದ ಮಣಿ ಅಯ್ಯರ್ ಪಾಲಕ್ಕಾಡಿನ ಸಮೀಪ ಪಯ್ಯನ್ನೂರ್ ಗ್ರಾಮದಲ್ಲಿ 1912 ಜೂನ್ 9 ರಂದು ಜನಿಸಿದರು. ಅವರ ಯಥಾರ್ಥ ಹೆಸರು ರಾಮಸ್ವಾಮಿ ಎಂದಾಗಿತ್ತು. ಮನೆಯಲ್ಲೂ ನೆರೆಕರೆಯಲ್ಲೂ ಮಣಿ ಎಂದು ಪ್ರೀತಿಯಿಂದ ಕರೆಯಲ್ಪಟ್ಟನು. ಬಾಲ್ಯದಲ್ಲಿಯೇ ಮೃದಂಗ ವಾದನದಲ್ಲಿ ಅಭಿರುಚಿ ತೋರಿಸಿದಾಗ ಅವರ ತಂದೆ ಭಾಗವತರ್ ಚಾತಪುರದಲ್ಲಿರುವ ಮೃದಂಗ ವಿದ್ವಾನರಾಗಿದ್ದ ಸುಬ್ಬಯ್ಯನವರ ಶಿಷ್ಯನಾಗಿ ಮೃದಂಗ ಅಭ್ಯಾಸಕ್ಕೆ ಸೇರಿಸಿದರು. ಪ್ರಾಥಮಿಕ ಶಿಕ್ಷಣದ ನಂತರ ಅಂದಿನ ಇನ್ನೊಬ್ಬ ಮೃದಂಗ ವಿದ್ವಾನರಾಗಿದ್ದ ವಿಶ್ವನಾಥ ಅಯ್ಯರ್‌ರಲ್ಲಿ ಶಿಷ್ಯನಾಗಿ ಅಭ್ಯಾಸಮಾಡಿದರು. ಇದರೊಂದಿಗೆ ಶಿವರಾಮಕೃಷ್ಣ ಭಾಗವತರ ಹರಿಕಥಾಪ್ರಸಂಗಕ್ಕೂ ಮೃದಂಗವಾದನಕ್ಕೆ ಬಾಲಕನಾದ ಮಣಿಗೆ ಅವಕಾಶ ಲಭಿಸಿತು. ಇದರ ನಂತರ ಎಣ್ಣಪ್ಪಾಡಂ ರಾಮಯ್ಯರ ಮತ್ತು ಮುಂಡಾಯ ರಾಮಭಾಗವತರ ಕಛೇರಿಗಳಲ್ಲಿ ಮೃದಂಗವಾದಕರಾಗಿ ಮೆಚ್ಚುಗೆ ಪಡೆದು ಸಂಗೀತ ಪ್ರೇಮಿಗಳ ಕಣ್ಮಣಿಯಾದರು. ಮಣಿಯ ವಾದನದಿಂದ ಆಕರ್ಷಿತನಾದ ಚೆಂಬೆ ವೈದ್ಯನಾಥ ಭಾಗವತರ್ 1924 ರಲ್ಲಿ ಮದರಾಸಿನ ಎಗ್‌ಮೋರಿನ ಜಗನ್ನಾಥ ಕ್ಷೇತ್ರ ಸಭೆಯಲ್ಲಿ ತನ್ನ ಒಂದು ಕಛೇರಿಗೆ ಮೃದಂಗ ವಾದಕನನ್ನಾಗಿ ಮಣಿಗೆ ಅವಕಾಶ ನೀಡಿದರು. ಮಣಿಯ ಮೃದಂಗವಾದನವನ್ನು ಚೆಂಬೈ ಆಕಾಶದೆತ್ತರಕ್ಕೆ ಹೊಗಳಿದರು ಮತ್ತು ಅಭಿನಂದಿಸಿದರು.

ಮಣಿ ಅಯ್ಯರ್ ತನ್ನ 15 ನೇ ವಯಸ್ಸಿನಲ್ಲಿ ತಂಜಾವೂರಿನಲ್ಲಿ ಒಂದು ಕಛೇರಿಗೆ ಹೋದಾಗ ಮೃದಂಗಾಚಾರ್ಯರಾದ ಮೈಸೂರು ವೈದ್ಯನಾಥಯ್ಯರನ್ನು ಕಂಡು ಶಿಷ್ಯನಾದರು. ಮೃದಂಗ ವಾದನದಲ್ಲಿ ಹೆಚ್ಚಿನ ಅಬ್ಯಾಸ ಅಲ್ಲಿಂದ ಲಭಿಸಿತು. ಮೃದಂಗ ವಾದನದಲ್ಲಿ ಅಪೂರ್ವ ಶೈಲಿ ಸೃಷ್ಟಿಸಿ ಪಾಲಕ್ಕಾಡ್ ಮಣಿಶೈಲಿ ಎಂಬ ವಿಶೇಷಣ ಲಭಿಸಿತು. ಈ ಶೈಲಿಯಲ್ಲಿ ಆಕರ್ಷಿತರಾದ ಹೆಚ್ಚಿನ ಯುವಕಲಾವಿದರು ಮಣಿ ಅಯ್ಯರ್‌ರ ಕೈ ಕೆಳಗೆ ಮೃದಂಗ ತರಬೇತಿ ಪಡೆದಿದ್ದಾರೆ.

ಪ್ರಪಂಚವಿಡೀ ಕಛೇರಿಗಳಲ್ಲಿ ಮೃದಂಗ ವಾದಕರಾಗಿ ಸೇವೆ ಸಲ್ಲಿಸಿದ ಅವರು ಇತರ ಕಲಾವಿದರೊಂದಿಗೆ ಎಂದೂ ಭಕ್ತ್ಯಾದರಗಳಿಂದ ಮಾತ್ರವೇ ವ್ಯವಹರಿಸುತ್ತಿದ್ದರು.

### ಟಿ.ಎನ್. ಕೃಷ್ಣನ್

ವಯಲಿನ್ ವಾದನದ ತತ್ವ ಸರಿಯಾಗಿ ಅರ್ಥೈಸಿಕೊಂಡು ಅದನ್ನು ಕರ್ನಾಟಕ ಸಂಗೀತಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಪ್ರಾಯೋಗಿಕವಾಗಿ ಕಾರ್ಯಗತಗೊಳಿಸುವುದರಲ್ಲಿ ಪ್ರಧಾನ ಕಾರಣಕಾರ ಬಾಲಸ್ವಾಮಿ ದೀಕ್ಷಿತರೇ ಅಗಿದ್ದಾರೆ. ಒಂದು ಸಹ ವಾದ್ಯವೆಂಬ ರೀತಿ ವಯಲಿನ್‌ಗೆ ಮಾನ್ಯತೆ ಲಭಿಸುವುದು 19 ನೇ ಶತಮಾನದ ಉತ್ತರಾರ್ಧದಲ್ಲಾಗಿದೆ. ಈ ಕಾಲಘಟ್ಟದಲ್ಲಿ ವಯಲಿನ್ ವಾದನದಲ್ಲಿ ಪ್ರಶಕ್ತರಾದವರಲ್ಲಿ ತಿರುಕೋಡಿಕಾವಲ್ ಕೃಷ್ಣಯ್ಯರ್ ಪ್ರಮುಖರಾಗಿದ್ದಾರೆ. ಇವರು ವಯಲಿನ್‌ನಲ್ಲಿ ಶ್ರುತಿ ಸೇರಿಸುವ ಸಂಪ್ರದಾಯಕ್ಕೆ ಸಮಗ್ರ ಬದಲಾವಣೆ ತಂದರು. ಅವರಂತೆಯೇ ವಯಲಿನ್ ವಾದನದಲ್ಲಿ ತಾಂತ್ರಿಕ ಜ್ಞಾನ ಮತ್ತು ನಿಯಮಾನುಸಾರ ಶಿಸ್ತಿನಿಂದ ತರಬೇತಿ ಪಡೆದ ಇನ್ನಿತರರು ಆ ಕಾಲಘಟ್ಟದಲ್ಲಿದ್ದರು. ಅವರಲ್ಲಿ ವಡಿವೇಲು ದೇವುಡು ಸಹೋದರರು ಪ್ರಮುಖರಾಗಿದ್ದಾರೆ. ನಂತರ ವಯಲಿನ್ ವಾದನಕ್ಕುಂಟಾದ ಪ್ರಚಾರ ಅತ್ಯದ್ಭುತವಾಗಿದೆ. ಈ ಅವಧಿಯಲ್ಲಿ ವಯಲಿನ್ ವಾದನದಲ್ಲಿ ಅಂತಸ್ತು ಮತ್ತು ಅತ್ಯುನ್ನತ ಸ್ಥಾನವನ್ನು ಪಡೆದವರಲ್ಲಿ ದ್ವಾರವೆಂಕಟಸ್ವಾಮಿ ನಾಯ್ಡು, ಮೈಸೂರು ಚೌಡಯ್ಯ, ಕುಂಬಕೋಣ ರಾಜಮಾಣಿಕ್ಯಂ ಪಿಳ್ಳೆ, ಎಂಬಿವರು ಪ್ರಸಿದ್ಧರಾಗಿದ್ದಾರೆ. ಈಗ ಜೀವಿಸಿರುವ ಟಿ.ಎನ್. ಕೃಷ್ಣನ್, ಲಾಲ್‌ಗುಡಿ ಜಯರಾಮನ್, ಎಂ.ಎಸ್. ಗೋಪಾಲಕೃಷ್ಣನ್, ಎಂ. ಚಂದ್ರಶೇಖರ್, ವಿ.ವಿ. ಸುಬ್ರಹ್ಮಣ್ಯನ್ ಎಂಬವರಲ್ಲಿ ಟಿ.ಎನ್. ಕೃಷ್ಣನ್ ಪ್ರಮುಖರಾಗಿದ್ದಾರೆ. ಅವರು ಪರವೂರ್ ಅಮ್ಮಿಣಿಯಮ್ಮಾಳ್‌ರ ಮತ್ತು ನಾರಾಯಣ ಅಯ್ಯರ್‌ರ ಮಗನಾಗಿ 1928 ಒಕ್ಟೋಬರ್ 6 ಕ್ಕೆ ಜನಿಸಿದರು. ತಂದೆಯಿಂದ ವಯಲಿನ್ ಶಿಕ್ಷಣ ಆರಂಭಿಸಿದರು. ಬಾಲ್ಯದಲ್ಲಿಯೇ ಅಸಾಮಾನ್ಯವಾದ ಸಂಗೀತಪ್ರತಿಭೆ ಅವರಲ್ಲಿತ್ತು. ನಾರಾಯಣ ಅಯ್ಯರ್ ಅಶಿಸ್ತನ್ನು ಎಂದಿಗೂ ಅಂಗೀಕರಿಸದ ವ್ಯಕ್ತಿಯಾಗಿದ್ದರು. ತನ್ನೊಂದಿಗೆ ಬಾಲಕನಾದ ಕೃಷ್ಣನು ವಿದ್ಯಾಭ್ಯಾಸದೊಂದಿಗೆ ಗಂಟೆಗಳ ಕಾಲ ವಯಲಿನ್ ಸಾಧನೆ ಮಾಡಲು ನಿರ್ಬಂಧಿತರಾಗಿದ್ದನು. 8ನೇ ವರ್ಷದಲ್ಲಿ ಪ್ರಥಮ ಕಛೇರಿ ತೃಪಣಿತ್ತೂರಿನಲ್ಲಿ ನಡೆಯಿತು. 9 ನೇ ವರ್ಷದಲ್ಲಿ ಚೇಂಬೇ ವೈದ್ಯನಾಥ ಅಯ್ಯರವರ ಕಛೇರಿಗೆ ವಯಲಿನ್ ವಾದಕರಾಗಿ ಸಹಕರಿಸಿದರು. ಇದರಿಂದ ಮಾಸ್ಟರ್ ಕೃಷ್ಣನ್ ಎಂಬ ಹೆಸರಲ್ಲಿ ಪ್ರಸಿದ್ಧರಾದರು.

**ಹೆಚ್ಚಿನ ವಿವರಗಳಿಗಾಗಿ**

ಸೌತ್ ಇಂಡಿಯನ್ ಮ್ಯೂಸಿಕ್ – 1–6.

ಸಂಗೀತ ಶಾಸ್ತ್ರ ಪ್ರವೇಶಿಕ – ಶ್ರೀ ವೆಂಕಟ ಸುಬ್ರಹ್ಮಣ್ಯ ಅಯ್ಯರ್

ದಕ್ಷಿಣೇಂಡ್ಯನ್ ಸಂಗೀತ – ಕೆ.ಟಿ. ತರವೀಂದ್ರನಾಥ್
ಕರ್ನಾಟಕ ಸಂಗೀತ ಚರಿತ್ರ – ಎ.ಕೆ. ರವೀಂದ್ರನಾಥ್

### ಮೌಲ್ಯಮಾಪನ

- ವಾದ್ಯವಾದನಗಳನ್ನು ಗುರುತಿಸುವುದು.
- ವಿವರ ಸಂಗ್ರಹ
- ಪ್ರತಿಕ್ರಿಯೆ.
- ಆಸ್ವಾದನೆ.

### ಹೆಚ್ಚಿನ ಚಟುವಟಿಕೆಗಳು

- ಭಾರತೀಯ ಸಂಗೀತ ವಾದ್ಯವಾದನ ಪ್ರತಿಭೆದಳ ಕುರಿತಾದ ವಿವರ ಸಂಗ್ರಹ.

### Assignment

- ವಿವಿಧ ವಾದ್ಯೋಪಕರಣಗಳ ಚಿತ್ರಗಳ ಸಂಗ್ರಹ.
- ವರ್ಗೀಕರಿಸುವುದು.
- ವಾದ್ಯೋಪಕರಣ, ವಾದ್ಯವಾದಕರ ಮಾಹಿತಿ ಸಂಗ್ರಹ.

### ಕ್ರೋಢೀಕರಣ

- ಭಾರತೀಯ ಸಂಗೀತ ಸಂಪ್ರದಾಯಗಳು ಸಮೃದ್ಧವಾಗುವುದು ಅನೇಕ ಸಂಗೀತ ಮಹಾನುಭಾವರುಗಳ ವಿಶಿಷ್ಟ ಕೊಡುಗೆಗಳನ್ನು ಸ್ವೀಕರಿಸಿಯೆ ಆಗಿದೆ. ಭಾರತೀಯ ವಾದ್ಯೋಪಕರಣಗಳ ವೈವಿಧ್ಯತೆ ಮತ್ತು ಅವುಗಳ ವಿಶೇಷತೆಗಳು ಲೋಕಸಂಗೀತ ಚರಿತ್ರೆಯಲ್ಲಿ ಯಾವಗಳೂ ಉನ್ನತ ಶ್ರೇಣಿಯಲ್ಲಿ ಸ್ಥಿರಪ್ರತಿಷ್ಠೆಗಳಿಸಿರುವುದು. ಹೆಚ್ಚಿನ ವಾದ್ಯಕಲಾವಿದರನ್ನು ಪ್ರಪಂಚಕ್ಕೆ ನೀಡಿದ ನಮ್ಮ ಭಾರತೀಯ ವಾದ್ಯ ಸಂಪ್ರದಾಯಗಳು ಮತ್ತು ಅದರ ಕಲಾಪ್ರತಿಭೆಗಳನ್ನು ಗುರುತಿಸಿ ತಯಾರಿಸಿದ ಪಾಠಭಾಗಗಳು ಎಲ್ಲಾ ಸಂಗೀತಾಸ್ವದಕರಿಗೂ ಮಹತ್ವಪೂರ್ಣವಾಗಿದೆ.

## ಯೂನಿಟ್ 4

ಭಾರತೀಯ ಸಂಗೀತವು ಹಾಡುಗಾರಿಕೆಯಿಂದಲೂ ವಾದ್ಯೋಪಕರಣಗಳ ವೈವಿಧ್ಯತೆಯಿಂದಲೂ ಹೆಚ್ಚಿನ ವೈವಿಧ್ಯತೆಯನ್ನು ಒಳಗೊಂಡ ಸಂಗೀತರೂಪಗಳಿಂದಲೂ ಅನುಗ್ರಹೀತವಾಗಿದೆ. ಭಾರತೀಯ ಸಂಗೀತದಲ್ಲಿನ ಅತಿಪ್ರಧಾನ ಶಾಖೆಯಾದ ಹಿಂದುಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತವು ಹೆಚ್ಚಿನ ಪ್ರತಿಭೆಗಳ ಸೃಜನಾತ್ಮಕ ಸೃಷ್ಟಿಗಳಿಂದಲೂ, ಪ್ರದರ್ಶನಗಳಿಂದಲೂ ಸಂಪತ್‌ಭರಿತವಾಗಿದೆ. ಎರಡು ಶಾಖೆಗಳನ್ನು ಜನಹೃದಯಗಳಿಗೆ ತಲಪಿಸಲು ಪ್ರಯತ್ನಿಸಿದ ಹಲವಾರು ಸಂಗೀತ ಪ್ರತಿಭೆಗಳ ಪ್ರಯತ್ನಗಳನ್ನು ಮತ್ತು ಕೊಡುಗೆಗಳನ್ನು ಮುಂದಿನ ಜನಾಂಗವು ಮಹತ್ವಪೂರ್ಣವಾಗಿ ಸ್ಮರಿಸಬೇಕಾಗಿದೆ.

## ಆಶಯ

ಕರ್ನಾಟಕ ಹಿಂದೂಸ್ಥಾನಿ ಸಂಗೀತದ ಮಹಾನ್ ವ್ಯಕ್ತಿಗಳ ಜೀವನ ಮತ್ತು ಸಂಗೀತ ಕೊಡುಗೆಗಳನ್ನು ಈ ಯೂನಿಟ್‌ನಲ್ಲಿ ನೀಡಲಾಗಿದೆ.

## ಕಲಿಕಾ ಸಾಧನೆ

- ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಸಂಗೀತ ಕ್ಷೇತ್ರಗಳಲ್ಲಿ ಪ್ರಖ್ಯಾತರಾದ ಸಂಗೀತಜ್ಞರ ಕುರಿತು ತಿಳಿಯುವುದು.

## ಆಶಯ, ತಿಳುವಳಿಕೆ.

- ಭಾರತದಲ್ಲಿ ಪ್ರಧಾನವಾದ ಎರಡು ಸಂಗೀತ ಸರಣಿಗಳಿವೆ.
- ಈ ಎರಡು ಶಾಖೆಗಳಲ್ಲಿ ಹಲವು ಸಂಗೀತಜ್ಞರು ಹಲವು ಕಾಲಗಳಲ್ಲಾಗಿ ಜೀವಿಸಿದ್ದಾರೆ.
- ಇವರ ಕೊಡುಗೆಗಳು ಈ ಶಾಖೆಗಳನ್ನು ಹೆಚ್ಚು ಶಕ್ತೀಕರಿಸಿದೆ.
- ಸಂಗೀತಜ್ಞರ ಕುರಿತು ತಿಳುವಳಿಕೆ ಗಳಿಸುವುದು.

## ಪ್ರಕ್ರಿಯೆ

- ಅಧಿಕೃತ ಗ್ರಂಥಗಳಿಂದ ಮತ್ತು ಐ.ಸಿ.ಟಿ ಸಾಧ್ಯತೆಗಳಿಂದ ತಿಳುವಳಿಕೆ ಪಡೆಯುವುದು.
- ಟಿಪ್ಪಣಿಗಳನ್ನು ತಯಾರಿಸಿ ಮಂಡಿಸುವುದು.

## ಮೌಲ್ಯಮಾಪನ

- ಸಂಶೋಧನೆಯ ಮೌಲ್ಯಮಾಪನ
- ಟಿಪ್ಪಣಿಗಳು

## ಕಲಿಕಾ ಚಟುವಟಿಕೆಗಳು

### *ಚಟುವಟಿಕೆ 1*

- ಹಿಂದೂಸ್ಥಾನಿ – ಕರ್ನಾಟಕ ಸಂಗೀತದ ಕೃತಿಗಳನ್ನು ಆಲಿಸಲು ಅವಕಾಶ. ಹಿಂದೂಸ್ಥಾನಿ – ಖಲಾಲ್, ಭಜನೆ, **ಬಂಧಷ್**, ಗಜಲ್, ತರಾನ, ರುಮ್ರಿ, ಟಪ್ಪ, ಭದ್ರ. ಕರ್ನಾಟಕ – ಕೃತಿ, ಕೀರ್ತನೆ, ಪದ, ಜಾವಳಿ.
- ಕೇಳಿದ ಸಂಗೀತರೂಪದ ವಿಶೇಷತೆಗಳನ್ನು ಮೌಲ್ಯನಿರ್ಣಯ ಮಾಡುವುದು.

  **ಸೂಚಕಗಳು**
  - ಶೈಲಿ
  - ವ್ಯತ್ಯಾಸಗಳು
  - ಸಾಮ್ಯತೆಗಳು

### *ಚಟುವಟಿಕೆ 2*

- ಸಂಗೀತಪ್ರತಿಭೆಗಳು, ಮಂಡಲ, ಕೊಡುಗೆಗಳು ಇವುಗಳ ಕುರಿತು ತಖ್ತೆಯಲ್ಲಿ ಬರೆಯುವುದು.
- ಹಿಂದೂಸ್ಥಾನೀ ಸಂಗೀತ, ಸಂಗೀತಪ್ರತಿಭೆಗಳು, ಸಂಗೀತ ಚರಿತ್ರೆ.

### ಅಮೀರ್ ಖುಸ್ರು (1253–1326)

ವಿಖ್ಯಾತ ಪರ್ಷಿಯನ್ ಕವಿ, ಸಂಗೀತಜ್ಞ, ತತ್ವಜ್ಞಾನಿ, ಭಾಷಾ ಪಂಡಿತ ಎಂಬೀ ಸ್ಥಾನಗಳಲ್ಲಿ ಪ್ರಖ್ಯಾತನಾಗಿದ್ದನು. ದ್ರುಪದ್ ಎಂಬ ಪ್ರಾಚೀನ ಹಿಂದೂಸ್ಥಾನಿ ಸಂಗೀತರೂಪಕ್ಕೆ ಪರ್ಷಿಯನ್ ರಾಗ ಮತ್ತು ತಾಳಗಳನ್ನು ಒಟ್ಟುಸೇರಿಸಿ ಖವ್ವಾಲಿ ಎಂಬ ಗಾನ ರೂಪ ಸೃಷ್ಠಿಸಿದರು. ಸಂಗೀತೋಪಕರಣಗಳಾದ ಸಿತಾರ್, ತಬಲಗಳು ಹಿಂದೂಸ್ಥಾನಿ ಸಂಗೀತಕ್ಕೆ ಹೆಚ್ಚು ಯೋಗ್ಯವೆಂದು ಕಂಡುಕೊಂಡು ಪ್ರಚಾರಪಡಿಸಿದರು. ಹೆಚ್ಚಿನ ರಾಗ, ತಾಳ, ಬಂದಿಷ, ಗಜಲುಗಳು ಎಂಬಿವುಗಳ ಸೃಷ್ಠಿಕರ್ತರಾಗಿದ್ದರು. ಹಿಂದೂಸ್ಥಾನಿ ಸಂಗೀತದ ಪಿತಾಮಹ ಎಂಬ ಹೆಸರಿಗೆ ಇವರು ಅರ್ಹರು.

### ಸ್ವಾಮಿ ಹರಿದಾಸ್ (1480–1575)

ಸಂಗೀತಜ್ಞನೂ ಆದ ಸ್ವಾಮಿ ಹರಿದಾಸ್ ಧ್ರುಪದ್ ಎಂಬ ಸಂಗೀತರೂಪದ ಸೃಷ್ಠಿಕರ್ತನೆಂದು ತಿಳಿಯಲ್ಪಡುತ್ತಾರೆ. ಅಕ್ಬರ್ ನ ಸಭೆಯಲ್ಲಿನ ಸಂಗೀತನಾದ ತಾನ್‌ಸೇನ್‌ನ ಗುರು ಸ್ವಾಮಿ ಹರಿದಾಸ್ ಆಗಿದ್ದಾರೆ.

### ತಾನ್‌ಸನ್ (1535- 1592)

ಧ್ರುಪದ್ ಎಂಬ ಸಂಗೀತಶೈಲಿಯ ಹಾಡುಗಾರರು ಉತ್ತಮ ಗಾಯಕರೂ ಅಕ್ಬರ್‌ನ ಆಸ್ಥಾನ ಪಂಡಿತರ ಆಸ್ಥಾನ ಗಾಯಕರೂ ಹೌದು. ಸುಪಿ ಸಂಗೀತದಲ್ಲಿ ಅಸಾಮಾನ್ಯ ಪ್ರತಿಭೆ. ಪ್ರಸಿದ್ಧವಾದ ದರ್‌ವಾರಿ, ಕನ್ನಡ, ಮೀಯಾನ್ ಕೀ ಮಲ್‌ಹಾರ್ ಮೀಯಾನ್ ಕೀ ತೋಡಿ ಎಂಬಿವುಗಳ ರಚನೆಕಾರರಾಗಿದ್ದಾರೆ. ದೀಪಕ್ ರಾಗ ಹಾಡಿ ದೀಪವನ್ನು ಬೆಳಗಿಸಿ ಅತ್ಯಮೂಲ್ಯ ಗಾಯಕರಾಗಿದ್ದಾರೆಂದ ತಾನ್‌ಸೇನ್‌ರನ್ನು ಸಂಗೀತ ಚರಿತ್ರೆಗಾರರು ಕೊಂಡಾಡುತ್ತಾರೆ.

### ವಿಷ್ಣು ದಿಗಂಬರ್ ಪುಲಸ್ಕರ್ (1872–1931)

1872 ರಲ್ಲಿ ಕುರುಂದ್ವಾದಿಯಲ್ಲಿ ಜನಿಸಿದರು. ತಂದೆ ಹರಿಕಥಾ ಕಲಾವಿದ ರಾಗಿದ್ದರು. ಬಾಲ್ಯದಲ್ಲಿ ಸಂಭವಿಸಿದ ಒಂದು ಅಪಘಾತದಲ್ಲಿ ಎರಡೂ ಕಣ್ಣುಗಳನ್ನು ಕಳೆದುಕೊಂಡ ಇವರು ಪೂರ್ಣ ಸಂಗೀತ ಆಸ್ವಾದಕರಾದರು. ದಿಗಂಬರರ ಭಕ್ತಿಗಗೀತೆಗಳನ್ನು ಕೇಳಿ ಸಂತುಷ್ಟನಾದ ಮೀರಜ್‌ನ ಅಸ್ಥಾನ ವೈದ್ಯರಾದ ಭಟ್‌ಬಡೆ ದಿಗಂಬರರಲ್ಲಿ ಶ್ರೇಷ್ಠ ಸಂಗೀತಜ್ಞನಿದ್ದಾನೆ ಎಂದು ಅರ್ಥೈಸಿಕೊಂಡು ವಿಷಯವನ್ನು ರಾಜನಿಗೆ ತಿಳಿಸಿದರು. ದಿಗಂಬರ್‌ರ ಆಲಾಪನ ವೈಶಿಷ್ಟ್ಯವನ್ನೂ ತಿಳಿದುಕೊಂಡು ಅರಸನು ಆ ಕಾಲಘಟ್ಟದಲ್ಲಿ ಮಹಾರಾಷ್ಟ್ರದಲ್ಲಿ ಪ್ರಸಿದ್ಧರಾಗಿದ್ದ ಬಾಲಕೃಷ್ಣ ಬುವ ಇಚಲ್‌ಕರಂಜಿತ್‌ಕರ್ ಕೈಕೆಳಗೆ ಸಂಗೀತ ಅಭ್ಯಸಿಸಲು ಅವಕಾಶ ಒದಗಿಸಿ ಕೊಟ್ಟರು. ಸಂಗೀತಾಭ್ಯಾಸದ ಬಳಿಕ ತನ್ನ ಚಿರಕಾಲ ಸ್ವಪ್ನವಾದ ಗಂದರ್ವ ಸಂಗೀತ ಮಹಾವಿದ್ಯಾಲಯವನ್ನು 1901 ರಲ್ಲಿ ಲಾಹೋರಿನಲ್ಲಿ ಸ್ಥಾಪಿಸಿದರು. ಪೂರ್ಣ ಜನಪರವಾದ ರೀತಿಯಲ್ಲಿ ಕಟ್ಟಿಸಿದ ಈ ಸಂಗೀತವಿದ್ಯಾಲವು ಬಳಿಕ ಬಹಳ ಪ್ರಸಿದ್ಧಿಯನ್ನು ಪಡೆಯಿತು. 1908ರಲ್ಲಿ ಗಂಧರ್ವ ಸಂಗೀತ ಮಹಾವಿದ್ಯಾಲಯದ ಒಂದು ಶಾಖೆಯನ್ನು ಮುಂಬೈಯಲ್ಲೂ ಸ್ಥಾಪಿಸಿದರು. ಹಲವಾರು ಶಿಷ್ಯಸಂಪತ್ತಿನ ಒಡೆಯನಾದ ಇವರು ಹಲವಾರು ಕಛೇರಿಗಳನ್ನು ದೇಶದೆಲ್ಲೆಡೆ ನಡೆಸಿಕೊಂಡು ಬಂದಿದ್ದಾರೆ. ಸಂಗೀತಕ್ಕಾಗಿ ತನ್ನ ಜೀವನವನ್ನೇ ಪೂರ್ಣವಾಗಿ ತ್ಯಾಗ ಮಾಡಿದ ಮಹಾಪ್ರತಿಭೆಯಾಗಿದ್ದಾರೆ ಪುಲಸ್ಕರ್. ಇವರ ಮಗ ದತ್ತಾತ್ರೇಯ ಸಂಪೂರ್ಣ ತಜ್ಞನಾಗಬೇಕಾದವರು, ಆಕಾಲದಲ್ಲಿ ಮೃತ್ಯುವಿನ ಕೈವಶವಾದರು. ಸಂಗೀತದೊಂದಿಗೆ ಅವರ ಒಡನಾಟ ಎಷ್ಟರಮಟ್ಟಿಗೆ

ಇತ್ತೆಂಬುದನ್ನು ತಿಳಿಯಲು ರಘುಪತಿರಾಘವ ರಾಜರಾಂ ಎಂಬ ಭಜನೆ ಮಾತ್ರ ಸಾಕು. ಭಾರತದ ದೇಶಿಯಗೀತೆಯಾದ ವಂದೇ ಮಾತರಂ ಕ್ರಮೀಕರಿಸಿದುದು ಇವರೇ ಆಗಿದ್ದಾರೆ. ಆಸ್ವಾದಕಹೃದಯಗಳಲ್ಲಿ ಅತೀ ಬೇಗನೆ ಸ್ಥಾನ ಪಡೆದ ಸಂಗೀತ ರಚನೆಗಳನ್ನು ಕೊಡುಗೆಯಾಗಿ ನೀಡಿದ ಈ ಮಹಾಪ್ರತಿಭೆಯ ಸಂಗೀತ ಸೃಷ್ಟಿ ವೈಭವವು ಅತುಲ್ಯವೂ ಅಮೂಲ್ಯವೂ ಆಗಿದೆ. 1931 ರಲ್ಲಿ ಇವರು ಇಹಲೋಕ ತ್ಯಜಿಸಿದರು.

*ವಿಷ್ಣು ನಾರಾಯಣ್ ಭಟ್ಕಂಡೆ (1860–1936)*

ಹಿಂದುಸ್ಥಾನಿ ಸಂಗೀತ ನವೋತ್ಥಾನ ನಾಯಕರಲ್ಲಿ ಪ್ರಮುಖರಾಗಿದ್ದಾರೆ. ಮುಂಬೈಯ ಭಾಲ್‍ಕೇಶ್ವರಿ ಮರಾಠಿ ಕುಟುಂಬದಲ್ಲಿ ಜನಿಸಿದರು. ಕಾನೂನು ಬಿರುದುದಾರಿ (ಎಲ್.ಎಲ್.ಬಿ)ಯಾದ ಇವರು ಸ್ವಲ್ಪ ಸಮಯ ವಕೀಲರಾಗಿ ಸೇವೆ ಸಲ್ಲಿಸಿರುವರು. ಸಿತಾರ್‌ನಲ್ಲಿ ಸಂಗೀತ ತರಬೇತಿಯನ್ನು ಪಡೆದ ಇವರು ಬಳಿಕ ಧ್ರುಪದ್ ಸಂಗೀತ ಅಭ್ಯಾಸ ಮಾಡಿ ಸಂಗೀತಕ್ಕಾಗಿ ಜೀವನವನ್ನು ತ್ಯಾಗ ಮಾಡಿದರು. ಸಂಗೀತದಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಗಾಗಿ ಸಂಶೋಧನೆ ನಡೆಸಲು ದೇಶದೆಲ್ಲೆಡೆ ಸಂಚರಿಸಿ ಹಲವಾರು ಸಂಗೀತ ಪಂಡಿತರೊಂದಿಗೆ ನಿರಂತರ ಚರ್ಚೆಗಳಲ್ಲಿ ಭಾಗವಹಿಸಿದ ಇವರು ಹಿಂದೂಸ್ಥಾನಿ ಸಂಗೀತದಲ್ಲಿ ಈ ಮೊದಲು ಅಸ್ತಿತ್ವದಲ್ಲಿದ್ದ ರಾಗರಾಗಿಣಿ ಸಂಪ್ರದಾಯಗಳನ್ನು ಬದಲಾಯಿಸಿ ಪ್ರಸ್ತುತ ಅಸ್ತಿತ್ವದಲ್ಲಿರುವ ಕ್ರಮ ಸ್ವರ ಪೂರ್ಣತೆಯಲ್ಲಿರುವ ಹತ್ತು ಹಾಡುಗಳಲ್ಲಾಗಿ ಅಸ್ತಿತ್ವದಲ್ಲಿದ್ದ ಜನ್ಯರಾಗಗಳನ್ನು ಕ್ರಮೀಕರಿಸಿದರು.

1910 ಮತ್ತು 1920 ರ ಮಧ್ಯದಲ್ಲಿ ಸಂಗೀತಾಸ್ವದಕರಿಗೂ, ವಿದ್ಯಾರ್ಥಿಗಳಿಗೂ ಬಹಳ ಹೆಚ್ಚು ಪ್ರಯೋಜನಕಾರಿಯಾದ 18 ರಷ್ಟು ಸಂಗೀತ ಗ್ರಂಥಗಳನ್ನು ರಚಿಸಿದರು. ಸಂಗೀತವನ್ನು ಶಿಸ್ತುಬದ್ಧವಾಗಿ ಕಲಿಸುವುದಕ್ಕಾಗಿ ಸೌಕರ್ಯ ಒದಗಿಸಿ ಕೊಡುವ ನಿಟ್ಟಿನಲ್ಲಿ ಅವರು 1916 ರಲ್ಲಿ ಬರೋಡ ಸ್ಕೂಲ್ ಆಫ್ ಮ್ಯೂಸಿಕ್ ಪುನ: ಸಂಘಟಿಸಿದರು. ಗ್ವಾಲಿಯಾರ್ ಮಹಾರಾಜರ ಸಹಾಯದೊಂದಿಗೆ ಗ್ವಾಲಿಯರ್‌ನಲ್ಲಿ ಮಾಧವ್ ಮ್ಯೂಸಿಕ್ ಕಾಲೇಜ್ ಆರಂಭಿಸಿ ಕಾರ್ಯೋನ್ಮುಖಗೊಳಿಸಿದರು. 1926 ರಲ್ಲಿ ಲಕ್ನೋವಿನಲ್ಲಿ ರಾಯ್ ಉಮಾನಾಥ್ ಬಾಲಿ ಮೊದಲಾದ ಮಾರಿಸ್ ಕಾಲೇಜ್ ಆಫ್ ಮ್ಯೂಸಿಕ್ ಎಂಬ ಸಂಗೀತ ಕಾಲೇಜಿಗಾಗಿ ಕೋರ್ಸ್ ಮೆಟೀರಿಯಲ್ ತಯಾರಿಸಿದುದು ಇವರೇ ಆಗಿದ್ದಾರೆ. ಇಂದು ಡಾಕ್ಟರ್ ಭಾಟ್ಕಂಡೇಯ ಕಾಲೇಜ್ ಆಫ್ ಹಿಂದುಸ್ಥಾನಿ ಎಂಬ ಹೆಸರಿನಲ್ಲಿ ಈ ವಿದ್ಯಾಲಯವು ಕರೆಯಲ್ಪಡುತ್ತಿದೆ.

- ಕರ್ನಾಟಕ ಸಂಗೀತ , ಸಂಗೀತ ಪ್ರತಿಭೆಗಳು , ಸಂಗೀತ ಚರಿತ್ರೆ.

ಪುರಂದರ ದಾಸರು

ಕರ್ನಾಟಕ ಸಂಗೀತ ಪಿತಾಮಹ. ಅಭ್ಯಾಸ ಪಾಠಕ್ರಮಗಳನ್ನು ಕ್ರಮೀಕರಿಸಿದರು. ಹಲವಾರು ಸಂಗೀತ ರಚನೆಗಳನ್ನು ಮಾಡಿದರು.

*ತ್ಯಾಗರಾಜಸ್ವಾಮಿ (1767–1847)*

ತಂಜಾವೂರಿನ ತಿರುವಾರ್‌ನಲ್ಲಿ ಜನನ. ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರು. ಧಾರಾಳ ಕೃತಿಗಳನ್ನು ರಚಿಸಿದರು. ಕೃತಿಗಳ ಮನೋಹರವಾದ ಆಲಾಪನೆಗೆ ಗಮಕಗಳನ್ನು ನೀಡಿದ ಗಾಯಕನಾಗಿದ್ದಾರೆ. ಇವರ ಕೃತಿಗಳಲ್ಲಿ ಸದ್ಭಕ್ತಿ ಕಂಡುಬರುತ್ತದೆ. ಸೂರ್ಯಕಾಂತಿ, ಲತಾಂಗಿ, ರಾಮಪ್ರಿಯ ಮೊದಲಾದ ರಾಗಗಳನ್ನು ಜನಪ್ರಿಯವಾಗಿಸಿದರು. ಶುದ್ಧಬಂಗಳ, ಕುಂತವರಾಳಿ, ಜಯನಾರಾಯಣಿ, ಕಾಪ್ಪಿನಾರಾಯಣಿ, ಚಿತ್ತರಂಜಿನಿ, ಬಲಹಂಸ ಎಂಬೀ ಅಪೂರ್ವ ರಾಗಗಳನ್ನು ಪರಿಚಯಿಸಿದರು ಸ್ವಾಮಿಗಳಾಗಿದ್ದಾರೆ.

ಮುತ್ತು ಸ್ವಾಮಿ ದೀಕ್ಷಿತರು

ತ್ರೀಮೂರ್ತಿಗಳಲ್ಲಿ ಒಬ್ಬರು. ಸಾಕಷ್ಟು ಕೃತಿಗಳನ್ನು ರಚಿಸಿದರು. ಅಲ್ಲದೆ ಕರ್ನಾಟಕ ಸಂಗೀತವನ್ನು ಜನಪ್ರಿಯಗೊಳಿಸಿದರು. ವಿದಗ್ದನಾದ ವೀಣಾವಾದಕರೂ ಆಗಿದ್ದರು. ಹಿಂದೂಸ್ಥಾನಿ ಸಂಗೀತದಲ್ಲಿ ಪ್ರಚಾರಗಳಿಸಿದ ಹಮೀರ್‌ಕಲ್ಯಾಣಿ, ವೃಂದಾವನ ಸಾರಂಗ , ಕಾಪ್ಪಿ, ಯಮನ್ ಕಲ್ಯಾಣಿ, ಮಿಯಾನ್‌ಕೀತೋಡಿ ಮೊದಲಾದ ರಾಗಗಳು ಕರ್ನಾಟಕ ಸಂಗೀತಲೋಕಕ್ಕೆ ಪರಿಚಯಿಸಿದರು.

ಶ್ಯಾಮಶಾಸ್ತ್ರಿಗಳು *(1762–1827)*

ತ್ರೀಮೂರ್ತಿಗಳಲ್ಲಿ ಮೂರನೇಯವರು. ವಿಲಾಮಚಾಪತಾಳದ ನಿರ್ಮಾಪಕರು. ತಾಳಚಮತ್ಕಾರದಲ್ಲಿ ಅಗ್ರಗಣ್ಯರು. ಸಂಕೀರ್ಣವಾದ ಹಲವು ತಾಳಗಳಲ್ಲಿಯೂ ಕೃತಿಗಳನ್ನು ರಚಿಸಿದ್ದಾರೆ. ಅನೇಕ ಶಿಷ್ಯಸಂಪತ್ತಿನ ಒಡೆಯರಿವರು.

ಸ್ವಾತಿತಿರುನಾಳ್ *(1813–1847)*

ಯಥಾರ್ಥ ಹೆಸರು ರಾಮವರ್ಮ. ತಿರುವಿದಾಂಕೂರು ರಾಜವಂಶದಲ್ಲಿ ಪ್ರಮುಖರಾಗಿದ್ದಾರೆ. ಹಲವಾರು ಸಂಗೀತ ಪ್ರತಿಭೆಗಳನ್ನು ಕೇರಳೀಯ ಸಂಗೀತಪ್ರೇಮಿಗಳಿಗೆ ಪರಿಚಯಿಸಿದರು. ಕರ್ನಾಟಕ ಸಂಗೀತದಲ್ಲಿಯೂ, ಹಿಂದೂಸ್ಥಾನಿ ಸಂಗೀತದಲ್ಲಿಯೂ ಅನೇಕ ಕೃತಿಗಳನ್ನು ರಚಿಸಿದರು.

- ಕರ್ನಾಟಕ ಸಂಗೀತದಲ್ಲಿಯೂ, ಹಿಂದೂಸ್ಥಾನಿ ಸಂಗೀತದಲ್ಲಿಯೂ ಪ್ರಸಿದ್ಧರಾದ ಇತರ ಸಂಗೀತಜ್ಞರ ಪಟ್ಟಿ ತಯಾರಿಸುವುದು.

***ಕರ್ನಾಟಕ ಸಂಗೀತ***

ಪಾಪನಾಶಂ ಶಿವನ್ (1650–1688)
ಗೋಪಾಲಕೃಷ್ಣ ಭಾರತಿ (1811–1896)
ನೀಲಕಂಠಶಿವನ್ (1839–1900)
ಮಹಾವೈದ್ಯನಾಥ ಅಯ್ಯರ್ (1844–1905)
ಭದ್ರಾಚಲ ರಾಮ್‌ದಾಸ್ (1620–1688)
ಅರುಣಾಚಲಂ ಕವಿರಾಯರ್ (171–1788)
ಇರಯಿಮ್ಮಾನ್ ತಂಬಿ (1782–1856)
ಹರಿಕೇಶನಲ್ಲೂರ್ ಮುತ್ತಯ್ಯ ಭಾಗವತರ್ (1877–1945)
ಮೈಸೂರು ವಾಸುದೇವಾಚಾರಿ (1863–1961)
ತಂಜಾವೂರ್ ಶಂಕರ ಅಯ್ಯರ್
ಡಾ. ಬಾಲಮುರಳೀಕೃಷ್ಣನ್
ಲಾಲ್ಗುಡಿ ಜಯರಾಮನ್
ಶೆಮ್ಮಾಂಗಪಡಿ ಶ್ರೀನಿವಾಸ ಅಯ್ಯಾರ್
ತಾಂಜಾವೂರ್.ಎಸ್. ಕಲ್ಯಾಣರಾಮನ್
ಎಂ.ಎಸ್. ಸುಬ್ಬುಲಕ್ಷ್ಮಿ
ಚೆಂಬೈ ವೈದ್ಯನಾಥ್ ಭಾಗವತರ್
ಜಿ.ಎನ್. ಬಾಲಸುಬ್ರಹ್ಮಣ್ಯನ್
ಮಧುರೈ ಮಣಿ ಅಯ್ಯರ್
ಮಹಾರಾಜಪುರಂ ಸಂತಾನಂ
ಬೃಂದ– ಮುಕ್ತ ಸಿಸ್ಟರ್ಸ್
ಎಂ.ಎಲ್, ವಸಂತಕುಮಾರಿ
ಡಿ.ಕೆ. ಪಟ್ಟಮ್ಮಾಳ್

ಬೆಜು ಬಾವ್ರ(1542–1613)
ಬಹುದೂರ್ಷಾ ಸಫರ್ (1775–1862)
ವಜಿದ್ ಅಡಿಪ್ವಾ (1790–1859)
ಬಾಲಕೃಷ್ಣ ಬುವಾ ಇಚಲ್ ಕರಂಜಿಕರ್ (1849–1927)
ಭಾಸ್ಕರ್ ಬುವಾ ಬಾವ್‌ಲೆ (1869–1922)
ಬಾಲಗಂಧರ್ವ (1888–1967)
ಕೋಸರ್‌ಬಾಯಿ ಕೇರ್‌ಕರ್ (1892–1977)
ಓಂಕಾರ್‌ನಾಥ್ ಠಾಕೂರ್ (1897–1967)
ಹೀರಾಬಾಯ್ ಬದ್ರೋದೆಕರ್ (1905–1989)
ಸರಸ್ವತಿ ರಾಣೆ (1916–2006)
ಅಮೀರ್ ಖಾನ್ (1912–1974)
ಗಂಗುಬಾಯ್ ಹಾನಗಲ್ (1913–2009)
ಬೀಗಂ ಅಕ್ತರ್ (1914–1974)

# 7.3



# ನೃತ್ಯಕಲೆ



# ನೃತ್ಯಕಲೆ

## ಮುನ್ನುಡಿ

ಪ್ರಪಂಚವು ಚಲನಾತ್ಮಕವಾಗಿದೆ. ಶರೀರ ಚಲನೆಗಳ ನಿಗೂಢತಾಳವನ್ನು ಸೌಂದರ್ಯ ಹೆಚ್ಚಿಸಿ ಬಾಹ್ಯವಾಗಿ ಪ್ರಕಟಿಸುವುದೆ ನೃತ್ಯ. ಶರೀರ ಶಕ್ತಿಯನ್ನು ನಿಯಂತ್ರಿತವೂ, ಕ್ರಮೀಕೃತವೂ ಆಗಿ ವಿನಿಯೋಗಿಸುವುದಕ್ಕೆ ನೃತ್ಯವು ಸಹಾಯಿಯಾಗಿದೆ. ಸಾಮಾಜಿಕ ಸಂಯೋಜನೆ, ಶಾರೀರಿಕ ಪರಿಶ್ರಮ, ಸೌಂದರ್ಯ ಜ್ಞಾನ ಮೊದಲಾದವುಗಳನ್ನು ಬೆಳೆಸುವುದರಲ್ಲಿ ನೃತ್ಯವು ಪ್ರಾಮುಖ್ಯವಾದ ಪಾತ್ರ ವಹಿಸುತ್ತದೆ.

ಯಾವುದೇ ಒಂದು ಕಲೆಗೂ ಇರುವಂತೆ ನೃತ್ಯಕ್ಕೂ ಪ್ರಧಾನವಾದ ಎರಡು ಭಾಗಗಳಿವೆ. ರೂಪಶಿಲ್ಪ ಮತ್ತು ಭಾವಶಿಲ್ಪ. ಇದರಲ್ಲಿ ಹೆಚ್ಚಿನವರು ಭಾವಶಿಲ್ಪ ಎಂಬ ವಿಷಯವನ್ನು ಇಷ್ಟಪಡುತ್ತಾರೆ. ಒಂದು ನೃತ್ಯವು ನಡೆದ ಕಥೆಯೋ ಸಂದರ್ಭವೋ ಆಶಯವೋ ಹಾಗೆ ಯಾವುದೇ ವಿಷಯವೂ ಆಗಬಹುದು. ಈ ವಿಷಯವೇ ಭಾವಶಿಲ್ಪ. ಭಾವಶಿಲ್ಪವನ್ನು ಪ್ರಕಟಿಸುವ ಶರೀರವಾಗಿದೆ ಅದರ ರೂಪ ಶಿಲ್ಪ.

ಉದಾಹರಣೆಗೆ ಒಬ್ಬ ವ್ಯಕ್ತಿಯು ಕಲೆಯಾದರೆ ಅವನ ಮನಸ್ಸು ಭಾವಶಿಲ್ಪ, ಶರೀರ ರೂಪಶಿಲ್ಪ ಎಂದರ್ಥ. ಸಾಧಾರಣ ಆಸ್ವಾದಕರು ರೂಪಶಿಲ್ಪದ ಮೂಲಕ ಪ್ರಕಟವಾಗುವ ಭಾವಶಿಲ್ಪವನ್ನು ಆಸ್ವಾದಿಸುವರು. ಪಂಡಿತರು ಭಾವಶಿಲ್ಪ ಪ್ರಕಟವಾಗುವ ರೀತಿಯನ್ನು ರೂಪಶಿಲ್ಪಗಳ ಮೂಲಕ ಆಸ್ವಾದಿಸುವರು. ಭಾವಶಿಲ್ಪದ ವಿವಿಧ ರೂಪಭೇದಗಳೇ ನೃತ್ಯರೂಪಗಳು.

ನಮ್ಮ ಮಕ್ಕಳು ಮೊದಲು ಭಾವಶಿಲ್ಪದಿಂದಲೇ ಆಕರ್ಷಿತರಾಗುವರು. ಆದ್ದರಿಂದ ಅವರು ಮೊದಲು ಭಾವಶಿಲ್ಪವನ್ನು ತಿಳಿಯಲಿ. ಕಥಾರೂಪದ ಒಂದು ನೃತ್ಯ (ಒಂದು ಪ್ರತ್ಯೇಕ ಕಲಾರೂಪ ಎಂಬ ರೀತಿಯಲ್ಲಾಗಬಾರದು. ಸಾಧಾರಣ ವೇಷದಲ್ಲಿ ಅಭಿನಯಿಸುವುದೇ ಉತ್ತಮ) ತೋರಿಸಲು ಅವಕಾಶ ಒದಗಿಸುವುದು.

ಹೀಗೆ ಕಂಡು ತಿಳಿವ ಆಸ್ವಾದಿಸಿದ ಭಾವಶಿಲ್ಪಗಳನ್ನು ಸ್ವಯಂ ಅಭಿನಯಿಸಿ ಅನುಭವಿಸುವುದಾಗಿದೆ ಮುಂದಿನ ಹಂತ. ಇದರಿಂದಾಗಿ ಉದ್ಭವಿಸಿ ಬರುವ ಚಲನಸಂಪ್ರದಾಯಗಳು ನೃತ್ಯ ಎಂಬ ದೊಡ್ಡ ಸಂದರ್ಭಗಳಿಂದ ಮಕ್ಕಳು ತಿಳಿಯಬೇಕಾಗಿದೆ. ನೈಸರ್ಗಿಕವಾಗಿ, ತಾಳನಿಬಂಧಿತವಾಗಿದೆ. ಶರೀರ ಎಂಬ ಮಾಧ್ಯಮದ ಮೂಲಕ ಸಂಗೀತಾತ್ಮಕವಾಗಿ ಚಲಿಸುವುದು ಹೇಗೆಂದು ಮಕ್ಕಳು ತರಬೇತಿಯಿಂದ ತಿಳಿಯುವಂತಾಗಿರಬೇಕು. ಹೂವು ಮೂಗಿನ ಬಳಿ ಬರುವ ತಂತ್ರ. ಮೂಸಲು ಅವನಿಗೆ ತಿಳಿದಿದೆ. ತಿಳಿದವರನ್ನೇ ಅದಕ್ಕೆ ಆಯ್ಕೆ ಮಾಡಬೇಕು. ಶರೀರದ ಸಾಧ್ಯತೆಗಳು ಪಾಠಪುಸ್ತಕಗಳಲ್ಲದೆ, ಸಂಕೀರ್ಣವಾದ ಸಿದ್ಧಾಂತಗಳಿಂದ ಅಲ್ಲದೆ ಅವರು ತಿಳಿಯಬೇಕು. ಸರ್ವಸ್ವತಂತ್ರರಾಗಿ ಅಭಿನಯಿಸಲು ಅಗತ್ಯವಾದ ಅವಕಾಶ ಒದಗಿಸಿ ಕೊಡುವುದು ಇಲ್ಲಿ ಅಗತ್ಯವಾಗಿದೆ. ಸರ್ವಸ್ವತಂತ್ರರಾದರೂ ಸೂರ್ಯನೂ, ಚಂದ್ರನೂ, ಗಾಳಿಯೂ ಚಲಿಸುವುದರಲ್ಲಿ ಅಂತರ್ಲೀನವಾದ ನಿಯಂತ್ರಣದಂತೆ ಸಾಂದರ್ಭಿಕ ಸಂಗೀತವೂ, ತಾಳವೂ ಅವರನ್ನು ನಿಯಂತ್ರಿಸುವುದು ಎಂಬುವುದನ್ನು ಗಮನಿಸಬೇಕಾಗಿದೆ.

## ಕಲಿಕಾ ಸಾಧನೆಗಳು

### 8ನೇ ತರಗತಿ

- ಕೇರಳದ ಸಾಂಪ್ರದಾಯಿಕ ನೃತ್ಯರೂಪಗಳನ್ನು ಗುರುತಿಸುವುದು.
- ತುಳ್ಳಲ್ ಕಲೆ – ವಿವಿಧ ವಿಭಾಗಗಳು – ಸಾಮ್ಯ ವ್ಯತ್ಯಾಸಗಳನ್ನು ವರ್ಗೀಕರಿಸಲು ಸಾಧ್ಯವಾಗುವುದು.
- ಮುಖಾಭಿನಯದ ಮೂಲಕ ವಿಭಿನ್ನ ಭಾವನಾತ್ಮಕ ವಿಚಾರಗಳನ್ನು ಪ್ರಕಟಿಸಿವುದು.
- ವಿಭಿನ್ನ ಅಂಗಗಳ ಮೂಲಕ ಆಶಯ ವಿನಿಮಯ ನಡೆಸುವುದು.
- ಅಡವುಗಳು, ಮುದ್ರೆಗಳು, ಅಭಿನಯ ರೀತಿಗಳು ಇವುಗಳನ್ನು ಸೇರಿಸಿ ಕ್ರಮವಾಗಿ ಹಾಡುಗಳು ಕವಿತೆಗಳು ಎಂಬಿವುಗಳ ದೃಶ್ಯಾವಿಷ್ಕಾರ ನಡೆಸುವುದು.

### 9ನೇ ತರಗತಿ

- ಲೋಕಧರ್ಮಿ, ನಾಟ್ಯಧರ್ಮಿ ಮೊದಲಾದ ಅಭಿನಯ ವಿಭಾಗದ ಕುರಿತು ವಿವರಗಳನ್ನು ಸಂಗ್ರಹಿಸಿ ಮಂಡಿಸುವುದು.
- ನೃತ್ಯದ ಒಂದು ಪದ ಮಂಡಿಸುವುದು.
- ಪರಿಚಿತವಾದ ಹಾಡುಗಳಿಗೆ ಯೋಗ್ಯವಾದ ನೃತ್ಯಾವಿಷ್ಕಾರ ನಡೆಸುವುದು.
- ಶುದ್ಧ ನೃತ್ಯರೂಪಕಗಳಾದ ಪುಷ್ಪಾಂಜಲಿ, ಜತಿಸ್ವರಂ, ಇಂತಹ ಯಾವುದಾದರೊಂದು ರೀತಿ ಮಂಡಿಸುವುದು.
- ಅರ್ಧಶಾಸ್ತ್ರೀಯ ರೀತಿಯಲ್ಲಿರುವ ಹಾಡುಗಳಿಗೆ (ಭಜನೆ, ಭಕ್ತಿಗೀತೆಗಳು ಮೊದಲಾದುವು) ಕ್ರಮಬದ್ಧವಾಗಿ, ಅರ್ಥವತ್ತಾದ ರೀತಿಯಲ್ಲಿ ನೃತ್ಯ ನಿರ್ದೇಶನ ನಡೆಸಿ ಮಂಡಿಸುವುದು.

### ಹತ್ತನೇ ತರಗತಿ

- ಕೇರಳದ ಕಲಾರೂಪಗಳು (ಒಪ್ಪನ, ತಿರುವಾದಿರ, ಮಾರ್ಗಂಕಳಿ) ಗುರುತಿಸುವುದು.
- ಶಾಸ್ತ್ರೀಯ ನೃತ್ಯದಲ್ಲಿ 5 ಜಾತಿಗಳ ಹೇಳಿಕೆಗೆ ಅನುಸರಿಸಿ ಜತಿಗಳಿವೆಯೆಂದು ತಿಳಿಯುವುದು.
- ಶಾಸ್ತ್ರೀಯ ನೃತ್ಯದಲ್ಲಿನ ನವರಸಗಳ ಪ್ರಧಾನ್ಯತೆ ತಿಳಿಯುವುದು.
- ದೇಶಭಕ್ತಿಗೀತೆಗಳು, ಕವಿತೆ, ಮೊದಲಾದುವುಗಳ ದೃಶ್ಯಾವಿಷ್ಕಾರ ನಡೆಸುವುದು.

# 8ನೇ ತರಗತಿ

## ಯೂನಿಟ್ –1 : ಪರಂಪರಾಗತ ನೃತ್ಯರೂಪಗಳು

ಕೇರಳ ಎಂಬ ಈ ಚಿಕ್ಕ ರಾಜ್ಯದಲ್ಲಿ ಪರಂಪರಾಗತ ನೃತ್ಯರೂಪಗಳು ಹಲವಾರು ಇವೆ. ವೈವಿಧ್ಯರೀತಿಯ ಹೆಜ್ಜೆಗಳು, ಆಂಗಿಕ ಚಲನೆಗಳು, ಗಾನಗಳು, ಇವುಗಳ ವಿಶೇಷತೆಗಳಾಗಿವೆ. ಸ್ಥಳೀಯ ವಸ್ತ್ರಧಾರಣೆ, ಹಾಡು, ಹೆಜ್ಜೆಗಳಿಂದ ಅವುಗಳನ್ನು ಪರಸ್ಪರ ವ್ಯತ್ಯಸ್ತವಾಗಿಸುವುದು. ನಮ್ಮ ತಿರುವಾದಿರಕ್ಕಳಿ, ಒಪ್ಪನ, ಕುಮ್ಮಿ, ಕೋಲಾಟ, ಐವರ್‌ಕಳಿ, ಪರಿಚಮುಟ್ಟು, ದಫ್‌ಮುಟ್ಟು, ಪೂರಂಕಳಿ , ಕಣಿಯಾರ್‌ಕಳಿ, ಮಲಮಕ್ಕಳಿ, ಪಡೆಯಣಿ, ದೇವೀಗಾನಂಕಳಿ, ಎಂಬಿವುಗಳಲ್ಲದೆ ಆದಿವಾಸಿಗಳೆಡೆಯಲ್ಲೂ ಪರಂಪರಾಗತ ನೃತ್ಯಗಳು ಬೇರೆ ಇವೆ. ಇವುಗಳ ಹಾಡುಗಳೆಲ್ಲ ಯಾವುದಾದರೂ ಸಂದೇಶ ಇರಬಹುದು ಅಥವ ನುಡಿಕಟ್ಟುಗಳು ಇರುವ ಸಾಹಿತ್ಯವೂ ಇರಬಹುದು. ಇವುಗಳೆಲ್ಲಾ ಪರಂಪರಾಗತವಾಗಿ ಅಭ್ಯಸಿಸಿ ಬರುವಂತಹ ಕಲೆಗಳಾಗಿವೆ. ಇವುಗಳನ್ನು ಪರಿಷ್ಕರಿಸಲು ಯಾರೂ ಪ್ರಯತ್ನಿಸುವುದಿಲ್ಲ. ಅದು ಅದರ ನೈಜತೆಯನ್ನು ಕಾಪಾಡುವುದಕ್ಕಾಗಿದೆ. ಇಂತಹ ನೃತ್ಯಗಳಲ್ಲಿ ಅತ್ಯಂತ ಮನೋಹರವಾದ ಜಾನಪದ ನೃತ್ಯಗಳನ್ನು ನಮಗೆ ಕಾಣಬಹುದು. ಇದರ ಹಿಮ್ಮೇಳನದಲ್ಲಿ ಕೆಲವೊಮ್ಮೆ ಊರ ವಾದ್ಯೋಪಕರಣಗಳೊಂದಿಗೆ ಚೆಂಡೆ , ದುಡಿ , ಪರ , ಮರ , ಕೊಂಬು , ಕೊಳಲು ಮೊದಲಾದ ವಾದ್ಯಗಳನ್ನು ಕಾಣಬಹುದು. ಇಂತಹ ಸಾಂಪ್ರದಾಯಿಕ ಪ್ರದರ್ಶನವನ್ನು ಈ ಯೂನಿಟ್‌ನಲ್ಲಿ ಪರಿಚಯಿಸಲಾಗುವುದು.

### ಕಲಿಕಾ ಸಾಧನೆ

- ಕೇರಳದ ಸಾಂಪ್ರದಾಯಿಕ ನೃತ್ಯರೂಪಗಳನ್ನು ತಿಳಿಯುವುದು.

### ಆಶಯ, ತಿಳುವಳಿಕೆ

- ಕೇರಳದಲ್ಲಿ ಧಾರಾಳ ಸಾಂಪ್ರದಾಯಿಕ ನೃತ್ಯರೂಪಗಳಿವೆ.
- ಕೇರಳದ ಸಾಂಪ್ರದಾಯಿಕ ನೃತ್ಯರೂಪಗಳನ್ನು ತಿಳಿಯುವ ನೈಪುಣ್ಯ.
- ಸಾಂಪ್ರದಾಯಿಕ ನೃತ್ಯಗಳಲ್ಲಿ ನೈಜತೆಯಿಂದ ಕೂಡಿದ ವಸ್ತ್ರಧಾರಣಾ ರೀತಿ, ಹೆಜ್ಜೆ, ಮೊದಲಾದುವುಗಳನ್ನು ತಿಳಿಯುವ ನೈಪುಣ್ಯ.

### ಕಲಿಕಾ ಚಟುವಟಿಕೆಗಳು

- ಸಾಂಪ್ರದಾಯಿಕ ನೃತ್ಯರೂಪಗಳನ್ನು ಚಾರ್ಟಿನಲ್ಲಿ ದಾಖಲಿಸುವುದು.
- ತಿರುವಾದಿರ, ಒಪ್ಪನ , ಮಾರ್ಗಂಕಳಿ, ಕುಮ್ಮಿ , ಪರಿಚಮುಟ್ಟು, ಕೋಲ್‌ಕಳಿ, ಕೋಲಾಟ, ಆದಿವಾಸಿಗಳ ಕೋಲಾಟ (ಕುರುಬರ್, ಚಳಿಯಾರ್, ಮಲಪ್ಪುಲಯರ್, ಮೊದಲಾದವರ)
- ಚಾರ್ಟ್ ತಯಾರಿಸಿದುದರಲ್ಲಿ ಕೆಲವೂಂದರ ಕುರಿತು ಮಕ್ಕಳಿಗೆ ಉತ್ತಮ ತಿಳುವಳಿಕೆ


ತಿರುವಾದಿರ


ಪರಿಚಮುಟ್ಕ್ಕಳಿ


ಒಪ್ಪನ


ಪೂರಕ್ಕಳಿ

ಇದೆ. ಮಕ್ಕಳಿಗೆ ಅಪರಿಚಿತವಾದ ನೃತ್ಯರೂಪಗಳನ್ನು ಸಿ.ಡಿ ಉಪಯೋಗಿಸಿ ಮಂಡಿಸುವುದು.

- ಯಾವುದಾದರೂ ಸಾಂಪ್ರದಾಯಿಕ ಕಲಾವಿದರೊಂದಿಗೆ ಸಂದರ್ಶನ. ಸೌಹಾರ್ದಯುತವಾದ ಸಂಭಾಷಣೆ.
- ಪರಂಪರಾಗತ ನೃತ್ಯಗಳ ಕುರಿತು ಮಾಹಿತಿ ಸಂಗ್ರಹ ಮಾಹಿತಿ ಸಂಗ್ರಹ ಮತ್ತು ಚಿತ್ರ ಸಂಗ್ರಹ.
- ಈ ವಲಯದಲ್ಲಿ ಪ್ರಸಿದ್ಧರಾದ ವ್ಯಕ್ತಿಗಳ ಕುರಿತಾದ ಕಲಿಕಾ ಟಿಪ್ಪಣಿಗಳು.
- ಪರಂಪರಾಗತ ನೃತ್ಯ ಮಂಡಿಸುವ ಮಕ್ಕಳನ್ನು ಪ್ರತ್ಯೇಕ ಪರಿಗಣಿಸಬೇಕು. ಇತರ ಮಕ್ಕಳ ಸಂಗ್ರಹ ಪುಸ್ತಕಗಳನ್ನು ಮೌಲ್ಯನಿರ್ಣಯ ನಡೆಸಬಹುದು.

### ಮೌಲ್ಯನಿರ್ಣಯ

ಸೂಚಕಗಳು

- ಭಾಷೆ
- ಸಮಗ್ರತೆ
- ಅನ್ವೇಷಣಾದಾರಿ

## ಯೂನಿಟ್– 2– ತುಳ್ಳಲ್

ಪ್ರತಿಯೊಂದು ಕಾಲಘಟ್ಟದಲ್ಲೂ ಕಲಾವಿದರ ಸಾಮಾಜಿಕ ಅನೀತಿಗೆದುರಾಗಿ ತಮ್ಮ ಕಲೆಯನ್ನು ಉಪಯೋಗಿಸುತ್ತಿದ್ದರು. ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ ಕುಂಜನ್ ನಂಬ್ಯಾರ್‌ರವರ ಜೀವನ. 18ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಜಾತಿ ವ್ಯವಸ್ಥೆ ಮತ್ತು ಸಮಾಜದಲ್ಲಿ ಚಾಲ್ತಿಯಲ್ಲಿದ್ದ ಇತರ ಹಲವು ಅನೀತಿಗಳಿಗೆದುರಾಗಿಯೂ ತನ್ನ ಸೃಜನಾತ್ಮಕತೆಯನ್ನು

ಆಯುಧವಾಗಿಸಿ ಜೀವನವನ್ನು ಕಲೆಗೂ ಅದರೊಂದಿಗೆ ಸಮಾಜಕ್ಕೂ ಮೀಸಲಿರಿಸಿದ ಒಬ್ಬ ಮಹಾ ಪ್ರತಿಭೆಯಾಗಿದ್ದಾರೆ ಕುಂಜನ್ ನಂಬ್ಯಾರ್. ಚಾಕ್ಯಾರ್‌ರ ಆಕ್ಷೇಪಗಳನ್ನು ಸಹಿಸಲಾಗದೆ ಒಂದು ದಿನ ಕ್ಷೇತ್ರದ ಹೊರಗೆ ತನ್ನ ಅಂತರಾಳದಲ್ಲಿ ಅಡಗಿ ಕುಳಿತದ್ದ ಕಲೆಯನ್ನು ಅಭಿನಯಿಸಿದಾಗ ಕಲಾಕೇರಳಕ್ಕೆ ಅತ್ಯಮೂಲ್ಯವಾದ ಒಂದು ನೂತನ ಕಲೆಯು ಉಗಮವಾಯಿತು. ಅದುವೆ ಆ ತುಳ್ಳಲ್ ಎಂಬ ಕಲೆಯ ಆಕ್ಷೇಪ ಹಾಸ್ಯದೊಂದಿಗೆ ಉಚ್ಛನೀಚತೆಗೆದುರಾಗಿ  ಇತರ ಕಲೆಗಳಿಂದ ಪ್ರಚೋದನೆ ಪಡೆದು ನಂಬ್ಯಾರ್ ತುಳ್ಳಲ್ ಕಲೆಯನ್ನು ಬೆಳೆಸಿದರೆಂದು ಹೇಳಬಹುದು. (ಪಡೆಯಣಿ...    ) ಅವರು ಅನೀತಿಗೆದುರಾಗಿ ಶಕ್ತವಾಗಿ ಹೋರಾಡುತ್ತಿದ್ದರು. ಚೆಂಬಕಶ್ಯೇರಿ ರಾಜರ ಕೈಕೆಳಗಿರುವ ಅಂಬಲಪ್ಪುಝಂ ಕ್ಷೇತ್ರದಲ್ಲಿ ಮೊತ್ತಮೊದಲಾಗಿ ಅಭಿನಯಿಸಿದುದು ಶೀತಂಕನ್ ತುಳ್ಳಲಿನ ಕಲ್ಯಾಣ ಸೌಗಂಧಿಕ ಕಥೆಯಾಗಿತ್ತು. ತುಳ್ಳಲ್‌ನಲ್ಲಿ ಅತ್ಯಂತ ಸರಳವಾದ ವೇಷವು ಇದರದ್ದೇ ಆಗಿದೆ. ತರುವಾಯ ಓಟ್ಟಂ, ಪಡೆಯಣಿ ಎಂಬ ರೂಪಗಳುಂಟಾಯಿತು. ಓಟ್ಟಂತುಳ್ಳಲ್ ವಿಭಾಗದಲ್ಲಿ ಅತೀ ಹೆಚ್ಚು ಕೃತಿಗಳು ರಚಿಸಲ್ಪಟ್ಟಿದೆ. ಕಿರಾತಂ, ರುಕ್ಮಿಣಿಸ್ವಯಂವರಂ, ಸಂತಾನಗೋಪಾಲಂ, ನಳಚರಿತಂ, ಮೊದಲಾದುವುಗಳು ಅವುಗಳಲ್ಲಿ ಕೆಲವು. ಧಾರ್ಮಿಕ ವಿಷಯಗಳನ್ನು ತಿಳಿಸುವ, ತುಳ್ಳಲಲ್ಲಿ ಪುಳಿಂದೀಂಮೋಕ್ಷಂ ಎಂಬಂಥ ಕೆಲವೇ ಕಥೆಗಳೇ ಇರುವುದು. ರೂಪದಲ್ಲಿಯೂ, ಭಾವದಲ್ಲಿಯೂ, ಮಂಡನಾ ರೀತಿಯಲ್ಲೂ ಇರುವ ಧಾರಾಳ ವ್ಯತ್ಯಾಸಗಳುಂಟುಮಾಡುವ  ಈ ಮೂರು ರೀತಿಯ ತುಳ್ಳಲ್ ಗಳನ್ನು ಈ ಪಾಠದಲ್ಲಿ ವಿಶ್ಲೇಷಿಸಲಾಗಿದೆ.

### ಕಲಿಕಾ ಸಾಧನೆ

- ತುಳ್ಳಲ್‌ಕಲೆಯ ವಿವಿಧ ವಿಭಾಗಗಳು, ಸಜಾತೀಯ– ವಿಜಾತೀಯ ಇವುಗಳನ್ನು ತಿಳಿಯಲು ಸಾಧ್ಯವಾಗುವುದು.

### ಆಶಯ ತಿಳುವಳಿಕೆ

- ತುಳ್ಳಲ್ ಮೂರು ವಿಧಗಳಲ್ಲಿವೆ. ಓಟ್ಟಂ, ಶೀತಂಕನ್, ಪಡೆಯಣಿ (ಪರೆಯನ್)
- ವೇಷ, ಮಂಡನೆ, ಎಂಬಿವುಗಳಲ್ಲಿರುವ ವೈವಿಧ್ಯತೆ.


ಓಟ್ಟಂ ತುಳ್ಳಲ್


ಶೀತಂಕನ್‌ತುಳ್ಳಲ್


ಪರಯನ್ತುಳ್ಳಲ್

- ವೇಗತೆಯಲ್ಲಿರುವ ವ್ಯತ್ಯಾಸ.

**ಕಲಿಕಾ ಚಟುವಟಿಕೆಗಳು**

ನೃತ್ಯೋತ್ಸವ

- ಯುವಜನೋತ್ಸವದಲ್ಲಿ ತುಳ್ಳಲ್ ಸ್ಪರ್ಧೆಯನ್ನು ಎಲ್ಲಾ ಮಕ್ಕಳು ವೀಕ್ಷಿಸುವರು. ಅಧ್ಯಾಪಕರು ತುಳ್ಳಲ್‌ನ ಸಿ.ಡಿ ಪ್ರದರ್ಶಿಸುವರು. ತುಳ್ಳಲ್‌ನ ಕೆಲವು ಹೆಜ್ಜೆಗಳನ್ನು ಅಭ್ಯಾಸ ಮಾಡುವರು. ಶಾಸ್ತ್ರೀಯ ನೃತ್ಯ ಕಲಿತ ಮಗುವಿಗೆ ಇದು ಸುಲಭವಾಗಿ ಅಭಿನಯಿಲು ಸಾಧ್ಯ ಮಕ್ಕಳು ಗುಂಪಿನಲ್ಲಿ ಕುಳಿತು ಮಂಡನಾ ರೀತಿಗಳನ್ನು ಚರ್ಚಿಸುವರು. ಅಧ್ಯಾಪಕರು ಸಹಾಯವನ್ನು ನೀಡುತ್ತಿರಬೇಕು. ಶೀತಂಕನ್, ಪರೆಯನ್ ಎಂಬೀ ಸಿ.ಡಿಯನ್ನು ಪ್ರದರ್ಶಿಸಬಹುದು. ಮಕ್ಕಳಿಗೆ ಮೂರು ರೀತಿಯ ತುಳ್ಳಲ್ ಕಥೆಗಳ ಪರಸ್ಪರ ವ್ಯತ್ಯಾಸ ಮನದಟ್ಟಾಗುವ ತನಕ ಸಿ.ಡಿ ಬದಲಾಯಿಸಿ ಹಾಕುತ್ತಿರಬೇಕು.
- ಹತ್ತಿರದ ದೇವಸ್ಥಾನಗಳಲ್ಲಿ ತುಳ್ಳಲ್ ನಡೆಯುತ್ತಿದ್ದರೆ ಮಕ್ಕಳಲ್ಲಿ ನೋಡಲು ಹೇಳಬೇಕು.
- ಪ್ರಾದೇಶಿಕವಾಗಿ ಲಭಿಸುವ ಒಬ್ಬ ತುಳ್ಳಲ್‌ಕಲಾವಿದನೊಂದಿಗೆ ಸಂದರ್ಶನ, ಮಂಡನೆ ಎಂಬಿವುಗಳನ್ನು ನಡೆಸಬಹುದು.
- ಮೇಲಿನ ಚಟುವಟಿಕೆಗಳಿಂದ ಸಿಕ್ಕಿದ ವಿವರಗಳ ಆಧಾರದಲ್ಲಿ ಮಂಡನಾರೀತಿಯ ಕುರಿತಾದ ಲಘುಟಿಪ್ಪಣಿಗಳನ್ನು ತಯಾರಿಸುವುದು. ಪ್ರತಿಯೊಂದರ ಸವಿಶೇಷತೆಗಳನ್ನು ಕಾಣುವುದು, ದಾಖಲಿಸುವುದು. ಮೂರು ತುಳ್ಳಲುಗಳ ಕುರಿತು ಬರೆಯುವುದು, ಚಿತ್ರಗಳನ್ನು ಸಂಗ್ರಹಿಸುವುದು.

**ಮೌಲ್ಯನಿರ್ಣಯ**

ಸೂಚಕಗಳು

- ನಿರೀಕ್ಷಣಾ ರೀತಿ
- ಸಮಗ್ರತೆ
- ಭಾಷೆ

## ಯೂನಿಟ್ – 3 : ಮುಖಾಭಿನಯ

ಅಭಿ, ನಯ ಈ ಎರಡು ಪದಗಳ ಸಂಯೋಗವೇ ಅಭಿನಯ. ಎಂದರೆ ಮುಂದೆ ಕೊಂಡೊಯ್ಯು ಎಂದರ್ಥ. ಮುಖವು ಪ್ರಾಮುಖ್ಯವಾದ ಕಾರ್ಯ ನಿರ್ವಹಿಸುವ ಮಾಧ್ಯಮವಾಗಿದೆ. ಮಾತುಗಳಿಗೂ, ಚಲನೆಗಳಿಗೂ ಮೀರಿ ಹೆಚ್ಚಿನ ವಿಷಯಗಳನ್ನು ತಿಳಿಸಲು ಮುಖಕ್ಕೆ ಸಾಧ್ಯ. ಮನಸ್ಸಿನ ಭಾವನೆ ಮತ್ತು ವಿಚಾರಗಳನ್ನು ಹೆಚ್ಚು ಸ್ಪಷ್ಟತೆಯೊಂದಿಗೆ ಮುಖದಲ್ಲಿ ದರ್ಶಿಸಲು ಸಾಧ್ಯ. ಈ ಭಾವನೆಗಳೇ ನವರಸಗಳಾಗಿ ಬದಲಾಗುವುದು. ಮುಖಾಭಿನಯದ ಉಪಯೋಗಗಳ ಕುರಿತಾದ ಕಲಿಕಾ ಚಟುವಟಿಕೆಗಳನ್ನು ಇಲ್ಲಿ ಕೊಡಲಾಗಿದೆ.

**ಕಲಿಕಾ ಸಾಧನೆ**

- ಮುಖಾಭಿನಯದ ಮೂಲಕ ವಿಭಿನ್ನ ಭಾವನಾತ್ಮಕ ವಿಚಾರಗಳನ್ನು ಪ್ರಕಟಿಸುವುದು.


**ಆಶಯ ತಿಳುವಳಿಕೆ**


- ನಿತ್ಯ ಜೀವನದಲ್ಲಿ ಮೂಕಾಭಿನಯದ ವಿಭಿನ್ನ ಭಾವನೆಗಳನ್ನು ಪ್ರಕಟಿಸಲಾಗುವುದು.
- ಈ ಭಾವನೆಗಳೇ ನವರಸಗಳಾಗಿ ಬದಲಾಗುವುದು.
- ಆಶಯ ಪ್ರಕಟನೆಗೆ ಭಾವಗಳನ್ನು ಉಪಯೋಗಿಸಲಾಗುವುದು.



ಶೃಂಗಾರ


ವೀರ


ಕರುಣೆ


ರೌದ್ರ


ಬೀಭತ್ಸ


ಭಯಾನಕ


ಹಾಸ್ಯ


ಅದ್ಭುತ
(ಆಶ್ಚರ್ಯ)


ಶಾಂತ

- ನವರಸಗಳು

**ಕಲಿಕಾ ಚಟುವಟಿಕೆಗಳು**

- ತರಗತಿಯ ಮಕ್ಕಳನ್ನು ಎರಡು ಅಥವ ಮೂರು ಗುಂಪುಗಳಾಗಿ ಮಾಡುವುದು.
- ಅಧ್ಯಾಪಕರು ಮೊದಲೇ ನಿಶ್ಚಯಿಸಿದ ಕೆಲವು ವಾಕ್ಯಗಳನ್ನು ಬರೆದ ಚೀಟಿಗಳನ್ನು ತಯಾರಿಸುವುದು. ಒಂದನೇ ಗುಂಪಿನ ಒಂದು ಮಗುವನ್ನು ಕರೆದು ಚೀಟಿ ನೀಡುವುದು. ಚೀಟಿಯಲ್ಲಿ ಬರೆದ ವಿಷಯವನ್ನು ಮುಖ ಮಾತ್ರ ಉಪಯೋಗಿಸಿ ಅಭಿನಯಿಸುವುದು ಅದೇ ಗುಂಪಿನ ಮಕ್ಕಳಿಗೆ ಅಭಿನಯದ ಮೂಲಕ ಸ್ಲಿಪ್ ನಲ್ಲಿ ಬರೆದ ವಿಷಯ ಅರ್ಥವಾದರೆ 5 ಅಂಕ ನೀಡಬೇಕು. ಅಲ್ಲದಿದ್ದರೆ ಪಾಸ್ ಮಾಡಿ ಹತ್ತಿರದ ಗುಂಪಿನವರಿಗೆ ಹೇಳಬಹುದು. ಅವರು ಹೇಳಿದರೆ ಅವರಿಗೆ ಮೂರು ಅಂಕ ಬೋನಸ್ ಆಗಿ ನೀಡಬಹುದು. ಇದನ್ನು ಮುಂದುವರಿಸುವುದು ಕೊನೆಗೆ ಅತೀ ಹೆಚ್ಚು ಅಂಕ ಪಡೆದ ಗುಂಪನ್ನು ವಿಜಯಿ ಎಂದು ಘೋಷಿಸುವುದು. ಚೀಟಿಯಲ್ಲಿ ಬರೆಯಬಹುದಾದ ಸರಳ ವಾಕ್ಯಗಳು ಈ ಕೆಳಗಿನಂತಿವೆ.
    - ನೀನು ಇಲ್ಲಿ ಬಾ
    - ಸ್ವಲ್ಪ ಸಹಾಯ ಮಾಡಬಹುದೇ?
    - ಒಳ್ಳೆ ಪರಿಮಳ
    - ನನಗೆ ಹೆದರಿಕೆಯಾಗುತ್ತಿದೆ.
    - ಹೊರಗೆ ನಡಿ
- ಕನ್ನಡ ಪಾಠದ ಯಾವುದಾದರೊಂದು ಕಥಾಸಂದರ್ಭ (ಭಾವನೆಗೆ ಪ್ರಧಾನವಾದ) ಅಭಿನಯಿಸಿ ತೋರಿಸಲು ಹೇಳುವುದು. ಮಕ್ಕಳು ಗುಂಪಿನಲ್ಲಿ ಚರ್ಚಿಸಿ ಅಭಿನಯಿಸುವುದು.
- ಪ್ರಸಿದ್ಧ ನರ್ತಕರ ಭಾವಪ್ರಧಾನವಾದ ನೃತ್ಯರೂಪಗಳ ವೀಡಿಯೋ ನೋಡುವುದು.
- ನರ್ತಕರ ಮುಖದಲ್ಲಿ ಕಂಡುಬರುವ ಈ ಭಾವಗಳನ್ನು ಮಕ್ಕಳು ಮಂಡಿಸಿ ಭಾವಗಳ ತಾರತಮ್ಯ ನಡೆಸುವುದು.
- ಟೀಚರ್ ನವರಸಗಳ ಚಾರ್ಟ್ ಪ್ರದರ್ಶಿಸುವುದು. ಪ್ರತಿಯೊಂದರ ಹೆಸರೂ ಹೇಳುವುದು.
- ಇಲ್ಲಿ ನವರಸಗಳನ್ನು ಒಮ್ಮೆ ಪರಿಚಯಿಸಿದರೆ ಮಾತ್ರ ಸಾಕು. ಹೆಚ್ಚಿನ ವಿಷಯಗಳು ದೊಡ್ಡ ತರಗತಿಗಳಲ್ಲಿವೆ.

## ಯೂನಿಟ್ – 4 : ಶರೀರವು ಒಂದು ಆಶಯ ವಿನಿಮಯ ಮಾಧ್ಯಮ

ಮನುಷ್ಯ ಶರೀರದ ಪ್ರತಿಯೊಂದು ಅವಯವವೂ ಆಶಯ ವಿನಿಮಯಕ್ಕೆ ಸಹಾಯಕವಾದುದು. ಆದ್ದರಿಂದಲೇ ಚತುರ್ವಿಧಾಭಿನಯದಲ್ಲಿ ಆಂಗಿಕ ಅಭಿನಯಕ್ಕೂ ಬಹಳ ಪ್ರಾಧಾನ್ಯ ಉಂಟುಮಾಡಲು ಕಾರಣ. ಕೈ ಮುದ್ರೆಗಳಲ್ಲದೆ ಇತರ ಶರೀರ ಭಾಗಗಳಿಂದಲೂ ಆಶಯ ವಿನಿಮಯ ಸಾಧ್ಯ. ಶರೀರವನ್ನು ಅಭಿನಯ ನಿರ್ವಹಣೆಗಾಗಿ ಆರು ಭಾಗಗಳಾಗಿ

ವರ್ಗೀಕರಿಸಲಾಗಿದೆ.

ತಲೆ, ಕೈಗಳು, ಸೊಂಟ, ಎದೆ, ಪಾರ್ಶ್ವಭಾಗಗಳು, ಪಾದಗಳು ಇವುಗಳು ಆರು ಅಂಗಗಳು. ಇವುಗಳಲ್ಲದೆ ತೋಳು, ಅಂಗೈ, ಬೆನ್ನು, ಹೊಟ್ಟೆ, ತೊಡೆ, ಕಾಲು ಎಂದು ಹೀಗೆ ಆರು ಪ್ರತ್ಯಾಂಗಗಳು ಕಣ್ಣು, ಹುಬ್ಬು, ಕೃಷ್ಣಮಣಿ, ಕೆನ್ನೆ, ಮೂಗು, ಗಲ್ಲ, ತುಟಿ, ಹಲ್ಲು, ನಾಲಗೆ, ಕೆನ್ನೆ, ಮುಖ ಹೀಗೆ 12 ಉಪಾಂಗಗಳೂ ಇವೆ. ಅಂಗೋಪಾಂಗಗಳ ಚಲನೆಗಳಿಂದ ಒಂದು ನರ್ತಕ ಅಥವಾ ನರ್ತಕಿ ಆಶಯವಿನಿಮಯ ನಡೆಸುವುದು. ಶರೀರ ಆಶಯ ವಿನಿಮಯ ಮಾಧ್ಯಮ ಎಂಬ ರೀತಿಯಲ್ಲಿರುವ ಕೆಲವು ಕಲಿಕಾ ಚಟುವಟಿಕೆಗಳನ್ನು ಇಲ್ಲಿ ಒಳಪಡಿಸಲಾಗುವುದು.

### ಕಲಿಕಾ ಸಾಧನೆ

- ವಿಭಿನ್ನ ಅಂಗಗಳಿಂದ ಆಶಯ ವಿನಿಮಯ ನಡೆಸುವುದು.

### ಆಶಯ/ತಿಳುವಳಿಕೆ

- ಶರೀರಭಾಷೆಯಿಂದ ಆಶಯ ವಿನಿಮಯ ನಡೆಸಲು ಸಾಧ್ಯ. ನೃತ್ಯದಲ್ಲಿ ಮುಖಭಾವದಂತೆ ಶರೀರಭಾಷೆಯೂ ಬಹಳ ಪ್ರಾಧಾನ್ಯ ಪಡೆಯುವುದು.

### ಕಲಿಕಾ ಚಟುವಟಿಕೆಗಳು

- ಅಧ್ಯಾಪಕರು ಮಕ್ಕಳನ್ನು ಮೈದಾನದ ಖಾಲಿ ಪ್ರದೇಶದಲ್ಲಿ ನೆರಳಿನಲ್ಲಿ ವೃತ್ತಾಕಾರದಲ್ಲಿ ನಿಲ್ಲಿಸುತ್ತಾರೆ. ಪ್ರತಿಯೊಬ್ಬರೂ ಒಂದೊಂದು ಜೀವಿಗಳ ಹೆಸರು ಹೇಳುವರು. ಎಲ್ಲರೂ ಹೇಳಿದ ಬಳಿಕ ಒಬ್ಬ ಅಥವಾ ಇಬ್ಬರನ್ನು ಕರೆದು ಎಲ್ಲರೂ ಹೇಳಿದ ಹೆಸರನ್ನು ಹೇಳಲು ಹೇಳುವುದು. ಮಕ್ಕಳಿಗೆ ಕೆಲವು ಹೆಸರುಗಳನ್ನು ಮಾತ್ರ ನೆನಪಿಸಲು ಸಾಧ್ಯ. ಪ್ರತಿಯೊಬ್ಬರೂ ಅವರವರು ಹೇಳಿದ ಹೆಸರಿನ ಜೀವಿಯ ಚಲನೆಯನ್ನು ಅನುಕರಿಸಲು ಹೇಳುವುದು. ನಿಶ್ಚಿತ ಸಮಯದೊಳಗೆ ಎಲ್ಲರೂ ಮಂಡಿಸಿ ಆಗಬೇಕು. ಅಧ್ಯಾಪಕರು ಮೊದಲು ಕರೆದ ಮಕ್ಕಳಲ್ಲಿ ಪುನ: ಪ್ರತಿಯೊಬ್ಬರೂ ಹೇಳಿದ ಜೀವಿಯ ಹೆಸರನ್ನು ಒಂದೊಂದಾಗಿ ಹೇಳಲು ಹೇಳುವುದು. ಪ್ರತಿಯೊಬ್ಬರ ಅಭಿನಯ ನೆನಪಿಸಿಕೊಂಡು ಹೆಚ್ಚಿನ ಜೀವಿಗಳ ಹೆಸರು ಹೇಳಲು ಸಾಧ್ಯವಾಗುವುದು. ಸಾಗರದ ಅಲೆ, ಗಾಳಿ, ನದಿ, ಉಗಿಬಂಡಿ, ಕುದುರೆ ಸವಾರಿ, ಹಾವಿನ ಸಂಚಾರ, ಮೊದಲಾದುವುಗಳನ್ನು ಅಭಿನಯಿಸಲು ಹೇಳುವುದು. ಮಕ್ಕಳು ಅಭಿನಯಿಸುವರು. ಪರಸ್ಪರ ಮೌಲ್ಯನಿರ್ಣಯ ಮಾಡುವರು. ಉತ್ತಮಪಡಿಸುವರು.

### ಮೌಲ್ಯನಿರ್ಣಯ

*ಸೂಚಕಗಳು*

- ನಿರೀಕ್ಷಣೆ
- ಸೂಕ್ಷ್ಮತೆ
- ಶರೀರ ನಿಯಂತ್ರಣ

# ಯೂನಿಟ್ – 5 : ಶಾಸ್ತ್ರೀಯ ನೃತ್ಯಾವಿಷ್ಕಾರ

**ಪೀಠಿಕೆ**

ಹಾಡುಗಳಿಗೆ ಹೊಂದಿಕೊಂಡು ನೃತ್ಯ ನಿರ್ದೇಶನ ಮಾಡುವಾಗ ಅದರ ಭಾವ ಒಳಗೊಂಡಿರಬೇಕು. ತಾಳವಾದ್ಯಗಳ ಉಪಯೋಗ ಹೆಚ್ಚಿರುವ ಹಾಡುಗಳನ್ನು ಕೇಳುವಾಗ ಪುಟ್ಟ ಮಕ್ಕಳೂ ಕೂಡ ಶರೀರಭಾಗವನ್ನು ಕುಣಿಸಿ ಹೆಜ್ಜೆಹಾಕಿ ನೃತ್ಯಮಾಡುವುದನ್ನು ಕಾಣಬಹುದು. ಆ ತಾಳಕ್ಕೆ ಮನಸ್ಸು ಆಕರ್ಷಿತವಾದಾಗ ಉಂಟಾಗುವ ತಾತ್ಕಾಲಿಕವಾದ ಒಂದು ಭಾವ ಮಾತ್ರವೇ ಆ ನೃತ್ಯಕ್ಕಿರುವುದು. ಸಾಹಿತ್ಯದಲ್ಲಿರುವ ಭಾವನೆ ಸಂಗೀತಕ್ಕೂ, ಸಂಗೀತದಿಂದ ಆ ಭಾವನೆ ನೃತ್ಯಕ್ಕೂ ವರ್ಗಾಯಿಸಿಕೊಂಡು ಒಂದು ಮಾಗಿದ ನೃತ್ಯರೂಪ ಉಂಟಾಗುವುದು. ಭಾವನೆಗಳಿಲ್ಲದ ನೃತ್ಯವು ಪ್ರೇಕ್ಷಕರನ್ನು ಆಕರ್ಷಿಸಲಾರದು. ಅದ್ದರಿಂದ ಒಂದು ಉತ್ತಮ ಮಟ್ಟದ ನೃತ್ಯಕ್ಕೆ ಶಾಸ್ತ್ರೀಯವಾದ ಜ್ಞಾನವು ಅನಿವಾರ್ಯವಾಗಿದೆ. ಶಾಸ್ತ್ರೀಯವಾದ ತಂತ್ರಗಳು, ಮುದ್ರೆಗಳು, ಅಭಿನಯರೀತಿಗಳು ಇವು ಸೇರಿಕೊಂಡು ರಂಗವಿಷ್ಕಾರ ನಡೆಸುವ ರೀತಿಯಲ್ಲಿರುವ ಚಟುವಟಿಕೆಗಳನ್ನು ಕೆಳಗೆ ನೀಡಲಾಗಿದೆ.

**ಕಲಿಕಾ ಸಾಧನೆ**

- ನವರಸಗಳು, ಮುದ್ರೆಗಳು, ಅಭಿನಯರೀತಿ ಇವುಗಳನ್ನು ಸೇರಿಸಿಕೊಂಡು ಕ್ರಮವಾಗಿ ಹಾಡುಗಳು, ಕವಿತೆಗಳು ಎಂಬಿವುಗಳ ದೃಶ್ಯಾವಿಷ್ಕಾರ ನಡೆಸುವುದು.

**ಆಶಯ, ತಿಳುವಳಿಕೆ**

- ಹಾಡುಗಳ ದೃಶ್ಯವಿಷ್ಕಾರ ಆಸ್ವಾದಕರವಾದ ಅನುಭವವಾಗಿದೆ.
- ತಂತ್ರಗಳು, ಮುದ್ರೆಗಳು, ಅಭಿನಯರೀತಿಗಳು ಇವುಗಳನ್ನು ಒಳಗೊಂಡು ನಡೆಸಲಿರುವ ನೈಪುಣ್ಯ.

**ಕಲಿಕಾ ಚಟುವಟಿಕೆಗಳು**

- ಹಾಡುಗಳು, ಕವಿತೆಗಳು ಶಾಸ್ತ್ರೀಯವಾಗಿ ದೃಶ್ಯಾವಿಷ್ಕಾರ ನಡೆಸಿರುವ ನೃತ್ಯಗಳನ್ನು ಕಾಣುವುದು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಲು ಹೇಳುವುದು.
- ವಿಶ್ಲೇಷಿಸುವರು
- ಸಂಗೀತ ನೀಡಿದ ಒಂದು ಕವಿತೆಯ ಓಡಿಯೋ ಮಕ್ಕಳನ್ನು ಕೇಳಿಸುವುದು. ಇದರ ಸಾಹಿತ್ಯಭಾಗ B.B ಯಲ್ಲಿ ಬರೆಯುವುದು. ಪ್ರತಿಯೊಂದು ಗೆರೆಗಳ ಅರ್ಥ ಗುಂಪಿನಲ್ಲಿ ಚರ್ಚಿಸುವುದು. ಅಧ್ಯಾಪಕರು ಹೇಳಿಕೊಡುವುದು. ಪ್ರತಿಯೊಂದು ಪದಕ್ಕೂ ಸಮಾನವಾದ ಮುದ್ರಾಭಿನಯ ಕಂಡುಕೊಳ್ಳುವುದು. ಹಿಂದಿನ ತರಗತಿಗಳಲ್ಲಿ ಅಭ್ಯಾಸಮಾಡಿದ ನೃತ್ಯದ ಹೆಜ್ಜೆಗಳನ್ನು ಉಪಯೋಗಿಸಿ ನೃತ್ಯ ಕ್ರಮೀಕರಿಸುವುದು. ನೃತ್ಯದಲ್ಲಿ ಉಪಯೋಗಿಸಿದ ತಾಳವನ್ನೂ ಅದರ ಪ್ರಯೋಜನಗಳನ್ನೂ ತಿಳಿದುಕೊಳ್ಳುವರು. ಅಗತ್ಯವಿದ್ದಲ್ಲಿ ಅಧ್ಯಾಪಕ ಸಹಾಯ ನೀಡಬಹುದು. ಪದಗಳಿಗೂ, ಸಾಲುಗಳಿಗೂ ಎಡೆಯಲ್ಲಿ ಹೆಚ್ಚು ಅಭಿನಯ ಸಾಧ್ಯತೆಯಿರುವ ಸ್ಥಳಗಳಲ್ಲಿ ಸಾಲುಗಳನ್ನು ಆವರ್ತಿಸಿ ಹಾಡಿ ಅಥವ ಉಪಕರಣಸಂಗೀತದ ಸಹಾಯದೊಂದಿಗೆ ನೃತ್ಯ ಮಾಡಬಹುದಾಗಿದೆ.
- ಗುಂಪಿನಲ್ಲಿ ಕಂಡುಕೊಂಡ ಈ ದೃಷ್ಯಾವಿಷ್ಕಾರವನ್ನು ತರಗತಿಯಲ್ಲಿ ಮಂಡಿಸುವುದು.
- ಚರ್ಚಿಸುವುದು

## ಮೌಲ್ಯನಿರ್ಣಯ

ಸೂಚಕಗಳು

ಮುದ್ರೆಗಳ ಸ್ಪಷ್ಟತೆ
ತಾಳ ಜ್ಞಾನ
ಅಭಿನಯ ಹಿರಿಮೆ
ಮಂಡನಾ ರೀತಿ

# ಒಂಭತ್ತನೇ ತರಗತಿ

## ಯೂನಿಟ್– 1 : ಲೋಕಧರ್ಮಿ, ನಾಟ್ಯಧರ್ಮಿ

ಯಾವುದೇ ಒಂದು ಕಲೆಗೆ ಸ್ವಾಭಾವಿಕತೆಗೂ ಹೊರತಾದ ಉನ್ನತವಾದ ಸ್ಥಾನವಿದೆ. ಆ ಉನ್ನತ ಮಟ್ಟಕ್ಕೆ ಮಕ್ಕಳನ್ನು ಏರಿಸುವುದೆ ಕಲಾಕಲಿಕೆಯ ಪರಮಗುರಿಯಾಗಿದೆ. ಇದಕ್ಕಾಗಿ ಸ್ವಾಭಾವಿಕವೂ ಅಲ್ಲದುದು ಆದ ಹಲವಾರು ಸಂದರ್ಭಗಳನ್ನು ಸೃಷ್ಟಿಸಿ ಮಗುವಿನ ಸೃಜನಾತ್ಮಕತೆಯನ್ನು ಉದ್ದೀಪನಗೊಳಿಸಬೇಕಾಗಿದೆ. ಈ ಚಟುವಟಿಕೆಗಳನ್ನು ನಾವು ತರಗತಿ ಕೋಣೆಗಳಲ್ಲಿ ನಡೆಸಬೇಕಾಗಿದೆ. ನೃತ್ಯ ಎಂಬ ಕಲೆಗೆ ಸಂಬಂಧಿಸಿ ಮೇಲೆ ಹೇಳಿದ ಸಂದರ್ಭವನ್ನು ನಮಗೆ ಸುಲಭವಾಗಿ ಸೃಷ್ಟಿಸಬಹುದಾಗಿದೆ. ಸ್ವಾಭಾವಿಕ ನೃತ್ಯದಿಂದ ಶಾಸ್ತ್ರೀಯ ನೃತ್ಯಕ್ಕಿರುವ ಒಂದು ರೂಪಾಂತರ ಇಲ್ಲಿ ಪ್ರತ್ಯೇಕ ವಿವರಿಸಲಾಗಿದೆ. ಶುದ್ಧನೃತ್ಯರೂಪಗಳ ಮಂಡನೆಯಲ್ಲೂ, ರಂಗಾವಿಷ್ಕಾರದಲ್ಲಿಯೂ ಮಗು ತಿಳಿದುಕೊಂಡ ವಿಷಯಗಳ ಪ್ರಬಲ ಪ್ರವಾಹವೇ ಇಲ್ಲಿ ಪ್ರಕಟವಾಗುವುದು. ಸೃಜನಾತ್ಮಕತೆಯ ಅತ್ಯಂತ ಉದಾತ್ತವಾದ ಬಹಿರ್ಸ್ಫುರಣಗಳು ಕಲಿಕಾ ಸಾಧನೆಗಳಾಗಿ ಈ ಯೂನಿಟ್ ಬಹಳ ಗಮನಾರ್ಹವಾಗಿದೆ.

### ಕಲಿಕಾ ಸಾಧನೆ

- ಲೋಕಧರ್ಮಿ, ನಾಟ್ಯಧರ್ಮಿ ಎಂಬೀ ಅಭಿನಯ ವಿಭಾಗಗಳ ಕುರಿತು ವಿವರಗಳನ್ನು ಸಂಗ್ರಹಿಸಿ ಮಂಡಿಸುವುದು.

### ಆಶಯ ತಿಳುವಳಿಕೆ

- ಸಾಧಾರಣವಾಗಿ ಮನುಷ್ಯರಿಗುಂಟಾಗುವ ದು:ಖಗಳು, ಸಂತೋಷಗಳು ಮೊದಲಾದ ಭಾವನಾತ್ಮಕ ವಿಚಾರಗಳು ಅವುಗಳ ಕೆಲಸಗಳು ವೊದಲಾದುವುಗಳು ಪ್ರತ್ಯೇಕ ನಿಬಂಧನೆಗಳಿಗನುಸಾರವಲ್ಲದೆ (ಸಂಕೇತಗಳಿಲ್ಲದೆ) ಅನುಕರಿಸಿ ಯಥಾರ್ಥವಾಗಿ ಅಭಿನಯಿಸುವುದೇ ಲೋಕಧರ್ಮ.

### ಕೇಂದ್ರಾಶಯ

ಕೇಂದ್ರಾಶಯ ಅಂದರೆ ನಿಯಮಾನುಸಾರವಾಗಿ ಹಂತಗಳು, ಹಸ್ತಗಳು, ಭಾವನೆಗಳು, ನೃತ್ಯಚಲನೆಗಳು ಎಂಬಿವುಗಳಿಂದ ಶೈಲೀಕೃತವಾದ ಅಭಿನಯ ನಿರ್ವಹಿಸುವುದೇ ನಾಟ್ಯಧರ್ಮಿ. ಈ ಪ್ರಾಪಂಚಿಕ ಶಕ್ತಿಗಳನ್ನೂ, ಜೀವಜಾಲಗಳನ್ನೂ ಅನುಸರಿಸಲಿರುವ ಉತ್ಸಾಹ ಮನುಷ್ಯನಿಗೆ ಸಹಜವಾಗಿರುವುದಾಗಿದೆ. ಈ ಅನುಕರಣೆಗಳು ನಿರ್ವಹಿಸಿ ಬಳಿಕ ಶೈಲಿಯಾಗಿಸಿ, ಕೆಲವು ನಿಬಂಧನೆಗಳಿಗೆ ಒಳಡಿಸಿದರು. ಇದಕ್ಕಾಗಿ ಉಪಯೋಗಿಸಿದ ಹಸ್ತಗಳು, ಇತರ ಆರಾಧನೆಗೂ

ಕೆಲವು ಆಶಯಗಳ ಬದಲಾವಣೆಗೂ ಉಪಯೋಗಿಸಲಾಯಿತು. ಈ ರೀತಿ ನಿಬಂಧನೆಗಳಿಗೆ ವಿಧೇಯವಾಗಿಸಿದ ಕೆಲವು ಹಸ್ತಗಳೂ, ಅಭಿನಯ ರೀತಿಗಳೂ ಪರಸ್ಪರ ಪ್ರತಿಬಿಂಬಿಸುವ ಸಂಬಂಧವಿಲ್ಲದ ಕಾರ್ಯಗಳನ್ನು ಬಿಂಬಿಸುವ ರೀತಿ ಉಂಟಾಯಿತು. ಉದಾ:– ತ್ರಿಪತಾಕಹಸ್ತ – ಬಲಕ್ಕೆ ತಲೆಯ ಮೇಲೆ ಹಿಡಿದರೆ ರಾಜನಾಗುವುದು ಎಂಬ ನಿಯಮ. ಆದರೆ ಇದಕ್ಕೂ ರಾಜನಿಗೂ ಯಾವುದೇ ಪರಸ್ಪರ ಸಂಬಂಧವೂ ಇಲ್ಲ. ಅಂದರೆ ಆಶಯಗಳನ್ನು ವಿನಿಮಯ ಮಾಡುವುದಕ್ಕಾಗಿ ಬಹಳ ಸ್ವಾಭಾವಿಕವಾಗಿ ಇರುವ ನೇರವಾದ ಒಂದು ರೀತಿ ಎಂದರೆ ಶೈಲೀಕೃತವಾಗಿ ವ್ಯಾಕರಣಸಹಿತ ಇರುವ ಒಂದು ಸ್ಫುಟತೆಯಿಂದ ಕೂಡಿದ ಒಂದು ರೀತಿ ಅಸ್ತಿತ್ವಕ್ಕೆ ಬಂತು. ಈ ವ್ಯತ್ಯಾಸವನ್ನು ಶಾಸ್ತ್ರೀಯವಾಗಿ ವಿಶ್ಲೇಷಿಸುವಾಗ ಒಂದು ಲೋಕಧರ್ಮಿಯದ್ದೂ ಇನ್ನೂಂದು ನಾಟ್ಯಧರ್ಮಿಯದ್ದೂ ಪ್ರಯೋಗಗಳಾಗಿವೆ ಎಂದು ನಮಗೆ ತಿಳಿಯಬಹುದು. ಈ ಎರಡೂ ರೀತಿಯೂ ನೃತ್ಯಕ್ಕೆ ಸಂಬಂಧಿಸಿ ಬಹಳ ಪ್ರಾಧಾನ್ಯವಿರುವುದಾಗಿದೆ. ಆದ್ದರಿಂದಲೇ ಚತುರ್ವಿಧಾಭಿನಯಗಳಲ್ಲಿ ಪ್ರತಿಯೊಂದರಲ್ಲೂ ಇದರ ಸಾಧ್ಯತೆಗಳನ್ನು ಪ್ರತ್ಯೇಕ ಪರಿಗಣಿಸಬೇಕಾಗಿದೆ. ಅದು ಮಕ್ಕಳಿಗೆ ತಿಳಿಸಲೂ ಬೇಕು. ಈ ಯೂನಿಟ್‌ನಲ್ಲಿ ಲೋಕಧರ್ಮಿ ನಾಟ್ಯಧರ್ಮಿ ಪ್ರಯೋಗಗಳ ಸಾಧ್ಯತೆಗಳನ್ನು ತಿಳಿಯಲು ಪ್ರಯತ್ನಿಸುವ.

### ಕಲಿಕಾ ಚಟುವಟಿಕೆಗಳು

- ಸಿ.ಡಿ ಗಳ ಸಹಾಯದಿಂದ ಮೋಹಿನಿಯಾಟ್ಟಂ, ತುಳ್ಳಲ್ ಎಂಬೀ ನೃತ್ಯರೂಪಗಳನ್ನು ಪ್ರದರ್ಶಿಸುವುದು. ನೃತ್ಯೋತ್ಸವ, ಕಲೋತ್ಸವ ಇವುಗಳೂ ಆಗಬಹುದು. ತರಗತಿಯ ಮಕ್ಕಳನ್ನು ನಾಲ್ಕು ಗುಂಪು ಮಾಡಿ ಇದರಿಂದ ಎರಡು ನೃತ್ಯರೂಪಗಳನ್ನೂ ಅಭಿನಯರೀತಿಗಳನ್ನೂ ಚರ್ಚಿಸುವುದು. ಟಿಪ್ಪಣಿ ತಯಾರಿಸಿ ಮಂಡಿಸುವುದು.
- ಅಭಿನಯ ನಾವು ಸಾಧಾರಣ ಚಟುವಟಿಕೆಗಳನ್ನು ನಡೆಸುವ ಅದೇ ರೀತಿಯಲ್ಲಿ ನಡೆಸುವುದು.
- ಸ್ವಲ್ಪ ಉತ್ಪ್ರೇಕ್ಷೆ ಹೆಚ್ಚಿಸಿ ಮಾಡುವುದು.
- ಸಾಧಾರಣ ಮಾಡುವುದಕ್ಕಿಂತ ಸ್ವಲ್ಪ ವಿಭಿನ್ನ ರೀತಿಯಲ್ಲಿ
- ಕೊನೆಗೆ ಅಧ್ಯಾಪಕರು ಸೇರಿಕೊಳ್ಳುವುದು.
- ಎರಡು ನೃತ್ಯದಲ್ಲಿನ ಅಭಿನಯ ರೀತಿಯಲ್ಲಿರುವ ವ್ಯತ್ಯಾಸ ಅದರಲ್ಲಿ ಉಪಯೋಗಿಸಲಾದ ಅಭಿನಯ ಸಂಕೇತಗಳ ವ್ಯತ್ಯಾಸಗಳಿಂದ ಎಂದು ಹೇಳುವುದು. ತುಳ್ಳಲಿನಲ್ಲಿ ಹೆಚ್ಚಾಗಿ ಲೋಕಧರ್ಮಿ ಅಭಿನಯ ರೀತಿ ಉಪಯೋಗಿಸಿದಾಗ ಮೋಹಿನಿಯಾಟ್ಟಂ ನಲ್ಲಿ ಹೆಚ್ಚಾಗಿ ನಾಟ್ಯಧರ್ಮಿಯನ್ನು ಉಪಯೋಗಿಸಲಾಗಿದೆ. ಇಲ್ಲಿ ದಾಖಲಿಸಿದ ಸ್ಪಷ್ಟತೆಗೆ ಹೆಚ್ಚು ಆದ್ಯತೆ ನೀಡಿಕೊಂಡಿರುವ ಮೌಲ್ಯನಿರ್ಣಯ ನಡೆಸಬಹುದಾಗಿದೆ.
- ಶಾಲಾ ಕಲೋತ್ಸವದಲ್ಲಿ ರಾಧಿಕಾ ಅಭಿನಯಿಸಿದ ಜಾನಪದ ನೃತ್ಯವು ರಾಮಾಯಣದಲ್ಲಿನ ಶೂರ್ಪಣಖಿಯ ಕಥೆಯನ್ನು ಆಧಾರವಾಗಿರಿಸಿಯಾಗಿತ್ತು. ತರುವಾಯ ನಡೆದ ಕೇರಳ ನಟನದಲ್ಲಿ ಜಗನ್ ಅಭಿನಯಿಸಿದುದು ಇದೇ ಕಥೆಯಾಗಿತ್ತು. ಇಬ್ಬರೂ ಒಂದೇ ತರಗತಿಯವರು ಗೆಳೆಯರು ಗುಂಪಿನಲ್ಲಿ ಕುಳಿತು ನೆನಪಿಸಿ ಬರೆಯತೊಡಗಿದರು. ಕೆಲವು ವಿಷಯಗಳನ್ನು ಜಗನ್ ಮತ್ತು ರಾಧಿಕಾಳಲ್ಲಿ ಕೇಳಿ ತಿಳಿದರು. ತುಂಬ ಬರೆದು ಆದಾಗ ಎರಡೂ ವಿಷಯಗಳ ವೀಡಿಯೋ ರೆಕಾರ್ಡ್ ತೋರಿಸಿದರು. ಆಗ ಸುಲಭವಾಯಿತು. ಎಲ್ಲಾ ಗುಂಪಿನವರು ಸಾಧಾರಣ ಸರಿಯಾಗಿಯೇ ಟಿಪ್ಪಣಿ ತಯಾರಿಸಿದರು. ಅಧ್ಯಾಪಕರು ಕ್ರೋಡೀಕರಿಸಿದರು.

- ಇಲ್ಲಿ ವಿಷಯಕ್ಕೆ ತಲಪುವ ರೀತಿಯಲ್ಲಿ ವಿಶ್ಲೇಷಣೆ ನಡೆಸಿದ ಟಿಪ್ಪಣಿಗಳನ್ನು ನಾವು ಹೆಚ್ಚು ಗಮನಿಸಬೇಕಾಗಿದೆ.
- ಮೊದಲು ನಡೆಸಿದ ಚಟುವಟಿಕೆಯಂತೆ ಕಥಕ್ಕಳಿ ಮತ್ತು ನಾಟಕ ಎಂಬಿವುಗಳನ್ನು ತೋರಿಸಿಕೊಂಡು ಚಟುವಟಿಕೆ ಆರಂಭಿಸುವುದು.

### ಮೌಲ್ಯಮಾಪನ

- ಮೌಲ್ಯಮಾಪನ ಮಕ್ಕಳು ಸ್ವಯಂ ನಡೆಸಬೇಕು ವಿಷಯದ ಸಮಗ್ರತೆ ಸೂಕ್ಷ್ಮತೆ ಎಂಬಿವುಗಳ ಆಧಾರದಲ್ಲಿ ಅಧ್ಯಾಪಕರು ಮೌಲ್ಯ ನಿರ್ಣಯ ನಡೆಸುವರು.

## ಯೂನಿಟ್ – 2 : ಶುದ್ದ ನೃತ್ಯ

ನೃತ್ತ, ನೃತ್ಯ, ನಾಟ್ಯ ಎಂಬಿವುಗಳು ನಮ್ಮ ನೃತ್ಯ ರೂಪಗಳಲ್ಲಿ ಕಂಡುಬರುವ ಪ್ರಧಾನ ಮೂರು ಹಂತಗಳಾಗಿವೆ. ಇದರಲ್ಲಿ ಬಹಳ ಸವಿಶೇಷತೆಯೂ, ಚಲನಾತ್ಮಕವೂ ಆದುದು ನೃತ್ತ. ಈ ಘಟಕವು ಪ್ರತಿಯೊಂದು ನೃತ್ತದ ವ್ಯಕ್ತಿತ್ವವನ್ನು ಅಸ್ತಿತ್ವದಲ್ಲಿರಿಸುವುದು. ಅಭಿನಯವೂ, ಆಹಾರ್ಯ ಗಳೆಲ್ಲವು ಇದಕ್ಕೆ ಪೂರಕವಾಗಿ ಕಾರ್ಯವೆಗುವುದು. ಆಶಯಾವಿಷ್ಕಾರಕ್ಕಾಗಿ ಈ ಸಂಕೇತಗಳನ್ನು ಹೆಚ್ಚು ಉಪಯೋಗಿಸುವುದಿಲ್ಲ. ಆದ್ದರಿಂದಲೇ ಇದರ ಆಶಯಗ್ರಹಣಕ್ಕೆ ಇತರ ಎರಡು ಘಾಟಕಗಳಂತೆ ಕಷ್ಟಕರವಾಗಿರುವುದಿಲ್ಲ. ಅಂದರೆ ಇದು ಹೆಚ್ಚಿನ ಸಲ ಭೌತಿಕ ಚಟುವಟಿಕೆಯಾಗಿ ಬದಲಾಗುವುದೆಂದರ್ಥ. ಆದರೆ ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ಆಶಯಾವಿಷ್ಕಾರಕ್ಕಾಗಿ ಶುದ್ಧ ನೃತ್ತವನ್ನು ಉಪಯೋಗಿಸಲಾಗುವುದು. (ಕಥಕ್ಕಳಿ)

ನೃತ್ತ ಕಛೇರಿಗಳಲ್ಲಿ ಹೆಚ್ಚಿನವುಗಳೂ ಶುದ್ದ ನೃತ್ತದೊಂದಿಗೆ ಆರಂಭಿಸುವರು. ನೃತ್ತ ಕಛೇರಿಗಳಲ್ಲಿ ಸಾಧಾರಣ ಕಂಡುಬರುವುದು ಶುದ್ಧನೃತ್ತರೂಪಗಳಾಗಿವೆ. ಪುಷ್ಪಾಂಜಲಿ, ಕೌತುವಂ, ಅಲಾರಿಪ್ಪ್, ಮಾಖರಿ, ಚೊಲ್‌ಕೆಟ್ಟು, ಜತಿಸ್ವರಂ, ಸ್ವರಜತಿ, ತಿಲ್ಲಾನ, ಪುರಪ್ಪಾಡ್, ಎಂಬ ವಿಧಗಳು. ಶುದ್ಧನೃತ್ತರೂಪಗಳು ಹೆಚ್ಚಿನವುಗಳೂ ಚೊಲ್‌ಕೆಟ್‌ಗಳಿಗೆ ಆಧಾರವಾಗಿರಿಸಿ ತಂತ್ರಗಳನ್ನು ಕ್ರಮೀಕರಿಸುವುದು. ಚೊಲ್‌ಕೆಟ್‌ಗಳು ಸ್ವರದೊಂದಿಗೂ ಅಲ್ಲದೆಯೂ ವೇದಿಕೆಯಲ್ಲಿ ಅಭಿನಯಿಸಲಾಗುವುದು. ಈ ಯೂನಿಟ್‌ನಲ್ಲಿ ನಮಗೆ ಕೆಲವು ಶುದ್ಧರೂಪಗಳನ್ನು ಪರಿಚಯಿಸಿಕೊಳ್ಳಬಹುದು.

### ಕಲಿಕಾ ಸಾಧನೆ

- ಶುದ್ಧನೃತ್ತರೂಪಗಳಾದ ಪುಷ್ಪಾಂಜಲಿ, ಜತಿಸ್ವರದಂತಿರುವ ನೃತ್ಯವಿಧಗಳನ್ನು ಅಭಿನಯಿಸುವುದು.

### ಆಶಯ ತಿಳುವಳಿಕೆ

- ನೃತ್ಯ–ಅಭಿನಯ ಕ್ರಮದಲ್ಲಿ ಪ್ರಥಮವಾದುದು ಪುಷ್ಪಾಂಜಲಿ. ಯಾವುದೇ ಶಾಸ್ತ್ರೀಯ ನೃತ್ಯರೂಪವಾದರೂ ಪ್ರಾರಂಭದಲ್ಲಿ ಇಂತಹ ಒಂದು ವಿಧವನ್ನು ಮಂಡಿಸುವುದು. ದೇವರ ಪ್ರೀತಿಗಾಗಿ, ಜತಿಯೂ, ಸ್ವರಗಳೂ ಹೆಣೆದುಂಟಾದುದಾಗಿದೆ ಜತಿಸ್ವರ. ನರ್ತಕರ ತಂತ್ರ ಶುದ್ಧಿ ಅಳೆಯಲು ಉಪಯೋಗಕರವಾದ ವಿಧವಾಗಿದೆ ಜತಿಸ್ವರ.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ – 1***

- ಲಕ್ಷ್ಮಿಯ ನೃತ್ಯ ಕಳೆದ ದಿನವಾಗಿತ್ತು. ಇವತ್ತು ಲಕ್ಷ್ಮಿ ತರಗತಿಗೆ ಬರುವಾಗ ಅದರ ವಿ.ಸಿ.ಡಿಯನ್ನು ತಂದಿದ್ದಾಳೆ. ಲಕ್ಷ್ಮಿ ಸಹಪಾಠಿಗಳು ಕೆಲವರು ಅದನ್ನು ನೋಡಲು ಹೋಗಿದ್ದರು. ನೃತ್ಯದ ಈ ವಿ.ಸಿ.ಡಿ ಅಧ್ಯಾಪಕರು ಇಡೀ ತರಗತಿಗೆ ತೋರಿಸುತ್ತಾರೆ (ಇಂತಹ ಒಂದು ತರಗತಿ ಕೋಣೆಯ ವ್ಯವಸ್ಥೆ ಮಾಡುವುದು ಒಳ್ಳೆಯದು) ಅಲ್ಲದಿದ್ದರೆ ಅಧ್ಯಾಪಕರು ಒಂದು ನೃತ್ಯತಥೇರಿಯ ವಿ.ಸಿ.ಡಿ ತೋರಿಸುವುದು ಆರಂಭದ 2,3 ನೃತ್ಯಗಳನ್ನು ಕಂಡಾಗ ವಿ.ಸಿ.ಡಿ ಓಫ್ ಮಾಡಿ ಕಂಡ ವಿಷಯಗಳ ಕುರಿತು ಚರ್ಚೆ ನಡೆಸುವುದು. ಇದೇ ರೀತಿ ಇತರ ಹಲವಾರು ಪ್ರಸಿದ್ಧರಾದ ನರ್ತಕರು ಮಂಡಿಸಿದ ನೃತ್ಯಕಥೇರಿಗಳ ವಿ.ಸಿ.ಡಿ ತೋರಿಸುವುದು. (ಮೊದಲಭಾಗ ಮಾತ್ರ) ಪ್ರತಿಯೊಂದರಲ್ಲೂ ಮೊದಲು ಕಾಣುವ ನೃತ್ಯಗಳು ಪರಸ್ಪರವಿರುವ ಸಾಮ್ಯತೆಗಳನ್ನು ದಾಖಲಿಸುವುದು.
- ಮುದ್ರೆಗಳಿಗೂ ಅಭಿನಯಕ್ಕೂ ಹೆಚ್ಚು ಪ್ರಾಧಾನ್ಯತೆಯಿಲ್ಲ.
- ಹೆಚ್ಚಿನವುಗಳಲ್ಲೂ ತಂತ್ರಗಳು ತುಂಬಿಕೊಂಡಿವೆ.
- ಯಾಕಾಗಿರಬಹುದು ಪ್ರಾರಂಭದಲ್ಲಿ ಈ ನೃತ್ಯವನ್ನಾಡುವುದು.?
- ಅಧ್ಯಾಪಕರ ಪ್ರಶ್ನೆಗೆ ವಿವಿಧ ರೀತಿಯ ಉತ್ತರಗಳು
  ರಂಗಶುದ್ಧಿ, ದೇವಪ್ರೀತಿ, ಹೆಚ್ಚು ನೃತ್ಯ ಮಾಡುವುದಕ್ಕಾಗಿ
- ದೇಹವನ್ನು ಪಳಗಿಸುವುದು. ಇಂತಹ ಉತ್ತರಗಳು ಮಕ್ಕಳಿಂದ ಬಂದಾಗ ಅಧ್ಯಾಪಕರು ಕ್ರೋಡೀಕರಿಸುವುದು. ಉತ್ತರದ ಸಾಧ್ಯತೆಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವರು. ಇದೇ ರೀತಿ ಪ್ರಾರಂಭದಲ್ಲಿ ವೇದಿಕೆಯಲ್ಲಿ ಮಂಡಿಸುವ ಇತರ ವಿಧಗಳನ್ನು ಪರಿಚಯಿಸುವುದು.
- ಆಸ್ವಾದನಕ್ಕಿರುವ ಸೂಕ್ಷ್ಮತೆ, ಸಮಗ್ರತೆ.

***ಚಟುವಟಿಕೆ – 2***

- ಒಂದು ಪುಷ್ಪಾಂಜಲಿಯ ಪ್ರದರ್ಶನವನ್ನು ಅಧ್ಯಾಪಕರು ತೋರಿಸುವುದು. ಅಗತ್ಯವಿದ್ದರೆ ವಿ.ಸಿ.ಡಿ ಉಪಯೋಗಿಸಬಹುದು. ಒಂದು ವಿಧವನ್ನು ಪರಿಚಯಿಸುವಾಗ ರಾಗ, ತಾಳ, ಕಂಪೋಸರ್, ಕೊರಿಯೋಗ್ರಾಫಿ, ಇವರುಗಳ ಹೆಸರನ್ನು ಮಕ್ಕಳಿಗೆ ಪರಿಚಯಿಸಬಹುದಾಗಿದೆ.
- ವಿ.ಸಿ.ಡಿ ಉಪಯೋಗಿಸಿ ಇತರ ಕೆಲವು ಶುದ್ಧ ನೃತ್ತರೂಪಗಳನ್ನು ಪರಿಚಯಿಸಬಹುದಾಗಿದೆ.

  *ಉದಾ:– ಚೊಲ್‌ಕೆಟ್ಟು, ಅಲಾರಿಪ್ಪು, ಜತಿಸ್ವರ, ಪುರಪ್ಪಾಡ್, ಮೊದಲಾದುವುಗಳು.*

## ಮೌಲ್ಯಮಾಪನ

- ಮಕ್ಕಳು ತರಭೇತಿ ಪಡೆದ ಬಳಿಕ ವೈಯಕ್ತಿಕವಾಗಿ ಅಥವ ಗುಂಪಿನಲ್ಲಿ ಪ್ರಕಟಿಸಲು ಅವಕಾಶ ನೀಡಬೇಕು. ಇದನ್ನು ಅಧ್ಯಾಪಕರೂ ಮೌಲ್ಯಮಾಪನ ಮಾಡಬಹುದಾಗಿದೆ.

***ಸೂಚಕಗಳು***

- ತಂತ್ರಗಳ ಶುದ್ಧಿ
- ತಾಳ
- ಮಂಡನಾ ಶೈಲಿ

# ಯೂನಿಟ್ – 3 : ನೃತ್ಯ ಪ್ರದರ್ಶನ

ದಕ್ಷಿಣ ಭಾರತದ ಶಾಸ್ತ್ರೀಯ ನೃತ್ಯಕಥೇರಿಗಳಲ್ಲಿನ ಅತೀವ ಹೃದ್ಯಗಳಾದ ವಿಧಗಳಾಗಿದೆ ಪದ್ಯಗಳು. ಭರತನಾಟ್ಯ, ಕೂಚ್ಚಿಪುಡಿ, ಮೋಹಿನಿಯಾಟ್ಟಂ, ಕೇರಳ ನಟನೆ ಯಾವುದೇ ನೃತ್ಯರೂಪವಾದರೂ ಪದ್ಯಗಳ ಮಂಡನೆಯು ಪ್ರೇಕ್ಷಕರನ್ನು ಹೆಚ್ಚು ಆಸ್ವಾದಿಸುವಂತೆ ಮಾಡಬಹುದು. ಕೆಲವೊಮ್ಮೆ ಶಾಸ್ತ್ರೀಯಕ್ಕೂ ಮೀರಿ ಈ ನೃತ್ಯ ಆಸ್ವಾದ್ಯವಾಗುವುದು ಎಂಬುದು ಇದರ ಅಭಿನಯ ರೀತಿಯ ವಿಶೇಷತೆಯೇ ಆಗಿದೆ. ಬಹಳ ಕಡಿಮೆ ನೃತ್ಯ ಉಪಯೋಗಿಸಲಾಗುವುದು ಎಂಬುವುದೂ ನಾಟ್ಯದಲ್ಲಿ ಬಹಳ ಪ್ರಧಾನವಾದುದು ಎಂಬುದು ಪದ್ಯಗಳ ವಿಶೇಷತೆಯೇ ಆಗಿದೆ. ಆದ್ದರಿಂದಲೇ ಈ ನೃತ್ಯವು ಪ್ರೇಕ್ಷಕರನ್ನು ಇಷ್ಟು ಹೆಚ್ಚು ಆಕರ್ಷಸಲು ಕಾರಣ. ಈ ಯೂನಿಟ್‌ನ ಚಟುವಟಿಕೆಗಳಿಂದ ಪದ್ಯಾಭಿನಯದ ರೀತಿಯ ಕುರಿತು ಮಗುವಿಗೆ ಸ್ಪಷ್ಟವಾದ ತಿಳುವಳಿಕೆ ಸಿಗಬೇಕಾಗಿದೆ.

## ಕಲಿಕಾ ಸಾಧನೆ

- ನೃತ್ಯದ ಒಂದು ಪದ್ಯವನ್ನು ಮಂಡಿಸುವುದು.

## ಆಶಯ ತಿಳುವಳಿಕೆ

- ಪದ್ಯವು ಒಂದು ಅಭಿನಯ ಪ್ರಾಧಾನ್ಯವಿರುವುದಾಗಿದೆ.
- ಹೆಚ್ಚಿನಂಶ ಹಿಂದಿನ ಕಾಲದಲ್ಲಿ ಇವುಗಳನ್ನು ಕ್ರಮೀಕರಿಸಲಾಗಿದೆ.
- ಇದಕ್ಕಾಗಿ ಉಪಯೋಗಿಸಿದ ಸಂಗೀತ ಬಹಳ ಭಾವನಾತ್ಮಕವಾಗಿದೆ.
- ಪದ್ಯಗಳನ್ನು ಆರಿಸಲಿರುವ ಸಾಮರ್ಥ್ಯ

## ಕಲಿಕಾ ಚಟುವಟಿಕೆಗಳು

- ಬಹಳ ಪ್ರಸಿದ್ಧರಾದ ನರ್ತಕರ ಪದ್ಯಗಳನ್ನು ಶ್ರದ್ಧೆಯಿಂದ ನಿರೀಕ್ಷಿಸುವುದು. (ಸಿ.ಡಿಯ ಸಹಾಯದೊಂದಿಗೆ)
- ಎರಡೋ, ಮೂರೋ ಸಲ ಒಂದೇ ಪದ್ಯವನ್ನು ವೀಕ್ಷಿಸುವುದು. ಸೂಕ್ಷ್ಮವಾದ ಅಭಿನಯ ರೀತಿಗಳನ್ನು ತಿಳಿಯುವುದಕ್ಕೆ ಇದು ಸಹಾಯಕವಾಗಿದೆ. ತದನಂತರ ವೈಯಕ್ತಿಕವಾಗಿ ಅಭಿನಯದ ಕುರಿತಾದ ವಿವರಗಳನ್ನು ಬರೆಯುವರು. ಗುಂಪಿನಲ್ಲಿ ಕುಳಿತು ಕ್ರೋಡಿಕರಿಸುವರು. ಒಂದು ಪದ್ಯ ಮಂಡಿಸಲು ಬೇಕಾದ ವಿಚಾರಗಳನ್ನು ತಿಳಿಯುವರು.
- ಅಧ್ಯಾಪಕರು ನೀಡಿದ ಒಂದು ಲಘುವಾದ ಪದ್ಯದ ಕುರಿತು ಗುಂಪುಗಳಲ್ಲಿ ಚರ್ಚಿಸುವರು. ಪದ್ಯದ ಅರ್ಥಕ್ಕೆ ಸಂಬಂಧಿಸಿದ ನಿರ್ದೇಶನಗಳನ್ನು ಅಧ್ಯಾಪಕರು ನೀಡುವರು. ಮಕ್ಕಳು ಕೈಮುದ್ರೆ, ಮುಖಾಭಿನಯ, ನೃತ್ಯ, ಮೊದಲಾದ ಸಂಕೇತಗಳನ್ನು ಸೇರಿಸಿ ಪದ್ಯಗಳಿಗೆ ನೃತ್ತಭಾಷೆ ನೀಡುವರು. ಪದ್ಯದ ಅರ್ಥಕ್ಕೆ ಸಮಾನವಾದ ಮುದ್ರೆಗಳನ್ನು ವಿನ್ಯಾಸಗೊಳಿಸುವುದರಲ್ಲಿ ಅಧ್ಯಾಪಕರ ಸಹಾಯವೂ ಜ್ಞಾನವೂ ಉಪಯೋಗಿಸಬೇಕಾಗಿದೆ. ಇಲ್ಲಿ ಮಕ್ಕಳು ಅಭಿನಯಿಸಿದ ಬಳಿಕ ಅದೇ ಪದ್ಯದ ಸಿ.ಡಿ ಪ್ರದರ್ಶಿಸಿ ಅಗತ್ಯವಾದ ಸೇರಿಸುವಿಕೆ ಮಾಡಬಹುದು. ಅಧ್ಯಾಪಕರಿಗೆ ಸ್ವಯಂ ಮಾಡಿ ತೋರಿಸಲು ಸಾಧ್ಯವಾದಲ್ಲಿ ಸಿ.ಡಿ ಉಪಯೋಗದ ಅಗತ್ಯವಿಲ್ಲ.
- ಪದ್ಯಗಳಿಗೆ ಬದಲಾಗಿ ದೇಷಭಕ್ತಿಗೀತೆಗಳೋ, ಲಘು ಕಿರ್ತನೆಗಳೋ ಉಪಯೋಗಿಸಿ ಈ ಚಟುವಟಿಕೆ ಮುಂದುವರಿಸಬಹುದಾಗಿದೆ.

ಉದಾಹರಣೆಗಳು

1. ಜನ್ಮಕಾರಿಣಿ ಭಾರತಂ
   ಕರ್ಮಮೇದಿನಿ ಭಾರತಂ
2. ವಂದೇ ಮಾತರಂ ಸುಜಲಾಂ ಸುಫಲಾಂ
   ಮಲಯಜ ಶೀತಲಾಂ ಸಸ್ಯಶ್ಯಾಮಲಾಂ ಮಾತರಂ
3. ಭಾರತ ಸಮುದಾಯ ಭಾರತ ಸಮುದಾಯ
4. ನಮಿಪ್ಪಿನ್ ಭಾರತಾಂಬೆಯೆ.
5. ಜಯ ಭಾರತ ಜನನಿಯ ತನುಜಾತೆ
   ಜಯ ಹೇ ಕರ್ನಾಟಕ ಮಾತೆ

## ಯೂನಿಟ್ – 4 : ನೃತ್ತಾವಿಷ್ಕಾರ

ಇದು ಕಲಿಕಾ ಸಾಧನೆ 2ರ ಮುಂದುವರಿದ ಭಾಗವಾಗಿದೆ. ಅಭಿನಯದಂತೆ ನೃತ್ತಕ್ಕೂ ಆದ್ಯತೆ ನೀಡಿಕೊಂಡು ಇಲ್ಲಿ ಚಟುವಟಿಕೆಗಳನ್ನು ಕ್ರಮೀಕರಿಸಬೇಕಾಗಿದೆ. ನೃತ್ತದ ಎಲ್ಲಾ ಅಂಗಗಳಿಗೂ (ನೃತ್ತಂ, ನೃತ್ಯ, ನಾಟ್ಯ) ಪ್ರಾಧಾನ್ಯತೆ ಸಿಗುವಂತೆ ಮಂಡಿಸಬೇಕಾಗಿದೆ. ಇದಕ್ಕೆ ಅಗತ್ಯವಾದ ಸಜ್ಜೀಕರಣ ಮೊದಲೇ ನಡೆಸಬೇಕಾಗಿದೆ. ಯೋಗ್ಯವಾದ ಹಾಡುಗಳನ್ನು ಕಂಡುಹಿಡಿಯಬೇಕಾಗಿದೆ. ಹಾಡಿನ ಸಾಲುಗಳ ಅರ್ಥ ಯೋಗ್ಯ ಹೆಜ್ಜೆಗಳು (Steps) ಮುದ್ರೆಗಳು ಮೊದಲಾದುವುಗಳನ್ನು ಆರಿಸುವುದು. ಇಲ್ಲಿ ಬಹಳ ಪ್ರಧಾನ್ಯವಿರುವುದಾಗಿದೆ. ಆದ್ದರಿಂದ ಅಧ್ಯಾಪಕನು ಯಥೋಚಿತವಾಗಿ ಅವರಿಗೆ ಸಹಾಯ ಮಾಡುತ್ತಿರಬೇಕು. ಇಂತಹ ಚಟುವಟಿಕೆಗಳು ಮಕ್ಕಳನ್ನು ನೃತ್ಯಕಲಿಕೆಗೆ ಹೆಚ್ಚು ಆಸಕ್ತಿ ಹುಟ್ಟಿಸುವುದು.

### ಕಲಿಕಾ ಸಾಧನೆ

- ಯೋಗ್ಯವಾದ ಹಾಡುಗಳಿಗೆ ನೃತ್ಯಾವಿಷ್ಕಾರ ನಡೆಸುವುದು.

### ಆಶಯ ತಿಳುವಳಿಕೆ

- ನೃತ್ಯಾವಿಷ್ಕಾರಕ್ಕೆ ಸರಿಯಾದ ತಾಳಬೋಧದ ಅಗತ್ಯವಿದೆ.
- ಮುದ್ರೆಗಳ ಕುರಿತಾದ ತಿಳುವಳಿಕೆ ಪ್ರಧಾನವಾಗಿದೆ
- ಲೋಕಧರ್ಮಿ, ನಾಟ್ಯಧರ್ಮಿ ಎಂಬಿವುಗಳ ತಿಳುವಳಿಕೆ ಆವಿಷ್ಕರಣಕ್ಕೆ ಸಹಾಯ ಮಾಡುವುದು.

### ಕಲಿಕಾಚಟುವಟಿಕೆಗಳು

- ಅಧ್ಯಾಪಕರು ಒಂದು ಹಾಡನ್ನು ಕೇಳಲು ಅವಕಾಶ ನೀಡುವುದು.
  (ನೃತ್ತಂ, ನೃತ್ಯ, ನಾಟ್ಯ, ಇವು ಮೂರಕ್ಕೂ ಸಾಧ್ಯತೆಗಳಿರುವ ಹಾಡುಗಳನ್ನು ಆಯ್ಕೆ ಮಾಡುವುದು.)
- ಚಲನೆಗೆ ಹೆಚ್ಚು ಅವಕಾಶವಿರುವ ಚಲನಾತ್ಮಕವಾದ ಹಾಡುಗಳನ್ನು ಆಯ್ಕೆ ಮಾಡಿದರೆ ಮಕ್ಕಳಿಗೆ ಹೆಚ್ಚು ಆಸಕ್ತಿದಾಯಕವಾಗಬಹುದು.
- ಈ ಹಾಡನ್ನು ಶ್ರದ್ಧಾಪೂರ್ವಕವಾಗಿ ಕೇಳಲು ಅವಕಾಶ ನೀಡುವುದು.
- ಎರಡೋ ಮೂರೋ ಸಲ ಹಾಡು ಕೇಳಿಸುವುದು ಇದರ ಆಶಯ ಮತ್ತು ಅಭಿನಯ ಸಾಧ್ಯತೆಗಳ ಕುರಿತು ಗುಂಪಿನಲ್ಲಿ ಚರ್ಚೆಗಳಲ್ಲಿ ಭಾಗವಹಿಸುವುದು. ಒಂದೇ ಹಾಡುಗಳಿಗೆ

ವಿಭಿನ್ನ ಗುಂಪುಗಳಲ್ಲಿ ರಂಗಭಾಷೆ ಸಂಯೋಜಿಸುವುದು. ಅಧ್ಯಾಪಕರು ಪ್ರತಿಯೊಂದು ಗುಂಪಿಗೂ ಬೇಕಾದ ನಿರ್ದೇಶಗಳನ್ನು ನೀಡುವುದು.

- ಮಂಡನೆ
- ಮಕ್ಕಳು ಪರಸ್ಪರ ಮೌಲ್ಯನಿರ್ಣಯ ನಡೆಸುವುದು.
- ಯಾವೆಲ್ಲ ವಿಷಯಗಳನ್ನು ಪರಿಗಣಿಸಿಕೊಂಡು ಅಭಿಪ್ರಾಯ ಹೇಳಿದರು?
- ಮಕ್ಕಳು ಸ್ವಯಂ ಸೂಚಕಗಳ ಕುರಿತು ಹೇಳುವರು.

### ಮೌಲ್ಯನಿರ್ಣಯ

- ಅಧ್ಯಾಪಕರ ಮೌಲ್ಯನಿರ್ಣಯ

*ಸೂಚಕಗಳು*

- ತಾಳಜ್ಞಾನ
- ಮುದ್ರೆಗಳ ಸರಿಯಾದ ಉಪಯೋಗ
- ಗುಂಪಿನ ಸದಸ್ಯರ ಒಗ್ಗಟ್ಟು

## ಯೂನಿಟ್–5 : ಅರ್ಧಶಾಸ್ತ್ರೀಯ ನೃತ್ಯ

ನೃತ್ಯಭ್ಯಾಸ ಮಾಡುವ ಯಾವುದೇ ಮಗುವು ಗಳಿಸಬೇಕಾದ ಒಂದು ಅತ್ಯುನ್ನತ ಸಾಮರ್ಥ್ಯವೆಂದರೆ ದೃಶ್ಯಾವಿಷ್ಕರಿಸುವುದೇ ಆಗಿದೆ. ಇದು ಹೆಚ್ಚಾಗಿ ಜನ್ಮಸಿದ್ದವಾಗಿದ್ದರೆ ಶಾಸ್ತ್ರೀಯವಾದ ಜ್ಞಾನವು ಅದನ್ನು ಹೆಚ್ಚು ಉತ್ತಮಗೊಳಿಸಲಾಗುವುದು. ಬಾಲ್ಯದಲ್ಲಿ ಯಾವುದೇ ಹಾಡಿಗೆ, ಅಥವಾ ರಾಗಕ್ಕೆ ಅನುಸಾರವಾಗಿ ಹೆಜ್ಜೆ ಹಾಕುವುದಕ್ಕೂ, ಅಭಿನಯಿಸುವುದಕ್ಕೂ ಪ್ರಾರಂಭಿಸುವ ಮಗು ಅದರ ಬೌದ್ಧಿಕವಾದ ಬೆಳವಣಿಗೆಗೆ ಅನುಸರಿಸಿ ಈ ರಾಗಗಳನ್ನೂ, ಹಾಡುಗಳನ್ನೂ ಗುರುತಿಸಿ, ಚಲನೆಗಳನ್ನೂ, ಅಭಿನಯಗಳನ್ನೂ ಅರ್ಥವತ್ತಾಗಿಸಲು ಪ್ರಯತ್ನಿಸುವುದು. ಈ ಆಸಕ್ತಿಯನ್ನು ಪೋಷಿಸುವುದೇ ದೃಶ್ಯಾವಿಷ್ಕಾರ ಎಂಬ ಈ ಯೂನಿಟ್‌ನ ಉದ್ದೇಶ.

ಮಕ್ಕಳಿಗೆ ಸಂಬಂದಿಸಿ ಇದು ಅತ್ಯಂತ ಆಸಕ್ತದಾಯಕವಾದ ಚಟುವಟಿಕೆಯಾಗಿರಬಹುದು ಎಂಬುದರಲ್ಲಿ ಸಂಶಯವಿಲ್ಲ. ತರಗತಿಕೋಣೆಯಲ್ಲಿ ಎಲ್ಲಾ ಮಕ್ಕಳ ಸಾನಿಧ್ಯ ಈ ಚಟುವಟಿಕೆಯಲ್ಲಿ ಒಂದೇ ರೀತಿಯಲ್ಲದಿದ್ದಲ್ಲಿ ಇನ್ನೊಂದು ರೀತಿಯಲ್ಲಿ ಪ್ರಯೋಜನಪಡಿಸಬೇಕಾಗಿದೆ. ಈ ಚಟುವಟಿಕೆಯು ಒಂದು ಉನ್ನತ ಸಾಮರ್ಥ್ಯವೆಂದು ಮೊದಲೇ ಸೂಚಿಸಲಾಗಿದೆಯಲ್ಲವೇ? ಆದ್ದರಿಂದ ಇದರ ಮೌಲ್ಯನಿರ್ಣಯವು ಅವರ ಸ್ಥಾನದಲ್ಲಿ ಇದ್ದುಕೊಂಡೆ ಆಗಬೇಕು.

### ಕಲಿಕಾ ಸಾಧನೆ

- ಅರ್ಧಶಾಸ್ತ್ರಿಯ ರೀತಿಯಲ್ಲಿರುವ ಪರಿಚಿತವಾದ ಹಾಡುಗಳಿಗೆ (ಭಜನೆ, ಭಕ್ತಿಗೀತೆ, ಮೊದಲಾದವುಗಳು) ಶಿಸ್ತುಬದ್ಧವಾಗಿ ಅರ್ಥವತ್ತಾದ ರೀತಿಯಲ್ಲಿ ನೃತ್ಯ ನಿರ್ದೇಶನ ಮಾಡಿ ಮಂಡಿಸುವುದು.

### ಆಶಯ ತಿಳುವಳಿಕೆ

- ಅರ್ಧಶಾಸ್ತ್ರಿಯ ರೀತಿಯಲ್ಲಿರುವ ನೃತ್ಯಕ್ಕೆ ಶಾಸ್ತ್ರಿಯ ಹೆಜ್ಜೆಗಳೊಂದಿಗೆ ಲಘುವಾದ ಹೆಜ್ಜೆಗಳನ್ನು

ಉಪಯೋಗಿಸಬಹುದು. ಇದರಲ್ಲಿ ಶಾಸ್ತ್ರಿಯಮುದ್ರೆಗಳು ಅತೀ ಅಗತ್ಯವಿದ್ದಲ್ಲಿ ಮಾತ್ರ ಉಪಯೋಗಿಸಬಹುದು. ಲೋಕಧರ್ಮಿ ಪ್ರಯೋಗಗಳನ್ನು ಹೆಚ್ಚಾಗಿ ಉಪಯೋಗಿಸಬಹುದು. ಪ್ರತಿಯೊಂದು ಹಾಡಿಗೂ ಯೋಗ್ಯವಾದ ವೇಷವಿಧಾನಗಳನ್ನು ಕಂಡುಕೊಳ್ಳುವುದು.

## ಕಲಿಕಾ ಚಟುವಟಿಕೆಗಳು

***ಚಟುವಟಿಕೆ–1***

- ಅಧ್ಯಾಪಕರು ಒಂದು ಹಾಡನ್ನು (ಸಂಯೋಜಿಸಿದ) ಕೇಳಿಸುವುದು. ಇದನ್ನು ಎರಡೋ ಎರಡಕ್ಕಿಂತ ಹೆಚ್ಚು ಬಾರಿ ಕೇಳಿಸುವುದು. ಇದನ್ನು ಎರಡೋ ಎರಡಕ್ಕಿಂತ ಹೆಚ್ಚು ಬಾರಿ ಕೇಳಿಸುವುದು ಉತ್ತಮ ಹಾಡಿನ ಗೆರೆಗಳ ಆಶಯದ ಕುರಿತು ಚರ್ಚಿಸುವುದು. ಹಾಡಿನ ತಾಳ ಸಾಲುಗಳ ಎಡೆಯಲ್ಲಿ ಕೇಳುವ ಉಪಕರಣ ಸಂಗೀತದ ಪ್ರಮಾಣ (ತಾಳ) ತಾಳದಲ್ಲಿರುವ ಬದಲಾವಣೆ, ವೇಗ ಎಂಬಿವುಗಳ ಕುರಿತು ಅಗತ್ಯವಾದ ಚರ್ಚೆಗಳನ್ನು ನಡೆಸುವುದು. ಗುಂಪಿನಲ್ಲಿ ನಡೆಸುವ ಈ ಚಟುವಟಿಕೆಯ ಕೊನೆಯಲ್ಲಿ ಮಕ್ಕಳು ಈ ಹಾಡಿಗೆ ಅಭಿನಯಿಸುವರು. ಇಲ್ಲಿ ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ನೀಡಬೇಕು. ಅಭಿನಯದ ಕೆಲವು ಭಾಗಗಳು ನಾಟಕೀಯ ಮುಹೂರ್ತಗಳನ್ನು ಸೃಷ್ಟಿಸುವುದಾದರೆ ಅದು ನೃತ್ಯರೂಪಗಳ ಘಟಕಭಾಗವಾದ ನಾಟ್ಯದ ಪ್ರಯೋಗವೆಂದು ತಿಳಿಸಬೇಕಾಗಿದೆ.

***ಚಟುವಟಿಕೆ – 2***

- ಭಜನೆ, ಭಕ್ತಿಗೀತೆಗಳು ಅರ್ಧಶಾಸ್ತ್ರೀಯ ಗೀತೆಗಳು ಎಂಬೀ ಗಾನಶಾಖೆಗಳಿರುವ ಪ್ರತಿಯೊಂದು ಗುಂಪು ಯಾವುದಾದರೂ ಒಂದು ರೀತಿಯ ಹಾಡುಗಳನ್ನು ಸಂಗ್ರಹಿಸಿ ಗುಂಪು ಚರ್ಚೆಯ ಮೂಲಕ ರಂಗವಿಷ್ಕಾರ ನಡೆಸುತ್ತಾರೆ. ಶಾಲೆಯ ವಿಶೇಷ ಸಂದರ್ಭಗಳಿಗೆ ಯೋಗ್ಯವಾದ ಹಾಡುಗಳೂ ಆಗಬಹುದು. ಇದನ್ನು ಮೊದಲ ಚಟುವಟಿಕೆಯ ಸೂಚಕಗಳ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡಬಹುದಾಗಿದೆ.

## ಮೌಲ್ಯಮಾಪನ

*ಸೂಚಕಗಳು*

- ಮಂಡನಾ ಶೈಲಿ
- ತಾಂತ್ರಿಕ ಹಿರಿಮೆ
- ಸ್ವಂತಿಕೆ, ತಲ್ಲೀನತೆ, ತನ್ಮಯತೆ

# ಹತ್ತನೇ ತರಗತಿ

## ಯೂನಿಟ್ – 1 : ಜಾನಪದ ಕಲಾರೂಪಗಳು

ನಮ್ಮ ಜಾನಪದ ನೃತ್ಯರೂಪಗಳು ಒಂದು ಪ್ರದೇಶದ ಜನರ ಜೀವನಚರಿತ್ರೆಯ ಭಾಷೆಯ ಅನುಷ್ಠಾನಗಳ ಪರಿಚ್ಛೇದಗಳಾಗಿವೆ. ಇಲ್ಲಿ ಕೇವಲ ಒಂದು ನೃತ್ಯ ತಿಳಿಯುವುದು, ಮಂಡಿಸುವುದು ಎಂಬುದಕ್ಕಿಂತಲೂ ಒಂದು ಸಂಸ್ಕೃತಿಯನ್ನು ನಾವು ಅನುಭವಿಸಿ ತಿಳಿಯುವುದಾಗಿದೆ. ಮಕ್ಕಳಿಗೆ ಇಂತಹ ಸಂದೇಶ ನೀಡಬೇಕಾದುದು ಅನಿವಾರ್ಯವಾಗಿದೆ.

ವೇಷ, ಭಾಷೆ, ಆಹಾರ ಮಾತ್ರವಲ್ಲ ಎಲ್ಲವೂ ಬದಲಾವಣೆ ಹೊಂದುತ್ತಿರುವ ಆಧುನಿಕ ಯುಗದಲ್ಲಿ ನಮ್ಮ ನಾಡಿನ ಸಂಸ್ಕೃತಿಯ ಕುರಿತು ತಿಳಿಯಲು, ನೆನಪಿಸಲು ಇಂತಹ ಕಲಿಕಾ ಅನುಭವಗಳಿಗಿಂತ ಮೇಲಾಗಿ ನಮಗೇನು ನೀಡಲು ಸಾಧ್ಯ. ಅವರಿಗೆ ತಿಳಿದ ನೃತ್ಯರೂಪಗಳಿಂದಲೇ ಆರಂಭವಾಗಲಿ.

ಒಪ್ಪನ, ತಿರುವಾದಿರಕ್ಕಳಿ, ಮಾರ್ಗಂಕಳಿ, ಪೂರಂಕಳಿ ಇತ್ಯಾದಿಗಳನ್ನು ಯುವಜನೋತ್ಸವಗಳಲ್ಲಾದರೂ ಕಂಡಿರಬಹುದು. ಉಳಿದವುಗಳನ್ನು ನೆನಪಿಸೋಣ.

### ಕಲಿಕಾ ಸಾಧನೆ

- ಕೇರಳದ ಜಾನಪದ ರೂಪಗಳಾದ ಒಪ್ಪನ, ತಿರುವಾದಿರಕ್ಕಳಿ, ಮಾರ್ಗಂಕಳಿ, ಕೋಲ್‌ಕಳಿ, ಪೂರಂಕಳಿ, ಪರಿಚಮುಟ್ಟುಕಳಿ ಎಂಬವುಗಳನ್ನು ತಿಳಿಯುವುದು. ಇವುಗಳು ನೃತ್ತಗಳಾಗಿವೆ. ತೆಯ್ಯಂ(ಭೂತ) ಪಡಯಣಿ, ಮುಡಿಯೆಟ್ಟ್, ಮಲವಾಯಿಯಾಟಂ, ಕಣ್ಯಾರ್‌ಕಳಿ ಮೊದಲಾದ ಪ್ರದರ್ಶನ ಕಲೆಗಳನ್ನೂ ಪರಿಚಯಿಸಬೇಕು – ಎ.ಕೆ ನಂಬ್ಯಾರ್.

### ಆಶಯ ತಿಳುವಳಿಕೆ

- ಪ್ರತಿಯೊಂದು ನೃತ್ಯಕಲಾರೂಪಗಳಿಗೂ ಪ್ರತ್ಯೇಕ ವೇಷವಿಧಾನಗಳಿವೆ. ಪ್ರತಿಯೊಂದು ನೃತ್ಯರೂಪಗಳ ಸಾಹಿತ್ಯ ವಿಭಿನ್ನವಾಗಿದೆ. ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರದರ್ಶನಾರೀತಿ ಇದೆ.

### ಕಲಿಕಾ ಚಟುವಟಿಕೆಗಳು

- ಶಾಲಾ ಕಲೋತ್ಸವಕ್ಕೆ ಸಂಬಂಧಿಸಿ ಕ್ಲಾಸ್‌ಗಳಲ್ಲಿ ಜೂನ್ ತಿಂಗಳ ಪ್ರಾರಂಭದಲ್ಲಿಯೇ ನಾಲ್ಕು ಗುಂಪುಗಳು ಕಾರ್ಯವೆಸಗುತ್ತಿರಬಹುದು. ಈ ಚಟುವಟಿಕೆಯೂ ಗುಂಪುಗಳನ್ನು

ಕೇಂದ್ರೀಕರಿಸಿ ನಡೆಸಬಹುದಾಗಿದೆ. ನಾಲ್ಕು ಗುಂಪುಗಳಲ್ಲಿ ನಾಲ್ಕು ವಿಭಿನ್ನ ಜಾನಪದ ನೃತ್ಯರೂಪಗಳ ತರಬೇತಿ ಪಡೆಯಬಹುದಾಗಿದೆ. ಒಂದು ಗುಂಪಿನಲ್ಲಿ ತಿರುವಾದಿರಕ್ಕಳಿ ಇನ್ನೊಂದು ಗುಂಪಿನಲ್ಲಿ ಒಪ್ಪನ, ಮೂರನೇಯದು ಮಾರ್ಗಂಕಳಿ, ನಾಲ್ಕನೇಯದು ಕೋಲ್‌ಕಳಿ ಹೀಗೆ ತರಬೇತಿ ನೀಡಬೇಕು. ಗಂಡು ಮಕ್ಕಳು ಆಡುವ ಪೂರಂಕಳಿ, ಪರಿಚಮುಟ್ಟು ಮೊದಲಾದುವುಗಳೂ ಆಗಬಹುದು. ಪ್ರತಿಯೊಂದು ಗುಂಪು ಪ್ರದರ್ಶನದ ನಂತರ ಅದೇ ಗುಂಪಿನಲ್ಲಿ ಪ್ರದರ್ಶನಾ ರೀತಿಯನ್ನು ಬರೆದು ತಯಾರಿಸುವರು. ಇದನ್ನು ಇತರ ಗುಂಪುದಳು ಚರ್ಚಿಸಿ ಅವರವರ ಸಂಗ್ರಹ ಪುಸ್ತಕದಲ್ಲಿ ಬರೆಯುವರು. ಅಗತ್ಯವಾದ ಚಿತ್ರಗಳನ್ನು ಸೇರಿಸಿ ಸಂಗ್ರಹಪುಸ್ತಕವನ್ನು ಸಂಪನ್ನಗೊಳಿಸುವರು. ಈ ಚಟುವಟಿಕೆ ಕಳೆಯುವಾಗ ಪ್ರತಿಯೊಂದು ಮಗುವಿಗೂ ಒಂದು ಜಾನಪದ ನೃತ್ಯ ಮಾಡಲೂ ಇತರ ಜಾನಪದ ನೃತ್ಯಗಳ ಮಂಡನಾರೀತಿಯ ಕುರಿತು ತಿಳುವಳಿಕೆಯೂ ಲಭಿಸುವುದು.

### ಮೌಲ್ಯನಿರ್ಣಯ

*ಸೂಚಕಗಳು*

- ಸರಳ ಪ್ರಶ್ನೆಗಳು
- ಪ್ರದರ್ಶನಾ ಶೈಲಿ
- ಸಂಘ ನೃತ್ಯ ಮಾಡುವಾಗ ಇರುವ ಒಗ್ಗಟ್ಟು
- ಸಂಗ್ರಹಣೆಯ ಸಮಗ್ರತೆ

## ಯೂನಿಟ್– 2 : ಶಾಸ್ತ್ರೀಯ ನೃತ್ಯ

ಶ್ರುತಿ ಮಾತ ಲಯ ಪಿತಾ ಎಂಬುದಲ್ಲವೇ ಶಾಸ್ತ್ರಮತ. ತಾಳಕ್ಕೆ ತಂದೆಯ ಸ್ಥಾನ ನೀಡಿದುದರಿಂದ ನಮ್ಮ ನೃತ್ಯದಲ್ಲೂ, ಸಂಗೀತದಲ್ಲೂ ತಾಳದ ಮಹತ್ವ ಎಷ್ಟೆಂದು ತಿಳಿಯಬಹುದು. ತಾಳದ ವ್ಯತ್ಯಾಸಕ್ಕೆ ಅನುಸಾರವಾಗಿ ಹೇಳಿಕೆ, ಸ್ವರ, ಸಾಹಿತ್ಯಗಳ ರೂಪವೂ, ಭಾವವೂ ವ್ಯತ್ಯಾಸವಾಗುವುದು. ಒಂದು ಮಗುವಿನ ನೃತ್ಯಜ್ಞಾನವನ್ನೂ ಸಂಗೀತಜ್ಞಾನವನ್ನೂ ಅಳತೆ ಮಾಡುವಾಗ ಪ್ರಧಾನ ಸೂಚಕಗಳಾಗಿ ತಾಳಜ್ಞಾನ ಬರುವುದಕ್ಕೆ ಕಾರಣ ಬೇರೊಂದಿಲ್ಲ. ನಾಟ್ಯಶಾಸ್ತ್ರ ವಿಧಿಪ್ರಕಾರ 7 ಮೂಲತಾಳಗಳಿವೆ.

### ಕಲಿಕಾ ಸಾಧನೆ

- ಶಾಸ್ತ್ರೀಯ ನೃತ್ಯದಲ್ಲಿ 5 ಜಾತಿಯಲ್ಲಿನ ಹೇಳಿಕೆಗಳಿಗನುಸಾರವಾಗಿ ಜತಿಗಳಿವೆಯೆಂದು ತಿಳಿಯುವರು.

### ಆಶಯ, ತಿಳುವಳಿಕೆ

- ನೃತ್ತ ವಿಧಗಳ ಶ್ಲೋಕಗಳನ್ನು ತಾಳಾನುಸಾರವಾಗಿ ಕ್ರಮೀಕರಿಸಲಾಗಿದೆ. ತಿಶ್ರಂ, ಚತುರಶ್ರಂ, ಮಿಶ್ರಂ, ಖಂಡಂ, ಸಂಕೀರ್ಣಂ ಎಂಬ ಐದು ಜಾತಿಗಳನ್ನು ಈ ಐದು ಜಾತಿಗಳು ಬೇಕಾದ ರೀತಿಯಲ್ಲಿ ಸೇರಿಸಿ ಜತಿಗಳನ್ನು ರೂಪೀಕರಿಸಲಾಗುವುದು.

## ಕಲಿಕಾ ಚಟುವಟಿಕೆಗಳು

- ಅಪರಿಚಿತವಾದ ಯಾವುದಾದರೂ ಒಂದು ಅಡವು ಜಾತಿಗಳಲ್ಲಿಯೂ ತರಬೇತಿ ಪಡೆಯುವುದು. ಇದು ಸರಿಯಾಗಿ ಅಭ್ಯಸಿಸಿದ ಬಳಿಕ ಇತರ ಅಡವುಗಳಲ್ಲಿಯೂ ಸ್ವಯಂ ಪರೀಕ್ಷಿಸುವುದು. ಅಧ್ಯಾಪಕನ ಸಹಾಯವೂ ಆಗಬಹುದು. ಇದೇ ರೀತಿಯಲ್ಲಿ ಎಲ್ಲಾ ಅಡವುಗಳನ್ನು 5 ರೀತಿಗಳಲ್ಲಿ ಅಭಿನಯಿಸಲು ಅಭ್ಯಸಿಸುವುದು.
- ಪ್ರತಿಯೊಂದು ಜಾತಿಗಳಲ್ಲೂ ಕ್ರಮೀಕರಿಸಿದ ಜತಿಗಳನ್ನು ಅಭ್ಯಸಿಸುವುದು. ಇದನ್ನು ಗುಂಪಿನಲ್ಲಿ ಮಾಡುವುದು ಉತ್ತಮ. ಪ್ರತಿಯೊಂದು ಗುಂಪಿನಲ್ಲೂ ಒಂದೇ ಜಾತಿಯ ವಿಭಿನ್ನವಾದ ಜತಿಗಳನ್ನು ಮಾಡಬೇಕಾಗಿದೆ. ಇತರ ಗುಂಪುಗಳು ಬಾಯಿತಾಳಗಳಿಗೆ ಜೊತೆಯಾಗಿ ತಾಳಹಾಕುವರು. ಆದಿತಾಳದಲ್ಲಿ ವಿಭಿನ್ನವಾದ ನಡೆಗಳನ್ನು ಸೇರಿಸಿ ನಿಶ್ಚಿತ ತಾಳಚಕ್ರಕ್ರಮದಲ್ಲಿ ಜತಿಗಳನ್ನು ನಿರ್ಮಿಸುವರು. ತಂತ್ರಗಳನ್ನು ಸೇರಿಸಿ ಅಭ್ಯಸಿಸುವರು. ಈ ಚಟುವಟಿಕೆಗಳಲ್ಲಿ ಅಧ್ಯಾಪಕನ ಸಹಾಯವಿರಬೇಕು. ತಾಳದಲ್ಲಿನ ಜಾತಿಗಳನ್ನು ತಿಳಿಯುವುದಕ್ಕೂ ಒಂದೊಂದು ಜಾತಿಯಲ್ಲೂ ಕ್ರಮೀಕರಿಸಿದ ಪರಿಚಿತವಾದ ಹಾಡುಗಳನ್ನು ಉಪಯೋಗಿಸಬೇಕು. ಅಲ್ಲದೆ ಭಾಷೆಯಲ್ಲಿನ ತರಂಗಿಣಿ ವೃತ್ತವನ್ನು ಚತುರಶ್ರವಾಗಿಯೂ ಕಾಕಳಿ, ಖಂಡಮೆಟ್ಟಲಿಗೂ, ಮಂಜರಿ ತಿಶ್ರ ಮೆಟ್ಟಲಿಗೂ, ಕೇಕ ಮಿಶ್ರ ಮೆಟ್ಟಲಿಗೂ ಉದಾಹರಣೆಗಳಾಗಿವೆ. ಈ ಚಟುವಟಿಕೆಗಳ ಬಳಿಕ ಮೌಲ್ಯನಿರ್ಣಯ ಮಾಡಬಹುದಾಗಿದೆ.

## ಮೌಲ್ಯಮಾಪನ

*ಸೂಚಕಗಳು*

- ವಿಭಿನ್ನವಾದ ಅಡವುಗಳು
- ಶ್ಲೋಕಗಳಲ್ಲಿನ ವೈವಿಧ್ಯ
- ತಾಳ
- ಕಾಲಪ್ರಮಾಣ

## ಯೂನಿಟ್– 3 : ನವರಸಗಳು

ಜೀವನದ ವಿವಿಧ ಸಂದರ್ಭಗಳಲ್ಲಿ ನಮ್ಮ ಮುಖದಲ್ಲಿ ಬರುವ ಭಾವನೆಗಳನ್ನು ಕ್ರಮೀಕರಿಸಿ ಅವುಗಳನ್ನು ಒಂಭತ್ತು ರೀತಿಯಲ್ಲಾಗಿ ನಾಟ್ಯಶಾಸ್ತ್ರಕಾರರು ಬದಲಾಯಿಸಿದರು. ಧಾರಾಳ ಭಾವನೆಗಳು ವಿವಿಧ ಸಂದರ್ಭಗಳಲ್ಲಿ ನಮ್ಮಲ್ಲಿ ಮೂಡಿ ಬರುವುದು. ಪ್ರತಿಯೊಂದಕ್ಕೂ ಪ್ರತ್ಯೇಕ ಕಾರ್ಯವೂ, ಕಾರಣವೂ ಇರಬಹುದು. ಅಳುವ ಮಗುವಿನ ಮುಖದ ಭಾವನೆಯು ಅವನಿಗೆ ಹಾಲುಣಿಸುವ ಅಮ್ಮನ ವಾತ್ಸಲ್ಯವು ಎಲ್ಲವೂ ಶಾಸ್ತ್ರದೃಷ್ಟಿಯಲ್ಲಿ ಕರುಣಾರಸದ ಪ್ರಯೋಗಗಳೇ ಆಗಿದೆ. ಅಂದರೆ ಒಂದು ಭಾವನೆ ಉದಯಿಸುವಾಗ ಒಂದು ಸೃಷ್ಠಿಯೂ ಉಂಟಾಗಬೇಕು. ದೃಶ್ಯ, ಚಲನೆ, ಶಬ್ದ, ಕ್ರಿಯೆ, ಇವುಗಳೆಲ್ಲ ಸೃಷ್ಠಿಗಳ ಗಣದಲ್ಲಿ ಸೇರುವುದು. ಹೀಗೆ ಸೃಷ್ಠಿ ಕಾರಣಗಳಾಗಿರುವ ಭಾವನೆಗಳು 9 ರೀತಿಯಾಗಿದೆ.

> “ಶೃಂಗಾರ ಹಾಸ್ಯ ಕರುಣಾ
> ರೌದ್ರ ವೀರ ಭಯಾನಕ
> ಬೀಭತ್ಸಾದ್ಭುತ ಶಾಂತಸ್ಯ
> ನವ ನಾಟ್ಯೋರಸಾ: ಸ್ಮೃತಾ....”

ಇವುಗಳನ್ನು ಬೇಕಾದ ವಿಧದಲ್ಲಿ ಪ್ರಯೋಗಿಸುವುದೇ ಒಂದು ಉತ್ತಮ ನರ್ತಕನ ಕರ್ತವ್ಯ

ಆದ್ದರಿಂದ ಇವುಗಳ ಪ್ರಯೋಗಗಳನ್ನು ತಿಳಿದಿರಬೇಕಾದುದು ಅನಿವಾರ್ಯವಾಗಿದೆ. ಈ ಅಧ್ಯಾಯದಲ್ಲಿ ನವರಸಗಳ ಕುರಿತು ಹೆಚ್ಚು ವಿಷಯ ತಿಳಿಯಲು ಪ್ರಯತ್ನಿಸುವ.

**ಕಲಿಕಾ ಸಾಧನೆ**

- ಶಾಸ್ತ್ರೀಯ ನೃತ್ಯಗಳಲ್ಲಿ ನವರಸಗಳ ಪ್ರಾಧಾನ್ಯತೆಯನ್ನು ತಿಳಿಯುವುದು.

**ಆಶಯ ತಿಳುವಳಿಕೆ**

- ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಎಂಬಂತೆ 9 ರಸಗಳಿವೆ. ದೈನಂದಿನ ಜೀವನದಲ್ಲಿ ನಮ್ಮ ಮುಖದಲ್ಲಿ ಸ್ಫುರಿಸುವ ಭಾವನೆಗಳ ರೂಪವೇ ನವರಸಗಳು.
- ನವರಸಗಳನ್ನು ತಿಳಿಯಲು ಮತ್ತು ಪ್ರಕಟಿಸಲಿರುವ ನೈಪುಣ್ಯ.

**ಕಲಿಕಾ ಚಟುವಟಿಕೆಗಳು**

- ಅಧ್ಯಾಪಕರು ತರಗತಿಯ ಪ್ರತಿಯೊಂದು ಮಗುವಿಗೂ ಒಂದೊಂದು ಕಾಗದ ಟಿಪ್ಪಣಿಗಳನ್ನು ನೀಡುವುದು. ಕೆಳಗೆ ನೀಡಿದ ವಿಷಯಗಳು ಟಿಪ್ಪಣಿಗಳಲ್ಲಿರಬೇಕು.
- ಕ್ರೂರನಾದ ಒಬ್ಬ ವ್ಯಕ್ತಿ ಅಶಕ್ತನಾದ ಒಬ್ಬನನ್ನು ಹೊಡೆಯುವುದು.
- ಒಂದು ಜೀವಿಯ ಕೊಳೆತ ದೇಹ ರಸ್ತೆಯಲ್ಲಿ ಬಿದ್ದಿದೆ. ನೀವು ಆ ದಾರಿಯಾಗಿ ಹೋಗುತ್ತೀರಿ
- ತಪಸ್ಸು ಮಾಡುವುದು – ಧ್ಯಾನ ಮಾಡುವ, ಪ್ರಾರ್ಥನೆಯಲ್ಲಿ ಮುಳುಗಿದ ಒಬ್ಬನ ಮುಖ.
- ಪ್ರಿಯತಮನ ಹತ್ತಿರ ನಿಲ್ಲುವ ಪ್ರಿಯತಮೆಯ ಮುಖಭಾವ.
- ಕ್ರಿಕೆಟ್ ಟೀಂ ನಲ್ಲಿ ಗೆದ್ದ ಟೀಮಿನ ಕ್ಯಾಪ್ಟನ್‌ನ ಭಾವ.
- ಅನಿರೀಕ್ಷಿತವಾಗಿ ಬಹಳ ವರ್ಷಗಳ ನಂತರ ಮನೆಗೆ ತಲುಪಿದ ಆತ್ಮೀಯ ಮಿತ್ರನನ್ನು ಕಂಡಾಗ ಉಂಟಾಗುವ ಭಾವ.
- ನಿಮ್ಮೊಂದಿಗೆ ಗರ್ವ ತೋರಿಸಿ ಓಡಿಹೋದ ಗೆಳೆಯ ಕಾರ್ಯಸಾಧನೆಯಾಗದೆ ಹಿಂತಿರುವಾಗ ನಿಮ್ಮ ಮುಖದ ಭಾವ.
- ಹೇಳಿದ ಕೆಲಸವೊಂದೂ ಅನುಸರಿಸದಿರುವಾಗ ಕೋಪಿಷ್ಟನಾಗಿ ಬೆತ್ತಹಿಡಿದು ಬರುವ ತಂದೆಯ ಮುಖಭಾವ.
- ಚೀಟಿಗಳಲ್ಲಿ ಸಿಕ್ಕಿದ ವಿಷಯಗಳನ್ನು ನಮ್ಮ ಮುಖದಲ್ಲುಂಟಾಗುವ ಭಾವನೆಯನ್ನೂ ಮಕ್ಕಳು ಅಭಿನಯಿಸಿ ತೋರಿಸುವುದು.
- ಇದೇ ಭಾವನೆಗಳು ಜನಿಸಬೇಕಾದರೆ ಉಂಟಾಗುವ ಸಮಾನ ಘಟನೆಗಳನ್ನು ಪ್ರತಿಯೊಂದು ಮಗು ದಾಖಲಿಸುವುದು. ಅದನ್ನು ಓದುವುದು.
- ಪುನ: ಅದೇ ರಸ ಅಭಿನಯಿಸಿ ತೋರಿಸುವುದು. ಅಧ್ಯಾಪಕರು ಯಾವುದಾದರೂ ಪ್ರಸಿದ್ಧರಾದ ಕಥಕ್ಕಳಿ ಗುರುಗಳ ನವರಸಗಳ ಚಿತ್ರ ಕರಿಹಲಗೆಯಲ್ಲಿ ತೂಗುಹಾಕುವುದು. ಪ್ರತಿಯೊಂದು ನವರಸಗಳ ಚಿತ್ರದ ಅಡಿಯಲ್ಲಿ ಹೆಸರು ಬರೆದಿರಬಹುದು. ಮಕ್ಕಳು ತಾವು ಬರೆದ ಟಿಪ್ಪಣಿಗೆ ಸಂಬಂಧಿಸಿದ ರಸಗಳನ್ನು ಕಂಡುಕೊಳ್ಳುವರು. ಪ್ರತಿಯೊಂದು ರಸದಲ್ಲಿ ಪಾಲ್ಗೊಂಡವರು

9 ಗುಂಪುಗಳಾಗುವರು. ಪುನ: ಗುಂಪಿನಲ್ಲಿ ಸೇರಿದ ಜನರು ತಮ್ಮ ರಸಗಳನ್ನು ಬೆಳೆಸುವ ರೀತಿಯಲ್ಲಿರುವ ಗುಂಪು ಚಟುವಟಿಕೆಗಳನ್ನು ನಡೆಸುವರು. ಸುತ್ತುಮುತ್ತು ಉಂಟಾಗುವ ಚಲನೆ, ಕ್ರಿಯೆ, ಮಾತು, ಸ್ಪರ್ಶ, ಪರಿಮಳ ಇವುಗಳೆಲ್ಲಾ ನಮ್ಮಲ್ಲಿ ಭಾವವ್ಯತ್ಯಾಸ ಉಂಟುಮಾಡುವುದು ಎಂದು ತಿಳಿದುಕೊಳ್ಳುವುದು. ನವರಸಗಳಲ್ಲಿ ಒಂದೊಂದನ್ನೂ ಚಿತ್ರದಲ್ಲಿ ನೋಡಿ (ಅಧ್ಯಾಪಕನು ಅಭಿನಯಿಸಿ ತೋರಿಸುವುದೂ ಆಗಬಹುದು) ಮಕ್ಕಳು ಸರಿಯಾಗಿ ಅಭ್ಯಸಿಸುವರು. ಮಕ್ಕಳ ಭಾವತೀವ್ರತೆಗೆ ಅನುಸರಿಸಿ ಪರಸ್ಪರ ಮೌಲ್ಯಮಾಪನ ಮಾಡುವರು. ಅಧ್ಯಾಪಕರು ಸೂಚಕಗಳನ್ನಪಯೋಗಿಸಿ ಮೌಲ್ಯಮಾಪನ ಮಾಡುವರು.

### ಮೌಲ್ಯಮಾಪನ

*ಸೂಚಕಗಳು*

- ಭಾವತೀವ್ರತೆ
- ಸೂಕ್ಷ್ಮತೆ
- ಸಂದರ್ಭೋಚಿತವಾದ ಪ್ರಕಟನೆ.

## ಯೂನಿಟ್ – 4 ದೃಶ್ಯಾವಿಷ್ಕಾರ

ಒಂದು ಹಾಡು ಅಥವ ಕವಿತೆಯನ್ನು ನೃತ್ಯಕ್ಕೆ ಆವಿಷ್ಕರಿಸಲು ಪ್ರಯತ್ನಿಸುವಾಗ ಗಮನಿಸಬೇಕಾದ ವಿಷಯಗಳ ಕುರಿತು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ. ಒಂದು ಕವಿತೆಯನ್ನು ಆಯ್ಕೆ ಮಾಡುವಾಗಲೇ ಅದರ ದೃಶ್ಯ ಸಾಧ್ಯತೆಗಳ ಕುರಿತು ಬಹಳಷ್ಟು ತಿಳಿದಿರಬೇಕು. ಕವಿತೆಯು ಒಂದು ಉತ್ತಮ ಮಟ್ಟದ್ದಾಗಿರಬಹುದು. ಆದರೆ ಅದರ ಬಿಂಬಗಳ ದೃಶ್ಯಸಾಧ್ಯತೆಗಳು ಕಡಿಮೆಯಾದರೆ ಆ ದೃಶ್ಯವಿಷ್ಕಾರವು ಪರಾಜಯ ಹೊಂದುವುದು. ಬಹಳ ಪ್ರಚಾರದಲ್ಲಿರುವ ಕೆಲವು ಕವಿತೆಗಳು ವಾಚನದಿಂದಲೇ ಜನ ಮನಸ್ಸುಗಳಲ್ಲಿ ಸ್ಥಾನಪಡೆದವುಗಳಾಗಿರಬಹುದು ಅಂತಹ ಕವಿತೆಗಳನ್ನು ದೃಶ್ಯಾವಿಷ್ಕಾರ ಮಾಡುವಾಗ ಲಭಿಸಿದ ಅನುಭೂತಿಯಾದರೂ ನರ್ತಕನಿಗೆ ನೀಡಲು ಸಾಧ್ಯವಾಗಬೇಕು.

ಕವಿತೆಗಳನ್ನು ನೃತ್ಯಾವಿಷ್ಕಾರ ನಡೆಸುವಾಗ ಸಾಲುಗಳೆಡೆಯಲ್ಲಿನ ಓದುವಿಕೆ ನಡೆದಿರಬೇಕು. ಅಲ್ಲದಿದ್ದರೆ ದೃಶ್ಯಗಳು ಕೇವಲ ಬಾಲಿಶವಾಗಿ ಬದಲಾಗುವುದು. ಸಂಗೀತೋಪಕರಣಗಳ ಪ್ರಸಕ್ತವಾದ ಪ್ರಯೋಗಗಳು, ಆಲಾಪನಾ ಶುದ್ಧಿಯೂ ಎಲ್ಲಾ ದೃಶ್ಯಗಳನ್ನೂ ಇನ್ನಷ್ಟು ಉತ್ತಮಪಡಿಸಬಹುದು. ದೃಶ್ಯಗಳನ್ನುಂಟುಮಾಡುವಾಗ ಕವಿತೆಯ ಅಥವಾ ಹಾಡಿನ ಕೇಂದ್ರಾಶಯ ಎತ್ತಿ ತೋರಿಸುವ ರೀತಿಯಲ್ಲಿರಬೇಕು.

### ಕಲಿಕಾ ಸಾಧನೆ

- ದೇಶಭಕ್ತಿಗೀತೆ, ಕವಿತೆ ಮೊದಲಾದುವುಗಳ ದೃಶ್ಯಾವಿಷ್ಕಾರ ನಡೆಸುವುದು.

### ಆಶಯ ತಿಳುವಳಿಕೆ

- ಭಾವನೆಗಳನ್ನು ಅರ್ಥೈಸಿಕೊಂಡು ದೇಶಭಕ್ತಿಗೀತೆ, ಕವಿತೆ, ಎಂಬಿವುಗಳಿಗೆ ದೃಶ್ಯಾವಿಷ್ಕಾರ ನಡೆಸಲಿರುವ ನೈಪುಣ್ಯ.

**ಕಲಿಕಾ ಚಟುವಟಿಕೆ**

- ತರಗತಿಯ ಒಟ್ಟು ಮಕ್ಕಳನ್ನು ಸೇರಿಸಿಕೊಂಡಿರುವ ಒಂದು ಚಟುವಟಿಕೆ.
- ಮಕ್ಕಳು ನಾಲ್ಕು ಗುಂಪುಗಳಾಗುವರು. ಅಧ್ಯಾಪಕರು ಪಾಠಪುಸ್ತಕಕ್ಕೆ ಸಂಬಂಧಿಸಿದ ಕವಿತೆಗಳು, ದೇಶಭಕ್ತಿಗೀತೆಗಳು ಒಂದೊಂದಾಗಿ ಪ್ರತಿಯೊಂದು ಗುಂಪಿಗೂ ನೀಡುವುದು. ಪ್ರಾಥಮಿಕ ಹಂತದಲ್ಲಿ ಪ್ರತಿಯೊಂದು ಗುಂಪಿನಲ್ಲೂ ಸಾಹಿತ್ಯದ ಅರ್ಥದ ಕುರಿತಾದ ಚರ್ಚೆಗಳು ನಡೆಯುವುದು. ಸಂಶಯಗಳನ್ನು ಅಧ್ಯಾಪಕರು ಅದೇ ಸಂದರ್ಭದಲ್ಲಿ ದೂರೀಕರಿಸಬೇಕಾಗಿದೆ. ಆಶಯ ಸ್ಪಷ್ಟತೆ ಬಂದ ನಂತರ ಆ ಹಾಡಿಗೋ ಕವಿತೆಗೋ ಅಗತ್ಯವಾದ ಭಾಷೆ ಅಲಂಕರಿಸುವರು. ಮುದ್ರೆಗಳಲ್ಲದೆ ಲೋಕಧರ್ಮಿ ಪ್ರಯೋಗಗಳು ಆಗಬಹುದು. ಶಾಸ್ತ್ರೀಯವಾಗಿ ಕಲಿತ ಹೆಜ್ಜೆಗಳು ಅಲ್ಲದೆ ಸ್ವಾಭಾವಿಕವಾದ ಚಲನೆಗಳು ಒಳಪಡಿಸಬಹುದು. ಹಾಡುಗಳನ್ನು ಅಧ್ಯಾಪಕರು ಮೊದಲೇ ನೀಡಬೇಕು ಮಕ್ಕಳ ಮಂಡನೆ ಸ್ವಯಂ ಮೌಲ್ಯಮಾಪನ, ಚರ್ಚೆ, ಅಧ್ಯಾಪಕರ ಕ್ರೋಡೀಕರಣ ಎಲ್ಲಾ ಮಂಡನೆಗಳಲ್ಲಿನ ಉತ್ತಮ ಭಾಗಗಳನ್ನು ಪ್ರತ್ಯೇಕ ಸೂಚಿಸುವುದು. ಉಳಿದವುಗಳನ್ನು ಒಂದು ನಿರ್ದೇಶರೂಪದಲ್ಲಿ ಹೇಳಲೂ ಬೇಕು.

**ಮೌಲ್ಯಮಾಪನ**

*ಸೂಚಕಗಳು*

- ನೃತ್ಯದಲ್ಲಿರುವ ಚಲನೆಯ ವೈವಿಧ್ಯ
- ಆಶಯ ಪೂರ್ಣತೆ

## ಯೂನಿಟ್ – 5 : ಶಾಸ್ತ್ರೀಯ ನೃತ್ಯಗಳು

ಭಾರತವು ಭರತನ ದೇಶ. ಭರತಮುನಿ ನಾಟ್ಯಶಾಸ್ತ್ರ ರಚಿಸಿದ ದೇಶವೇ ಭಾರತ. ಎಲ್ಲಾ ಕಲೆಗಳ ಉಗಮವಾದ ನಾಟ್ಯಶಾಸ್ತ್ರದ ನಾಡಾದುದರಿಂದ ಎಲ್ಲಾ ಕಲೆಗಳಿಗೂ ಅದರದ್ದೇ ಆದ ಶಾಸ್ತ್ರೀಯತೆ ಇದ್ದಿತು. ನಮ್ಮ ಊರಿನ ವೈವಿಧ್ಯತೆ ಬಹಳ ಪ್ರಸಿದ್ಧವಾಗಿದೆ. ಭಾಷೆ, ವೇಷ, ಸಂಸ್ಕೃತಿಯಲ್ಲಿ ವೈವಿಧ್ಯತೆಯನ್ನು ಹೊಂದಿದ್ದರೂ ಏಕತೆಯಲ್ಲಿ ಜೀವಿಸುವ ನಾಡು. ಒಂದೇ ಧಾನ್ಯವನ್ನು ವಿಭಿನ್ನ ಭಕ್ಷ್ಯಗಳನ್ನಾಗಿಸಿ ಸೇವಿಸುವಂತೆ ಒಂದು ನಾಟ್ಯಶಾಸ್ತ್ರವನ್ನು ವಿಭಿನ್ನ ಸಂಸ್ಕೃತಿ ಇರುವವರು ಅವರ ನಾಡಿಗೆ ಹೊಂದಿಕೊಂಡು ಬೆಳೆಸಿದರು. ಹಾಗೆ ನಮ್ಮ ಭಾರತದಲ್ಲಿ ಪ್ರಪಂಚದಲ್ಲಿ ಎಲ್ಲೂ ಕಾಣದ ರೀತಿಯ ಎಂಟು ವಿಧದ ಶಾಸ್ತ್ರೀಯ ನೃತ್ಯರೂಪಗಳು ಹುಟ್ಟಿಕೊಂಡವು. ಇದಲ್ಲದೆ ಇತರ ನೃತ್ಯರೂಪಗಳೂ ಇವೆ. ಹೀಗೆ ಭರತನ ನೃತ್ಯದಿಂದ ಬೆಳೆದ ಸಂಸ್ಕೃತಿ ಎಂಬ ರೀತಿಯಲ್ಲೂ ನಮಗೆ ಭಾರತ ಸಂಸ್ಕೃತಿಯನ್ನು ಕರೆಯಬಹುದು.

ಈ ಅಧ್ಯಾಯದಲ್ಲಿ ಭಾರತದ ಶಾಸ್ತ್ರೀಯನೃತ್ಯ ರೂಪಗಳಾದ ಕಥಕ್ಕಳಿ, ಮೋಹಿನಿಯಾಟ್ಟಂ, ಯಕ್ಷಗಾನ, ಭರತನಾಟ್ಯಂ, ಕೂಚ್ಚುಪ್ಪುಡಿ, ಮಣಿಪ್ಪುರಿ, ಕಥಕ್, ಒಡಿಸ್ಸಿ ಇತ್ತೀಚೆಗೆ ಬಂದ 'ಸಾತ್ರಿಯ' ಎಂಬೀ ನೃತ್ಯರೂಪಗಳ ಕುರಿತಾದ ಒಂದು ಸಂಶೋಧನೆಯಾಗಿದೆ.

**ಕಲಿಕಾ ಸಾಧನೆ**

- ಭಾರತದ ಶಾಸ್ತ್ರೀಯನೃತ್ಯಗಳ ಕುರಿತು ತಿಳಿಯುವುದು.

**ಆಶಯ, ತಿಳುವಳಿಕೆ**


ಕೂಚ್ಚುಪ್ಪುಡಿ


ಮಣಿಪೂರಿ


ಒಡಿಸಿ


ಭರತನಾಟ್ಯ


ಮೋಹಿನಿಯಾಟ್ಟಂ


ಕಥಕ್

- ಪ್ರತಿಯೊಂದು ಶಾಸ್ತ್ರೀಯನೃತ್ಯರೂಪಕ್ಕೂ ಪ್ರತ್ಯೇಕ ವೇಷವಿಧಾನಗಳಿವೆ. ಪ್ರತಿಯೊಂದರ ಮಂಡನಾಕ್ರಮ, ಮಂಡನಾ ರೀತಿ ವಿಭಿನ್ನವಾಗಿದೆ.

## ಕಲಿಕಾ ಚಟುವಟಿಕೆಗಳು

- ತರಗತಿಯಲ್ಲಿ ಎಲ್ಲಾ ನೃತ್ಯರೂಪಗಳ ಪ್ರದರ್ಶನವನ್ನು ಸಿ.ಡಿ ಪ್ರದರ್ಶನದ ಮೂಲಕ ನಡೆಸುವುದು. ಯುವಜನೋತ್ಸವಗಳಲ್ಲಿ ಕಾಣದ ನೃತ್ಯರೂಪಗಳಾದ ಕಥಕ್, ಒಡಿಸ್ಸಿ, ಮಣಿಪುರಿ, ಸಾತ್ರಿಯ ಎಂಬೀ ನೃತ್ಯಗಳ CD ಗಳನ್ನು ಅಗತ್ಯವಾಗಿ ಕಾಣಬೇಕಾಗಿದೆ. ಇತರ ನೃತ್ಯರೂಪಗಳನ್ನು ಯುವಜನೋತ್ಸವ ವೇಳೆಯಲ್ಲಿ ಕಾಣಲು, ತಿಳಿಯಲು ಸಾಧ್ಯವಿದೆ.
- ಪ್ರತಿಯೊಂದರ ಕುರಿತು ಸರಿಯಾದ ವಿವರಗಳನ್ನು ಸಂಗ್ರಹಿಸುವುದು.
- ಫೊಟೋಸಹಿತ ಸಂಗ್ರಹ ಪುಸ್ತಕ ತಯಾರಿಸುವರು. ಈ ಚಟುವಟಿಕೆಯನ್ನು ಪ್ರತಿಯೊಂದು ಮಗುವೂ ವೈಯಕ್ತಿಕವಾಗಿ ಮಾಡಬೇಕಾದ ಒಂದು ವಾರ್ಷಿಕ ಪ್ರೋಜೆಕ್ಟಾಗಿದೆ.

## ಮೌಲ್ಯಮಾಪನ

*ಸೂಚಕಗಳು*

- ಆಶಯ ನೈಪುಣ್ಯ
- ಸಮಗ್ರತೆ
- ಕೇಂದ್ರಾಶಯ

# 7.4



# ನಾಟಕ



# ನಾಟಕ

## ಮುನ್ನುಡಿ

ಸಂಗೀತ, ನೃತ್ಯ, ಅಭಿನಯ, ಚಿತ್ರಕಲೆ, ಸಾಹಿತ್ಯ ಮೊದಲಾದ ಎಲ್ಲಾ ಕಲಾ ರೂಪಗಳು ನಾಟಕ ಕಲೆಯಲ್ಲಿ ಸಮ್ಮೇಳಿಸಿವೆ. ಅದಕ್ಕಾಗಿಯೇ ಕಲಿಕಾ ಪ್ರಕ್ರಿಯೆಯಲ್ಲಿ ನಾಟಕ ಕಲೆಯನ್ನು ಉಪಯೋಗಿಸುವುದು ಅನಿವಾರ್ಯವಾಗಿದೆ. ರಸಾಸ್ವಾದನೆಯ ಸಂದರ್ಭಗಳು, ನಾಟಕ ಆಸ್ವಾದನಾ ಕ್ಷಮತೆ ಪಡೆಯಲಿರುವ ತರಬೇತಿಯನ್ನು ಒಳಗೊಂಡಿರುವ ನಾಟಕದ ಪಾಠ್ಯಪದ್ಧತಿಯ ಅಗತ್ಯವಿದೆ.

ಪ್ರಧಾನವಾಗಿ ಮೂರು ಹಂತಗಳಲ್ಲಾಗಿ ನಾಟಕ ಸನ್ನಿವೇಶಗಳು ಇಂದು ನಮ್ಮ ಚಟುವಟಿಕೆಗಳಲ್ಲಿ ಹಾಸುಹೊಕ್ಕಿವೆ. ತರಗತಿಗಳಲ್ಲಿ ಅಧ್ಯಾಪಿಕೆ ಅಭಿನೇತ್ರಿಯಾಗಿಯೂ ತರಗತಿ ಕೋಣೆ ವೇದಿಕೆಯಾಗಿಯೂ ಸ್ವಾಭಾವಿಕವಾಗಿ ಪರಿವರ್ತನೆಯಾಗುತ್ತದೆ ಎಂಬುದು ಮೊದಲ ಹಂತ. ನಾಟಕ ಸನ್ನಿವೇಶಗಳ ಕೆಲವು ಅಂಶಗಳನ್ನು ಕಲಿಕಾಚಟುವಟಿಕೆಗಳ ಪ್ರತಿಯೊಂದು ಹಂತಗಳಲ್ಲೂ ಅಗತ್ಯಕ್ಕನುಸರಿಸಿ ಉಪಯೋಗಿಸುವುದು ಎರಡನೇ ಹಂತ. ನಾಟಕ ರೂಪದಲ್ಲಿರುವ ಪಾಠಭಾಗಗಳಿಗಾಗಿ ಕಲಿಕಾಪ್ರಕ್ರಿಯೆಗಳನ್ನು ರೂಪಿಸುವಾಗ ಪ್ರದರ್ಶನ ಮತ್ತು ಅಭಿನಯ ಕಲೆಯನ್ನು ಉಪಯೋಗಿಸಬೇಕಾಗಿ ಬರುವುದು ಮೂರನೇ ಹಂತವಾಗಿದೆ.

ಓದುವಿಕೆಯ ಮೂಲಕ ಭಾವನಾದೃಶ್ಯಗಳನ್ನು ಸೃಷ್ಟಿಸುತ್ತೇವೆ. ನಾಟಕ ಹಾಗೂ ಇತರ ದೃಶ್ಯಕಲೆಗಳು, ಈ ಭಾವನಾ ದೃಶ್ಯಗಳ ಆವಿಷ್ಕಾರವಾಗಿದೆ. ಕೃತಿಗಳನ್ನು ದೃಶ್ಯಗಳಾಗಿ ಬದಲಾಯಿಸುವಾಗ ಆಳವಾದ ವಿಶ್ಲೇಷಣೆಗೂ ಪಾಠನಿರ್ಮಾಣಕ್ಕೂ ಸಾಧ್ಯವಾಗುವುದು. ಭಾಷೆಯ ವಿಭಿನ್ನ ಸೌಂದರ್ಯ ಮತ್ತು ಶೈಲಿಗಳನ್ನು ಅರ್ಥೈಸಿಕೊಂಡು ಸ್ವಂತ ಸಂಸ್ಕೃತಿಯ ಕುರಿತು ಹೆಚ್ಚಿನ ತಿಳುವಳಿಕೆ ಗಳಿಸಲು ಸಹಾಯವಾಗುವುದು. ನಾಟಕ ಆವಿಷ್ಕಾರದಲ್ಲೂ ಇತರ ಇಂತಹ ಕಲಾರೂಪಗಳಲ್ಲಿ ಪಾಲ್ಗೊಳ್ಳುವುದರ ಮೂಲಕವೂ ಭಿನ್ನಮಟ್ಟದ ಮಕ್ಕಳಿಗೂ ಭಾಗವಹಿಸಲು ಅವಕಾಶವುಂಟಾಗಿ ಅಧಿಕ ಆತ್ಮವಿಶ್ವಾಸ ಬೆಳೆಯುವುದು.

ಮಕ್ಕಳ ನಾಟಕಗಳು ಹಿರಿಯರ ನಾಟಕಗಳಿಂದ ವ್ಯತ್ಯಸ್ತವಾಗಿದೆ. ಶಾರೀರಿಕವಾಗಿಯೂ ಮಾನಸಿಕವಾಗಿಯೂ ಮಕ್ಕಳಿಗೆ ಹಲವು ವಿಶೇಷತೆಗಳಿವೆ. ಅವರ ಭಾವನಾತ್ಮಕ ವ್ಯವಸ್ಥೆಯಲ್ಲೂ ವಿಚಾರ ಪ್ರಕ್ರಿಯೆಗಳಲ್ಲೂ ವ್ಯತ್ಯಾಸಗಳಿವೆ. ಹಾಗಾಗಿಯೇ ಮಕ್ಕಳ ನಾಟಕಗಳಲ್ಲಿಯೂ ಆ ವಿಶೇಷತೆಗಳನ್ನು ಕಾಣಲು ಸಾಧ್ಯವಿದೆ. ಅವುಗಳೆಂದರೆ ಪ್ರತಿಭಾನ್ವಿತ ಮಾನಸಿಕ ಆಕರ್ಷಕತೆ, ಘಟಕಗಳ ತನ್ಮಯತೆ, ಮಕ್ಕಳ ಮಟ್ಟಕ್ಕೆ ಯೋಗ್ಯವಾಗಿ ಮಾಡಲಿರುವ ಸಾಮರ್ಥ್ಯ, ಸಂಭಾಷಣೆಗಿಂತ ಆಂಗಿಕ ಚಲನೆಯ ಪ್ರಾಧಾನ್ಯ, ನಾಟಕೀಯ ಸಂದರ್ಭ ಹಾಗೂ ಸಂಭಾಷಣೆಗಳ ಮಿಡಿತಗಳಾಗಿವೆ. ಇವುಗಳನ್ನು ಅರ್ಥೈಸಿಕೊಂಡು ಮಕ್ಕಳಿಗೆ ನಾಟಕಕಲಿಕೆಗೆ ಅವಕಾಶ ನೀಡಬೇಕು.

ಪಾಠ ವಿಷಯಗಳನ್ನು ರಸವತ್ತಾಗಿಸಲು ಸೃಜನಾತ್ಮಕ ನಾಟಕವೇದಿಕೆಗಳಾಗಿ ನಮ್ಮ ತರಗತಿಕೋಣೆಗಳು ಬದಲಾಗಬೇಕು. ಎ.ಕೆ. ನಂಬ್ಯಾರ್

## ಕಲಿಕಾ ಸಾಧನೆಗಳು

### ಎಂಟನೇ ತರಗತಿ

- ಕಥಾಪಾತ್ರಗಳ ವಿಶೇಷತೆಗಳನ್ನು ತಿಳಿದುಕೊಂಡು ಅಭಿನಯಘಟ್ಟಗಳನ್ನು ರೂಪಿಸುವುದು.
- ಸಂಭಾಷಣೆ, ಮುಖಾಭಿನಯ, ಆಂಗಿಕ ಚಲನೆ, ವೇಷಭೂಷಣಗಳು ಎಂಬಿವುಗಳ ಮೂಲಕ ಕಥಾಪಾತ್ರಗಳ ವ್ಯಕ್ತಿಚಿತ್ರಣವನ್ನು ಪ್ರಕಟಿಸುವುದು.
- ವೇದಿಕೆ, ದೃಶ್ಯ, ರಚನೆಗಳ ತಿಳುವಳಿಕೆ.
- ಒಂದು ಆಶಯವನ್ನು ಸನ್ನಿವೇಷವಾಗಿ ಬದಲಾಯಿಸಲಿರುವ ಸಾಮರ್ಥ್ಯ ಬೆಳೆಸುವುದು.
- ಸ್ಥಳ, ಕಾಲ, ಸಂದರ್ಭ, ಕಥಾಪಾತ್ರಗಳನ್ನು ಸಂಯೋಜಿಸಿ ನಾಟಕಘಟ್ಟಗಳನ್ನು ಬೆಳೆಸುವುದು.
- ಕಥಾಪಾತ್ರಗಳಿಗೆ ವೇದಿಕೆಕ್ರಮ, ಸಂಭಾಷಣೆ ಎಂಬಿವುಗಳನ್ನು ತಯಾರಿಸಿ ಮಂಡಿಸುವುದು.
- ಸಿನಿಮಾ ನಿರ್ಮಾಣದ ಪ್ರಾಥಮಿಕ ಅಂಶಗಳನ್ನು ತಿಳಿಯುವುದು.
- ಕಾಲ ಪರಿಸರಕ್ಕೆ ಹೊಂದಿಕೊಂಡು ಆಶಯಗಳ ದೃಶ್ಯ ಆವಿಷ್ಕಾರ ತಯಾರಿಸುವುದು.
- ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆ ತಯಾರಿಸುವುದು.
- ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು.
- ತರಗತಿಯಲ್ಲಿ ಪ್ರದರ್ಶಿಸುವ ನಾಟಕ, ಸಿನಿಮಾಗಳನ್ನು ನೋಡಿ ಅಸ್ವಾದನಾ ಟಿಪ್ಪಣಿಯನ್ನು ತಯಾರಿಸುವುದು.

### ಒಂಭತ್ತನೇ ತರಗತಿ

- ಕಥಾಪಾತ್ರಗಳ ಸ್ವಭಾವ ವಿಶೇಷತೆಗಳಿಗನುಸರಿಸಿ ಅಭಿನಯ ರೀತಿಯನ್ನು ಉತ್ತಮಪಡಿಸುವ ತಿಳುವಳಿಕೆಗಳಿಸುವುದು.
- ವೈಯಕ್ತಿಕವಾಗಿಯೂ, ಗುಂಪಾಗಿಯೂ ಚತುರ್ವಿಧಾಭಿನಯ ಉಪಯೋಗಿಸಿ ಆವಿಷ್ಕಾರಗಳನ್ನು ರೂಪಿಸುವುದು.
- ಕಥಾಪಾತ್ರವನ್ನು ಅಭಿನಯಿಸುವಾಗ ಸ್ಥಳ, ಕಾಲ ದೊಂದಿಗೆ ವ್ಯವಹರಿಸುವ ಸಂಪ್ರಾದಾಯವನ್ನು ಉತ್ತಮಗೊಳಿಸಿ ಉಪಯೋಗಿಸುವುದು.
- ನಾಟಕ(ಸಂಭಾಷಣೆ), ಚಿತ್ರಕಥೆ ಎಂಬಿವುಗಳನ್ನು ತಯಾರಿಸುವುದು.
- ನಾಟಕ ಪ್ರದರ್ಶನಕ್ಕೆ ಅಗತ್ಯವಾದ ವಸ್ತ್ರವಿನ್ಯಾಸ, ಸಂಗೀತ ಕೊರಿಯೋಗ್ರಾಫ್ ಎಂಬಿವುಗಳನ್ನು ಉಪಯೋಗಿಸುವುದರಲ್ಲಿ ಸಾಮಾನ್ಯ ತಿಳುವಳಿಕೆ ಗಳಿಸುವುದು
- ಹ್ರಸ್ವ ಸಿನಿಮಾ ನಿರ್ಮಾಣಕ್ಕಿರುವ ಚಟುವಟಿಕೆಗಳನ್ನೆಲ್ಲ ಕೈಗೆತ್ತಿಕೊಂಡು ಸಿನಿಮಾ ನಿರ್ಮಿಸುವುದು.
- ಸಂಭಾಷಣೆ, ಚಿತ್ರಕಥೆ ಎಂಬಿವುಗಳ ರಚನೆಯ ಸಂದರ್ಭದಲ್ಲಿ ಸನ್ನಿವೇಶಗಳು, ರಂಗಕರ್ಮಗಳನ್ನು ಯುಕ್ತಿಪೂರ್ವಕವಾಗಿಯೂ ಸೃಜನಾತ್ಮಕವಾಗಿಯೂ ವಿನ್ಯಾಸಗೊಳಿಸುವ ತಿಳುವಳಿಕೆ ಗಳಿಸುವುದು.
- ಸಿನಿಮಾ, ನಾಟಕಗಳ ಪ್ರದರ್ಶನವನ್ನು ಕಂಡು ಅಸ್ವಾದಿಸುವುದು.

### ಹತ್ತನೇ ತರಗತಿ

- ಪಾಶ್ಚಿಮಾತ್ಯ ಮತ್ತು ಪೌರಾಣಿಕ ಅಭಿನಯಗಳನ್ನು ಉಪಯೋಗಿಸಿ ಕಥಾಪಾತ್ರಗಳ ಸನ್ನಿವೇಶಗಳನ್ನು ವಿನ್ಯಾಸಗೊಳಿಸುವುದರಲ್ಲಿ ತಿಳುವಳಿಕೆ ಗಳಿಸುವುದು.
- ವೇದಿಕೆಯಲ್ಲೂ, ಕ್ಯಾಮರಗಳ ಎದುರೂ ಅಭಿನಯಿಸುವ ತಿಳುವಳಿಕೆ ಗಳಿಸುವುದು.
- ಸಿನಿಮಾ ಮಂದಿರಗಳ ವಿಶೇಷತೆಗಳನ್ನು ಗಮನದಲ್ಲಿರಿಸಿ ಪಾಠಭಾಗ/ಆಶಯ ಎಂಬಿವುಗಳನ್ನು ನಾಟಕಮಾಡಿ ಅಭಿನಯಿಸುವುದು.
- ಇತರ ಕಲಾರೂಪಗಳಲ್ಲಿನ ಸಾಧ್ಯತೆಗಳನ್ನು ನಾಟಕ, ಸಿನಿಮಾ ಎಂಬಿವುಗಳ ನಿರ್ಮಾಣದ ಸಂದರ್ಭದಲ್ಲಿ ಉಪಯೋಗಿಸುವುದು.
- ನಾಟಕ, ಸಿನಿಮಾ ಎಂಬಿವುಗಳನ್ನು ಕಂಡು ವಿಮರ್ಶಾತ್ಮಕ ಚರ್ಚೆಗಳನ್ನು ನಡೆಸುವುದು.

# ತರಗತಿ ಎಂಟು

### ಮುನ್ನುಡಿ

ನಾಟಕಾಸ್ವಾದನೆ, ರಂಗಪ್ರದರ್ಶನಗಳನ್ನು ಅನುಕ್ರಮವಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಪ್ರಾಥಮಿಕ ತರಗತಿಗಳಲ್ಲಿ ಆಸ್ವಾದನೆ ಮತ್ತು ಪ್ರದರ್ಶನಗಳ ವಿವಿಧ ಮಂಡಲಗಳು ಕಲಿಕಾ ಚಟುವಟಿಕೆಗಳ ಭಾಗವಾಗಿ ಬಂದಿವೆ. ಭಾವನಾವಿಷ್ಕಾರದ ಸೂಕ್ಷ್ಮತೆಗಳನ್ನು ದೃಢ ಪಡಿಸುವ ಚಟುವಟಿಕೆಗಳು ಏಳನೇ ತರಗತಿಯಲ್ಲೂ ಇವೆ. ನಾಟಕ ರಚನೆ ಮತ್ತು ಮಹತ್ತರವಾದ ನಾಟಕಾಸ್ವಾದನಗೆ ಒತ್ತು ನೀಡುವ ಚಟುವಟಿಕೆಗಳನ್ನು ಎಂಟನೆಯ ತರಗತಿಯಲ್ಲಿ ಒಳಗೊಳಿಸಲಾಗಿದೆ. ಸಿನಿಮಾ ಚಿತ್ರೀಕರಣಕ್ಕಿರುವ ಬಾಲಪಾಠಗಳನ್ನೂ ಚಟುವಟಿಕೆಯಲ್ಲಿ ಸೇರಿಸಲಾಗಿದೆ.

## ಪಾಠ 1 : ಕೈಗನ್ನಡಿ

ನಾಟಕ ಅಭಿನಯದ ತರಬೇತಿಯಲ್ಲಿರುವ ಪ್ರದಾನ ಅಂಶಗಳಲ್ಲೊಂದಾಗಿದೆ ಈ ಕೈಗನ್ನಡಿ ಎಂಬ ಆಟ. ಕೈಗನ್ನಡಿ, ಗೋಡೆಕನ್ನಡಿ ಹೀಗೆ ವ್ಯತ್ಯಸ್ಥಗಳಾದ ಕನ್ನಡಿಗಳಿವೆ. ಇನ್ನೊಬ್ಬರ ಚಲನಾರೀತಿಗನುಸರಿಸಿ ಅವನವನ ಶರೀರವನ್ನು ವಿವಿಧ ಭಾಗಗಳನ್ನು ಚಲಿಸಲು ಸಹಾಯ ಮಾಡುವುದು ಈ ಕೈಗನ್ನಡಿ ಆಟದ ಮೂಲಕವಾಗಿದೆ. ಇನ್ನೊಬ್ಬನ ಭಾವನೆಗಳನ್ನು ನಿರೀಕ್ಷಿಸಿ ತತ್ಸಮಯ ಮಂಡಿಸುವ ಆಕರ್ಷಕ ನಾಟಕ ಆಟವಾಗಿದೆ ಗೋಡೆ ಕನ್ನಡಿ.

### ಕಲಿಕಾ ಸಾಧನೆ

ಕಥಾಪಾತ್ರಗಳ ವಿಶೇಷತೆಗಳನ್ನು ತಿಳಿದು ಅಭಿನಯ ಘಟ್ಟಗಳನ್ನು ರೂಪಿಸುವುದು

### ಆಶಯ/ತಿಳುವಳಿಕೆ

ಪ್ರತಿಯೊಂದು ಕಥಾಪಾತ್ರಗಳು ವೈವಿಧ್ಯಮಯವಾದ ವಿಶೇಷತೆಗಳಿಂದ ಕೂಡಿರುವುದಾಗಿದೆ.

### ಕಲಿಕಾ ಚಟುವಟಿಕೆಗಳು

- ಎಲ್ಲಾ ಮಕ್ಕಳನ್ನು ಎರಡು ಮಂದಿಯ ಗುಂಪುಗಳನ್ನಾಗಿ ಮಾಡುವುದು. ಗುಂಪಿನಲ್ಲಿರುವ ಇಬ್ಬರ ಬಲ ಅಂಗೈಗಳು ಎದುರಿನವನ ಕೈಗನ್ನಡಿಯಾಗಿ ಬದಲಾಗುವುದು. ಮೆಲ್ಲಗೆ ಕನ್ನಡಿಯನ್ನು ಚಲಿಸುವಂತೆ ಮಾಡುವರು. ಎದುರಿನವನ ತಲೆಯ ಮೇಲೆ ಹೋಗದಂತೆ

ನಿಧಾನವಾಗಿ ಚಲಿಸುವಂತೆ ನೋಡಿಕೊಳ್ಳುವುದು. ನಿಲ್ಲಿಸಬೇಕು ಎಂದು ಅನಿಸುವ ಸಮಯ (5 ಮಿನಿಟ್) ಚಟುವಟಿಕೆ ನಿಲ್ಲಿಸುವುದು.

## ಪಾಠ – 2 : ನೆಲಕನ್ನಡಿ

ಕೈಗನ್ನಡಿಯ ಮುಂದುವರಿದ ಚಟುವಟಿಕೆಯಾಗಿ ನೆಲಕನ್ನಡಿ ಚಟುವಟಿಕೆಯನ್ನು ಮಾಡಬೇಕು.

### ಕಲಿಕಾ ಸಾಧನೆ

ಕಥಾಪಾತ್ರಗಳ ವಿಶೇಷತೆಗಳನ್ನು ತಿಳಿದು ಅಭಿನಯಘಟ್ಟಗಳನ್ನು ರೂಪಿಸುವುದು.

### ಆಶಯ/ತಿಳುವಳಿಕೆ

ಪ್ರತಿಯೊಂದು ಕಥಾಪಾತ್ರಗಳು ವೈವಿಧ್ಯಮಯವಾದ ವಿಶೇಷತೆಗಳಿಂದ ಕೂಡಿದೆ.

### ಕಲಿಕಾ ಚಟುವಟಿಕೆಗಳು

- ಮಕ್ಕಳು ಎರಡು ಗುಂಪುಗಳಾಗಿ ಮುಖಾಮುಖಿಯಾಗಿ ನಿಲ್ಲುವರು. ಪ್ರತಿಯೊಬ್ಬರ ನೇರ ಇನ್ನೊಬ್ಬರಿರಬೇಕು. ಮಧ್ಯದಲ್ಲಿ ದೊಡ್ಡದಾದೊಂದು ಕನ್ನಡಿ. ಸೀಟಿ ಊದುವಾಗ ಬಿಂಬ–ಪ್ರತಿಬಿಂಬ ಒಂದೇ ರೀತಿಯಲ್ಲಿ ಚಲಿಸುವರು. ಕನ್ನಡಿಯ ಇಬ್ಬದಿಗಳಲ್ಲೂ ಒಬ್ಬರಂತೆ ಇನ್ನೊಬ್ಬರು ಮಾತ್ರ. ಏನು ಬೇಕಾದರೂ ಮಾಡಬಹುದು. ಅದೇ ರೀತಿ ಕನ್ನಡಿಯ ಇನ್ನೊಂದು ಬದಿಗೂ ಇರಬೇಕು. ಒಂದು ನಿಶ್ಚಿತ ಸಮಯದ ನಂತರ ಪ್ರತಿಬಿಂಬ ಮತ್ತು ಕನ್ನಡಿ ಬದಲಾಗುವರು. ಆಟ ನಿರ್ದಿಷ್ಟ ಸಮಯದ ವರೆಗೆ ಮುಂದುವರಿಯುವುದು.

## ಯೂನಿಟ್– 3 : ಏಕವ್ಯಕ್ತಿ ಅಭಿವ್ಯಕ್ತತೆ

ಪರಿಚಿತವಾಗಿರುವ ಪಾಠಭಾಗಗಳಿಂದ ಕಥಾಪಾತ್ರಗಳನ್ನು ಆರಿಸಿ ಅವುಗಳ ವಿಶೇಷಗುಣಗಳನ್ನು ಕಂಡುಕೊಂಡು ತನ್ಮಯತೆಯಿಂದ ಮಂಡಿಸುವ ಚಟುವಟಿಕೆಯಾಗಿದೆ ಏಕವ್ಯಕ್ತಿ ಅಭಿವ್ಯಕ್ತಿ.

### ಕಲಿಕಾ ಸಾಧನೆಗಳು

- ವೇದಿಕೆ, ದೃಶ್ಯ, ರಚನೆಗಳ ತಿಳುವಳಿಕೆ
- ಒಂದು ಆಶಯವನ್ನು ಸನ್ನಿವೇಷವಾಗಿ ಬದಲಾಯಿಸುವ ಸಾಮರ್ಥ್ಯ ಬೆಳೆಸುವುದು
- ಸ್ಥಳ, ಕಾಲ, ಸಂದರ್ಭ, ಕಥಾಪಾತ್ರವನ್ನು ಸಂಯೋಜಿಸಿ ನಾಟಕಘಟ್ಟಗಳನ್ನು ಅಭಿವೃದ್ಧಿಪಡಿಸುವುದು.
- ಕಥಾಪಾತ್ರಗಳಿಗೆ ರಂಗಕರ್ಮ ಸಂಭಾಷಣೆ ಎಂಬಿವುಗಳನ್ನು ತಯಾರಿಸಿ ಮಂಡಿಸುವುದು.
- ಕಾಲ ಪರಿಸರಕ್ಕೆ ಹೊಂದಿಕೊಂಡು ಆಶಯಗಳ ದೃಶ್ಯಾವಿಷ್ಕಾರ ತಯಾರಿಸುವುದು.

● ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆ ತಯಾರಿಸುವುದು.

**ಆಶಯ/ತಿಳುವಳಿಕೆಗಳು**

- ಆಶಯಗಳನ್ನು ಸನ್ನಿವೇಷಗಳಾಗಿ ಬದಲಾಯಿಸಬಹುದು.
- ಒಂದು ಆಶಯವನ್ನು ಆವಿಷ್ಕರಿಸುವುದಕ್ಕೆ ಸನ್ನಿವೇಷ ತಯಾರಿಸಬೇಕಾಗಿದೆ.
- ಜೀವನಾನುಭವಗಳನ್ನು ಆಧಾರವಾಗಿರಿಸಿದ ಆಶಯುಗಳನ್ನು ಸನ್ನಿವೇಷವಾಗಿ ಬದಲಾಯಿಸಲಿರುವ ನೈಪುಣ್ಯ.
- ಆಶಯ ಸನ್ನಿವೇಶ ಎಂಬಿವುಗಳಲ್ಲಿ ಸ್ಥಳಕಾಲ ನಿರ್ಣಯಗಳ ಮೂಲಕ ದೃಶ್ಯಗಳನ್ನು ಉಂಟುಮಾಡಬೇಕು.
- ನಾಟಕ ಘಟ್ಟಗಳನ್ನು ಬೆಳೆಸಲಿರುವ ನೈಪುಣ್ಯ.

**ಕಲಿಕಾ ಚಟುವಟಿಕೆಗಳು**

- ಒಂದು ಪೆಟ್ಟಿಗೆಯಲ್ಲಿ ಸಾಕಷ್ಟು ವಿವರಣೆಯಿಂದೊಡಗೂಡಿದ ವಿಭಿನ್ನವಾದ ಕಥಾಪಾತ್ರಗಳ ಹೆಸರುಗಳನ್ನು ಬರೆದು ಇಡುವುದು. ಮಕ್ಕಳು ಒಬ್ಬೊಬ್ಬರಾಗಿ ಅದರಿಂದ ಒಂದನ್ನು ತೆಗೆದು ಅಭಿನಯದ ಮೂಲಕ ಇತರರಿಗೆ ತಿಳಿಸುವನು. ಪ್ರಸಿದ್ಧಕೃತಿಗಳ ಕಥಾಪಾತ್ರಗಳಾಗಿರಬೇಕು.

## ಯೂನಿಟ್ – 4 : ಕವಿತಾ ತುಣುಕು/ಗಾದೆಗಳ ದೃಶ್ಯಾವಿಷ್ಕಾರ

ಇದು ಆಶಯಗಳಿಂದ, ಸಂದರ್ಭಗಳಿಂದ ನಾಟಕ ಘಟ್ಟಗಳನ್ನು ಅಭಿವೃದ್ಧಿಪಡಿಸಿ ಮಂಡಿಸುವ ಚಟುವಟಿಕೆಯಾಗಿದೆ.

**ಕಲಿಕಾ ಸಾಧನೆಗಳು**

- ವೇದಿಕೆ, ದೃಶ್ಯ, ರಚನಾ ತಿಳುವಳಿಕೆ ಒಂದು ಆಶಯವನ್ನು ಸನ್ನಿವೇಶವಾಗಿ ಬದಲಾಯಿಸಲಿರುವ ಸಾಮರ್ಥ್ಯ ಬೆಳೆಸುವುದು.
- ಸ್ಥಳ, ಕಾಲ, ಸಂದರ್ಭ, ಕಥಾಪಾತ್ರಗಳನ್ನು ಸಂಯೋಜಿಸಿ ನಾಟಕ ಘಟ್ಟಗಳನ್ನು ಬೆಳೆಸುವುದು.
- ಕಥಾಪಾತ್ರಗಳಿಗೆ ರಂಗಕ್ರಿಯೆ, ಸಂಭಾಷಣೆ ಎಂಬಿವುಗಳನ್ನು ತಯಾರಿಸಿ ಮಂಡಿಸುವುದು.
- ಕಾಲ ಪರಿಸರಕ್ಕೆ ಅನುಸರಿಸಿ ಆಶಯಗಳ ದೃಶ್ಯಾವಿಷ್ಕಾರ ಮಂಡಿಸುವುದು.

**ಆಶಯ ತಿಳುವಳಿಕೆ**

- ಆಶಯಗಳನ್ನು ಸನ್ನಿವೇಶಗಳಾಗಿ ಬದಲಾಯಿಸಬಹುದು.
- ಒಂದು ಆಶಯವನ್ನು ಆವಿಷ್ಕರಿಸುವುದಕ್ಕಾಗಿ ಸನ್ನಿವೇಷಗಳನ್ನು ತಯಾರಿಸಬೇಕಾಗಿದೆ.

- ಜೀವನಾನುಭವಗಳನ್ನು ಆಧಾರವಾಗಿರಿಸಿದ ಆಶಯಗಳನ್ನು ಸನ್ನಿವೇಶಗಳಾಗಿ ಬದಲಾಯಿಸುವ ನೈಪುಣ್ಯ
- ಆಶಯ, ಸನ್ನಿವೇಶ ಎಂಬಿವುಗಳಲ್ಲಿ ಸ್ಥಳಕಾಲ ನಿರ್ಣಯಗಳ ಮೂಲಕ ದೃಶ್ಯಗಳನ್ನು ಸೃಷ್ಟಿಸಬೇಕು.
- ನಾಟಕ ಘಟ್ಟಗಳನ್ನು ಅಭಿವೃದ್ಧಿಪಡಿಸಲಿರುವ ನೈಪುಣ್ಯ
- ಕಥಾಪಾತ್ರಗಳಿಗೆ ಸೂಕ್ತವಾದ ಅವಕಾಶ ಮತ್ತು ಮಾತುಗಾರಿಕೆಯಿದೆ.
- ರಂಗಕ್ರಿಯೆ ಮತ್ತು ಸಂಭಾಷಣೆ ರಚಿಸಲಿರುವ ನೈಪುಣ್ಯ.
- ಆಶಯಗಳಿಗೆ ಕಾಲ ಸಂಬಂಧವಿದೆ.
- ಸ್ಥಳ ಕಾಲ ಸಂಬಂಧವಿರುವ ಯಾವುದಕ್ಕೂ ದೃಶ್ಯರೂಪಗಳನ್ನು ನೀಡಬಹುದು.
- ಆಶಯಗಳನ್ನು ದೃಶ್ಯರೂಪವಾಗಿ ಬದಲಾಯಿಸುವ ಸಾಮರ್ಥ್ಯ

**ಕಲಿಕಾ ಚಟುವಟಿಕೆಗಳು**

ಮಕ್ಕಳ ಗುಂಪಿಗೆ ಕವಿತಾಭಾಗ/ಗಾದೆಗಳನ್ನು ನೀಡುವುದು. ಮಕ್ಕಳು ಲಭಿಸಿದ ಟಿಪ್ಪಣಿಯನ್ನು ಓದಿ ಆಶಯಗಳನ್ನು ಸ್ವಾಂಶೀಕರಿಸುವರು. ಜೀವನಕ್ಕೆ ಸಂಬಂಧಿಸಿ ಸನ್ನಿವೇಷಗಳನ್ನು ಸೃಷ್ಟಿಸುವರು. ಸಂದರ್ಭ ಕಥಾಪಾತ್ರ, ಅಭಿನಯ, ಸಂಭಾಷಣೆಗಳನ್ನು ಸೃಷ್ಟಿಸಿ ತರಬೇತಿ ನಡೆಸಿ ತರಗತಿಯಲ್ಲಿ ಮಂಡಿಸುವರು. ಒಂದು ಗುಂಪಿನ ಪ್ರದರ್ಶನವನ್ನು ಇನ್ನೊಂದು ಗುಂಪು ಸೂಚಕಗಳನ್ನಿರಿಸಿ ಮೌಲ್ಯ ನಿರ್ಣಯ ಮಾಡುವರು. ನಾಟಕವನ್ನು ಬರೆದು ಓದಿ ಮಂಡಿಸಬೇಕು. ಚರ್ಚೆಯ ಮೂಲಕ ನಾಟಕವನ್ನು ಉತ್ತಮಪಡಿಸಿ ಪುನ: ಪ್ರದರ್ಶಿಸಬೇಕು.

***ಸೂಚಕಗಳು***

1. ಆಶಯ ಸ್ವಾಯತ್ತತೆಯ ತನ್ಮಯತೆ.
2. ಸನ್ನಿವೇಷ ಘಟ್ಟಗಳು
3. ನಾಟಕ ರಚನೆ–ಸಂಭಾಷಣೆ – ಬಾಯಿಪಾಠ
4. ಪಾತ್ರಗಳ ನಿರ್ಣಯ ಆವಿಷ್ಕಾರ– ಎಂಬಿವುಗಳಲ್ಲಿರುವ ಸೂಕ್ಷ್ಮತೆ
5. ಅಭಿನಯ, ವೇದಿಕೆಗಳಲ್ಲಿರುವ ಸೃಜನಾತ್ಮಕತೆ.

- ಸೂಚಕಗಳ ಪ್ರಸ್ತುತತೆಯನ್ನು ಕಂಡುಕೊಂಡು ಅಧ್ಯಾಪಕರು ಚರ್ಚೆ ಕ್ರೋಡೀಕರಿಸುವರು.

## ಯೂನಿಟ್ – 5 : ನಾಟಕ ರಚನೆ

ಆಶಯಗಳಿಂದಲೂ ಘಟನೆಗಳಿಂದಲೂ ಅಭಿವೃದ್ಧಿಪಡಿಸಿ ಮಂಡಿಸಿದ ನಾಟಕಗಳು ನಿರಂತರ ಚರ್ಚೆಗಳ ಮೂಲಕ ಉತ್ತಮ ಪಡಿಸುವಾಗ ಸರಿಯಾದ ಯಥಾರ್ಥ ನಾಟಕಗಳು ಪ್ರದರ್ಶನಕ್ಕೆ ತಯಾರಾಗುವುವು. ಇದನ್ನು ಉತ್ತಮಪಡಿಸಿ ಪ್ರದರ್ಶಿಸಬೇಕು ಎಂಬ ತಿಳುವಳಿಕೆ ಮೂಡಿಸುವ ಚಟುವಟಿಕೆ.

**ಕಲಿಕಾ ಸಾಧನೆ**

- ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು.

**ಆಶಯ, ತಿಳುವಳಿಕೆ**

♦ ಸಂಭಾಷಣೆ, ಚಿತ್ರಕಥೆ ಎಂಬಿವುಗಳು ದೃಶ್ಯಗಳ ರಚನೆಗಳಾಗಿವೆ.

♦ ಸಂಭಾಷಣೆ, ಚಿತ್ರಕಥೆ ಎಂಬಿವುಗಳಿಗೆ ಸೃಜನಾತ್ಮಕವಾದ ಪಾಠಗಳನ್ನು ತಯಾರಿಸಬಹುದು.

♦ ದೃಶ್ಯಪಾಠಗಳನ್ನು ತಯಾರಿಸುವ ನೈಪುಣ್ಯ.

**ಕಲಿಕಾ ಚಟುವಟಿಕೆ**

- ಗುಂಪುಗಳು ತಯಾರಿಸಿ ಮಂಡಿಸಿದ ನಂತರ ವಿವರವಾದ ಚರ್ಚೆಯ ಬಳಿಕ ಅಗತ್ಯ ಬದಲಾವಣೆಗಳನ್ನು ವೈಯುಕ್ತಿಕ ದೃಷ್ಟಿಕೋನಗಳನ್ನು ಸೇರಿಸಿಕೊಂಡು ನಾಟಕ ರಚನೆಗಳನ್ನು ತಯಾರಿಸಬೇಕು. ಇದು ಗುಂಪು ಚಟುವಟಿಕೆಯ ವೈಯುಕ್ತಿಕ ರಚನೆಯಾಗಿದೆ.

## ಯೂನಿಟ್ – 6 : ನಾಟಕ ಆಸ್ವಾದನೆ

ಉತ್ತಮ ನಾಟಕ ಕೃತಿಗಳನ್ನು ಕಂಡುಹಿಡಿದು ಸ್ವಂತವಾಗಿ ವಿನ್ಯಾಸಗೊಳಿಸಿ ಮಂಡಿಸುವುದು ನಾಟಕದ ಚಿತ್ರಕಥೆ, ಮಂಡನೆ ಎಂಬ ಮಂಡಲಗಳಲ್ಲಿನ ಸೂಕ್ಷ್ಮ ಘಟಕಗಳನ್ನು ತಿಳಿಯಲು ಮಕ್ಕಳಿಗೆ ಸಹಾಯಕರವಾಗಬಹುದು. ನಾಟಕ ಪ್ರದರ್ಶನಕ್ಕೆ ಬೇಕಾದ ತಯಾರಿಯನ್ನು ಪರಿಚಯಿಸಲು ಈ ಚಟುವಟಿಕೆ ಸಹಾಯವಾಗಬಹುದು.

**ಕಲಿಕಾ ಸಾಮರ್ಥ್ಯ**

- ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು.
- ತರಗತಿಯಲ್ಲಿ ಪ್ರದರ್ಶಿಸುವ ನಾಟಕ, ಸಿನಿಮಾಗಳನ್ನು ನೋಡಿ ಆಸ್ವಾದನಾ ಪಟ್ಟಿಯನ್ನು ತಯಾರಿಸುವುದು.

**ಆಶಯ, ತಿಳುವಳಿಕೆ**

♦ ಸಂಭಾಷಣೆ, ಚಿತ್ರಕಥೆ, ಎಂಬಿವುಗಳು ದೃಶ್ಯಗಳ ರಚನಾ ಪಾಠಗಳಾಗಿವೆ.
♦ ಸಂಭಾಷಣೆ, ಚಿತ್ರಕಥೆ ಎಂಬಿವುಗಳಿಗೆ ಸೃಜನಾತ್ಮಕವಾದ ದೃಶ್ಯಪಾಠಗಳನ್ನು ತಯಾರಿಸಬಹುದು.
♦ ದೃಶ್ಯಪಾಠಗಳನ್ನು ತಯಾರಿಸಲಿರುವ ನೈಪುಣ್ಯ.
♦ ಸಿನಿಮಾ, ನಾಟಕ ಎಂಬಿವುಗಳು ಆಸ್ವಾದನಾಕರವಾದ ಸೃಜನಾತ್ಮಕ ಸೃಷ್ಟಿಗಳಾಗಿವೆ.
♦ ಆಸ್ವಾದಿಸುವುದರ ಮೂಲಕ ಸಿನಿಮಾ, ನಾಟಕಗಳ ಸೌಂದರ್ಯವನ್ನು ಸ್ವಾಂಶೀಕರಿಸುವುದು.
♦ ಆಸ್ವಾದನಾ ಸಾಮರ್ಥ್ಯ

**ಕಲಿಕಾ ಚಟುವಟಿಕೆ**

- ಪ್ರಖ್ಯಾತವಾದ ಯಾವುದಾದರು ನಾಟಕವನ್ನೋ ನಾಟಕದ ಭಾಗವನ್ನೊ ಮಕ್ಕಳಿಗೆ ನೀಡಿ ಅಭಿನಯಿಸಲು ಹೇಳುವುದು. ನಾಟಕ ಓದುವುದು, ಸಂಭಾಷಣೆಗಳ ಚರ್ಚೆ, ದೃಶ್ಯಾವಿಷ್ಕಾರ ತಯಾರಿ, ತರಬೇತಿ, ಸಾಮಗ್ರಿಗಳನ್ನು ನಿಶ್ಚಯಿಸುವುದು, ತಯಾರಿ, ನಾಟಕಮಂಡನೆ, ಚರ್ಚೆ, ಆಸ್ವಾದನಾ ಟಿಪ್ಪಣಿ ತಯಾರಿಸುವುದು.

## ಯೂನಿಟ್–7

ಇದು ಸಿನಿಮಾ ನಿರ್ಮಾಣದ ಪ್ರಾಥಮಿಕ ಪಾಠಗಳನ್ನು ಪರಿಚಯಿಸುವ ಚಟುವಟಿಕೆಯಾಗಿದೆ. ಮೂರ್ತವೋ, ಅಮೂರ್ತವೋ ಆದ ಒಂದು ಆಶಯವನ್ನು ಕೆಲವು ದೃಶ್ಯಗಳನ್ನಾಗಿ ಬದಲಾಯಿಸಿ ಅದನ್ನು ಚಿತ್ರೀಕರಿಸಿ ಲಭ್ಯವಾದ ಸಾಧ್ಯತೆಗಳನ್ನು ಉಪಯೋಗಿಸಿ ಚಿತ್ರ ಸಂಯೋಜನೆ ನಡೆಸಿ ಪ್ರದರ್ಶಿಸಬೇಕು. ಪೂರ್ಣವಾದ ಒಂದು ಕಥೆ ಅಥವಾ ಸಂಘಟನೆಗಳ ಆವಿಷ್ಕಾರದಲ್ಲಿ. ಇದು ಕೇವಲ ಕೆಲವು ದೃಶ್ಯಗಳನ್ನು ಮಾತ್ರ ಚಿತ್ರೀಕರಿಸಿ ಘಟನೆಯ ಚಲನಚಿತ್ರ ರೂಪಾಂತರ ಎಂಬ ತಿಳುವಳಿಕೆಯನ್ನು ದೃಢಪಡಿಸುವ ಒಂದು ಚಟುವಟಿಕೆಯಾಗಿದೆ. ಮಳೆ ಎಂಬ ಆಶಯವನ್ನು ಕಾರ್ಮೋಡಗಳು ತುಂಬಿರುವ ಆಕಾಶ, ಎಲೆಗುಚ್ಚಗಳಿಂದ ಬೀಳುವ ಮಳೆಹನಿಗಳು, ಕೆಸರು ನೀರಿನಲ್ಲಿ ಹಾದುಹೋಗುವ ಕಾಲುಪಾದಗಳು, ಕೊಡೆಗಳ ಹಿಂಭಾಗದ ನೋಟ,ಎಂಬೀ ಲಘು ದೃಶ್ಯಗಳ ಮೂಲಕ ಆವಿಷ್ಕರಿಸಬಹುದು.

**ಕಲಿಕಾ ಸಾಧನೆ**

- ಸಿನಿಮಾ ನಿರ್ಮಾಣದ ಪ್ರಾಥಮಿಕ ಅಂಶಗಳನ್ನು ತಿಳಿಯುವುದು.
- ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು.

**ಆಶಯ ತಿಳುವಳಿಕೆಗಳು**

- ಸಿನಿಮಾ ನಿರ್ಮಾಣಕ್ಕೆ ಒಂದು ಚಿತ್ರಕಥೆಯ ಅಗತ್ಯವಿದೆ.
- ಪ್ರತಿಯೊಂದು ದೃಶ್ಯವನ್ನು ವಿವರಣೆಗಳೊಂದಿಗೆ ತಯಾರಿಸಬೇಕು.
- ಚಿತ್ರಗಳನ್ನು ಕ್ಯಾಮೆರದಲ್ಲಿ ತೆಗೆದು ಸಂಕಲನ ಮಾಡಬೇಕು.
- ಸಂಕಲನದ ನಂತರ ಅದು ಚಲನಚಿತ್ರವಾಗಿ ಬದಲಾಗುತ್ತದೆ.
- ಸಿನಿಮಾ ನಿರ್ಮಾಣದಲ್ಲಿರುವ ಪ್ರಾಥಮಿಕ ನೈಪುಣ್ಯ.
- ಸಂಭಾಷಣೆ, ಚಿತ್ರಕಥೆ ಎಂಬಿವುಗಳು ದೃಶ್ಯಗಳ ಚಿತ್ರಕಥಾ ಪಾಠಗಳು
- ಸಂಭಾಷಣೆ, ಚಿತ್ರಕಥೆ ಎಂಬಿವುಗಳು ಸೃಜನಾತ್ಮಕವಾದ ದೃಶ್ಯಪಾಠಗಳನ್ನು ತಯಾರಿಸಬಹುದು.
- ದೃಶ್ಯಪಾಠಗಳನ್ನು ತಯಾರಿಸುವ ನೈಪುಣ್ಯ

## ಹಂತ–1

### ಕಲಿಕಾ ಚಟುವಟಿಕೆಗಳು

- ಮೂರ್ತರೂಪದ ಕೆಲವು ಘಟನೆಗಳು–ಅನುಭವಗಳು–ಕಾರ್ಯಗಳನ್ನು ದೃಶ್ಯಗಳ ಮೂಲಕ ಪ್ರದರ್ಶಿಸಲಿರುವ ರೂಪರೇಖೆಗಳನ್ನು ತಯಾರಿಸಲು ಹೇಳುವುದು. (ಉದಾ: ಮಳೆ, ಬೇಸಗೆ ಮೊದಲಾದ ಋತುಗಳು, ವಿವಿಧ ಕಸುಬುಗಳು, ಪ್ರಕೃತಿ ದೃಶ್ಯಗಳು.....)
- ದೃಶ್ಯಗಳ ಪ್ರಾರಂಭದಿಂದಲೇ ಇರುವ ವಿನ್ಯಾಸ ಕ್ರಮ, ಅವುಗಳು ಒಟ್ಟು ಸೇರುವಾಗ ಸೃಷ್ಟಿಯಾಗುವ ಆಶಯ ಇತ್ಯಾದಿಗಳು ಗುಂಪಿನ ಓದುವಿಕೆಯಲ್ಲಿ ಚರ್ಚಿಸಲ್ಪಡುವುದು. ಉತ್ತಮ ಪಡಿಸಿದ ಮತ್ತು ಉತ್ತಮ ಪಡಿಸದ ಕೆಲವು ರೂಪರೇಖೆಗಳ ವಿವರಣೆಯನ್ನು ಬರೆಯಲು ಗುಂಪಿನಲ್ಲಿ ಹೇಳುವುದು. ಪ್ರತಿಯೊಂದು ದೃಶ್ಯವನ್ನು ಯಾರು? ಎಲ್ಲಿಂದ ಕಾಣುತ್ತಾರೆ? ಮೊದಲಾದ ಪ್ರಶ್ನೆಗಳನ್ನು ಕೇಳಿ ಹೆಚ್ಚು ಆಶಯ ಸ್ಪಷ್ಟವಾಗುವಂತೆಯೂ ಅರ್ಥವತ್ತವಾಗುವಂತೆಯೂ ನೋಡಿಕೊಳ್ಳುವುದು. ಗುಂಪಿನಲ್ಲಿ ತಯಾರಿಸಿದ ಚಿತ್ರಕಥೆಗಳನ್ನು ತರಗತಿಯಲ್ಲಿ ಮಂಡಿಸುವುದು. ಅದರಿಂದ ಒಂದನ್ನು ಮಕ್ಕಳೇ ಆಯ್ಕೆ ಮಾಡುವರು.
- ಚಿತ್ರಕಥೆಯನ್ನು ಪುನಃ ಚರ್ಚಿಸಿ ಉತ್ತಮಪಡಿಸುವರು. ನಂತರ ಚಲನಚಿತ್ರದ ನಿರ್ಮಾಣದ ಜವಾಬ್ದಾರಿಗಳನ್ನು ಹಂಚುವರು (ಕ್ಯಾಮರ, ಸ್ಥಳವ್ಯವಸ್ಥೆ, ನಟನೆ...) ತಮಗೆ ಸಿಕ್ಕಿದ ಜವಾಬ್ದಾರಿಯ ಕುರಿತು ಪ್ರತಿಯೊಬ್ಬರು ಆಳವಾಗಿ ಅಧ್ಯಯನ ಮಾಡುವರು. ನಿರ್ಮಾಣದ ದಿನವನ್ನು ನಿಶ್ಚಯಿಸುವರು.
- ಡಿಜಿಟಲ್ ಕ್ಯಾಮರ, ಮೊಬೈಲ್ ಕ್ಯಾಮರ ಎಂಬಿತ್ಯಾದಿ ಸಾಧ್ಯತೆಗಳನ್ನು ಉಪಯೋಗಿಸಿ ಚಿತ್ರೀಕರಣ ನಡೆಸುವುದು. ಚಿತ್ರ ಸಂಯೋಜನೆ ನಡೆಸಿ ಸಿನಿಮಾ ಪ್ರದರ್ಶಿಸುವರು.

## ಹಂತ–2 ಚಲನಚಿತ್ರೋತ್ಸವ

### ಕಲಿಕಾ ಚಟುವಟಿಕೆ

- ತಾಂತ್ರಿಕತೆಯ ವಿವರಣೆಗೂ, ಸನ್ನಿವೇಶಗಳ ರಚನೆಗೂ ಸಹಾಯ ಮಾಡುವ ಕ್ಲಾಸಿಕ್ ಚಲನಚಿತ್ರಗಳ ಪ್ರದರ್ಶನ, ನೋಡಿದ ಸಿನಿಮಾಗಳನ್ನು ಆಧಾರವಾಗಿರಿಸಿ ವಿವರವಾದ ಚರ್ಚೆ, ಸನ್ನಿವೇಶ, ತಾಂತ್ರಿಕತೆ, ಮಂಡನೆ ಮೊದಲಾದವುಗಳ ಕುರಿತು ಚರ್ಚೆ ನಡೆಸುವುದು. ಒಂದು ಸಿನಿಮಾಕ್ಕೆ ಆಸ್ವಾದನಾ ಟಿಪ್ಪಣಿ ತಯಾರಿಸುವುದು.

# ತರಗತಿ ಒಂಭತ್ತು

## ಮುನ್ನುಡಿ

ಸ್ಥಳಕಾಲಗಳನ್ನು ಸಂಯೋಜಿಸಿ ಸನ್ನಿವೇಷಗಳನ್ನು ಅಭಿವೃದ್ಧಿಪಡಿಸಲು, ರಂಗಪ್ರದರ್ಶನ ನಡೆಸಲು ಬೇಕಾದ ತಿಳುವಳಿಕೆಗಳನ್ನು ಗಳಿಸುವ ಕೆಲವು ಚಟುವಟಿಕೆಗಳು ಕಳೆದ ತರಗತಿಗಳಲ್ಲಿ ಮಕ್ಕಳಿಗೆ ಲಭ್ಯವಾಗಿದೆ. ಆಶಯ, ಘಟನೆ ಎಂಬಿವುಗಳನ್ನು ಅಭಿವೃದ್ಧಿಪಡಿಸಿ ಸನ್ನಿವೇಶಗಳನ್ನು ಕಥಾಪಾತ್ರಗಳನ್ನು ಸೃಷ್ಟಿಸುವ ಪರಿಚಯ ಮಕ್ಕಳಿಗಿದೆ. ಅಭಿನಯದ ಕುರಿತು ಮಕ್ಕಳಿಗೆ ಸಾಮಾನ್ಯ ತಿಳುವಳಿಕೆಯಿದೆ.

## ಯೂನಿಟ್–1 : ಭಾವಾಭಿನಯ

ಇದು ಭಾವಾಭಿನಯದ ಸೂಕ್ಷ್ಮತೆ ದೃಢಪಡಿಸುವ ಒಂದು ಚಟುವಟಿಕೆಯಾಗಿದೆ.

## ಕಲಿಕಾ ಸಾಮರ್ಥ್ಯ

ಪ್ರತಿಯೊಂದು ಕಥಾಪಾತ್ರಗಳ ಸ್ವಭಾವ ವಿಶೇಷತೆಗಳಿಗನುಸರಿಸಿ ಅಭಿನಯ ರೀತಿಯನ್ನು ಅಭಿವೃದ್ಧಿಪಡಿಸುವ ತಿಳುವಳಿಕೆ ಗಳಿಸುವುದು.

### ಆಶಯ ತಿಳುವಳಿಕೆ

- ♦ ಪ್ರತಿಯೊಂದು ಕಥಾಪಾತ್ರಕ್ಕೂ ಸ್ಪಷ್ಟವಾದ ಸ್ವಭಾವವಿಶೇಷತೆಗಳಿವೆ.
- ♦ ಸ್ವಭಾವವಿಶೇಷತೆಗಳನ್ನು ಪ್ರಕಟಪಡಿಸಲು ವಿಭಿನ್ನವಾದ ಅಭಿನಯ ತಂತ್ರಗಳಿವೆ.
- ♦ ಅಭಿನಯ ರೀತಿ ನಿರ್ಧರಿಸಲಿರುವ ಸಾಮರ್ಥ್ಯ.

## ಕಲಿಕಾ ಚಟುವಟಿಕೆ

- ಮಕ್ಕಳು ನಿಶಬ್ದರಾಗಿ ಕುಳಿತುಕೊಳ್ಳುವರು. ವಿವಿಧ ಭಾವಗಳಲ್ಲಿ ಹಾದುಹೋಗುವ ಒಂದು ವಿವರಣೆಯನ್ನು ಅಧ್ಯಾಪಕರು ಮಂಡಿಸುವರು. ಒಬ್ಬ ವ್ಯಕ್ತಿ ಎದುರಿಸುವ ವಿಭಿನ್ನ ಅನುಭವಗಳು ವಿವರಣೆಯಲ್ಲಿರಬೇಕು, ಪ್ರತಿಯೊಂದು ಮಗುವು ಅದರಲ್ಲಿರುವ ಪ್ರಕ್ರಿಯೆಗಳನ್ನು ಭಾವಾಭಿನಯವಾಗಿ ಮಂಡಿಸುವರು.
- ಕೆಳಗೆ ಹೇಳಿದ ರೀತಿಯಲ್ಲಿರುವ ಒಂದು ವಿವರಣೆಯನ್ನು ಅಧ್ಯಾಪಕರಿಗೆ ಉಪಯೋಗಿಸಬಹುದು.

***ವಿವರಣೆ***

ಕಳೆದ ವಾರ ಮಿಲಿಟರಿಯಲ್ಲಿರುವ ಮಾವ ಮನೆಗೆ ಬಂದರು. ನನ್ನ ಹುಟ್ಟುಹಬ್ಬವನ್ನು ಆಚರಿಸುವ ಹೊಣೆಗಾರಿಕೆಯನ್ನು ಅವರು ವಹಿಸಿದರು. ಶಾಲೆಗೆ ರಜೆಯಾಗಿರುವುದರಿಂದ ಅವರು ನನ್ನನ್ನು ಕರೆದುಕೊಂಡು ಮನೆಯಿಂದ ಹೊರಟರು. ಹದಿನಾಲ್ಕನೆಯ ಹುಟ್ಟುಹಬ್ಬ ಬಹಳ ಮಹತ್ತರವಾದುದೆಂದು ಅವರ ಅಭಿಪ್ರಾಯ. ಏನೋ ಬಹುಮಾನ ಕೊಡಬೇಕೆಂದು ಅವರು ತೀರ್ಮಾನಿಸಿದ್ದರು.

ಮಾವನ ಜೊತೆಯಲ್ಲಿ ಪೇಟೆಗೆ ಹೋದೆನು. ಅವರ ಸ್ಕೂಟರಿನಲ್ಲಿ ಪ್ರಯಾಣ. ಪ್ರಯಾಣದುದ್ದಕ್ಕೂ ಮಾವ ಮಿಲಿಟರಿಯ ರೋಚಕ ಕಥೆಗಳನ್ನು ಹೇಳುತ್ತಿದ್ದರು. ಪಕ್ಕನೆ ಯಾವುದೋ ವಾಹನ ಬ್ರೇಕ್ ಹಾಕುವ ಶಬ್ದ ಕೇಳಿತು. ನಮ್ಮ ಎದುರು ಅಲ್ಪ ದೂರದಲ್ಲಿ ಒಂದು ಕಾರು ಮತ್ತು ಬೈಕ್‌ಗಳು ಡಿಕ್ಕಿಹೊಡೆದಿದ್ದುವು. ಬೈಕ್‌ಸವಾರ ಡಿಕ್ಕಿಯ ರಭಸಕ್ಕೆ ರಸ್ತೆಯಲ್ಲಿ ಬಿದ್ದನು. ವಾಹನಗಳೆಲ್ಲವೂ ನಿಂತವು. ಸ್ಥಳದಲ್ಲೊಮ್ಮೆ ಅಲ್ಲೋಲಕಲ್ಲೋಲವಾಯಿತು. ಸ್ಕೂಟರನ್ನು ಬದಿಗಿರಿಸಿ ನಾವು ಕೂಡಾ ಆ ಕಡೆಗೆ ಹೋದೆವು. ರಕ್ತ ಮಡುಗಟ್ಟಿತ್ತು. ಯಾರೋ ಸ್ವಲ್ಪ ಮಂದಿ ಸೇರಿ ಕಾರಿನಲ್ಲಿ ಹತ್ತಿಸಿ ಕೊಂಡುಹೋದರು. ಆದರೆಡೆಯಲ್ಲಿ ಯಾವುದಕ್ಕೋ ನಾ ತುಳಿದೆ. ನನ್ನ ಕಾಲು ತಂಪಾದ  ಅನುಭವ. ನಾನು ನೋಡಿದೆ. ರಕ್ತ...

ಅಲ್ಲಿಂದ ನಮ್ಮ ಯಾತ್ರೆ ಮುಂದುವರಿಯಿತು. ಒಂದು ತಿರುವು ಕಳೆದಾಗ ತುಂಬಾ ಪೋಲಿಸಿನವರು. ನಮ್ಮ ವಾಹನಕ್ಕೆ ಕೈತೋರಿಸಿದರು. ಮಾವ ಕೂಡಲೇ ಬ್ರೇಕ್ ಹಾಕಿದರು. ಪೋಲಿಸರ ನಿಲುವು, ಭಾವ ಕಂಡಾಗ ನಾವು ಹೆದರಿದೆವು. ಗಾಡಿಯ ದಾಖಲೆ ಕಾಗದಗಳನ್ನು ಪರಿಶೋಧಿಸಿ ನಮ್ಮನ್ನು ಬಿಟ್ಟಾಗ ಭಯ ಹೋಗಿ ಮನಸ್ಸಿನಲ್ಲಿ ಸಂತೋಷ ಮೂಡಿತು.

ಒಂದು ತಂಪು ಪಾನೀಯ ವಿತರಿಸುವ ಅಂಗಡಿಯ ಎದುರು ಮಾವ ಸ್ಕೂಟರ್ ನಿಲ್ಲಿಸಿದರು. ಒಂದು ದೊಡ್ಡ ಮಾವಿನ ಮರದ ಬುಡದಲ್ಲಿರುವ ಸಣ್ಣ ಗೂಡಂಗಡಿ. ಅಲ್ಲಿ ಸಾಕಷ್ಟು ನೆರಳಿತ್ತು. ಮಣ್ಣಿನ ಪಾತ್ರೆಯಲ್ಲಿ ಹಾಕಿ ತಣಿಸಿದ ನೀರಿನಿಂದ ನನ್ನಾರಿ ಹಾಕಿ ಶರಬತ್ತು ಮಾಡಿ ಅಂಗಡಿಯವನು ನಮಗೆ ನೀಡಿದ. ಬಿಸಿಲಲ್ಲಿ ಬಂದ ನಮಗೆ ಆ ಶರಬತ್ತು ಕುಡಿದಾಗ ಒಳ್ಳೆಯ ಸಂತೃಪ್ತಿಯಾಯಿತು. ಆಗ ಎಂಟನೇ ತರಗತಿಯಲ್ಲಿ ನನ್ನ ಜೊತೆ ಕಲಿತ ವಿನೋದ್ ಅಲ್ಲಿಗೆ ಬಂದನು. ತುಂಬಾ ಸಮಯದ ನಂತರ ಕಂಡ ಅವನನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಅವನ ತಂದೆಯ ತೋಟದಲ್ಲಿ ದೊಡ್ಡದೊಂದು ಚೀನಿಕಾಯಿ ಹಿಡಿದಿದೆಯೆಂದು ಅವನು ಹೇಳಿದನು. ಅಷ್ಟು ದೊಡ್ಡ ಚೀನಿಕಾಯಿ ಅವನು ಕಾಣುವುದು ಇದೇ ಮೊದಲಂತೆ.

ಅವನನ್ನು ಸೇರಿಸಿ ಮಾವ ಅವನ ಕೃಷಿ ತೋಟಕ್ಕೆ ಹೋದರು. ದಾರಿಯುದ್ದಕ್ಕೂ ವಿನೋದ್ ಮಾತನಾಡುತ್ತಾ ಇದ್ದನು. ತೋಟಕ್ಕೆ ತಲುಪಿದಾಗ ಒಳ್ಳೆಯ ಸುಖ ಕಂಡಿತು. ಹಸಿರು, ತಂಪು ಮೇಳೈಸಿತ್ತು. ಚೀನಿಕಾಯಿ ನೋಡಲು ಹೋಗುವಾಗ ಮಳೆಬಂದಂತೆ ಮೈಯೆಲ್ಲ ನೀರು ಬಂದು ಬಿತ್ತು. ದೊಡ್ಡ ಪೈಪ್ ಉಪಯೋಗಿಸಿ ಕೆಲಸದವರು ನೀರು ಚಿಮುಕಿಸುತ್ತಿದ್ದರು. ಮೈಯೆಲ್ಲ ಒದ್ದೆಯಾಗಿ ನನಗೆ ಚಳಿ ಆರಂಭವಾಯಿತು. ಇದನ್ನು ನೋಡಿ ಮಾವ, ವಿನೋದ್ ನಗಾಡಲು ಪ್ರಾರಂಭಿಸಿದರು. ನನಗೆ ಸಂಕಟ ಬಂತು.

ಹೆಚ್ಚು ತಡವಾಗದೆ ನಾವು ಚೀನಿಕಾಯಿಯನ್ನು ಕಂಡೆವು. ಅಬ್ಬಬ್ಬಾ!.....ಎಷ್ಟು ದೊಡ್ಡ ಕಾಯಿ. ನಾಲ್ಕು ಮಂದಿ ಸೇರಿದರೂ ಎತ್ತೋಕಾಗಲ್ಲ. ಅದನ್ನು ಕಂಡು ನಮಗೆ ಆಶ್ಚರ್ಯವಾಯಿತು. ವಿನೋದ್ ಅವನ ತೋಟದಿಂದ ಸೌತೆಮಿಡಿ ಕೊಯ್ದು ಕೊಟ್ಟನು. ತುಂಬಾ ರುಚಿ. ಆಗ ವಿನೋದ್‌ನ ತಾಯಿ ಮಜ್ಜಿಗೆ ನೀರು ತಂದರು. ತುಂಬಾ ಹುಳಿಯಾಗಿದ್ದರೂ ಮಜ್ಜಿಗೆ

ಕುಡಿದಾಗ ಆಯಾಸಹೋಯಿತು. ಈ ರೀತಿಯಲ್ಲಿ ಸಂದರ್ಭೋಚಿತವಾಗಿ ವಿವರಣೆಯನ್ನು ಮುಂದುವರಿಸಬಹುದು.

## ಯೂನಿಟ್–2 ಕಥೆಯಲ್ಲಿ ಯಾರು?

ಹಿಂದಿನ ತರಗತಿಗಳಲ್ಲಿ ಚತುರ್ವಿದ್ಯಾಭಿನಯದ ಸಾಧ್ಯತೆಗಳನ್ನು ಉಪಯೋಗಿಸಿಕೊಂಡಿದ್ದೇವೆ. ಒಂದು ಕಥಾಪಾತ್ರದ ಸ್ವಭಾವ ವಿಶೇಷತೆಗಳನ್ನು ಸೂಕ್ಷ್ಮವಾಗಿ ಆವಿಷ್ಕರಿಸಲಿರುವ ತರಬೇತಿಯಾಗಿದೆ ಈ ಚಟುವಟಿಕೆ. ಪ್ರಖ್ಯಾತ ಲೇಖಕರ ಪ್ರಸಿದ್ಧ ಕಥಾಪಾತ್ರಗಳನ್ನು ಪರಿಚಯಪಡಲೂ ಅದನ್ನು ಪ್ರದರ್ಶಿಸಲಿರುವ ಅವಕಾಶ ಓದುವಿಕೆಯ ಪ್ರಪಂಚಕ್ಕೆ ಪ್ರವೇಶಿಸುವ ಮೂಲಕವಾಗಬೇಕು, ಕಥಾಪಾತ್ರಗಳ ವಿಶ್ಲೇಷಣೆಗಿರುವ ಸಾಧ್ಯತೆಗಳು ಮತ್ತು ಪ್ರಸಾದನಕ್ಕಿರುವ ಪ್ರಾಯೋಗಿಕ ಅನುಭವಗಳು ಈ ಚಟುವಟಿಕೆಯ ಮೂಲಕ ಲಭಿಸಬೇಕಾಗಿದೆ.

### ಕಲಿಕಾ ಸಾಧನೆಗಳು

- ವೈಯುಕ್ತಿಕವಾಗಿಯೂ, ಗುಂಪಾಗಿಯೂ ಚತುರ್ವಿದ್ಯಾಭಿನಯ ಉಪಯೋಗಿಸಿ ಆವಿಷ್ಕಾರಗಳನ್ನು ರೂಪಿಸುವುದು.
- ಕಥಾಪಾತ್ರಗಳನ್ನು ಅಭಿನಯಿಸುವಾಗ ಸ್ಥಳ, ಕಾಲ ಜ್ಞಾನದೊಂದಿಗೆ ವ್ಯವಹರಿಸುವ ಸಂಪ್ರದಾಯವನ್ನು ಉತ್ತಮಗೊಳಿಸಿ ಉಪಯೋಗಿಸುವುದು.
- ನಾಟಕ ಪ್ರದರ್ಶನಕ್ಕೆ ಅಗತ್ಯವಾದ ಪ್ರಸಾದನ, ವಸ್ತ್ರವಿನ್ಯಾಸ, ಸಂಗೀತ ಎಂಬಿವುಗಳನ್ನು ಉಪಯೋಗಿಸುವುದರಲ್ಲಿ ಸಾಮಾನ್ಯ ತಿಳುವಳಿಕೆ ಗಳಿಸುವುದು.

### ಆಶಯ/ತಿಳುವಳಿಕೆ

- ಪ್ರದರ್ಶನವು ಫಲಪ್ರದವಾಗಲು ಆಂಗಿಕ ಅಭಿನಯ, ಶಬ್ಧ, ವೇಷ ಎಂಬಿವುಗಳು ಅಗತ್ಯವಾಗಿವೆ.
- ಆಶಯಗಳನ್ನು ಅಭಿನಯದ ಮೂಲಕ ವಿನಿಮಯ ಮಾಡಲು ಶಬ್ಧ, ವೇಷ, ಭಾವ, ಆಂಗಿಕ ಅಭಿನಯಗಳನ್ನು ಉಪಯೋಗಿಸುವುದು ಫಲಪ್ರದವಾಗಿರುವುದು.
- ಚತುರ್ವಿದ್ಯಾಭಿನಯ ನೈಪುಣ್ಯ.
- ಕೃತಿಯಲ್ಲಿರುವ ಕಥಾಪಾತ್ರಗಳಿಗೆ ಸ್ಥಳ–ಕಾಲ ಗಳಿವೆ.
- ಪ್ರದರ್ಶನವು ಕಾಲದೇಶಗಳಿಗೆ ಯೋಗ್ಯವಾಗಿದ್ದರೆ ಮಾತ್ರವೇ ಸಹೃದಯರು ನಾಟಕವನ್ನು ಸ್ವೀಕರಿಸುವುದು.
- ಕಥಾಪಾತ್ರಗಳನ್ನು ಸ್ಥಳಕಾಲದೊಂದಿಗೆ ಹೊಂದಿಕೆಯಾಗುವ ರೀತಿಯಲ್ಲಿ ವ್ಯಾಖ್ಯಾನಿಸುವ ನೈಪುಣ್ಯ.
- ನಾಟಕಪ್ರದರ್ಶನವು ಅರ್ಥಪೂರ್ಣವಾಗಲು ಉಡುಪು, ಬೆಳಕಿನ ವಿನ್ಯಾಸ, ಸಂಗೀತ, ಕೋರಿಯೋಗ್ರಾಫಿ ಎಂಬಿವುಗಳನ್ನು ಅಗತ್ಯವಾಗಿದೆ.

**ಕಲಿಕಾ ಚಟುವಟಿಕೆ**

*ಹಂತ–1*

- ಮಕ್ಕಳನ್ನು 3 ಮಂದಿಯ ಗುಂಪಾಗಿ ಮಾಡುವುದು. ಪ್ರತಿಯೊಂದು ಗುಂಪಿಗೂ ಒಂದೊಂದು ಕಥಾಪಾತ್ರಗಳ ವಿವರಣೆಯನ್ನು ನೀಡುವುದು. ಇದನ್ನು ಒಂದು ಆಟದ ಮೂಲಕ ಮಾಡಿದರೆ ಮಕ್ಕಳು ಭಯಬಿಟ್ಟು ಭಾಗವಹಿಸುತ್ತಾರೆ.
- ಎಷ್ಟು ಗುಂಪುಗಳಿವೆಯೋ ಅಷ್ಟು ಪೆಟ್ಟಿಗೆಗಳು. ಟೀಚರ ಕೈಯಲ್ಲಿ ಒಂದು ಪೆಟ್ಟಿಗೆ. ಟೀಚರ ಕೈಯಲ್ಲಿರುವ ಪೆಟ್ಟಿಗೆಯಲ್ಲಿ ಪಾಠಪುಸ್ತಕದಲ್ಲಿ ಬರುವ ಲೇಖಕರ ಪ್ರಸಿದ್ಧ ಕಥಾಪಾತ್ರಗಳ ಹೆಸರುಗಳನ್ನು ಚೀಟಿಗಳಲ್ಲಿ ಬರೆದು ಇರಿಸಬೇಕು. ಪ್ರತಿಯೊಂದು ಗುಂಪಿನಿಂದ ಒಬ್ಬರು ಬಂದು ಟೀಚರ ಕೈಯಲ್ಲಿರುವ ಪೆಟ್ಟಿಗೆಯಿಂದ ಒಂದೊಂದು ಚೀಟಿ ತೆಗೆಯಬೇಕು. ಗುಂಪಿನಲ್ಲಿ ಹೆಸರು ನೋಡುವರು, ಪೆಟ್ಟಿಗೆಯಲ್ಲಿರುವ ಚೀಟಿಯನ್ನು ಓದುವರು. ತಮ್ಮ ಕಥಾಪಾತ್ರದ ಕುರಿತಾಗಿರುವ ಟಿಪ್ಪಣಿ ಅದಾಗಿದ್ದರೆ ಆ ಕಥಾಪಾತ್ರವನ್ನು ಮಂಡಿಸಲಿರುವ ತಯಾರಿಯಲ್ಲಿ ತೊಡಗುವರು. ಅಲ್ಲದಿದ್ದರೆ ಇತರ ಗುಂಪಿನವರಲ್ಲಿ ಅಭಿನಯಿಸಿ ತೋರಿಸಿ ತಮಗೆ ಸಿಕ್ಕಿದ ಕಥಾಪಾತ್ರದ ವಿವರಣೆಯನ್ನು ಪ್ರಕಟಿಸುವರು. ತಿಳಿದ ನಂತರ ಪೆಟ್ಟಿಗೆಗಳನ್ನು ಕೈ ಬದಲಾಯಿಸುವರು. ಕಥಾಪಾತ್ರಗಳನ್ನು ಮಂಡಿಸಲಿಕ್ಕಿರುವ ವಿವರಣೆಗಳನ್ನು ತಯಾರಿಸುವರು. ಕಡಿಮೆ ಸಮಯ ಉಪಯೋಗಿಸಿ ಮಕ್ಕಳು ತರಬೇತಿ ಮುಗಿಸಿ ಪ್ರದರ್ಶಿಸುವರು.

*ಮೌಲ್ಯನಿರ್ಣಯ*

- ಕಥಾಪಾತ್ರಗಳ ವ್ಯಕ್ತಿತ್ವ, ವೃತ್ತಿಪರತೆ, ಸ್ಥಳಕಾಲಗಳೊಂದಿಗೆ ಹೊಂದಿಕೆ ಎಂಬಿವುಗಳ ಮೌಲ್ಯನಿರ್ಣಯ ನಡೆಯಬೇಕು. ಪರಸ್ಪರ ಮೌಲ್ಯನಿರ್ಣಯ ಹಾಗೂ ಅಧ್ಯಾಪಕರ ಮೌಲ್ಯನಿರ್ಣಯ ನಡೆಯಬೇಕು.

*ಹಂತ–2*

- ಮಕ್ಕಳನ್ನು ಗುಂಪುಗಳಾಗಿ ಮಾಡಿ ಮೇಕಪ್ ಸೆಟ್ (ಪೌಡರ್, ಐಬ್ರೋ ಪೆನ್ಸಿಲ್, ಕಾಡಿಗೆ, ಲಿಪ್‌ಸ್ಟಿಕ್, ರೋಸ್ ಪೌಡರ್....) ತರಲು ಹೇಳುವುದು. ಕಥಾಪಾತ್ರಗಳಿಗೆ ಯೋಗ್ಯವಾದ ವೇಷಗಳನ್ನು ತರಲು ಮಕ್ಕಳಿಗೆ ಸೂಚನೆ ನೀಡುವುದು. ತರಗತಿ ಕೋಣೆಯಲ್ಲಿ ವೇಷ ಹಾಕಲು ಸಮಯ ನೀಡುವುದು. ಮಕ್ಕಳು ಪರಸ್ಪರ ಮೇಕಪ್ ಮಾಡಲಿ. ನಿರ್ದಿಷ್ಟ ಸಮಯದ ನಂತರ ಮಕ್ಕಳು ಕಥಾಪಾತ್ರಗಳಾಗಿ ಸಾಲಾಗಿ ನಿಲ್ಲುವರು.
- ಪ್ರತಿಯೊಂದು ಕಥಾಪಾತ್ರವನ್ನು ಪರಿಚಯಿಸುವ ಪಾತ್ರ ಪರಿಚಯ ನಡೆಸುವುದು. ಆಗ ಕಥಾಪಾತ್ರಗಳು ವೇದಿಕೆಗೆ ಆಗಮಿಸುವುದು ಕಥಾಪಾತ್ರದ ಚಲನೆ, ಅಗತ್ಯ ಸಂಭಾಷಣೆಯೊಂದಿಗೆ ಮಂಡಿಸುವುದು.

*ಮೌಲ್ಯನಿರ್ಣಯ*

- ತನ್ಮಯತೆ, ವೇಷ, ಇವುಗಳೊಳಗಿನ ಹೊಂದಿಕೆ ಎಂಬಿವುಗಳನ್ನು ಟೀಚರ್ ಮೌಲ್ಯ ನಿರ್ಣಯ ಮಾಡುವರು.

# ಪಾಠಪುಸ್ತಕದಿಂದೊಂದು ನಾಟಕ

ನಾಟಕೀಯವೂ ಅಲ್ಲದವು ಆದಂತಹ ಕಾರ್ಯಗಳಿಂದ ನಾಟಕವನ್ನು ರೂಪಿಸಬಹುದು. ಘಟನೆಗಳನ್ನು ಸೃಷ್ಟಿಸಬಹುದು. ನಾಟಕೀಯತೆ ಇರುವ ಪಾಠಭಾಗಗಳಿಗೆ ಆರಂಭ, ಮುಂದುವರಿಕೆ, ಸಂಘರ್ಷ ತಿರುವು, ಪರಿಣಾಮ, ಅಂತ್ಯ ಎಂಬೀ ಗುಣಗಳಿರಬಹುದು. ಆಶಯಗಳು, ಸತ್ಯಾಂಶಗಳು, ಪ್ರಸ್ತಾಪನೆಗಳಿಗೆ ನಾಟಕೀಯತೆ ಇರಬೇಕೆಂದಿಲ್ಲ. ಹೀಗೆ ನಾಟಕವನ್ನು ರೂಪಿಸುವುದಕ್ಕಾಗಿ ನೀಡಿರುವ ಸಂದರ್ಭ/ಆಶಯವನ್ನು ಸೂಕ್ಷ್ಮಮಟ್ಟದಲ್ಲಿ ವಿಶ್ಲೇಷಣೆ ನಡೆಸುವುದರೊಂದಿಗೆ ಮಾತ್ರವೇ ನಾಟಕ ಘಟ್ಟ ನಿರ್ಮಿಸಲು ಸಾಧ್ಯ. ಗುಂಪಿನಲ್ಲಿ ನಡೆಯುವ ವಿಶ್ಲೇಷಣೆಗಳು, ಚರ್ಚೆಗಳು ಉತ್ತಮ ಕಲಿಕಾ ಸಂದರ್ಭಗಳಾಗಿವೆ. ಅವುಗಳಿಂದ ಆದಿಮಧ್ಯಾಂತ್ಯ ಒಂದು ಮಂಡನಾ ರೀತಿಯನ್ನು ಕಂಡುಕೊಳ್ಳುವುದನ್ನು ಮಕ್ಕಳು ಅನಾಯಾಸವಾಗಿ ಮಾಡುವರು.

**ಕಲಿಕಾ ಸಾಮರ್ಥ್ಯ**

- ವೈಯುಕ್ತಿಕವಾಗಿಯೂ, ಗುಂಪಾಗಿಯೂ ಚತುರ್ವಿದಾಭಿನಯ ಉಪಯೋಗಿಸಿ ಆವಿಷ್ಕಾರಗಳನ್ನು ರೂಪಿಸುವುದು.
- ಕಥಾಪಾತ್ರಗಳನ್ನು ಅಭಿನಯಿಸುವಾಗ ಸ್ಥಳಕಾಲ ಜ್ಞಾನದೊಂದಿಗೆ ವ್ಯವಹರಿಸುವ ಸಂಪ್ರದಾಯವನ್ನು ಉತ್ತಮಗೊಳಿಸಿ ಉಪಯೋಗಿಸುವುದು.
- ನಾಟಕ (ಸಂಭಾಷಣೆ), ಚಿತ್ರಕಥೆ ಎಂಬಿವುಗಳನ್ನು ತಯಾರಿಸುವುದು.
- ಸಂಭಾಷಣೆ, ಚಿತ್ರಕಥೆ ಎಂಬಿವುಗಳ ರಚನೆಯ ಸಂದರ್ಭದಲ್ಲಿ ಸನ್ನಿವೇಷಗಳು, ರಂಗ ಕರ್ಮಗಳನ್ನು ಯುಕ್ತಿಪೂರ್ವಕವಾಗಿಯೂ ಸೃಜನಾತ್ಮಕವಾಗಿಯೂ ವಿನ್ಯಾಸಗೊಳಿಸುವ ತಿಳುವಳಿಕೆ ಗಳಿಸುವುದು.
- ಬೀದಿ ನಾಟಕಗಳನ್ನು ಅನುಕರಿಸಿಕೊಂಡು ಮಕ್ಕಳು ನಾಟಕ ಪ್ರದರ್ಶಿಸುವರು.
- ಕಾವ್ಯಭಾಗಗಳ ನಾಟಕಾವಿಷ್ಕಾರವನ್ನು ಮಕ್ಕಳು ತಯಾರಿಸುವುದು.

**ಆಶಯ/ ತಿಳುವಳಿಕೆ**

- ಆವಿಷ್ಕಾರಗಳು ಫಲಪ್ರದವಾಗಲು ಅಂಗಚಲನೆ, ಶಬ್ಧ, ವೇಷ, ಎಂಬಿವುಗಳು ಅನಿವಾರ್ಯವಾಗಿದೆ.
- ಆಶಯಗಳನ್ನು ಅಭಿನಯದ ಮೂಲಕ ವಿನಿಮಯ ಮಾಡಲು ಶಬ್ಧ, ವೇಷ, ಭಾವ, ಅಂಗ ಚಲನೆಗಳನ್ನು ಉಪಯೋಗಿಸುವುದು ಗುಣಕರವಾಗಿದೆ.
- ಚತುರ್ವಿದಾಭಿನಯ ನೈಪುಣ್ಯ
- ಕೃತಿಯಲ್ಲಿರುವ ಕಥಾಪಾತ್ರಗಳಿಗೆ ಸ್ಥಳ–ಕಾಲಗಳಿವೆ.
- ಪ್ರದರ್ಶಿಸುವ ಕಾಲದೇಶಗಳಿಗೆ ಯೋಗ್ಯವಾದರೆ ಮಾತ್ರವೇ ಪ್ರದರ್ಶನವನ್ನು ಅಭಿಮಾನಿಗಳು ಒಪ್ಪುವರು.
- ಕಥಾಪಾತ್ರಗಳನ್ನು ಸ್ಥಳ–ಕಾಲದೊಂದಿಗೆ ಹೊಂದಿಕೆಯಾಗುವಂತೆ ವ್ಯಾಖ್ಯಾನಿಸಲಿರುವ ನೈಪುಣ್ಯ
- ಆವಿಷ್ಕಾರಗಳ ಹಿಂದೆ ರಚನಾಪಾಠವಿರುವುದು.
- ದೃಶ್ಯಪಾಠ ತಯಾರಿಸಲು ಸಹಾಯಕವಾಗುವ ಸೂಚನೆಗಳು ರಚನಾಪಾಠದಲ್ಲಿ ಇರಬೇಕಾಗುತ್ತದೆ.
- ದೃಶ್ಯಪಾಠಕ್ಕೆ ಅನುಗುಣವಾದ ರಚನಾಪಾಠಗಳನ್ನು ತಯಾರಿಸುವ ನೈಪುಣ್ಯ.
- ಒಂದು ಆಶಯ/ಸನ್ನಿವೇಶ ಅಭಿವೃದ್ಧಿ ಪಡಿಸುವುದು ಸ್ಥಳ, ಕಾಲ, ಸಂದರ್ಭ, ಕಥಾ ಪಾತ್ರ, ಸಂಭಾಷಣೆಗಳಲ್ಲಾಗಿದೆ.
- ಚಿತ್ರ ಕಥೆ ರಚನೆಗಿರುವ ನೈಪುಣ್ಯ.

**ಕಲಿಕಾ ಚಟುವಟಿಕೆ**

*ಪಾಠಪುಸ್ತಕದಿಂದೊಂದು ನಾಟಕ*

- ಪಾಠಪುಸ್ತಕದ ಆಶಯಗಳು, ಸಂದರ್ಭಗಳನ್ನು ಈ ಚಟುವಟಿಕೆಯಲ್ಲಿ ಉಪಯೋಗಿಸಬೇಕು. ಐದೋ, ಆರೋ ಮಂದಿಯ ಗುಂಪುಗಳಾಗಿ ಮಕ್ಕಳನ್ನು ಮಾಡುವರು. ಒಂದು ಗುಂಪಿಗೆ ನಾಟಕೀಯ ಮತ್ತು ಇನ್ನೊಂದು ಗುಂಪಿಗೆ ನಾಟಕೀಯವಲ್ಲದ ಪಾಠ ಭಾಗಗಳನ್ನು ನೀಡುವುದು.

  **ಉದಾಹರಣೆ**

  ನಾಟಕೀಯ ಇರುವುದು–ಕಥಾಭಾಗಗಳು, ಕವಿತೆಗಳು, ಚರಿತ್ರೆಯ ಘಟನೆಗಳು, ಜೀವ ಚರಿತ್ರೆ ಭಾಗಗಳು.

  ನಾಟಕೀಯ ಇಲ್ಲದವು– ವಿಜ್ಞಾನ, ಗಣಿತ, ಸಮಾಜ ಶಾಸ್ತ್ರ ಆಶಯಗಳು, ಸತ್ಯಾಂಶಗಳು (ಪ್ರಕಾಶ ಸಂಶ್ಲೇಷಣೆ, ಪೈಥಗೋರಸ್ ಸಿದ್ಧಾಂತ, ಕೋರಿಯೋಲಿಸ್ ಪ್ರಭಾವ,ಪ್ರಜಾಪ್ರಭುತ್ವ)

- ಗುಂಪುಗಳು ತಮಗೆ ಲಭಿಸಿದ ವಿಷಯಗಳಿಗೆ ಸಂಬಂಧಿಸಿ ವಿವರವಾದ ಚರ್ಚೆ ನಡೆಸುವುದು. ಆಶಯಗಳು, ಸತ್ಯಾಂಶಗಳು ಏನೆಂದು ಜೀವನದೊಂದಿಗೆ ಹೇಗೆ ಬೆಸೆಯಬಹುದೆಂದು ಕಂಡುಕೊಳ್ಳುವುದು. ಆಶಯ, ಸತ್ಯಾಂಶ ಎಂಬಿವುಗಳನ್ನು ಸೂಕ್ಷ್ಮ ಮಟ್ಟದಲ್ಲಿ ವಿಶ್ಲೇಷಿಸಿ ಯೋಗ್ಯವಾದ ಜೀವನ ಸಂದರ್ಭಗಳನ್ನು ಉಪಯೋಗಿಸಿ ಸನ್ನಿವೇಶವನ್ನು ರೂಪೀಕರಿಸುವುದು. ನಾಟಕೀಯತೆಯಿರುವ ಸಂದರ್ಭಗಳನ್ನು ಪ್ರದರ್ಶನಕ್ಕಾಗಿ ಉತ್ತಮ ಪಡಿಸುವರು. ಗುಂಪುಗಳಿಗೆ ಸ್ಥಳ, ಕಾಲ ಸಂದರ್ಭಗಳು, ಅವುಗಳ ಹಿಂದಿರುವ ಕಾರಣಗಳು, ಕಥಾಪಾತ್ರಗಳು, ಅವುಗಳ ಸ್ವಭಾವಗಳು, ಅವರ ಮಾತುಗಾರಿಕೆ ಎಂಬಿವುಗಳನ್ನು ಬಿಂಬಿಸುವ ಟಿಪ್ಪಣಿಗಳನ್ನು ನೀಡುವುದು.

**ಟಿಪ್ಪಣಿ**

*ಸ್ಥಳ ಮತ್ತು ಕಾಲವನ್ನು ಜೋಡಿಸುವ ಕಲೆಯಾಗಿದೆ ನಾಟಕ. ಆಶಯಗಳು, ಸಂದರ್ಭಗಳಿಂದ ಅಭಿವೃದ್ಧಿಪಡಿಸಿ ಸನ್ನಿವೇಷ ಯಾವೆಲ್ಲ ಸಂದರ್ಭಗಳಲ್ಲಿ ಜರಗುತ್ತದೆ ಎಂದು ಕಂಡುಹಿಡಿಯಬೇಕಾಗಿದೆ. ಒಂದು ಸ್ಥಳದಲ್ಲಿ ಒಂದು ಸಮಯದಲ್ಲಿ ನಡೆಯುವ ಕಾರ್ಯವಾಗಿದೆ ಒಂದು ದೃಶ್ಯ. ಒಂದು ದೃಶ್ಯದಲ್ಲಿ ಯಾವೆಲ್ಲ ಘಟನೆಗಳು ಜರಗುತ್ತವೆ ಎಂಬುದನ್ನು ನಿಶ್ಚಯಿಸುವುದಾಗಿದೆ ಮುಂದಿನ ಹಂತ. ಕೆಲವೊಮ್ಮೆ ಅವುಗಳ ಕಾರಣಗಳನ್ನು ಕೂಡಾ ಪರಿಗಣಿಸಬೇಕಾಗಿರಬಹುದು. ಪ್ರತಿಯೊಂದು ಘಟನೆಯಲ್ಲೂ ಪಾಲ್ಗೊಳ್ಳುವವರು, ಆ ಸ್ಥಳದಲ್ಲಿ ಅನಿವಾರ್ಯವಾಗಿ ಇರಬೇಕಾಗಿರುವವರು ಯಾರೆಲ್ಲ ಎಂದು ನಿಶ್ಚಯಿಸಬೇಕಾಗಿರುವುದು. ಮುಂದಿನ ಹಂತ ಪ್ರತಿಯೊಬ್ಬರು ಮಾಡುವ ಕೆಲಸ, ಅವರು ನಡೆಸುವ ಸಂಭಾಷಣೆ, ಅವರ ಸ್ವಭಾವ , ಇತರ ಸವಿಶೇಷಗಳು ಎಂಬಿವುಗಳನ್ನು ತೀರ್ಮಾನಿಸಬೇಕಾಗಿದೆ. ಇಷ್ಟಾಗುವಾಗ ನಾಟಕ ರಚನೆಗಿರುವ ಪ್ರಾರಂಭದ ಹಂತವಾಗಬಹುದು. ಇಲ್ಲಿಂದ ಬರವಣಿಗೆಗೂ ತರಬೇತಿಯ ಮೂಲಕ ಪ್ರದರ್ಶನದತ್ತ ಮುಂದುವರಿಯಬಹುದು.*

- ಗುಂಪುಗಳು ಟಿಪ್ಪಣಿಯನ್ನು ವಿವರವಾಗಿ ಪರಿಶೋಧಿಸುವರು. ಅದರ ಆಧಾರದಲ್ಲಿ ಸನ್ನಿವೇಶ ನಾಟಕಘಟ್ಟ ರೂಪಿಸುವುದು. ಅಗತ್ಯವಾದ ಪರಿಗಣನೆಯ ನಂತರ ಪ್ರದರ್ಶನ ನಡೆಸುವರು.

### ಮೌಲ್ಯನಿರ್ಣಯ

- ಮೌಲ್ಯನಿರ್ಣಯದಲ್ಲಿ ನಾಟಕ ರೂಪೀಕರಣ ಪ್ರಕ್ರಿಯೆ, ಆಶಯಗಳ/ ಘಟನೆಗಳ ವಿನಿಮಯ ಕ್ಷಮತೆ, ಪ್ರದರ್ಶನದ ಸೌಂದರ್ಯ ಎಂಬಿವುಗಳನ್ನು ಪರಿಶೋಧಿಸಬೇಕಾಗಿದೆ. ಗುಂಪುಗಳು ಪರಸ್ಪರ, ಟೀಚರು ಮೌಲ್ಯನಿರ್ಣಯ ಪ್ರಕ್ರಿಯೆ ನಿರ್ವಹಿಸುವರು.

## ಯೂನಿಟ್ 4– ಸಿನಿಮಾ ಕಾರ್ಯಾಗಾರ

### ಮುನ್ನುಡಿ

ಹೊಸ ಕಾಲದ ಹೆಚ್ಚು ಜನಪದವಾದ ಕಲಾರೂಪವಾಗಿದೆ ಸಿನಿಮಾ. ಇತರ ಕಲಾರೂಪಗಳನ್ನು ಹೊರತು ಪಡಿಸಿ ಸಿನಿಮಾ ಹೊಸ ಕಾಲದ ಮಾಧ್ಯಮವಾಗಿದೆ. ಟೆಲಿವಿಷನ್ ಕಾರ್ಯಕ್ರಮಗಳು, ಜಾಹಿರಾತುಗಳು, ಕಿರುಚಿತ್ರಗಳು, ವಾರ್ತಾಚಿತ್ರಗಳು, ಡೋಕ್ಯುಮೆಂಟರಿಗಳು, ಕಥಾಚಿತ್ರಗಳು..ಹೀಗೇ ಸಿನಿಮಾ ಎಂಬ ಮಾಧ್ಯಮಗಳ ಮೂಲಕ ಹೊರಬರುವ ಹಲವು ರೂಪಗಳಿವೆ. ಕಲಾ ವಿದ್ಯಾಭ್ಯಾಸದ ಭಾಗವಾಗಿ ಸಿನಿಮಾ ಎಂಬ ಮಾಧ್ಯಮವು ಕಲಾರೂಪವೂ ವಿಶೇಷ ಕಲಿಕಾ ಸಾಧನವಾಗಿದೆ. ಸಾಮಾನ್ಯವಾಗಿ ಸಿನಿಮಾ ಎಂದು ಕರೆಯಲ್ಪಡುವ ಕಲಾಚಿತ್ರಗಳು ಹಲವು ವಿಧಗಳಿವೆ. ಕೇವಲ ಮನೋರಂಜನೆಗಾಗಿ ನಿರ್ಮಿಸುವ ಸಿನಿಮಾಗಳು, ಮನುಷ್ಯ ಮತ್ತು ಅವನ ಜೀವನವನ್ನು ಸೌಂದರ್ಯಾತ್ಮಕ ವಾಗಿಯೂ, ವಿಮರ್ಶಾತ್ಮಕವಾಗಿಯೂ ವಿಶ್ಲೇಷಣೆ ಮಾಡುವ ಸಿನಿಮಾಗಳೂ ಇವೆ. ಇಲ್ಲಿ ಸಿನಿಮಾ ಎಂಬುದು ಗೌರವಾತ್ಮಕ ಕಲಾ ಚಟುವಟಿಕೆಯಾಗುವುದು. ಇಂತಹ ಸಿನಿಮಾ ಲೋಕಕ್ಕೆ ಪ್ರವೇಶಿಸುವುದಕ್ಕೆ ಮಕ್ಕಳಿಗೆ ವಿಶೇಷ ತರಬೇತಿಗಳ ಅಗತ್ಯವಿದೆ. ಸಿನಿಮಾದ ಅತ್ಯಾಧುನಿಕ ಮುಖವನ್ನು ಪರಿಚಯಿಸುವುದಕ್ಕೂ ಸಿನಿಮಾಸ್ವಾದನೆಯ ವಿವಿಧ ಮಜಲುಗಳನ್ನು ದಾಟಿಹೋಗುವುದಕ್ಕೂ ಮಕ್ಕಳನ್ನು ಪ್ರಾಪ್ತಿಗೊಳಿಸುವ ಚಟುವಟಿಕೆಗಳಾಗಿವೆ. ಶಾಲೆಗಳಲ್ಲಿ ನಡೆಯುವ ಚಲನಚಿತ್ರಮೇಳಗಳು.

### ಕಲಿಕಾ ಸಾಧನೆಗಳು

- ಹೃಸ್ವ ಚಿತ್ರ ನಿರ್ಮಾಣದ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಸಿನಿಮಾ ನಿರ್ಮಿಸುವುದು.
- ಸಿನಿಮಾ, ನಾಟಕ ಎಂಬಿವುಗಳನ್ನು ಪ್ರದರ್ಶನವನ್ನು ಕಂಡು ಆಸ್ವಾದಿಸುವುದು.

### ಆಶಯ – ತಿಳುವಳಿಕೆ

- ದೃಶ್ಯಗಳ ಹರಿಯುವಿಕೆಯಾಗಿದೆ ಚಿತ್ರಕಥೆ.
- ಚಿತ್ರಕಥೆಯನ್ನು ಆಧಾರವಾಗಿರಿಸಿ ಸಿನಿಮಾ ನಿರ್ಮಿಸುತ್ತಾರೆ.
- ಸಿನಿಮಾ ನಿರ್ಮಾಣಕ್ಕೆ ಸಂಬಂಧಿಸಿ ಹಲವು ತಾಂತ್ರಿಕ ವಿಚಾರಗಳಿವೆ. ಇಂತಹ ತಾಂತ್ರಿಕತೆಗಳ ತಿಳುವಳಿಕೆಯಿದ್ದರೆ ಮಾತ್ರವೇ ಸಿನಿಮಾ ನಿರ್ಮಿಸಬಹುದು.
- ಸಿನಿಮಾ, ನಾಟಕ ಎಂಬಿವುಗಳ ಆಸ್ವಾದನಕರ ಕಲಾರೂಪಗಳಾಗಿವೆ.
- ದೃಶ್ಯಗಳ ಆಯ್ಕೆ, ರಂಗಕ್ರಿಯೆಗಳ ನಿರ್ವಹಣೆ ಎಂಬಿವುಗಳು ಸಿನಿಮಾ, ನಾಟಕಗಳಿಗೆ ಹೊಸ ಅರ್ಥ ನೀಡುತ್ತದೆ.

- ಕಲಿಕಾ ಸಾಮರ್ಥ್ಯ

## ಕಲಿಕಾ ಚಟುವಟಿಕೆಗಳು

*ಚಲನಚಿತ್ರಮೇಳ*

- ಶಾಲೆಯ ಎಲ್ಲರ ಸಹಾಯದೊಂದಿಗೆ ಆಯೋಜಿಸಬೇಕಾದ ಚಟುವಟಿಕೆಯಾಗಿದೆ ಚಲನಚಿತ್ರ ಮೇಳಗಳು. ಅಧ್ಯಾಪಕರು, ವಿದ್ಯಾರ್ಥಿಗಳು ವಿವಿಧ ಗುಂಪುಗಳಾಗಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಎರಡು ಮೂರು ದಿವಸಗಳ ಕಾಲ ಮೇಳಗಳನ್ನು ಆಯೋಜಿಸುವುದು ಉತ್ತಮ. ಇದಕ್ಕಾಗಿ ನಿರಂತರವಾಗಿ ಬರುವ ರಜಾದಿನಗಳನ್ನು ಉಪಯೋಗಿಸಿಕೊಳ್ಳಬಹುದು. ಒಂದೇ ಸಮಯ ಒಂದಕ್ಕಿಂತ ಹೆಚ್ಚು ವೇದಿಕೆಗಳಲ್ಲಿ ಸಿನಿಮಾ ಪ್ರದರ್ಶಿಸಲಿಕ್ಕಿರುವ ವ್ಯವಸ್ಥೆಗಳನ್ನು ಮಾಡಬೇಕು. ಶಾಲೆಯ ಸ್ಮಾರ್ಟ್ ಕ್ಲಾಸ್ ರೂಮ್ ಅಲ್ಲದೆ ಪ್ರದರ್ಶನಕ್ಕೆ ಯೋಗ್ಯವಾದ ಇತರ ವೇದಿಕೆಗಳನ್ನು ಇದಕ್ಕಾಗಿ ಸಜ್ಜೀಕರಿಸಬೇಕಾಗಿದೆ. ಇದಕ್ಕಾಗಿ ಪ್ರದರ್ಶನ ಉಪಕರಣಗಳಿಂದ ಕಂಪ್ಯೂಟರ್‌ಗಳು, ಪ್ರೊಜೆಕ್ಟರ್ ಗಳು, ವಿದ್ಯುತ್ ಸೌಕರ್ಯ, ಧ್ವನಿವ್ಯವಸ್ಥೆ ಎಂಬಿವುಗಳಿಗೆ ಸಮೀಪ ಶಾಲೆಗಳನ್ನು ಉಪಯೋಗಿಸಿಕೊಳ್ಳಬಹುದು. ಪ್ರದರ್ಶನಕ್ಕಾಗಿ ಸಿನಿಮಾಗಳ ಒಂದು ಪೇನಲ್ ತಯಾರಿಸಬೇಕು. ಮೇಳಕ್ಕೆ ಆಗಮಿಸುವ ಪ್ರತಿನಿಧಿಗಳಿಗೆ ರಿಜಿಸ್ಟ್ರೇಷನ್, ಪ್ರತಿನಿಧಿ ಪ್ರವೇಶ ಪತ್ರಿಕೆಗಳ ತಯಾರಿ, ಸಿನಿಮಾಗಳ ಮಾಹಿತಿಗಳನ್ನು ತಿಳಿಸಲಿರುವ ಬ್ರೋಷರ್‌ಗಳ ತಯಾರಿ, ನೋಟೀಸ್, ಪೋಸ್ಟರ್‌ಗಳ ತಯಾರಿ ಸಿನಿಮಾದ ವಿವಿಧ ವಿಭಾಗಗಳನ್ನು ಪರಿಗಣಿಸಿಕೊಂಡು ಚರ್ಚೆ, ಸಂವಾದಗಳನ್ನು ಆಯೋಜಿಸುವುದು, ಮೇಳದಲ್ಲಿ ಪ್ರದರ್ಶಿಸಿದ ಸಿನಿಮಾದ ಆಸ್ವಾದನಾ ಟಿಪ್ಪಣಿಗಳು ಅವುಗಳ ಸಂಚಿಕೆಗಳ ತಯಾರಿ ಎಂಬಿವುಗಳು ಮೇಳಗಳಿಗೆ ಸಂಬಂಧಿಸಿದ ಚಟುವಟಿಕೆಗಳಾಗಿವೆ. ಇದಕ್ಕಾಗಿ ಮಕ್ಕಳು ವಿವಿಧ ಗುಂಪುಗಳಿಗೆ ಜವಾಬ್ದಾರಿಗಳನ್ನು ನೀಡಬೇಕಾಗಿದೆ. ಮೊದಲಾಗಿ ಮಾಡುವ ಸ್ಪಷ್ಟವಾದ ಯೋಜನೆಗಳು ಇಂತಹ ಮೇಳಗಳ ಯಶಸ್ವಿಗೆ ಕಾರಣವಾಗುವುದು.

*ಬ್ರೋಷರ್ ನಿರ್ಮಾಣ*

- ಸಿನಿಮಾಕ್ಕೆ ಸಂಬಂಧಿಸಿ ಸಾಮಾನ್ಯ ವಿವರಗಳು ಮೇಳದಲ್ಲಿ ಪ್ರದರ್ಶಿಸುವ ಸಿನಿಮಾಗಳ ಸಾಮಾನ್ಯ ವಿವರಗಳನ್ನು ಒಳಗೊಳ್ಳಿಸಿ ಚಲನಚಿತ್ರಗಳ ಬ್ರೋಷರ್ ನಿರ್ಮಿಸಬೇಕು. ಮೇಳದ ಭಾಗವಾಗಿ ನಡೆಯುವ ಚರ್ಚೆ, ಸಂವಾದಗಳ ಮಾಹಿತಿಗಳನ್ನು ಬ್ರೋಷರಿನಲ್ಲಿ ಸೇರಿಸಬೇಕು. ಕೆಲವು ಪುಟಗಳಿರುವ ಲಘು ಕೈಪಿಡಿಯಾಗಿ ಬ್ರೋಷರನ್ನು ರೂಪಿಸಬೇಕು. ಕೆಳಗೆ ಹೇಳುವ ಅಧ್ಯಾಯಗಳನ್ನು ಇದರಲ್ಲಿ ಒಳಗೊಳಿಸಬಹುದು

  1. ಮುನ್ನುಡಿ
  2. ಸಿನಿಮಾ ಚರಿತ್ರೆ
     - -ಮಲೆಯಾಳ/ಕನ್ನಡ ಸಿನಿಮಾ
     - -ಭಾರತೀಯ ಸಿನಿಮಾ
     - -ಅಂತರಾಷ್ಟ್ರೀಯ ಸಿನಿಮಾ
     - -ಡೋಕ್ಯುಮೆಂಟರಿಗಳು
     - -ಎನಿಮೇಷನ್ ಚಿತ್ರಗಳು
     - -ಹ್ರಸ್ವ ಚಿತ್ರಗಳು

  ಮೇಳದಲ್ಲಿ ಪ್ರದರ್ಶಿಸುವ ಸಿನಿಮಾಗಳ ವಿವರ ಮತ್ತು ಕಥಾ ಸೂಚನೆಗಳು (ಸಿನೆಮಾದ ಹೆಸರು, ನಿರ್ದೇಶನ, ವರ್ಷ, ಭಾಷೆ, ದೇಶ ಎಂಬಿವುಗಳನ್ನು ಸ್ಪಷ್ಟವಾಗಿ ಸೂಚಿಸಿರಬೇಕು.

ಉದಾಹರಣೆ ಕೆಳಗೆ ನೀಡಲಾಗಿದೆ.)

‘100 ಚೋದ್ಯಂಙಳ್’
ಭಾರತ/2012/106ಮಿನಿಟು/ಮಲಯಾಳ
ಚಿತ್ರಕಥೆ, ನಿರ್ದೇಶನ
ಸಿದ್ಧಾರ್ಥ ಶಿವ
ಛಾಯಾಗ್ರಹಣ
ಪ್ರಭಾತ್ ಇ.ಕೆ
ಸಂಕಲನ
ಬಿಬಿನ್ ಪೋಲ್ ಸಾಮುವಲ್
ಸಂಗೀತ
ಎಂ.ಕೆ ಅರ್ಜುನನ್

ಸತ್ಯಹರಿಶ್ಚಂದ್ರ
ಹುಣಸೂರು ಕೃಷ್ಣಮೂರ್ತಿ
1965
ಕನ್ನಡ
ಭಾರತ
ರಾಷ್ಟ್ರೀಯ ಪ್ರಶಸ್ತಿ

ಒಂದು ಗ್ರಾಮೀಣ ಶಾಲೆಯಲ್ಲಿ ಕಲಿಯುವ ಹನ್ನೊಂದು ವರ್ಷದ ಅನಿಲ್ ಕುಮಾರ್ ಬೊಕಾರ್ ಈ ಸಿನಿಮಾದ ಪ್ರಧಾನ ಕಥಾಪಾತ್ರ. ಅನಿಲ್‌ನ ತಂದೆ ಶಿವದಾಸನ ಉದ್ಯೋಗ ನಷ್ಟವಾಗುವುದರೊಂದಿಗೆ ಜೀವನ ಸಾಗಿಸುವ ದುರ್ಗಮ ಹಾದಿಯಲ್ಲಿದ್ದಾಳೆ ತಾಯಿ ಸದಿ. ಶಾಲೆಗೆ ಬರುವ ಹೊಸ ಅಧ್ಯಾಪಕ ಮುಕುಂದನ್ ಸಾರ್ ಅನಿಲ್‌ನ ಜೀವನದಲ್ಲಿ ಹೊಸ ಮಾರ್ಗದರ್ಶಕರಾಗಿ ಬರುತ್ತಾರೆ. 101 ಚೋದ್ಯಂಗಳ್(ಪ್ರಶ್ನೆಗಳು) ಎಂಬ ಪುಸ್ತಕವನ್ನು ತಯಾರಿಸಲು ಅನಿಲನ ಸಹಾಯ ಯಾಚಿಸುವ ಅಧ್ಯಾಪಕರಾಗಿ ಒಂದೊಂದು ಪ್ರಶ್ನೆಗೂ ಒಂದು ರೂಪಾಯಿಯಂತೆ ನೀಡುವುದಾಗಿಯೂ ಭರವಸೆ ಕೊಡುತ್ತಾರೆ. ತನ್ನ ಜೀವನ ಪಾಠದಿಂದ ಪ್ರಶ್ನೆಗಳನ್ನು ಕಂಡುಕೊಳ್ಳುವ ಅನಿಲನ ಜೀವನದ 10 ನೇ ಪ್ರಶ್ನೆ ನಿರ್ಣಾಯಕವೆನಿಸುತ್ತದೆ.

- ಬ್ರೋಷರಿನ ಚೌಕಟ್ಟು, ವಿಷಯ, ಸಂದರ್ಭೋಚಿತವಾಗಿ ಕ್ರಮೀಕರಿಸಬೇಕಾಗಿದೆ. ಬ್ರೋಷರಿಗಿರುವ ವಿವರಗಳನ್ನು ಸಿನಿಮಾಕ್ಕೆಸಂಬಂಧಿಸಿದ ಪುಸ್ತಕಗಳಿಂದಲೂ, ಅಂತರ್ಜಾಲಗಳಿಂದಲೂ ಸಂಗ್ರಹಿಸ ಬೇಕಾಗಿದೆ. ಸಿನಿಮಾಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳು ಹೀಗೆ ಲಭಿಸಬಹುದು. ಸಿನಿಮಾಗಳ ಕೆಲವು ದೃಶ್ಯಗಳನ್ನು ಅಳವಡಿಸಿದರೆ ಬ್ರೋಷರ್ ಇನ್ನೂ ಉತ್ತಮವಾಗಬಹುದು.

ಸಂವಾದ

- ಸಿನಿಮಾ ಆಸ್ವಾದನೆಯ ಆಳಕ್ಕಿಳಿಯಲು ಸಹಾಯಕವಾಗುವುದು ಸಂವಾದಗಳಲ್ಲಾಗಿದೆ. ಚಲನ ಚಿತ್ರ ಮೇಳದ ಮಧ್ಯಂತರ ವೇಳೆಯಲ್ಲಿ ಇಂತಹ ಸಂವಾದಗಳನ್ನು ಏರ್ಪಡಿಸಬಹುದು. ಇದಕ್ಕಾಗಿ ಸಿನಿಮಾದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ನುರಿತರನ್ನು ಸೇರಿಸಿಕೊಳ್ಳಬಹುದು. ಸಾಮಾನ್ಯವಾಗಿ ಯಾವುದಾದರು ವಿಷಯಕ್ಕೆ ಸಂಬಂಧಿಸಿ ಚರ್ಚೆಗಳು ಸಂವಾದದಲ್ಲಿ ನಡೆಯಬಹುದು. ಚರ್ಚೆಯ ಪೇನಲ್‌ನಲ್ಲಿರುವವರಿಗೂ ಸಭೆಯಲ್ಲಿರುವವರಿಗೂ ಚರ್ಚೆಗಳಲ್ಲಿ ಭಾಗವಹಿಸಬಹುದು. ಸಂವಾದದ ಯೋಜನೆ ಮತ್ತು ನಿರ್ವಹಣೆಗಾಗಿ ಮಕ್ಕಳ ಒಂದು ಗುಂಪಿಗೆ ಜವಾಬ್ದಾರಿ ನೀಡಬೇಕು. ಅಧ್ಯಾಪಕರ ಮೇಲ್ನೋಟವನ್ನು ದೃಢಪಡಿಸಬೇಕು. ಸಂವಾದದಲ್ಲಿ ಚರ್ಚಿಸಬೇಕಾದ ಕೆಲವು ವಿಭಾಗಗಳನ್ನು ಕೆಳಗೆ ನೀಡಲಾಗಿದೆ. ಸಂದರ್ಭೋಚಿತವಾಗಿ ಯಾವ ವಿಷಯವನ್ನೂ ಚರ್ಚೆಗೆ ಸ್ವೀಕರಿಸಿಕೊಳ್ಳಬಹುದು.

***ಸಿನಿಮಾದ ಆಸ್ವಾದನಾ ಮಂಡಲಗಳು***

ಸಿನಿಮಾದ ಮನುಷ್ಯರು ಮತ್ತು ಸಾಧಾರಣ ಜೀವನ
ಪರಿಸರ
ಸಿನಿಮಾದ ಸ್ತ್ರೀ

ಸಿನಿಮಾ ಸಂಕೇತಗಳು
ಸಿನಿಮಾದ ರಾಜಕೀಯ
ಹ್ರಸ್ವ ಚಿತ್ರಗಳಲ್ಲಿನ ಕಥಾಹಂದರದ ಸೊಗಸು
ಆನಿಮೇಷನಿನ ಅನಂತ ಸಾಧ್ಯತೆಗಳು

*ಸಿನಿಮಾವಲೋಕನ*

- ಚಲನಚಿತ್ರ ಮೇಳದ ನಂತರ ಈ ಚಟುವಟಿಕೆಯನ್ನು ಮಾಡಬೇಕು. ಮೇಳವನ್ನು ಒಟ್ಟಾಗಿ ಮೌಲ್ಯನಿರ್ಣಯ ಮಾಡುವುದರೊಂದಿಗೆ ಸಿನಿಮಾಕ್ಕೆ ಸಂಬಂಧಿಸಿದ ವಿಶೇಷ ಮೌಲ್ಯನಿರ್ಣಯ ಟಿಪ್ಪಣಿಗಳನ್ನು ಮಕ್ಕಳು ತಯಾರಿಸಲಿ. ವಿಭಿನ್ನ ದೃಷ್ಟಿಕೋನಗಳಲ್ಲಿ ಅಳೆದ ಟಿಪ್ಪಣಿಗಳು ಇದೆಯೆಂದು ಅಧ್ಯಾಪಕರು ಖಚಿತಪಡಿಸಲಿ. ಮಕ್ಕಳ ಮೌಲ್ಯನಿರ್ಣಯ ಚಟುವಟಿಕೆಗಳ ಆಧಾರದಲ್ಲಿ ತರಗತಿ ಮೆಚ್ಚಿದ ಚರ್ಚೆಗಳು ನಡೆಯಲಿ. ಈ ಟಿಪ್ಪಣಿಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಬಹುದು.

*ಮೇಳಕ್ಕೆ ಪರಿಗಣಿಸಬಹುದಾದ ಸಿನಿಮಾಗಳು*

- ಕಾಡು (ಗಿರೀಶ ಕಾರ್ನಾಡ), ಚೋಮನ ದುಡಿ (ಬಿ.ವಿ.ಕಾರಂತ)
- ಕಲರ್ ಓಫ್ ಪಾರಡೈಸ್ (ಮಜೀದ್ ಮಜೀದಿ,ಇರಾನ್)
- ಚಿಲ್ಡ್ರನ್ ಓಫ್ ಹೆವನ್ (ಮಜೀದ್ ಮಜೀದಿ, ಇರಾನ್)
- ಸರ್ಕಸ್, ದ ಕಿಡ್, ಮೋಡರ್ನ್ ಟೈಂಸ್ (ಚಾರ್ಲಿ ಚಾಪ್ಲಿನ್)
- ತಾರೆ ಜಮೀನ್ ಪರ್ (ಅಮೀರ್ ಖಾನ್ ಹಿಂದಿ)
- ಡ್ರೀಮ್ಸ್ (ಅಕಿರ ಕುರುಸೋಮ ಜಪಾನ್)
- ವಾಟ್ ಈಸ್ ದೇಟ್ (ಹ್ರಸ್ವಚಿತ್ರ ಗ್ರೀಕ್)
- ಓಫ್ ಸೈಟ್ (ಗ್ರೀಕ್)
- ಗೇವ್ ಓಫ್ ದ ಫಯರ್ ಪ್ಲೆಸ್, ಪಚ್ಚಿಲಕೂಡ್(ಆನಿಮೇಷನ್ ಸಿನಿಮ)
- ಕುಮ್ಮಾಟಿ (ಅರವಿಂದನ್ ಮಲೆಯಾಳಂ)
- ಕಳಿಯೊರುಕ್ಕಂ (ಸುನಿಲ್ ಮಲೆಯಾಳಂ)
- ಟಿ.ಡಿ.ದಾಸನ್ 6 ವೇ ಬಿ (ಮೋಹನ್ ರಾಘವನ್, ಮಲೆಯಾಳಂ)
- ಘಣಿಯಮ್ಮ (ಪ್ರೇಮಾಕಾರಂತ, ಕನ್ನಡ)
- ಸಂಗೊಳ್ಳಿ ರಾಯಣ್ಣ (ನಾಗಣ್ಣ)
- ಫಲಶ್ರಾದ್ಧ (ಗಿರೀಶ ಕಾಸರವಳ್ಳಿ)

*ಮೌಲ್ಯನಿರ್ಣಯ*

- ಮಕ್ಕಳ ಭಾಗವಹಿಸುವಿಕೆ, ಸಿನಿಮಾ ಆಸ್ವಾದನೆಯಲ್ಲಿ ತೋರಿಸುವ ಸೂಕ್ಷ್ಮತೆ ಎಂಬಿವುಗಳನ್ನು ಮೌಲ್ಯನಿರ್ಣಯ ಮಾಡಬೇಕು.

# ಹತ್ತನೇ ತರಗತಿ

## ಮುನ್ನುಡಿ

ರಂಗ ಪ್ರದರ್ಶನ, ಆಸ್ವಾದನೆ ಮೊದಲಾದ ನಾಟಕ ಸಿನಿಮಾ ಪಾಠಗಳ ಕಡೆಗೆ ಹತ್ತರ ತರಗತಿಯ ವಿದ್ಯಾರ್ಥಿ ತಲುಪಬೇಕು. ಹೈಸ್ಕೂಲ್ ಮಟ್ಟದಲ್ಲಿ ಮಗು ಗಳಿಸಬೇಕಾದ ತಿಳುವಳಿಕೆ, ಸಾಮರ್ಥ್ಯ ಗಳು ಪೂರ್ಣರೂಪಕ್ಕೆ ತಲುಪಬೇಕಾದ ಚಟುವಟಿಕೆಗಳನ್ನು ಈ ವರ್ಷ ಕ್ರಮೀಕರಿಸಲಾಗಿದೆ. ನಾಟ್ಯಧರ್ಮಿ, ಲೋಕಧೈರ್ಯ ಮೊದಲಾದ ರಂಗಕಲೆಯ ವೈವಿಧ್ಯ ಪಾಠಗಳನ್ನು ಮತ್ತು ಪಾಶ್ಚಾತ್ಯ, ಪೌರಸ್ತ್ಯವಾದ ನಾಟಕ ಸಂಪ್ರದಾಯಗಳನ್ನು ಪರಿಚಯಿಸುವ ಭಾಗವೂ ಇದೆ. ಕಿರುಚಿತ್ರ ನಿರ್ಮಾಣಕ್ಕಿರುವ ಪ್ರಾಯೋಗಿಕ ತರಬೇತಿ, ಲಭಿಸುವ ರೀತಿಯಲ್ಲಿ ಚಲನಚಿತ್ರ ನಿರ್ಮಾಣ ಕಾರ್ಯಗಾರ ಹತ್ತನೇ ತರಗತಿಯ ಕಲಿಕಾ ಚಟುವಟಿಕೆಗಳ ಭಾಗವಾಗಿ ಸೇರಿಸಲಾಗಿದೆ.

## ಯೂನಿಟ್ 1

## ನಾಟಕದ ರಂಗಭಾಷೆ–ಪಾಶ್ಚಾತ್ಯ ಮತ್ತು ಪೌರಸ್ತ್ಯ

ಒಂದು ಸಣ್ಣ ಘಟನೆ/ಸಂದರ್ಭ ಅಭಿನಯ ತೋರಿಸುವುದಕ್ಕಾಗಿ ಸ್ವೀಕರಿಸುವ ಪಾಶ್ಚಾತ್ಯ, ಪೌರತ್ಯ ಅಭಿನಯ ಸಂಪ್ರದಾಯಗಳ ಕುರಿತಾದ ಟಿಪ್ಪಣಿಯನ್ನು ಓದಿ ಸ್ವಾಂಶೀಕರಿಸಿ ಅಭಿನಯಕ್ಕೆ ಅಗತ್ಯವಾದ ಕ್ರಮೀಕರಣಗಳನ್ನು ನಿಶ್ಚಯಿಸುವರು. ಗುಂಪುಗಳು ಅಭಿನಯದ ವೈವಿಧ್ಯತೆಯನ್ನು ಪ್ರಕಟಪಡಿಸಲು ಮಾತ್ರ ಪ್ರದರ್ಶಿಸುವುರು.

### ಕಲಿಕಾ ಸಾಮರ್ಥ್ಯಗಳು

- ಪಾಶ್ಚಾತ್ಯ ಮತ್ತು ಪೌರಸ್ತ್ಯವಾದ ಅಭಿನಯ ರೀತಿಗಳನ್ನು ಉಪಯೋಗಿಸಿ ಕಥಾಪಾತ್ರಗಳ ಸನ್ನಿವೇಶಗಳನ್ನು ವಿನ್ಯಾಸಗೊಳಿಸುವುದರಲ್ಲಿ ತಿಳುವಳಿಕೆ ಗಳಿಸುವುದು.
- ಥೀಯೇಟರ್‌ಗಳ ವಿಶೇಷತೆಗಳನ್ನು ಗಮನಿಸಿಕೊಂಡು ಪಾಠಭಾಗ/ಆಶಯಗಳನ್ನು ನಾಟಕ ಮಾಡಿ ಪ್ರದರ್ಶಿಸುವುದು.
- ಸ್ವತಂತ್ರವಾದ ರಚನಾ ಶೈಲಿಗಳನ್ನು ಅಭಿವೃದ್ಧಿ ಪಡಿಸುವುದರಲ್ಲಿ ಸ್ವಾಂಶೀಕರಿಸಿದ ತಿಳುವಳಿಕೆಗಳನ್ನು ನಾಟಕ, ಎಂಬಿವುಗಳನ್ನು ರಚಿಸಲು ಉಪಯೋಗಿಸುವುದು.

### ಆಶಯ/ತಿಳುವಳಿಕೆ

- ಅಭಿನಯ ಸಂಪ್ರದಾಯ ರೂಪುಗೊಂಡು ಬಂದಿರುವುದು ಪಾಶ್ಚಾತ್ಯ ದೇಶಗಳಲ್ಲಿ ಮತ್ತು ಪೌರತ್ಯ ದೇಶಗಳಲ್ಲಿ ವಿಭಿನ್ನ ರೀತಿಗಳಲ್ಲಾಗಿದೆ.
- ಪಾಶ್ಚಾತ್ಯ ಪೌರಸ್ತ್ಯ ರೀತಿಗಳನ್ನು ಒಂದೊಂದಾಗಿ ಸಂಯೋಜಿಸಿ ರಂಗ ಪ್ರದರ್ಶನ ವಿನ್ಯಾಸ ಗೊಳಿಸಬಹುದು.

- ನಾಟಕಕ್ಕೆ ಹೊಂದಿಕೊಂಡು ಅಭಿನಯ ರೀತಿಯನ್ನು ಆಯ್ಕೆಮಾಡಿ ಪ್ರದರ್ಶಿಸಲಿರುವ ನೈಪುಣ್ಯ.
- ರಂಗ, ರಚನ, ಸರಸತೆ ಎಂಬಿವುಗಳು ಥಿಯೇಟರ್‌ನ ಮೂಲ ಘಟಕಗಳಾಗಿವೆ.
- ಪ್ರೇಕ್ಷಕರನ್ನು, ರಚನೆಯನ್ನು ಪರಿಗಣಿಸಿಕೊಂಡಿರುವ ತರಬೇತಿ ಮತ್ತು ಪ್ರದರ್ಶನವು ನಾಟಕವನ್ನು ಉತ್ತಮ ಆಶಯವಿನಿಮಯದತ್ತ ಕೊಂಡೊಯ್ಯುತ್ತದೆ.
- ಥಿಯೇಟರ್‌ನ ಸವಿಶೇಷತೆಗಳನ್ನು ಸಂಯೋಜಿಸಿ ನಾಟಕ ಪ್ರದರ್ಶಿಸಲಿರುವ ನೈಪುಣ್ಯ.
- ಒಂದು ಸಂಕೇತದ ಸ್ವಭಾವವನ್ನು ಅರ್ಥೈಸಿಕೊಂಡರೆ ಸ್ವತಃ ಒಂದು ರಚನಾ ಶೈಲಿಯನ್ನು ಸ್ವೀಕರಿಸಲು ಸಾಧ್ಯವಾಗಬಹುದು.
- ಚಿತ್ರಕಥೆ ರಚನೆಗಿರುವ ನೈಪುಣ್ಯ.

**ಟಿಪ್ಪಣಿ**

ಅಭಿನಯವನ್ನು ಸಾಮಾನ್ಯವಾಗಿ ನಾಟ್ಯಧರ್ಮಿ, ಲೋಕಧರ್ಮಿ ಎಂದು ಎರಡಾಗಿ ವರ್ಗೀಕರಿಸಬಹುದು. ಸಾಧಾರಣವಾಗಿ ಜೀವನಗಂಧೀ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಶಬ್ದ, ಚಲನೆ, ಭಾವ, ವೇಷ ಎಂಬಿವುಗಳನ್ನು ಉಪಯೋಗಿಸುವುದಾಗಿದೆ ಲೋಕಧರ್ಮಿ. ಯತಾರ್ಥ (Realisinc) ನಾಟಕಗಳಲ್ಲಿ ಲೋಕಧರ್ಮಿಯನ್ನು ನಟರು ಅನುಸರಿಸುತ್ತಾರೆ. ನಾಟ್ಯಧರ್ಮಿ ನಿಜವಾಗಿ ಲೋಕಧರ್ಮಿಯಿಂದ ರೂಪುಗೊಂಡದಾಗಿದೆ. ಸಾಧಾರಣ ಶಬ್ದ–ಚಲನ–ಭಾವಗಳು ವಿನ್ಯಾಸಗೊಳಿಸಿ ಒಂದು ಆಶಯಕ್ಕೆ ಅಂಗ ಚಲನಾ ಸಂಹಿತೆ, ಶಬ್ದ ಕ್ರಮ, ಭಾವ ಶೈಲಿ ಎಂಬಿವುಗಳನ್ನು ನಿಶ್ಚಯಿಸುವರು. ಭಾಷೆಗೆ ಸಮಾನವಾದ ವ್ಯಾಕರಣ ವ್ಯವಸ್ಥೆಗಳು ಸರ್ವ ಲೌಕಿಕತೆ ಕಲಿತರೆ ಮಾತ್ರವೇ ಅರ್ಥೈಸುವ ಅವಸ್ಥೆಯಾಗಿದೆ ನಾಟ್ಯಧರ್ಮಿಯ ವಿಶೇಷತೆ.

ಅಭಿನಯಕ್ಕೆ ಒಂದೊಂದು ನಾಡಿನಲ್ಲಿ ಒಂದೊಂದು ತನ್ನದೇ ಆದ ರೀತಿಗಳು ಅಭಿವೃದ್ಧಿಗೊಂಡು ಬಂದಿವೆ. ಮೂಲ ಸ್ವಭಾವಗಳಲ್ಲಿರುವ ಸಮಾನತೆ ಪಾಶ್ಚಾತ್ಯ ಮತ್ತು ಪೌರತ್ಯ ಎಂಬ ಬೃಹತ್ ವಿಭಜನೆಗೆ ಕೊಂಡೊಯ್ಯುತ್ತದೆ.

ಭಾವಾವಿಷ್ಕಾರದ ಮೂಲಕ ಪ್ರೇಕ್ಷಕನಲ್ಲಿ ಭಾವೋತ್ಪತ್ತಿ ನಿರ್ಮಿಸುವ ಎಂಬ ಉದ್ದೇಶ ಪೌರತ್ಯ ನಾಟ್ಯಶಾಸ್ತ್ರದ ಅಡಿಪಾಯವಾಗಿದೆ. ನಾಟ್ಯಧರ್ಮಿಗೆ ಒತ್ತುಕೊಟ್ಟ ಅಭಿನಯ ಶೈಲಿಯಾಗಿದೆ ಪೌರತ್ಯ ನಾಟಕಗಳಲ್ಲಿ ಕಂಡುಬರುವುದು. ಶಿಸ್ತುಬದ್ಧರಾಗಿ ಕಲಿತು, ಬಿಂಬಗಳನ್ನು ಉಪಯೋಗಿಸಿಯಾಗಿದೆ ನಾಟಕಗಳನ್ನು ಅಭಿನಯಿಸುವುದು.

ಪಾಶ್ಚಾತ್ಯ ರೀತಿಗಳು ಒತ್ತುಕೊಟ್ಟಿರುವುದು ಲೋಕಧರ್ಮಿಗಾಗಿದೆ. ಸಾರ್ವಜನಿಕ ಸ್ಥಳಗಳು ತುಂಬಾ ಜನರಿರುವ , ಹಲವು ವಿಧ ವ್ಯಾಪಾರಗಳು ನಡೆಯುವ ಸ್ಥಳಗಳನ್ನು ವೇದಿಕೆಗಳಲ್ಲಿ ಮಂಡಿಸಲಿರುವ ಕಾರಣ ಲೋಕಧರ್ಮಿಯ ಪಾಶ್ಚಾತ್ಯ ರೀತಿಗೆ ಹೆಚ್ಚು ಸೌಕರ್ಯಪ್ರದವಾಗಿದೆ. ರಾಜ ತಾಂತ್ರಿಕತೆಯ ಒಳತಿರುವುಗಳು, ಯುದ್ಧ ಮೊದಲಾದ ಹೆಚ್ಚು ಜನರು ಭಾಗವಹಿಸುವ ದೃಶ್ಯಗಳನ್ನು ಪಾಶ್ಚಾತ್ಯರು ಪ್ರತ್ಯಕ್ಷವಾಗಿ ಚಿತ್ರೀಕರಿಸುವಾಗ ಪೌರಸ್ತ್ಯರು ಅದನ್ನು ಸಂಕೇತಗಳಿಗೆ ಸೀಮಿತಗೊಳಿಸಿ ಪ್ರದರ್ಶಿಸುತ್ತಾರೆ. ಕಥಾ ಆಖ್ಯಾನಕ್ಕೆ ಪಾಶ್ಚಾತ್ಯರು ಪ್ರಧಾನವಾಗಿ ಕೋರಸನ್ನು ಉಪಯೋಗಿಸುತ್ತಾರೆ. ಆಖ್ಯಾನದೊಂದಿಗೆ ಪ್ರಧಾನ ದೃಶ್ಯಗಳನ್ನು ಪ್ರತ್ಯಕ್ಷವಾಗಿ

ಅಭಿನಯಿಸುತ್ತಾರೆ. ಪೌರತ್ಯರು ದೃಶ್ಯಗಳ ಮಧ್ಯಾಂತರಗಳಲ್ಲಿ ಪರಸ್ಪರ ಜೋಡಿಸಲು ಸೂತ್ರಧಾರರನ್ನೋ ವಿದೂಷಕರನ್ನೋ ವೇದಿಕೆಗೆ ಕರೆತರುತ್ತಾರೆ.

## ಚಟುವಟಿಕೆ

- ಮಕ್ಕಳನ್ನು 4 ಗುಂಪು ಮಾಡುವುದು. ವಿಶ್ವ ಪ್ರಸಿದ್ಧವಾದ ಒಂದೊಂದು ಪಾಶ್ಚಾತ್ಯ/ಪೌರಸ್ತ್ಯ ನಾಟಕಗಳ ಎರಡೆರಡು ನಾಟಕ ಭಾಗಗಳನ್ನು ಈ ಚಟುವಟಿಕೆಯ ಮೊದಲಾಗಿ ಸಂಗ್ರಹಿಸುವುದು. ಪೌರಸ್ತ್ಯ ನಾಟಕ ಲಭಿಸಿದ ಒಂದು ಗುಂಪಿನಲ್ಲಿ ಅದನ್ನು ಪೌರಸ್ತ್ಯ ರೀತಿಯಲ್ಲಿ, ಪಾಶ್ಚಾತ್ಯ ನಾಟಕ ಲಭಿಸಿದ ಒಂದು ಗುಂಪಿನಲ್ಲಿ ಅದನ್ನು ಪಾಶ್ಚಾತ್ಯ ರೀತಿಯಲ್ಲಿ ಮಂಡಿಸಲು ಹೇಳುವುದು. ಉಳಿದ ಎರಡು ಗುಂಪುಗಳು ಅವರ ಇಷ್ಟದಂತೆ ಪಾಶ್ಚಾತ್ಯವೋ ಪೌರಸ್ತ್ಯವೋ ಅಥವಾ ಎರಡೂ ಸೇರಿದ ಮಿಶ್ರ ರೀತಿಯಲ್ಲೋ ಪ್ರದರ್ಶಿಸಲು ಹೇಳುವುದು, ಪ್ರದರ್ಶನದ ನಂತರ ಪ್ರದರ್ಶನ ನಾಟಕದ ಕುರಿತು ಚರ್ಚೆ ಆಯೋಜಿಸುವುದು.
- ಪ್ರತಿಯೊಂದು ಗುಂಪು ನಾಟಕ ಪ್ರದರ್ಶನಕ್ಕೆ ಮೊದಲಾಗಿ ನಡೆಸಿದ ಹಂತಗಳನ್ನು ವಿವರಿಸುವರು. ಈ ಚಟುವಟಿಕೆಗಳಲ್ಲಿ ಎದುರಿಸಿದ ಸಮಸ್ಯೆಗಳು, ಕಂಡುಕೊಂಡ ವಿಚಾರಗಳು ಎಂಬಿವುಗಳನ್ನು ಸೂಚಿಸಬೇಕು. ಪಾಶ್ಚಾತ್ಯ, ಪೌರಸ್ತ್ಯ ಅಭಿನಯ ರೀತಿಗಳನ್ನು ಮಕ್ಕಳು ಸ್ವಾಂಶೀಕರಿಸಿದ್ದಾರೆಯೋ ಎಂದು ಟೀಚರ್ ಮೌಲ್ಯನಿರ್ಣಯ ಮಾಡಬೇಕು. ನಿರ್ದೇಶನ, ಅಭಿನಯ, ಪ್ರದರ್ಶನಗಳ ಹಿರಿಮೆಗಳನ್ನು ಮೌಲ್ಯನಿರ್ಣಯ ಮಾಡುವರು.

## ಅನುಬಂಧ – ಕೆಲವು ನಾಟಕಭಾಗಗಳು

ಭಾಸನ ಮಧ್ಯಮವ್ಯಾಯೋಗ ನಾಟಕದ ಒಂದು ಭಾಗ

### ಕರ್ಣಭಾರ

ಏಕಾಂಕ

(ನಾಂದಿಯ ಕೊನೆಯಲ್ಲಿ ಬಳಿಕ ಸೂತ್ರಧಾರನು ಪ್ರವೇಶಿಸುವನು)

ಸೂತ್ರಧಾರ –

ಸುರರು ಅಸುರರು ನರರು ನಾರಿಯಂತೆ ಆ ಪಾತಾಳಲೋಕದ ಉರಗರು
ಆವ ನರಪತಿ ಮೃಗದ ರೂಪವ ಕಂಡು ಸಲೆ ದಿಗ್ಭ್ರಾಂತರಾದರು ಸರ್ವರ
ತನ್ನ ಕುಲಿಶಕ್ಕೆಣೆಯ ಉಗುರಿನ ಮೊನೆಯೊಳಳಿರಕ್ಕಸನಾವನು ಸೀಳ್ದನು.
ಶ್ರೇಯನೀಯಲಿ ನಿಮಗೆ ಆ ಶ್ರೀಧರನು ಸುರರಿಪು ಬಲವಿಮರ್ದನನು ॥೧॥

ಹೀಗೆ ಆರ್ಯಮಿಶ್ರರಲ್ಲಿ ವಿಜ್ಞಾಪಿಸಿಕೊಳ್ಳುವೆನು. (ಬಳಸಿ ಪಡೆದು ಕಿವಿಗೊಟ್ಟು ಕೇಳಿ) ಓಹೋ! ನಾನು ವಿಜ್ಞಾಪಿಸಿಕೊಳ್ಳುವಷ್ಟರಲ್ಲಿಯೆ ಏನೋ ಶಬ್ದವಾದ ಹಾಗೆ ಕೇಳಿ ಬರುತ್ತಿದೆ. ಇರಲಿ, ನೋಡುವೆನು.

(ತೆರೆಯ ಹಿಂದೆ)

ಅಯ್ಯ, ಅಯ್ಯ, ವಿಜ್ಞಾಪಿಸಿರಿ, ವಿಜ್ಞಾಪಿಸಿರಿ. ಮಹಾರಾಜನಾದ ಅಂಗೇಶ್ವರನಿಗೆ ವಿಜ್ಞಾಪಿಸಿರಿ.

ಸೂತ್ರಧಾರ : ಆಗಲ, ತಿಳಿಯಿತು.

ತುಮುಲಯುದ್ಧವು ಭರದೆ ತೊಡಗಿರೆಬೊಗಸೆಗೈಯೊಳುಸಾರಿಕರ್ಮನ ಭೃತ್ಯನು
ಬಿನ್ನವಿಸಿಕೊಳುತಿಹನು ಆದುಯೋ೯ಧನಾಜ್ಞೆಯೊಳಿದಿಗೊ ಸಲೆ ಸಂಭ್ರಾಂತನು ॥೨॥

(ತೆರಳುವನು)

ಇದು ಪ್ರಸ್ತಾವನೆ
(ಬಳಿಕ ಭಟನು ಪ್ರವೇಶಿಸುತ್ತಾನೆ)
ಭಟ : ಅಯ್ಯ, ಅಯ್ಯ, ವಿಜ್ಞಾಪಿಸಿರಿ, ಮಹಾರಾಜನಾದ ಅಂಗೇಶ್ವರನಿಗೆ
ಯುದ್ಧಕಾಲವು ಪ್ರಾಪ್ತವಾಗಿದೆ ಎಂದು ವಿಜ್ಞಾಪಿಸಿರಿ.
ಆನೆಕುದುರೆ ತೇರುಗಳನು ಏರಿ ಸಾಗಿ ನರನ ಗುಡಿಯ ಎದುರೊಳು
ನಲಿದ ರಾಜಸಿಂಹರಿಂದುಘೋಯೆಂದು ಸಿಂಹನಾದವೆಸಗಲು.
ನೋಡೆ ನಾಡೆ ಸಹಿಸಲರಿದೆನಿಪ್ಪಗುರ್ವನಾಂತ ಲೋಕವೀರನು
ಅರಿನಿನಾದ ಭರದಿನರಿತು ಭರದೆ ನಾಗಕೇತು ರಣಕೆ ತೆರಳ್ದನು ॥೩॥

ಈ ಆಂಗರಾಜನು ಯುದ್ಧದ ಉಡುಗೆಗಳನ್ನು ಉಟ್ಟು ಶಲ್ಯರಾಜನೊಂದಿಗೆ ತನ್ನ
ಮನೆಯಿಂದ ಹೊರಟು ಇತ್ತ ಕಡೆಗೇ ಬರುತ್ತಿರುವನು. ಆಹಾ! ಈತನು
ಯುದ್ಧೋತ್ಸವದಲ್ಲಿ ಪ್ರಮುಖನು; ಪರಾಕ್ರಮವನ್ನು ಮೆರೆದವನು. ಆದರೆ
ಇಂದು ಯಾವುದೋ ಹೃದಯ ಪರಿತಾಪದಲ್ಲಿ ಸಿಲುಕಿದವನಂತೆ ತೋರುತ್ತಿದ್ದಾನೆ ।
ಹಿಂದೆ ಎಂದೂ ಕಾಣದ ಈ ಪರಿತಾಪವು ಏನಿರಬಹುದು? ಇವನಾದರೋ
ಉಗ್ರದೀಪ್ತಿಯಿನೆಸೆಯುವೀತನು ಅಗ್ರಗಣ್ಯನು
ಯುದ್ಧ ರಂಗದೆ ಮತ್ತೆ ಶೌರ್ಯದ ಎಸಕದೆ
ಇಂಥ ಧೀಯುತನಿವನು ಕರ್ಣನು ಕವಿದ ಶೋಕದೆ
ಸಿಲುಕಿಕೊಂಡಿಹನಾವುದೋ ಉದ್ವೇಗದೆ
ಹೊಳೆವ ಸುಡು ಬೇಸಗೆಯ ದಿನದೊಳು ಮುಗಿಲು ಕವಿದರು
ಮೊತ್ತ ಮೊತ್ತದೆ ಸೂರ್ಯನಂತಸ್ತೇಜದೆ.
ತೊಳಗುವಂದದೆ ಕರ್ಣ ಸಹ ತೊಳತೊಳಗುತಿರುವನು
ನಿಜದ ಮಹಿಮೆಯು ಕಾರ್ಯದೋಜೋಭಾವದೆ ॥೪॥

ಇವನನ್ನು ಸಮೀಪಿಸುತ್ತೇನೆ. (ಹೋಗುವನು)

(ಕರ್ಣನೂ ಶಲ್ಯನೂ ಪ್ರವೇಶಿಸುವರು)

ಕರ್ಣ : ನನ್ನ ಬಾಣದ ಗುರಿಗೆ ಸಿಲುಕಿದ ಆರಿನೃಪಾಲರೊ
ಳೊಬ್ಬನಾದರು ಬದುಕಿಬಂದವನಿರುವನೆ
ಸಾಕು ಇವರೊಳು ಕದನವಿನ್ನಾಪಾರ್ಥ ರಣದೊಳು
ಕಂಡನಾದರೆ ದಣಿಗೆ ಗೈವೆನು ಹಿತವನೆ ॥೫॥

ಶಲ್ಯರಾಜ, ಎಲ್ಲಿ ಅರ್ಜುನ ಇರುವನೋ ಅಲ್ಲಿಗೇ ನನ್ನ ರಥವನ್ನು ನಡೆಸು.
ಶಲ್ಯ : ಆಗಲಿ. (ರಥವನ್ನು ನಡೆಸುತ್ತಾನೆ) :
ಕರ್ಣ : ಆಹಾ ಆಹಾ!
ಆ ಪರಸ್ಪರ ಶಸ್ತ್ರಹತಗೀಡಾಗಿ ಮುರಿದಿಳೆ
ಯಲ್ಲಿ ಕೆಡೆದಿಹ ತೇರು ಕಾಲಾಳಾನೆ ಕುದುರೆಗಳಿಡಿದಿರೆ
ಅಂಥ ಆಹವ ಮಧ್ಯದೊಳು ನಾ ಕ್ರುದ್ಧನಾದಂ
ತಕನ ತೆರದೊಳು ಹಿಂದೆ ಯುದ್ಧಂಗೈದು ಮೆರೆದನು ಬಾಪುರೆ
ಅಂಥ ನಾನುಂ ಇಂದಿನೀದಿನ ಯುದ್ಧ ವೇಳೆಯೊ
ಳೇಕೋ ಕಾಣೆನು ಮನದೊಳುಡುಗುವೆ ಅಳುಕು ಮೂಡುತ್ತಿರೆಯಿರೆ ।।೬।।
ನಾನೆ ಕುಂತಿಯ ಬಸುರೊಳೊಗೆತಂದವನು ನೋಳ್ಪೊಡೆ ಮೊದಲೊಳು
ರಾಧೆ ಸಾಕಿದಳಾಗಿ ನಾ ರಾಧೇಯನಾದೆನು ಈಗಳು
ಆ ಯುಧಿಷ್ಠಿರ ಮುಖ್ಯ ಪಾಂಡವರೆನ್ನ ತಮ್ಮದಿರಿಳೆಯೊಳು ।।೭।।

ಈಗ ಸಕ್ರಮವಾಗಿ ಒದಗಿದೆ ನನ್ನ ಮಂಗಳಕಾಲವು
ಈಗ ಉದಿಸಿದುದಧಿಕ ಗುಣಗಳ ತಣಿದ ಸುಂದರ ದಿವಸವು.
ಅಸ್ತ್ರ ಶಿಕ್ಷಿತನಾದೆಯಾದರು ಎಲ್ಲ ವಿಫಲವು ವಿಫಲವು
ಮತ್ತೆ ತಡೆಯೊಡ್ಡುತ್ತಲಿದಿಯಿದೆ ತಾಯಿಗಿತ್ತಿಹ ವಚನವು ।।೮।।
ಭೋ, ಶಲ್ಯರಾಜ! ನನ್ನ ಅಸ್ತ್ರದ ವೃತ್ತಾಂತವನ್ನು ಹೇಳುತ್ತೇನೆ ಕೇಳು.
ಶಲ್ಯ : ಆ ವೃತ್ತಾಂತವನ್ನು ಕೇಳುವುದಕ್ಕೆ ನಾನೂ ಬಹಳ ಕುತೂಹಲಿಯಾಗಿದ್ದೇನೆ.
ಕರ್ಣ : ನಾನು ಮೊದಲು ಶಿಷ್ಯನಾಗಿ ಹೋದದ್ದು ಜಮದಗ್ನಿಯ ಪುತ್ರರಾದ ಪರಶುರಾಮರ ಬಳಿಗೆ.
ಶಲ್ಯ : ಆಮೇಲೆ
ಮಿಂಚಿನ ಬಳ್ಳಿವೊಲೆತ್ತರದೊಳು ಸಲೆ ಮಿನುಗುವ ಕೆಂಗೂದಲು ಜಡೆಗಟ್ಟಿರುವಾತನು
ಹೊಮ್ಮಿದ ಕಾಂತಿಯ ಮಂಡಲ ಸುತ್ತಿದ ಹೊಳೆಹೊಳೆ
ಯುವ ಧಾರೆಯ ಕೊಡಲಿಯ ಪಿಡಿದಿರುವಾತನನು
ಕ್ಷತ್ರಾಂತಕನನು ಮುನಿಜನ ಮಣಿಯನು ಆ ಭೃಗು
ವಂಶದ ಕೇತುವೊಲೆಸೆದಿರುವಾತನನು
ದೂರದೆ ಕಾಣುತೆ ಹತ್ತಿರ ಹೋಗುತೆ ನಮನಂ
ಗೈಯುತೆ ಸುಮ್ಮನೆ ನಿಂದಿರಲಂದಾನು ।।೯।।

ಕರ್ಣ : ಬಳಿಕ ಆ ಜಮದಗ್ನಿ ಪುತ್ರರಾದ ಪರಶುರಾಮರು ನನ್ನನ್ನು ಆಶೀರ್ವದಿಸಿ ನೀನು ಯಾರು ಇಲ್ಲಿಗೆ ಏಕೆ ಬಂದೆ ಎಂದು ಪ್ರಶ್ನಿಸಿದರು.
ಶಲ್ಯ : ಬಳಿಕ?
ಕರ್ಣ : ಬಳಿಕ ಪೂಜ್ಯ ಗುರುಗಳೆ, ತಮ್ಮಿಂದ ಅಖಿಲಾಸ್ತ್ರಗಳನ್ನೂ ಕಲಿಯಬೇಕೆಂದು ಬಂದಿದ್ದೇನೆ ಎಂದೆ.

ಶಲ್ಯ : ಮತ್ತೆ?
ಕರ್ಣ : ಮತ್ತೆ ಪೂಜ್ಯರು 'ನಾನು ಬ್ರಾಹ್ಮಣರಿಗೆ ಮಾತ್ರ ಕಲಿಸುತ್ತೇನೆ ಕ್ಷತ್ರಿಯರಿಗಲ್ಲ' ಎಂದರು.
ಶಲ್ಯ : ಹೌದು, ಪೂಜ್ಯ ಪರಶುರಾಮರಿಗೆ ಕ್ಷತ್ರಿಯರ ಮೇಲಣ ವೈರ ಎಂದಿನಿಂದ ಬೆಳೆದು ಬಂದದ್ದೇ. ಆ ಮೇಲೆ?
ಕರ್ಣ : ನಾನು ಕ್ಷತ್ರಿಯನಲ್ಲ ಎಂದು ತಿಳಿಸಿ ಅವರಿಂದ ಅಸ್ತ್ರವಿದ್ಯೆ ಕಲಿಯಲು ಆರಂಭಿಸಿದೆ.
ಶಲ್ಯ : ಆ ನಂತರ?
ಕರ್ಣ : ಹೀಗೆಯೇ ಕೆಲವು ಕಾಲ ಕಳೆಯಿತು. ಗುರುಗಳು ಒಮ್ಮೆ ಹಣ್ಣು ಹಂಪಲು ಗಡ್ಡೆ ಗೆಣಸುಗಳನ್ನೂ ಸಮಿತ್ತ ಕುಶಕುಸುಮಾದಿಗಳನ್ನೂ ತರಲೆಂದು ಅಡವಿಗೆ ಹೊರಟರು. ಅವರ ಜೊತೆಯಲ್ಲಿ ನಾನೂ ಹೋದೆನು.
ಶಲ್ಯ : ಅಲ್ಲಿ ಏನಾಯಿತು?
ಕರ್ಣ : ಅಲ್ಲಿ ಕಾಡುಸುತ್ತಿ ಆಯಾಸಗೊಂಡಿದ್ದ ಗುರು ನನ್ನ ತೊಡೆಯ ಮೇಲೆ ನಿದ್ದೆ ಮಾಡಿದರು.
ಶಲ್ಯ : ಆ ಮೇಲೆ? ಆ ಮೇಲೆ?
ಕರ್ಣ : ವಿಧಿವಿಲಾಸದೆ ವಜ್ರಮುಖವೆಂಬೊಂದು ಕ್ರಿಮಿ ಬಂದೆನ್ನ ತೊಡೆಗಳ ಕೊರೆಯಿತು
ನಿದ್ರೆ ತಿಳಿದೀತೆಂಬ ಭಯದೊಳು ಸಹಿಸಿಕೊಂಡೆನು ಧೈರ್ಯದಿಂದಾ ನೋವನು
ಏರಿನಿಂದುಗುತಂದ ನೆತ್ತರು ತೊಯ್ಯಲೆಲ್ದರು ಕೋಪದುರಿ ಧಗಧಗಿಸಿತು
ತಿಳಿದು ನನ್ನನು ವಿಫಲಮಕ್ಕೆ ಸಕಾಲದೊಳು ಅಸ್ತ್ರಂಗಳೆನೆ ಶಪಿಸಿರ್ದರು. ॥೧೦॥
ಶಲ್ಯ : ಅಯ್ಯೋ, ಪೂಜ್ಯ ಗುರು ಹೇಳಿದ್ದು ಎಷ್ಟು ದಾರುಣವಾದದ್ದು,
ಕರ್ಣ : ಈ ಅಸ್ತ್ರದ ವೃತ್ತಾಂತವನ್ನು ಈಗ ಪರೀಕ್ಷಿಸಿ ನೋಡುತ್ತೇನೆ. (ಹಾಗೆ ಪರೀಕ್ಷಿಸಿ)
ಈ ಅಸ್ತ್ರಗಳೆಲ್ಲ ನಿರ್ವೀಯವಾಗಿಬಿಟ್ಟಿವೆ. ಅಲ್ಲದೆ– ದೈನ್ಯದೆ ಕಣ್ಣನು ಮುಚ್ಚುತೆ
ಮೈಮರೆತಡಿಗಡಿಗೆಡಹುವ ಕುದುರೆಗಳು
ಅಂತೆಯೆ ತೋರುವ ಏಳಲೆ ವಾಳೆಯ ಕಂಪಿನ ಮದಜಲವೊಸರುವ ಆನೆಗಳು
ಇವು ಸೂಚಿಸುವಂತಿರ್ಪವು ಸೋಲುತ ಹಿಂದೆಗೆದನೆಯೆ ಆಜಿಯೊಳು ॥೧೧॥
ಶಂಖದುಂದುಭಿಗಳ ಸದ್ದೂ ಇಲ್ಲವಾಗಿದೆ
ಶಲ್ಯ : ಓವ್ಹೋ!ಕಷ್ಟವೇ! ಇವುಗಳೆಲ್ಲ ದರ ಅರ್ಥವೇನು?
ಕರ್ಣ : ಶಲ್ಯರಾಜ, ಸಾಕು ವಿಷಾದಿಸಬೇಡ, ಏಕೆಂದರೆ
ಮಡಿದೆವಾದರೆ ನಾಕ ದೊರೆವುದು ಗೆದ್ದೆವಾದರೆ ಯಶವು ನಮ್ಮನು ಸಾರ್ವುದು
ಲೋಕವೆರಡನುಮೊಪ್ಪಿಕೊಂಡಿಹುದದರಿನೆಂದು ರಣವು ನಿಷ್ಫಲವಾಗದು।೧೨।
ಎಂದುಮುನ್ನ ಶ್ವಂಗಳಿವುಗಳು ಆಜಿ ಮುಖದಿ
ದಣಿದು ಗಡ ಹಿಮ್ಮೆಟ್ಟಿ ಬಂದದ್ದಿಲ್ಲವು
ವೇಗದೊಳು ಇವು ನಾಡೆ ನೋಳ್ಪೊಡೆ ಗರುಡಪಕ್ಷಿಯ
ವೇಗಕೆಣೆಯೆನೆ ಭರದೆ ಧಾವಿಸಬಲ್ಲವು
ಮತ್ತೆ ಉತ್ತಮವಾದ ಆ ಕಾಂಭೋಜವಂಶದೆ

ಹುಟ್ಟಿ ಶಿಕ್ಷಣ ಪಡೆದ ಅಶ್ವಗಳೆನ್ನವು
ನನ್ನ ರಕ್ಷಣೆಯೆಂಬುದಾಗುವುದಿದರಿಂದೀ
ನನ್ನ ಅಶ್ವಗಳೋತು ರಕ್ಷಿಬಲ್ಲವು ।।೧೩।।
ಗೋಬ್ರಾಹ್ಮಣರಿಗೆ ಅಕ್ಷಯವಾಗಲಿ. ಕಾದುವ ಕಾಲ ಬಂದಿರುವ ನನಗೆ ಅಕ್ಷಯವಾಗಲಿ.
ಭೋ! ಭೋ!ಈಗ ನಾನು ಪ್ರಸನ್ನನಾಗಿದ್ದೇನೆ. ಹೋಗುವೆ ನಾನಸಹ್ಯಮಾದ
ಪಾಂಡುಪುತ್ರರಾಜಿಮುಖವನು
ಪ್ರತಿಥಗುಣಗಣಾಢ್ಯನಾದ ಧರ್ಮಸುತನ ಕಟ್ಟಿ ಬಿಗಿವೆನು
ನನ್ನ ವರಶರಂಗಳೆಸುಗೆಯಿಂದೆ ಬೀಳಿಸುವೆನು ನರನನು
ಸಿಂಹ ಬಿಳ್ದ ವನದ ತೆರದೆ ಪೊಗಲು ರಣವ ಸುಗಮಗೊಳಿಪೆನು ।।೧೪।।
ಶಲ್ಯರಾಜ, ಇನ್ನು ಇಬ್ಬರೂ ರಥವನ್ನು ಏರೋಣ,
ಶಲ್ಯ : ಆಗಲಿ.
(ಇಬ್ಬರೂ ರಥವನ್ನು ಹತ್ತುವರು)
ಕರ್ಣ : ಶಲ್ಯರಾಜ, ಆ ಆರ್ಜುನನು ಎಲ್ಲಿರುವನೋ ಅಲ್ಲಿಗೇ ನನ್ನ ರಥವನ್ನು ಓಡಿಸು।
(ತೆರೆಯ ಹಿಂದೆ)
ಆಪ್ಪ, ಕರ್ಣ, ಮಹತ್ತರವಾದ ಭಿಕ್ಷೆಯನ್ನು ಬೇಡುತ್ತಿದ್ದೇನೆ.
ಕರ್ಣ (ಕೇಳಿ), ಹಾ, ಎಷ್ಟು ಗಂಭೀರ ಈ ಧ್ವನಿ!
ದ್ವಿಜವರಮಾತ್ರನು ಆಗಿರಲಾರನು ಈ ಶ್ರೀಯುತನಿಂದು
ಈತನ ಅದ್ಭುತ ಮಹಿಮೆಯಪಾರವು ಎಂದೇ ತೋರುವುದು
ಇವನ ಗಂಭೀರ ನಿನಾದವ ಕೇಳಿಯೆ ನನ್ನೀ ಕುದುರೆಗಳು
ವಿವಶಂಗೊಂಡವು ಥಟ್ಟನೆ ನಿಂತವು ಚಿತ್ರದೆ ಬರೆದವೊಲು
ಕುತ್ತಿಗೆ ಕೊಂಕಿತು ಮೋರೆಯು ಎತ್ತಿತು ನಿಮಿರ್ದವು ಕರ್ಣಗಳು:
ನೆಟ್ಟಂತಿರ್ದವು ನಿಶ್ಚಲಮಿರ್ದವು ಆ ನಿಡುಗಣ್ಣುಗಳು ।।೧೫।।
ಆ ವಿಪ್ರನನ್ನು ಕರೆಯಿರಿ, ಬೇಡ ಬೇಡ, ನಾನೇ ಕರೆತರುತ್ತೇನೆ (ಹೋಗಿ)!
ಪೂಜ್ಯರ ಹೀಗೆ ದಯಮಾಡಿಸಬೇಕು. ಹೀಗೆ ದಯಮಾಡಿಸಬೇಕು.
(ಬ್ರಾಹ್ಮಣನ ವೇಷದಲ್ಲಿ ಇಂದ್ರನ ಪ್ರವೇಶ)
ಇಂದ್ರ : ಓ ಮೋಡಗಳೇ! ಸೂರ್ಯನೊಡನೆ ನೀವಿನ್ನು ಹಿಂದಿರುಗಿರಿ. (ಕರ್ಣನ ಬಳಿ ಬಂದು) ಭೋ, ಕರ್ಣ, ಮಹತ್ತರವಾದ ಭಿಕ್ಷೆಯನ್ನು ಬೇಡುತ್ತಿದ್ದೇನೆ.
ಕರ್ಣ : ಭಗವನ್, ತುಂಬ ಸಂತೋಷಗೊಂಡಿದ್ದೇನೆ.
ವರ ಕೃತಾರ್ಥರ ಗಡಣದೆಡೆಯೊಳು ಇಂದು ನಾನುಂ ನಿಜದೆ ಸಂದವೊಲಾಯಿತು
ನನ್ನ ಪಾದವು ವರ ನೃಪೇಂದ್ರರ ಮೌಳಿಮಣಿಗಳಿನರುಣಗೊಂಡಿಂದೆಸೆಯಿತು
ನನ್ನ ಮೌಳಿಯು ಈಗ ಈ ವಿಪೇಂದ್ರಪದರಜದಿಂದೆ ಪಾವನಗೊಂಡುದು
ನಾನು ಕರ್ಣನುನಿಮಗೆನ ಮನಂಗೈಯು ತಿರುವೆನು ನನ್ನ ಹರಸುತೆ ಪೊರೆವುದು ।।೧೬।।

ಇಂದ್ರ : (ಸ್ವಗತ) ಈಗ ನಾನು ಏನು ಹೇಳಲಿ? ದೀರ್ಘಾಯುವಾಗೆಂದು ಹೇಳಿದರೆ ದೀರ್ಘಾಯುವಾಗುತ್ತಾನೆ. ಹೇಳಲಿಲ್ಲವೋ ಮೂಢನೆಂದು ನನ್ನನ್ನು ಪರಿಭವಿಸುತ್ತಾನೆ. ಆದ್ದರಿಂದ ಈ ಎರಡನ್ನೂ ಬಿಟ್ಟು ಬೇರೆ ಏನು ತಾನೆ ಹೇಳಲಿ? ಆಗಲಿ ತಿಳಿಯಿತು. (ಪ್ರಕಾಶ) ಭೋ ಕರ್ಣ! ಸೂರ್ಯನಂತೆ ಚಂದ್ರನಂತೆ ಹಿಮವಂತನಂತೆ ಸಾಗರನಂತೆ ನಿನ್ನ ಯಶಸ್ಸು ಸ್ಥಿರವಾಗಿರಲಿ.

ಕರ್ಣ : ಭಗವನ್! ದೀರ್ಘಾಯುರ್ಭವ ಎಂದೇಕೆ ಹೇಳದೆ ಹೋದಿರಿ? ಅಥವಾ ಇದೇ ಶುಭವಾಗಿದೆ. ಏಕೆಂದರೆ – ಧರ್ಮವನ್ನೆ ಸಾಧಿಸುವುದು ಯತ್ನಹೈದು ಪುರುಷನು
ನೃಪರ ಸಿರಿಯು ಭಜಗಜಿಹ್ವೆಯಂತೆ ಚಪಲವಪ್ಪುದು ।
ಪ್ರಜರ ರಕ್ಷಿಸುವದಕೆಂದೆ ದೇಹವಿದನು ತೊರೆವುದು
ಅಂಥ ಮಹಿಮ ತನ್ನ ಗುಣದೆ ಎಲ್ಲ ಕಾಲಕುಳಿವನು ॥೧೭॥
ಭಗವನ್! ಏನು ಬೇಕು ತಮಗೆ? ಏನು ಕೊಡಲಿ ನಾನು?

ಇಂದ್ರ : ಮಹತ್ತರವಾದ ಭಿಕ್ಷೆಯನ್ನು ಬೇಡುತ್ತಿದ್ದೇನೆ.

ಕರ್ಣ : ಮಹತ್ತರವಾದ ಭಿಕ್ಷೆಯನ್ನು ನೀಡುತ್ತೇನೆ. ನನ್ನ ವಿಭವಗಳನ್ನು ಕೇಳಿ.

ತಣಿದಕರುಗಳು ಜೊತೆಯೊಳಾಡುವ ಅಮೃತದಂತಹ ಇನಿಯ ಹಾಲನು ಕರೆಯುವ
ಆರ್ಥಿಜನಗಳಿಗಿಷ್ಟವೆನ್ನುವ ಹರೆಯದೊಳ್ಳೆಯ ಜಾತಿಗುಣಗಳ ಮೆರೆಯುವ ಚಿನ್ನದಣಸನು
ಕೊಂಬಿಗಿಡಿಸಿದ ಗೋವುಗಳನಿದೊ ಕೊಡುವೆನೊಂದು ಸಹಸ್ರವ ವಿಪ್ರವರ ನಿಮಗಿಷ್ಟವಾದರೆ
ಕೊಟ್ಟು ಬಿಡುವೆನು ಈ ಪವಿತ್ರ ದದಾನವ ॥೧೮॥

ಇಂದ್ರ : ಸಾವಿರ ಗೋವೆ? ಒಂದು ಕ್ಷಣ ಹಾಲು ಕುಡಿಯಬಹುದು. ಕರ್ಣಬೇಡ, ನನಗೆ ಅದರ ಬಯಕೆಯಿಲ್ಲ.

ಕರ್ಣ : ಏನು? ತಮಗೆ ಅದು ಬೇಡವೆ? ಹಾಗಾದರೆ ಇದನ್ನು ಕೇಳಿ,
ರವಿಯ ತುರಗಕೆ ಎಣೆಯದೆನ್ನುವ ರಾಜಲಕ್ಷ್ಮಿಗೆ ಒಂದು ಸಾಧನವೆನ್ನುವ
ಸಕಲ ನೃಪರಿಗೆ ಮಾನ್ಯವೆನ್ನುವ ಮತ್ತೆ ಆ ಕಾಂಭೋಜ ಜಾತಿಯೆನ್ನುವ
ವಾಯುವೇಗದಹಿರಿಯಸದ್ಗುಣವಿರುವರಣದೊಳುಶಕ್ತಿಯನುಸಲೆಮರೆಯುವ
ಎನಿತೋ ಸಾವಿರ ವಾಜಿಗಳ ನಾನೀವೆನೀಗಳೆ ಕೊಳುವಿರಾ ಈ ದಾನವ ॥೧೯॥

ಇಂದ್ರ : ಕುದುರೆಯೆ? ಒಂದು ಕ್ಷಣ ಹತ್ತಬಹುದು. ನನಗೆ ಅದರ ಬಯಕೆಯಿಲ್ಲ. ಕರ್ಣ ನನಗೆ ಅದು ಬೇಡ.

ಕರ್ಣ : ಪೂಜ್ಯರಿಗೆ ಅದೂ ಬೇಡವೋ, ಈ ಮತ್ತೊಂದನ್ನಾದರೂ ಕೇಳಿ,
ಮದವು ಸುರಿವ ಕಪೋಲವೊಪ್ಪುವ ದುಂಬಿವಿಂಡೈತಂದು ಸೇವಿಸಿ ಪಾಡುವ ಪಿರಿಯ
ಬೆಟ್ಟಗಳಂತೆ ಒಪ್ಪುವ ಮೇಘದಂದದೆ ಬೃಂಹಿತವ ತಾಂ ಗೈಯುವ
ದಂತದೊಂದಿಗೆ ಉಗುರು ಸಹ ಸಲೆ ಬೆಳ್ಳಗೊಪ್ಪುತೆ ಕಾಂತಿಯಿಂ ಥಳಥಳಿಸುವ ಶತ್ರುಸೈನ್ಯವ
ನುಚ್ಚುನುರಿಗೈವಾನೆವಿಂಡನು ಕೊಡಲೆ ಪಡೆವಿರ ದಾನವ ॥೨೦॥

ಇಂದ್ರ : ಆನೆಯೇ? ಕ್ಷಣಕಾಲ ಏರಬಹುದು. ಬೇಡ ಕರ್ಣ. ನನಗೆ ಅದರ ಇಚ್ಛೆಯಿಲ್ಲ.

ಕರ್ಣ : ಏನು? ಇದೂ ಬೇಡವಾಯಿತೆ? ಹಾಗಾದರೆ ಇದನ್ನೂ ಕೇಳಿ. ಅಮಿತವಾದ ಕನಕವನ್ನು ಕೊಡುತ್ತೇನೆ.

ಇಂದ್ರ : ಹಿಡಿದುಕೊಂಡು ಹೋಗುತ್ತೇನೆ.(ಸ್ವಲ್ಪ ನಡೆದು) ಬೇಡ, ಕರ್ಣ. ನನಗೆ ಆದರ ಇಚ್ಛೆಯಿಲ್ಲ.

ಕರ್ಣ : ಹಾಗಾದರೆ ಭೂಮಿಯನ್ನು ಗೆದ್ದು ಕೊಡುತ್ತೇನೆ.

ಇಂದ್ರ : ಭೂಮಿಯನ್ನು ಕೊಂಡು ನಾನೇನು ಮಾಡಲಿ?

ಕರ್ಣ : ಹಾಗಾದರೆ ಅಗ್ನಿಷ್ಟೋಮದ ಫಲವನ್ನು ಕೊಡುತ್ತೇನೆ,

ಇಂದ್ರ : ಅಗ್ನಿಷ್ಟೋಮದ ಫಲದಿಂದ ನನಗೆ ಆಗಬೇಕಾದದ್ದೇನು?

ಕರ್ಣ : ಹಾಗಾದರೆ ನನ್ನ ತಲೆಯನ್ನೇ ಕೊಡುತ್ತೇನೆ.

ಇಂದ್ರ : ಅಯ್ಯೊ ಅಯ್ಯೋ!

ಕರ್ಣ : ಹೆದರಬೇಡಿ. ಪೂಜ್ಯರು ಪ್ರಸನ್ನರಾಗಬೇಕು. ಮತ್ತೊಂದನ್ನು ಕೇಳಬೇಕು.

ನನ್ನೊಳಿರುವುದು ನನ್ನ ಅಂಗಗಳೊಡನೆ ಒಟ್ಟಿಗೆ
ಹುಟ್ಟಿ ಬಂದಿಹ ದೇಹಾರಕ್ಷಾಕವಚವು
ಸುರರರು ಅಸುರರು ಯಾರೆ ಆಗಲಿ ತಮ್ ಮಅಸ್ತ್ರಗ
ಳಿಂದ ಭೇಧಿಸಲಾಗದಂತೆ ಭೇದಿಸಲಾಗದಂತೆ ಅಭೇದ್ಯವು
ತಮಗೆ ಒಪ್ಪಿಗೆಯಾದರೀಗಳೆ ಕವಚಕುಂಡಲ
ಗಳನು ಕೊಡುವೆನು ಬರಲಿ ದಾನದ ಪುಣ್ಯವು ॥೨೧॥

ಇಂದ್ರ : (ಹರ್ಷದಿಂದ) ಕೊಡು ಕೊಡು.

ಕರ್ಣ:(ಸ್ವಗತ) ಇದೇ ಇವರ ಬಯಕೆ. ಇದು ಅನೇಕ ಕಪಟ ಬುದ್ಧಿಯ ಕೃಷ್ಣನ ಉಪಾಯವೆ? ಹಾಗೆಯೇ ಆಗಿರಲಿ. ಈಗ ಅನುತಪಿಸುವುದು ತರವಲ್ಲ.(ಪ್ರಕಾಶ) ತೆಗೆದುಕೋ.

ಶಲ್ಯರಾಜ : ಅಂಗರಾಜ! ಕೊಡಬಾರದು, ಕೊಡಬಾರದು.

ಕರ್ಣ : ಶಲ್ಯರಾಜ! ನೀನು ತಡೆಯ ಬೇಡ. ನೋಡು

ಕ್ಷೀಣಿಸುವುದು ಕಲಿತ ವಿದ್ಯೆ ಕಾಲಕಳೆಯುತಿರೆಯಿರೆ
ಬೀಳಲಿಹುದು ಗಟ್ಟಿ ಮರವು ಕಾಲಕಳೆಯುತಿರೆಯಿರೆ
ಬತ್ತಲಿಹುದು ದೊಡ್ಡ ಕೊಳವು ಕಾಲಕಳೆಯುತಿರೆಯಿರೆ
ಓತು ಕೊಟ್ಟನೆಗಳ್ದದಾನವಷ್ಟೆ ಉಳಿವುದಿರೆಯಿರೆ ॥೨೨॥

ಆದ್ದರಿಂದ ತೆಗೆದುಕೊಳ್ಳಿರಿ. (ಕತ್ತರಿಸಿ ಕೊಡುವನು)

ಇಂದ್ರ : (ತೆಗೆದುಕೊಂಡು ಸ್ವಗತ) ಆಹಾ, ಇವನ್ನು ತೆಗೆದುಕೊಂಡದ್ದಾಯಿತು. ನನ್ನ ವಿಜಯಕ್ಕಾಗಿ ಹಿಂದೆ ಎಲ್ಲ ದೇವತೆಗಳು ಯಾವುದನ್ನು ಸಮರ್ಥಿಸಿದ್ದರೋ ಅದನ್ನು ಈಗ ನಾನು ನಡೆಯಿಸಿದಂತಾಯಿತು. ಇನ್ನು ಐರಾವತವನ್ನೇರಿ ನಾನೂ ಕರ್ಣಾರ್ಜುನರ ದ್ವಂದ್ವ ಯುದ್ಧವನ್ನು ನೋಡುತ್ತೇನೆ.(ತೆರಳುವನು)

ಶಲ್ಯ : ಭೋ, ಅಂಗರಾಜ! ನೀನು ವಂಚಿತನಾಗಿಬಿಟ್ಟೆ.

ಕರ್ಣ : ಯಾರಿಂದ?

ಶಲ್ಯ : ಇಂದ್ರನಿಂದ.
ಕರ್ಣ : ಖಂಡಿತ ಇಲ್ಲ. ಇಂದ್ರನೇ ನನ್ನಿಂದ ವಂಚಿತನಾಗಿದ್ದಾನೆ. ಹೇಗೆಂದರೆ
ಆ ಅನೇಕ ಯಜ್ಞಗಳಲಿ ವಿಪ್ರರಿತ್ತ ಆಹುತಿಯೊಳು ತೃಪ್ತಿವಡೆದನಾದವನು
ಅಸುರ ಮರ್ದನದೊಳು ಸಫಲನೆನಿಸಿ ಮೆರೆದನಾವನಾ ಕಿರೀಟವಂತನಾವನು
ದೇವಗಜದ ಬೆನ್ನ ಚಪ್ಪರಿಸುವ ಕತದೆ ಬೆಟ್ಟಿತಾದ ಬೆರಳಿನವನದಾವನು
ಇಂಥ ಪಾಕವೈರಿಯಾಸೆ ನನ್ನ ದಾನದಿಂದ ತೀರ್ದಿತಾಹ ನಾನೆ ಧನ್ಯನು ॥೨೩॥
(ಬ್ರಾಹ್ಮಣರೂಪದಿಂದ ದೇವದೂತನು ಪ್ರವೇಶಿಸುವನು)
ದೇವದೂತ : ಭೋ ಕರ್ಣ! ನಿನ್ನ ಕವಚಕುಂಡಲಗಳನ್ನು ಕೊಂಡೊಯ್ದ ಪುರಂದರನು
ಪಶ್ಚಾತ್ತಾಪದಿಂದ ನಿನಗೆ ಅನುಗ್ರಹ ಮಾಡಿದ್ದಾನೆ. ಇದು ವಿಮಲಾ ಎಂಬ ಶಕ್ತಿ.
ಪಾಂಡವರಲ್ಲಿ ನೀನು ಕೊಲ್ಲಬಯಸಿದ ಒಬ್ಬನನ್ನು ಇದು ಕೊಲ್ಲಬಹುದು..!
ಅಮೋಘವಾದ ಅಸ್ತ್ರವನ್ನು ಸ್ವೀಕರಿಸು,
ಕರ್ಣ : ಧಿಕ್! ಕೊಟ್ಟದ್ದಕ್ಕೆ ಪ್ರತಿಯಾಗಿ ಏನನ್ನೂ ನಾನು ಸ್ವೀಕರಿಸುವುದಿಲ್ಲ.
ದೇವದೂತ : ಅಲ್ಲ. ಬ್ರಾಹ್ಮಣನ ಮಾತೆಂದಾದರೂ ಇದನ್ನು ಸ್ವೀಕರಿಸು.
ಕರ್ಣ : ಬ್ರಾಹ್ಮಣನ ಮಾತು ಎಂದೆಯಾ? ಹಿಂದೆ ಎಂದೂ ನಾನು ವಿಪ್ರವಾಕ್ಯವನ್ನು
ಮೀರಿದವನಲ್ಲ. ಯಾವಾಗ ಸ್ವೀಕರಿಸಲಿ?
ದೇವದೂತ : ಎಂದು ಇದನ್ನು ನೆನೆವೆಯೋ ಅಂದೇ ಇದನ್ನು ಪಡೆಯುವೆ. ಕರ್ಣ–
ಆಗಬಹುದು, ಅನುಗೃಹೀತನಾದೆ, ತಾವು ಹಿಂದಿರುಗಬಹುದು. ಕರ್ಣ–ಶಲ್ಯ ರಾಜ!
ನಾವಿನ್ನು ರಥವನ್ನೇರೋಣ.
ಶಲ್ಯ : ಆಗಲಿ. (ರಥವನ್ನೇರುವರು)
ಕರ್ಣ : ಇದೇನು? ಯಾವುದೋ ಶಬ್ದದಂತೆ ಕೇಳಿಬರುತ್ತಿದೆಯಲ್ಲ! ಏನಿರಬಹುದು?
ಪ್ರಳಯ ಸಾಗರ ಘೋಷದಂದದೆ ಶಂಖ ಮೊಳಗುತ್ತಿರುವುದು
ಕೃಷ್ಣ ಪಾರ್ತರೊಳಾವನೋ ಈ ಶಂಖನಾದಂಗೈದುದು
ಧರ್ಮರಾಜನ ಈ ಪರಾಜಯದಿಂದ ಕುಪಿತನು ಪಾರ್ಥನು
ತಾಂ ಯಥಾಬಲನಾಗಿ ಯುದ್ಧಂಗೈಯುತಿಹನೆಂದರಿವೆನು ॥೨೪॥
ಶಲ್ಯರಾಜ! ಆ ಅರ್ಜುನನು ಎಲ್ಲಿರುವನೋ ಅಲ್ಲಿಗೇ ನನ್ನ ರಥವನ್ನು ಓಡಿಸು.
ಶಲ್ಯರಾಜ : ಆಗಲಿ.
(ಭರತವಾಕ್ಯ)
ಎಲ್ಲ ಎಡೆ ಸಂಪತ್ತು ಹರಡಲಿ ಎಲ್ಲ ಆಪತ್ತಳಿಯಲಿ
ರಾಜಗುಣಸಂಪನ್ನನೋರ್ವನು ರಾಜ ನಮ್ಮನು ಆಳಲಿ ॥೨೫॥

ಕರ್ಣಭಾರ ಮುಗಿಯಿತು

* * * * * *

# ಯೂನಿಟ್ 2 – ಸಿನಿಮಾ

ಸಿನಿಮಾ ಮತ್ತು ನಾಟಕಗಳಲ್ಲಿರುವ ಅಭಿನಯ ರೀತಿಯನ್ನು ಪರಿಚಯಿಸುವುದು ಮತ್ತು ಸಿನಿಮಾ ನಿರ್ಮಾಣದ ಪ್ರಾಯೋಗಿಕ ರೀತಿಗಳನ್ನು ತಿಳಿಯುವುದು ಎಂಬೀ ಉದ್ದೇಶಗಳನ್ನು ಸಫಲೀಕರಿಸುವುದಕ್ಕಾಗಿರುವ ಚಟುವಟಿಕೆಗಳಾಗಿವೆ.

**ಕಲಿಕಾ ಸಾಧನೆಗಳು**

- ವೇದಿಕೆಯಲ್ಲೂ, ಕ್ಯಾಮರಗಳ ಮುಂಭಾಗದಲ್ಲೂ ಅಭಿನಯಿಸುವ ತಿಳುವಳಿಕೆ ಗಳಿಸುವುದು.
- ಇತರ ಕಲಾರೂಪಗಳ ಸಾಧ್ಯತೆಗಳನ್ನು ನಾಟಕ, ಸಿನಿಮಾಗಳನ್ನು ತಯಾರಿಸಲು ಉಪಯೋಗಿಸಿಕೊಳ್ಳುವುದು.
- ಸ್ವತಂತ್ರವಾದ ರಚನಾ ಶೈಲಿಯನ್ನು ಅಭಿವೃದ್ಧಿಪಡಿಸಲು ಸ್ವಾಂಶೀಕರಿಸಿದ ತಿಳುವಳಿಕೆಗಳನ್ನು ನಾಟಕ, ಚಿತ್ರಕಥೆಗಳನ್ನು ರಚಿಸುವಾಗ ಉಪಯೋಗಿಸುವುದು.
- ನಾಟಕ, ಸಿನಿಮಾ ಎಂಬಿವುಗಳನ್ನು ನೋಡಿ ಆಸ್ವಾದಿಸಿ ವಿಶ್ಲೇಷಣಾತ್ಮಕ ಚರ್ಚೆಯನ್ನು ನಡೆಸುವುದು.
- ನಾಟಕದ ಸಾಮಾಜಿಕ ಪ್ರಾಧಾನ್ಯತೆಯನ್ನು ತಿಳಿಯುವುದು.

**ಆಶಯ/ತಿಳುವಳಿಕೆ**

- ನಾಟಕ ಪ್ರಾರಂಭಿಸಿ ಕೊನೆಯವರೆಗಿನ ಸಮಯವು ನಿರಂತರ ಅಭಿನಯ ಕಲೆಯಾಗಿದೆ.
- ನಿರ್ದಿಷ್ಟ ಸಂದರ್ಭಗಳಲ್ಲಿ ವ್ಯವಹರಿಸುವ ಕೆಲಸ ಸಿನಿಮಾದಲ್ಲಿ ನಟನೊಬ್ಬ ಮಾಡುತ್ತಾನೆ.
- ಸಂಕಲನದ ಸಮಯದಲ್ಲಿ ಪರಸ್ಪರ ಸಂಬಂಧವಿರುವ ಸಿನಿಮಾಗಳು ರೂಪುಗೊಳ್ಳುತ್ತವೆ.
- ವೇದಿಕೆಯಲ್ಲೂ, ಕ್ಯಾಮರಗಳ ಮುಂಭಾಗದಲ್ಲಿಯೂ ಇರುವ ಅಭಿನಯ ವ್ಯತ್ಯಾಸಗಳನ್ನು ತಿಳಿಯುದಕ್ಕಿರುವ ನೈಪುಣ್ಯ.
- ನಾಟಕ, ಸಿನಿಮಾ ಎಂಬಿವುಗಳ ಪ್ರದರ್ಶನವು ಎಲ್ಲಾ ರೂಪಗಳಿಗೆ ಸಹಾಯ ಮಾಡಲು ಸಾಧ್ಯವಿದೆ.
- ಕಲೆಯ ಕುರಿತಾದ ಸಾಮಾನ್ಯ ಮತ್ತು ವಿಶೇಷವಾದ ತಿಳುವಳಿಕೆಗಳು ನಾಟಕ ಸಿನಿಮಾಗಳನ್ನು ರೂಪುಗೊಳಿಸಲು ಸಹಾಯಕರವಾಗುವುದು.
- ಕಲೆಗಳನ್ನು ನಾಟಕ, ಸಿನಿಮಾ ಎಂಬಿವುಗಳಲ್ಲಿ.
- ಎಲ್ಲಾ ಸೃಜನಾತ್ಮಕ ಸೃಷ್ಟಿಗಳು ಆಸ್ವಾದಕನ ಮೌಲ್ಯನಿರ್ಣಯದ ಮೂಲಕ ಪೂರ್ಣಗೊಳ್ಳುವುದು.
- ಆಸ್ವಾದನಾ ಸಾಮರ್ಥ್ಯ.
- ನಿರೂಪಣೆ ರಚನಾ ನೈಪುಣ್ಯ.

### ನಾಟಕ ಮತ್ತು ಸಿನಿಮಾಭಿನಯ

ಅಂಗಚಲನೆ, ಮಾತುಗಾರಿಕೆ, ಸಾತ್ವಿಕ, ಆಹಾರ್ಯಂ ಎಂಬ ಚತುರ್ವಿಧಾಭಿನಯ ರೀತಿಯಾಗಿ ವೇದಿಕೆಯ ಮೇಲೆ ಪ್ರದರ್ಶಿಸುವ ನಟ ಮತ್ತು ಬೆಳ್ಳಿತೆರೆಯಲ್ಲಿ ಕಾಣುವ ನಟರಿಬ್ಬರೂ ನಿರ್ವಹಿಸುತ್ತಿದ್ದರೂ ವ್ಯತ್ಯಸ್ಥವಾದ ಅನುಭವಗಳ ಮೂಲಕ ಇಬ್ಬರು ಸಾಗುತ್ತಾರೆ. ನಾಟಕದ ಪೂರ್ತೀಕರಣ ವೇದಿಕೆಯಲ್ಲಿ ಪ್ರದರ್ಶನವಾದಾಗ ನಾಟಕ ನಟನು ಪ್ರೇಕ್ಷಕರ ಎದುರು ಬದಲಾಗುತ್ತಾ ಬರುವ ಸಂದರ್ಭಗಳಿಗನುಸರಿಸಿ ಮಿಂಚಿಮಾಸುವ ಭಾವ ಪ್ರಕಟನೆಗಳೊಂದಿಗೆ ಕಥಾಪಾತ್ರಗಳನ್ನು ಜೀವಂತವಾಗಿ ಅಭಿನಯಿಸಬೇಕಾಗಿದೆ. ಒಂದು ಕಾಲದಲ್ಲಿ (Time) ಒಂದು ಸ್ಥಳದಲ್ಲಿ (Space) ನಡೆಯುವ ಘಟನೆಗಳು ನಿರ್ದಿಷ್ಟವಾದ ವೇದಿಕೆಯಲ್ಲಿ ಅದರ ಚೌಕಟ್ಟಿನಲ್ಲಿ ಅಭಿನಯಿಸಿ ತೋರಿಸಬೇಕು– ಎಂಬ ಮಹತ್ತರವಾದ ಜವಾಬ್ದಾರಿ ನಾಟಕ ನಟನಿಗಿದೆ. ಆದರೆ ಸಿನಿಮಾ ಹಲವು ಸ್ಥಳಗಳಲ್ಲಿ (Location) ಚಿತ್ರೀಕರಿಸಬಹುದಾದ ಹಲವು ಕಾಲಗಳಲ್ಲಿ ನಡೆಯುವ ಘಟನೆಗಳ ವಿವಿಧ ಭಾವಗಳನ್ನು ಸಿನಿಮಾ ನಟ ಅಭಿನಯಿಸುತ್ತಾನೆ. ಸಿನಿಮಾದಲ್ಲಿ ನಟನು, ಅಭಿನಯಕ್ಕೊ, ಘಟನೆಗೋ ಮುಂದುವರಿಕೆ ಇರುವುದಿಲ್ಲ. ಸಿನಿಮಾದ ಮುಂದುವರಿಕೆ ಮತ್ತು ಬೆಳವಣಿಗೆ ಇರುವುದು ಚಿತ್ರಸಂಯೋಜನೆಯ ಹಂತಗಳಲ್ಲಿ ಮಾತ್ರ.

ಎಲ್ಲಾ ಪ್ರೇಕ್ಷಕರಿಗೆ ಅರ್ಥವಾಗು ರೀತಿಯಲ್ಲಿ ಭಾವನಾತ್ಮಕ ಅಭಿನಯವನ್ನು ನಿರೀಕ್ಷಿಸುವಾಗ ಸಿನಿಮಾ ನಟನು ಸಂದರ್ಭಕ್ಕನುಸರಿಸಿ ವರ್ತಿಸಿದರೆ ಸಾಕು, ಪ್ರೇಕ್ಷಕನಿಂದ ನಟನಿಗಿರುವ ದೂರ ಕ್ಯಾಮರ ನಿಶ್ಚಯಿಸುತ್ತದೆ. ಪ್ರೇಕ್ಷಕನಿಗೂ ನಾಟಕ ನಟನಿಗೂ ಇರುವ ದೂರ ಯಾವಾಗಲು ಸ್ಥಿರವಾಗಿರುವುದು.

ನಾಟಕನಟನು ಕಥೆಯ ಮತ್ತು ಕಥಾಪಾತ್ರದ ಪರಿಣಾಮಗಳನ್ನು ಪ್ರತಿನಿಮಿಷ ತಿಳಿಸುತ್ತಾ ಬದಲಾಗುತ್ತಾ ಇರುತ್ತಾನೆ. ಕಥೆಯೋ ಕಥಾಪಾತ್ರದ ವಿಶೇಷತೆಯೋ ತಿಳಿಯದೆಯೇ ನಟನು ಸಿನಿಮಾದಲ್ಲಿ ಅಭಿನಯಿಸಲು ಸಾಧ್ಯವಿದೆ. ನಿರ್ದೇಶಕನ ನಿರ್ದೇಶನಗಳನ್ನು ಪಾಲಿಸಿದರೆ ಮಾತ್ರ ಸಾಕು.

**ಚಟುವಟಿಕೆ**

- ಅಭಿನಯ ಸಿನಿಮಾದಲ್ಲಿ ಮತ್ತು ನಾಟಕದಲ್ಲಿ ಎಂಬ ಟಿಪ್ಪಣಿ ಚರ್ಚಿಸುವರು. ಪಾಠಭಾಗದಲ್ಲೋ ಹೊರಗೋ ಇರುವ ಒಂದು ಭಾಗ/ಆಶಯ ಪ್ರದರ್ಶನಕ್ಕಾಗಿ ಆರಿಸುವರು.
  - ಒಂದು ಗುಂಪು ಅದನ್ನು ನಾಟಕ ಮಾಡಿ ಪ್ರದರ್ಶಿಸಲು ಅಣಿಯಾಗುವರು.
  - ಇನ್ನೊಂದು ಗುಂಪು ಸಿನಿಮಾ ಮಾಡಿ ಪ್ರದರ್ಶಿಸಲು ತಯಾರಿ ನಡೆಸುವರು.
  - ನಿರ್ದಿಷ್ಟ ಸಮಯದ ನಂತರ ಎರಡರ ಪ್ರದರ್ಶನವೂ ಮೌಲ್ಯನಿರ್ಣಯವೂ ನಡೆಸುವುದು.
  - ಮೊದಲ ಟಿಪ್ಪಣಿ ಪುನಃ ಚರ್ಚಿಸುವುದು

    ಅಭಿನಯ

    ಸೃಜನಾತ್ಮಕತೆ

ನಟ

ನಿರ್ದೇಶಕ

ತಂತ್ರಜ್ಞಾನ

ನಾಟಕ/ಸಿನಿಮಾ ಪ್ರದರ್ಶನದ ಡೋಕ್ಯುಮೆಂಟೇಷನ್ ಡಿಜಿಟಲ್ ಆಗಿ ತಯಾರಿಸುವುದು. ಇದಕ್ಕಾಗಿ ಫೋಟೋಗಳನ್ನು ಉಪಯೋಗಿಸಬಹುದು.

*ಚಟುವಟಿಕೆ 2*

**ಚಲನಚಿತ್ರ ಕಾರ್ಯಗಾರ**

ಕಿರುಚಿತ್ರಗಳನ್ನು ತಯಾರಿಸಲಿರುವ ಪ್ರಾಯೋಗಿಕ ತರಬೇತಿಯಾಗಿದೆ ಈ ಚಟುವಟಿಕೆಯ ಉದ್ದೇಶ. ಒಂದು ಆಶಯವನ್ನು ದೃಶ್ಯರೂಪದಲ್ಲಿ ಮಂಡಿಸುವಾಗ ಸಿನಿಮಾವಾಗುತ್ತದೆ. ಹಲವು ತಾಂತ್ರಿಕ ಹಂತಗಳ ಮೂಲಕ ಸಾಗಿ ಒಂದು ಸಿನಿಮಾ ಪ್ರೇಕ್ಷಕನ ಮುಂದೆ ಬರುವುದು. ಯಾವುದಾದರು ಒಂದು ಘಟನೆಯ ಚಿತ್ರೀಕರಣ ಸಿನಿಮಾ ಆಗದು. ಸ್ಪಷ್ಟವಾದ ಒಂದು ಆಶಯ ಮನಮುಟ್ಟುವಂತೆ ಮಾಡುವ ದೃಶ್ಯಗಳ ಕ್ರಮೀಕರಣವಾಗಿದೆ ಸಿನಿಮಾ, ಶಬ್ದ, ಸಂಗೀತಗಳು ಯೋಗ್ಯವಾದ ರೀತಿಯಲ್ಲಿ ಮೇಳೈಸುವಾಗ ಸಿನಿಮ ಪೂರ್ತಿಯಾಗುವುದು. ಒಂದು ಆಶಯವನ್ನು ಸಿನಿಮಾಕ್ಕೆ ಹೊಂದುವಂತೆ ದೃಶ್ಯಾವಿಷ್ಕಾರ ಮಾಡಿ ಚಿತ್ರೀಕರಿಸಿ ಸ್ಪಷ್ಟವಾಗಿ ಸಂಕಲನ ಮಾಡಿ ಶಬ್ದ ಸಂಯೋಜಿಸುವ ಚಟುವಟಿಕೆಗಳ ಮೂಲಕ ಮಗು ಹಾದು ಹೋಗುವ ರೀತಿಯಲ್ಲಿ ಈ ಚಟುವಟಿಕೆಗಳನ್ನು ಕ್ರಮೀಕರಿಸಲಾಗಿದೆ. ಚಲನಚಿತ್ರ ಕಾರ್ಯಗಾರಕ್ಕೆ ಸರಿಯಾದ ಯೋಜನೆಯೊಂದಿಗೆ ಒಂದು ದಿನದ ಕಾರ್ಯಕ್ರಮಗಳನ್ನು ನಡೆಸುವುದು ಒಳ್ಳೆಯದು. 4–5 ನಿಮಿಷ ದೃಶ್ಯವಿರುವ ಕಿರುಕಥಾ ಚಿತ್ರಗಳನ್ನು ತಯಾರಿಸುವುದು ಒಳ್ಳೆಯದು.

*ಹಂತ–1 ಚಿತ್ರಕಥೆ ರಚನೆ*

ಆಯ್ಕೆ ಮಾಡಿದ ಆಶಯವನ್ನು ಗುಂಪಿನಲ್ಲಿ ಚರ್ಚಿಸುವುದು. ಆಶಯವನ್ನು ಘಟನೆಗಳಾಗಿ ಮಾಡಿ ಕ್ರಮೀಕರಿಸಿ ಬರೆಯುವುದು. ಪ್ರತಿಯೊಂದು ಘಟನೆಯನ್ನು ದೃಶ್ಯಗಳಾಗಿ ಬರೆಯುವರು. ಪ್ರತಿಯೊಂದು ದೃಶ್ಯಕ್ಕೆ ಅಗತ್ಯವಿರುವ ಕಥಾಪಾತ್ರಗಳನ್ನೊಳಗೊಂಡ ಸ್ಟೋರಿ ಬೋರ್ಡ್ ತಯಾರಿಸುವುದು.

*ಚಿತ್ರಕಥೆ ರಚನೆ*

ಆಶಯವನ್ನು ದೃಶ್ಯಗಳನ್ನಾಗಿ ಮಾಡುವ ಚಟುವಟಿಕೆಯಾಗಿದೆ ಚಿತ್ರಕಥೆ ರಚನೆ. ಸಿನಿಮಾದ ದೃಶ್ಯಗಳನ್ನು ಶಬ್ದಗಳನ್ನು ಸಮಾನಾಂತರವಾಗಿ ಸೂಚಿಸಿ ಚಿತ್ರಕಥೆ ತಯಾರಿಸಬಹುದು. ಪಾಠಭಾಗದ ಕಥೆಗಳನ್ನು ಚಿತ್ರಕಥೆ ತಯಾರಿಸಲು ಪರಿಗಣಿಸಹುದು. ಚಿತ್ರಕಥೆ ರಚನೆಯ ಪೂರ್ವಭಾವಿಯು ಪ್ರಸಿದ್ಧವಾದ ಕೆಲವು ಚಿತ್ರಗಳನ್ನು ತರಗತಿಯಲ್ಲಿ ಓದಿ ಚರ್ಚಿಸಬೇಕು. ಸಾಹಿತ್ಯಕೃತಿಯಿಂದ ಭಿನ್ನವಾಗಿ ಪ್ರತ್ಯಕ್ಷವಾದ ದೃಶ್ಯಗಳು ವಿವರಣೆಯನ್ನು ಸರಳಗೊಳಿಸುತ್ತದೆ. ಕಥಾಪಾತ್ರಗಳ ಮನೋಭಾವಗಳನ್ನು ಪ್ರಕ್ರಿಯೆಗಳನ್ನು ವಿಭಿನ್ನ ಚಟುವಟಿಕೆಗಳ ಮೂಲಕ ದೃಶ್ಯಾವಿಷ್ಕಾರ ಮಾಡಬೇಕು.

ಚಿತ್ರಕಥೆಗೆ ಸಂಬಂಧಿಸಿದ ಚರ್ಚೆಯ ನಂತರ ಮಕ್ಕಳನ್ನು ಎರಡು ಗುಂಪುಗಳನ್ನಾಗಿ ಮಾಡಿ ಯಾವುದಾದರು ಆಶಯದ ಕುರಿತು ಚಿತ್ರಕಥೆ ತಯಾರಿಸಲಿ. ವಿಷಯಗಳನ್ನು ಆಯ್ಕೆ ಮಾಡುವುದರಲ್ಲಿ ಅಧ್ಯಾಪಕ ಮುಖ್ಯಪಾತ್ರ ವಹಿಸಬೇಕು. ತಯಾರಿಸಿದ ಚಿತ್ರಗಳನ್ನು ತರಗತಿಯಲ್ಲಿ ಮಂಡಿಸಿ ಚಿತ್ರೀಕರಿಸುವಾಗ ಎದುರಿಸಬಹುದಾದ ತಾಂತ್ರಿಕ ಸಮಸ್ಯೆಗಳನ್ನು ಮತ್ತು ಆಶಯ ಸ್ಪಷ್ಟತೆಗೆ ಸಂಬಂಧಿಸಿ ವಿಚಾರಗಳನ್ನು ಕಂಡುಕೊಂಡು ಉತ್ತಮಪಡಿಸಬೇಕು. ಶಾಲೆಯ ಒಳಗೆ ಮತ್ತು ಹೊರಗಿನಿಂದ ಲಭಿಸುವ ಸಂಪನ್ಮೂಲಗಳನ್ನು ಉಪಯೋಗಿಸಿ ಚಿತ್ರೀಕರಿಸುವ ರೀತಿಯಲ್ಲಿ ಚಿತ್ರಕಥೆ ತಯಾರಿಸಿದರೆ ಚಿತ್ರೀಕರಣಕ್ಕೆ ಸುಲಭವಾಗಬಹುದು. ಚಟುವಟಿಕೆಯ ಮುಂದುವರಿಕೆಯು ಸೂಚಿಸುವ ಯಾವುದಾದರು ದೃಶ್ಯಗಳಿಂದ ಚಟುವಟಿಕೆಯನ್ನು ಸಂಪೂರ್ಣವಾಗಿ ತಿಳಿಯುವ ಪ್ರೇಕ್ಷಕನ ಸಾಮರ್ಥ್ಯ, ದೃಶ್ಯಗಳನ್ನು ರೂಪಿಸುವುದರಲ್ಲಿ ಪರಿಗಣಿಸಬೇಕು. ಒಂದು ಮಗು ಮನೆಯಿಂದ ಹೊರಟು ಶಾಲೆಗೆ

ತಲುಪುವುದನ್ನು ತೋರಿಸಲು ಪೂರ್ತಿ ದೃಶ್ಯಗಳು ಬೇಕೆಂದಿಲ್ಲ. ಬದಲಾಗಿ ಶಾಲೆಗೆ ರೆಡಿಯಾಗುವುದು, ಹೊರಡುವುದು ಮತ್ತು ಶಾಲೆಗೆ ತಲುಪುವ ದೃಶ್ಯಗಳೊಂದಿಗೆ ಕಾರ್ಯ ಸಾಧಿಸಬಹುದು.

ಬರೆದು ಚರ್ಚೆಯ ನಂತರ ಪರಿಷ್ಕರಿಸಿ ಪುನಃ ಬರೆದು ಚಿತ್ರಕಥೆ ಪೂರ್ತೀಕರಿಸಬೇಕಾಗಿದೆ. ತಯಾರಿಸಿದ ಚಿತ್ರಕಥೆಯನ್ನು ಆಧಾರವಾಗಿರಿಸಿ ಚಿತ್ರೀಕರಣವಾಗಿದೆ ಮುಂದಿನ ಹಂತ.

*ಸಿನಿಮಾ ಚಿತ್ರೀಕರಣ*

ಸಿನಿಮಾ ಚಿತ್ರೀಕರಣಕ್ಕೆ ಯೋಗ್ಯವಾದ ಒಬ್ಬ ಛಾಯಾಗ್ರಾಹಕನ ಸಹಾಯ ಪಡೆದುಕೊಳ್ಳಬೇಕು. ಅವರ ಸಹಾಯದೊಂದಿಗೆ ಮೊದಲೇ ತಯಾರಿಸಿದ ದೃಶ್ಯಗಳನ್ನು ಕ್ರಮೀಕರಿಸಿ ಪ್ರಾಯೋಗಿಕ ಒತ್ತು ಕೊಟ್ಟು ಪರಿಷ್ಕರಣೆ ಮಾಡಬೇಕು. ಸಾಕಷ್ಟು ಯೋಜನೆಯೊಂದಿಗೆ ಚಿತ್ರೀಕರಣ ಆರಂಭಿಸಬೇಕು. ವಿವಿಧ ರೀತಿಯ ಕ್ಯಾಮರಗಳು, ಚಿತ್ರೀಕರಣದ ತಾಂತ್ರಿಕ ಸಲಕರಣೆಗಳು, ಕ್ಯಾಮೆರಗಳ ವಿನ್ಯಾಸ, ವಿವಿಧ ತರದ ಶೋಟುಗಳು, ಶೋಟ್‌ಗಳ ಅರ್ಥ ಮತ್ತು ಧನ್ಯಾತ್ಮಕತೆ ಮೊದಲಾದ ಕಾರ್ಯಗಳು ಸಿನಿಮಾ ವಿದಗ್ಧರ ಪಾಲ್ಗೊಳ್ಳುವಿಕೆಯೊಂದಿಗೆ ತಿಳಿಯಬಹುದು. ಚಿತ್ರೀಕರಣ ಸಮಯದಲ್ಲಿ ಮೊದಲೇ ತಯಾರಿಸಿದ ಚಿತ್ರಕಥೆಯ ಸಮಸ್ಯೆಗಳು ಮಕ್ಕಳಿಗೆ ತಿಳಿಯಬಹುದು.

**ಹಂತ 2 ಸ್ಟೋರಿ ಬೋರ್ಡ್**

ಒಂದು ಸ್ಥಳದಲ್ಲಿ ಹಲವು ಕಾಲಗಳಲ್ಲಿ ನಡೆಯುವ ದೃಶ್ಯಗಳನ್ನು ಗುರುತಿಸುವುದು. ಪ್ರತಿಯೊಂದು ದೃಶ್ಯದ ವಿವರಣೆಗಳನ್ನೊಳಗೊಂಡ ಸ್ಟೋರಿ ಬೋರ್ಡ್ ತಯಾರಿಸುವುದು.

**ಹಂತ–3 ಚಿತ್ರೀಕರಣ**

ಸ್ಟೋರಿ ಬೋರ್ಡ್‌ಗೆ ಹೊಂದಿಕೊಂಡು ಚಿತ್ರೀಕರಿಸುವ ಸ್ಥಳಗಳನ್ನು ಗುರುತಿಸುವುದು. ಪ್ರತಿಯೊಂದು ಸ್ಥಳದಲ್ಲಿರುವ ಎಲ್ಲಾ ದೃಶ್ಯಗಳನ್ನು ಪೂರ್ತೀಕರಿಸುವುದು.

*ಚಿತ್ರ ಸಂಯೋಜನೆ*

ಚಿತ್ರ ಸಂಯೋಜನೆ ಅಥವಾ ಎಡಿಟಿಂಗ್ ಸಿನಿಮಾಕ್ಕೆ ಸಂಬಂಧಿಸಿ ಬಹಳ ಪ್ರಧಾನವಾದುದು. ವಿದಗ್ಧನಾದ ಸಂಕಲಕಾರನೊಬ್ಬನ ಸಹಾಯವನ್ನು ಈ ಹಂತದಲ್ಲಿ ಉಪಯೋಗಿಸಿಕೊಳ್ಳಬಹುದು. ಅವರ ಸೂಚನೆಗನುಸರಿಸಿ ಚಿತ್ರೀಕರಿಸಿದ ದೃಶ್ಯಗಳನ್ನು ಪುನಃ ಕ್ರಮೀಕರಿಸಿ ಪ್ರೇಕ್ಷಕನ ದೃಷ್ಟಿಯಲ್ಲಿ ಶೋಟ್‌ಗಳ ದೀರ್ಘತೆ ಅಗತ್ಯಕ್ಕನುಸಾರವಾಗಿ ಮಾಡಬೇಕು. ಕಥೆಯ/ಘಟನೆಗಳ ಮುಂದುವರಿಕೆ ಗಟ್ಟಿಗೊಳಿಸುವ ರೀತಿಯಲ್ಲಿ ವಿವಿಧ ದೃಶ್ಯಗಳನ್ನು ಕತ್ತರಿಸಿಯೂ ಜೋಡಿಸಿಯೂ ಮಾಡುವ ಸಂಕಲನ ಪ್ರಕ್ರಿಯೆಯು ತಾಂತ್ರಿಕ ನೈಪುಣ್ಯ ಇರಬೇಕಾದ ಕಲೆಯಾಗಿದೆ. ಮಕ್ಕಳು ಚಿತ್ರೀಕರಿಸಿದ ದೃಶ್ಯಗಳಿಂದ ಅವರ ಅಭಿಪ್ರಾಯಗಳನ್ನು ಪರಿಗಣಿಸಿಕೊಂಡು ದೃಶ್ಯಗಳನ್ನು ಸೇರಿಸಬೇಕು ಅಥವಾ ಬಿಡಬೇಕು. ಚಿತ್ರೀಕರಿಸಿದ ಎಲ್ಲಾ ದೃಶ್ಯಗಳು ಸಿನಿಮಾಕ್ಕೆ ಅಗತ್ಯವಿಲ್ಲವೆಂದು ಈ ಹಂತದಲ್ಲಿ ಮಕ್ಕಳಿಗೆ ಅರ್ಥವಾಗಬಹುದು.

ಚಿತ್ರಸಂಯೋಜನೆ ನಿರ್ವಹಿಸಲಿರುವ ವಿವಿಧ ಕಂಪ್ಯೂಟರ್ ಸೋಫ್ಟ್‌ವೇರ್‌ಗಳನ್ನು ಮಕ್ಕಳಿಗೆ ಪರಿಚಯಿಸಬೇಕು. ಉತ್ತಮವಾಗಿ ಈ ಕಾರ್ಯಗಳು ನೆರವೇರಬೇಕಾದರೆ ನಿಖರವಾದ ತರಬೇತಿ ಅಗತ್ಯವಾದರೂ ಇದಕ್ಕೆ ಸಂಬಂಧಿಸಿ ಸಾಮಾನ್ಯ ಜ್ಞಾನ, ತಾಂತ್ರಿಕ ಹಂತಗಳು ಮಕ್ಕಳಿಗೆ ಅರ್ಥೈಸಲು ಈ ಹಂತದಲ್ಲಿ ಸಾಧ್ಯವಾಗುವುದು. ಶಾಲೆಗಳಲ್ಲಿರುವ ಹೇಂಡಿಕ್ಯಾಮೆರದಲ್ಲಿ ಚಿತ್ರೀಕರಿಸುವ ದೃಶ್ಯಗಳನ್ನು ಎಡಿಟ್ ಮಾಡುವ ಸಾಫ್ಟ್‌ವೇರ್‌ಗಳನ್ನು ಮಕ್ಕಳಿಗಾಗಿ ಉಪಯೋಗಿಸಬಹುದು.

### *ಹಂತ 4 ಎಡಿಟಿಂಗ್*

ಚಿತ್ರಕಥೆಗೆ ಅನುಸಾರವಾಗಿ ದೃಶ್ಯಗಳನ್ನು ಪುನಃ ಕ್ರಮೀಕರಿಸಿ ಸಂಗೀತ, ಇಫೆಕ್ಟ್ ಮೊದಲಾದವುಗಳನ್ನು ಸೇರಿಸಿ ಚಿತ್ರಸಂಯೋಜನೆ ಪೂರ್ತಿಗೊಳಿಸುವುದು.

### *ಶಬ್ದ ಸಂಯೋಜನೆ (ಡಬ್ಬಿಂಗ್)*

ಚಿತ್ರಸಂಯೋಜನದ ನಂತರ ಸಿನಿಮಾಕ್ಕೆ ಅಗತ್ಯವಾದ ಸಂಭಾಷಣೆಗಳನ್ನು ನೀಡಲಾಗುತ್ತದೆ. ಅಭಿನಯಿಸಿದವರೇ ಶಬ್ದ ನೀಡಬೇಕೆಂದಿಲ್ಲ. ದೃಶ್ಯಗಳಿಗೆ ಹೊಂದಿಕೊಂಡು ತಯಾರಿಸಿದ ಸಂಭಾಷಣೆಗಳು ಉತ್ತಮ ಧ್ವನಿ ಇರುವ ಮಕ್ಕಳಿಂದ ಹೇಳಿಸಿ ಓಡಿಯೋ ಎಡಿಟಿಂಗ್ ಸ್ಟುಡಿಯೋದ ಸಹಾಯ ಪಡೆದುಕೊಳ್ಳಬಹುದು. ಅಗತ್ಯವಿರುವ ಉಪಕರಣಗಳು ಮತ್ತು ಹೊರಗಿನ ಶಬ್ದ ಅಡಚಣೆಯಾಗದಂತಹ ಒಂದು ಕೋಣೆಯಿದ್ದರೆ ಶಾಲೆಯಲ್ಲಿಯೇ ಡಬ್ಬಿಂಗ್ ಸ್ಟುಡಿಯೋ ಸಜ್ಜೀಕರಿಸಬಹುದು.

ಸೂಕ್ತವಾದ ಹಿನ್ನೆಲೆ ಸಂಗೀತ, ಹಾಗೂ ಇತರ ಶಬ್ದಗಳನ್ನು ಈ ಹಂತದಲ್ಲಿ ಸಿನಿಮಾಕ್ಕೆ ಸೇರಿಸಲಾಗುವುದು.

### *ಟೈಟಲ್ಸ್*

ಚಲನಚಿತ್ರದ ಟೈಟಲ್ಸ್ ತಯಾರಿಸುವುದು ಒಂದು ಚಟುವಟಿಕೆಯಾಗಿದೆ. ಸಿನಿಮಾದ ಹೆಸರು, ನಿರ್ದೇಶನ, ನಿರ್ವಹಣೆ, ನಿರ್ಮಾಪಕ, ಸಹಾಯಕರು ಹೀಗೆ ಸಿನಿಮಾ ತಯಾರಿಯಲ್ಲಿ ಸಹಕರಿಸಿದ ಎಲ್ಲರ ಹೆಸರು ಸಿನಿಮಾದ ಪ್ರಾರಂಭ ಹಾಗೂ ಕೊನೆಯಲ್ಲಿ ನೀಡಬಹುದು. ವಿವಿಧ ಗ್ರಾಫಿಕ್ ಸಾಫ್ಟ್‌ವೇರ್‌ಗಳ ಉಪಯೋಗದಿಂದ ಇದನ್ನು ಮಾಡಬಹುದು.ಕನ್ನಡ ಭಾಷೆಯಲ್ಲಿ ಮಾಡಿದ ಸಿನಿಮಾ ಇತರ ಭಾಷಿಕರಿಗೆ ವೀಕ್ಷಿಸುವುದಾಗಿ ಇಂಗ್ಲೀಷನ್ನೂ ಜೊತೆ ಸೇರಿಸಿ ನೀಡಬಹುದು. ಇದು ಕೂಡಾ ಇದೇ ಹಂತದಲ್ಲಿ ಮಾಡಬೇಕಾಗುತ್ತದೆ.

### *ಸಿನಿಮಾ ಪ್ರದರ್ಶನ*

ವಿವಿಧ ಹಂತಗಳಲ್ಲಿ ದಾಟಿಹೋಗಿ ರೂಪುಗೊಂಡ ಸಿನಿಮಾ ಶಾಲಾ ಮಕ್ಕಳಿಗಾಗಿ ಪ್ರದರ್ಶಿಸಬಹುದು. ಪ್ರೇಕ್ಷಕರಿಂದ ಲಭಿಸುವ ಅಭಿಪ್ರಾಯಗಳನ್ನೂ, ಸೂಚನೆಗಳನ್ನೂ ಸಿನಿಮಾ ತಯಾರಿಯ ಮುಂದಿನ ಚಟುವಟಿಕೆಗಳಲ್ಲಿ ಗಮನಿಸಿಕೊಳ್ಳಬಹುದು. ಸಿನಿಮಾ ನಿರ್ಮಾಣದ ವಿವಿಧ ಹಂತಗಳಲ್ಲಿ ಭಾಗವಹಿಸಿದ ಮಕ್ಕಳಿಗೆ ಅವರ ಅನುಭವಗಳನ್ನು ಹಂಚಲು ಅವಕಾಶ ನೀಡಬಹುದು.

# ಅನುಬಂಧ – 1 : ಚಟುವಟಿಕಾ ಕ್ಯಾಲೆಂಡರ್

## ಚಿತ್ರಕಲೆ – ಎಂಟನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಪ್ರಕೃತಿಯನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಿ ಚಿತ್ರಮಾಡುವ ಸಾಮರ್ಥ್ಯ ಪಡೆಯುವುದು. | 2 |
| ಜುಲೈ | 2 | ಪ್ರಕೃತಿ ಸ್ನೇಹ, ಸೌಂದರ್ಯ ದರ್ಶನ ಎಂಬಿವುಗಳನ್ನು ದೃಢಗೊಳಿಸುವುದು. | 2 |
| ಆಗೋಸ್ಟ್ | 3 | ಚಿತ್ರರಚನೆಯಲ್ಲಿ ನೆರಳು ಮತ್ತು ಬೆಳಕಿನ ಪ್ರಾಧಾನ್ಯತೆಯನ್ನು ಆಳವಾಗಿ ತಿಳಿಯುವುದು. | 2 |
| ಸಪ್ಟೆಂಬರ್ | 4 | ಕೇರಳೀಯ ಕಲಾ ಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಯುವುದು. | 2 |
| ಒಕ್ಟೋಬರ್ | 5 | ಮನುಷ್ಯ ಆಕೃತಿಗಳ ಅನುಪಾತಿಕ ಚಿತ್ರೀಕರಣವನ್ನು ಭಾವ ವೈವಿಧ್ಯತೆಯೊಂದಿಗೆ ರಚಿಸುವುದು. | 2 |
| ನವೆಂಬರ್ | 6 | ಸಾಮಾಜಿಕ ಒಳಿತು ಮತ್ತು ಕೆಡುಕುಗಳನ್ನು ಆಧಾರವಾಗಿರಿಸಿ ಶೈಲಿಯುಕ್ತ ರಚನಾತಂತ್ರಗಳನ್ನೊಳಗೊಂಡ ಚಿತ್ರಗಳನ್ನು ರಚಿಸುವುದು. | 2 |
| ಡಿಸೆಂಬರ್ | 7 | ಕಂಪ್ಯೂಟರ್ ಗ್ರಾಫಿಕ್ಸ್, ಆನಿಮೇಷನ್, ಎಡಿಟಿಂಗ್ ಸಾಧ್ಯತೆಗಳನ್ನು ತಿಳಿಯುವುದು. | 2 |
| ಜನವರಿ | 8 | ತ್ರಿಮಾನ ಕಲಾರೂಪಗಳನ್ನು ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ರಚಿಸುವುದು. | 2 |
| ಫೆಬ್ರವರಿ | 9 | ಭಾವನಾತ್ಮಕ ಸ್ವತಂತ್ರ ಚಿತ್ರ ರಚನೆಯ ಮೂಲಕ ಆಶಯ ಪ್ರಕಟಿಸುವುದು. | 2 |
| ಮಾರ್ಚ್ | 10 | ಕಲಾಸೃಷ್ಟಿಗಳನ್ನು ಮತ್ತು ಕಲಾ ನಿರೂಪಣೆಗಳನ್ನು ಸಂಗ್ರಹಿಸುವುದು. | 2 |

# ಚಿತ್ರಕಲೆ – ಒಂಭತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಆಶಯಗಳನ್ನು ನಿರೀಕ್ಷಣೆ ಮಾಡಿ ಸೃಜನಾತ್ಮಕವಾದ ಚಿತ್ರಗಳನ್ನು ರಚಿಸುವುದು. | 2 |
| ಜುಲೈ | 2 | ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿಮರ್ಶಾತ್ಮಕವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗುವುದು. | 2 |
| ಅಗೋಸ್ಟ್ | 3 | ಚಿತ್ರರಚನೆಯಲ್ಲಿ ನೆರಳು ಮತ್ತು ಬೆಳಕಿನ ಪ್ರಾಧಾನ್ಯತೆ ಆಳವಾಗಿ ಅರ್ಥಮಾಡಿಕೊಳ್ಳುವುದು. | 2 |
| ಸಪ್ಟೆಂಬರ್ | 4 | ಮನುಷ್ಯಾಕೃತಿಯ ಚಿತ್ರಗಳನ್ನು ರಚಿಸಿ ಬಣ್ಣ ನೀಡುವುದು. | 2 |
| ಒಕ್ಟೋಬರ್ | 5 | ಚಿತ್ರವನ್ನು ನಿರೀಕ್ಷಣೆ ಮಾಡಿ ಚಿತ್ರ ರಚಿಸಲು ಉಪಯೋಗಿಸಿದ ಮಾಧ್ಯಮಗಳನ್ನು ತಿಳಿಯುವುದು. | 2 |
| ನವೆಂಬರ್ | 6 | ಚಿತ್ರ ಶಿಲ್ಪಕಲಾ ಚರಿತ್ರೆ ತಿಳಿಯುವುದು. ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ತ್ರಿಮಾನ ರೂಪದ ಚಿತ್ರಗಳನ್ನು ರಚಿಸುವುದು. | 2 |
| ಡಿಸೆಂಬರ್ | 7 | ಆಧುನಿಕ ತಾಂತ್ರಿಕತೆಯನ್ನು ಉಪಯೋಗಿಸಿ ಚಿತ್ರ ರಚನೆ ನಡೆಸುವುದು. | 2 |
| ಜನವರಿ | 8 | ಕ್ಯಾಮೆರಾ, ವೀಡಿಯೋ ಕ್ಯಾಮೆರ ಎಂಬಿತ್ಯಾದಿಗಳನ್ನು ಉಪಯೋಗಿಸಿ ಹೃಸ್ವಚಿತ್ರ ನಿರ್ಮಿಸುವುದು. | 2 |
| ಫೆಬ್ರವರಿ | 9 | ಚಿಂತನೆಗೂ ನಗುವಿಗೂ ಪ್ರೇರಣೆಯಾಗುವ ಆಶಯಗಳಿಗೆ ಒತ್ತು ನೀಡಿ ಸಮಕಾಲಿನ ವಿಷಯಗಳನ್ನೊಳಗೊಂಡ ಕಾರ್ಟೂನ್ ಚಿತ್ರಗಳನ್ನು ರಚಿಸಲು ಸಾಧ್ಯವಾಗುವುದು. | 2 |
| ಮಾರ್ಚ್ | 10 | ಕಲಾಸೃಷ್ಟಿಗಳನ್ನು ಆಸ್ವಾದಿಸಲು ಮತ್ತು ಸಂರಕ್ಷಿಸಲು ಸಾಧ್ಯವಾಗುವುದು. | 2 |

## ಚಿತ್ರಕಲೆ – ಹತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಚಿತ್ರ ಓದಿದ ಮೂಲಕ ವಿಮರ್ಶಾತ್ಮಕವಾಗಿ ಆತ್ಮವಿಶ್ವಾಸದೊಂದಿಗೆ ಪ್ರತಿಕ್ರಿಯಿಸುವುದು. | 2 |
| ಜುಲೈ | 2 | ಸ್ವತಃ ಅಭಿಪ್ರಾಯಗಳನ್ನು ನಿರ್ಧಾರಗಳನ್ನು ವ್ಯಕ್ತಗೊಳಿಸುವುದು. | 2 |
| ಆಗೋಸ್ಟ್ | 3 | ಆಶಯಗಳನ್ನೊಳಗೊಂಡ ಚಿತ್ರಗಳನ್ನು ಶಿಲ್ಪಗಳನ್ನು ರಚಿಸುವುದು. | 2 |
| ಸಪ್ಟೆಂಬರ್ | 4 | ಚಿತ್ರಕಲೆ ಮತ್ತು ಶಿಲ್ಪ ಕಲೆಗಳ ಚರಿತ್ರೆ ತಿಳಿಯುವುದು. | 2 |
| ಒಕ್ಟೋಬರ್ | 5 | ಕಾಲಕ್ಕನುಗುಣವಾಗಿ ಕಲೆಗಳಲ್ಲಿ ಬದಲಾವಣೆಯಾಗುವುದು ಎಂಬುದನ್ನು ತಿಳಿಯುವುದು. | 2 |
| ನವೆಂಬರ್ | 6 | ಚಿತ್ರಕಲೆಗೆ ಸಂಬಂಧಿಸಿದ ಸಾಫ್ಟ್‌ವೇರ್‌ಗಳನ್ನು ಉಪಯೋಗಿಸಿ ರಚನೆಯಲ್ಲಿ ತೊಡಗುವುದು. 2 | |
| ಡಿಸೆಂಬರ್ | 7 | ಸ್ವತಂತ್ರ ರಚನೆಯ ಮೂಲಕ ಸಮಾಜದೊಂದಿಗೆ ಪ್ರತಿಕ್ರಿಯಿಸುವುದು. | 2 |
| ಜನವರಿ | 8 | ಚಿಂತನೆಯನ್ನು ಉದ್ದೀಪನಗೊಳಿಸುವ ಕಾರ್ಟೂನ್‌ಗಳನ್ನು ರಚಿಸುವುದು. | 2 |
| ಫೆಬ್ರವರಿ | 9 | ಫೊಟೋಗ್ರಾಫಿ ಸಾಧ್ಯತೆಗಳನ್ನುಪಯೋಗಿಸಿ ಹ್ರಸ್ವಚಿತ್ರ ನಿರ್ಮಿಸುವುದು. | 2 |

# ಸಂಗೀತ – ಎಂಟನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಅಭಿನಯ ಪ್ರಾಧಾನ್ಯವಿರುವ ಪದ್ಯಗಳನ್ನು ಹಾಡುವುದು. | 2 |
| ಜುಲೈ | 1 | ಅಭಿನಯ ಪ್ರಧಾನ್ಯವಿರುವ ಪದ್ಯಗಳನ್ನು ಹಾಡುವುದು. | 2 |
| ಆಗೋಸ್ಟ್ | 2 | ವಿಭಿನ್ನ ಸಂಗೀತ ಶಾಖೆಗಳಲ್ಲಿರುವ ವಿಭಿನ್ನ ತಾಳಗಳಲ್ಲಿರುವ ಹಾಡುಗಳನ್ನು ಬೆಸೆದು ಮಂಡಿಸುವುದು. | 2 |
| ಸಪ್ಟೆಂಬರ್ | 2 | ವಿಭಿನ್ನ ಸಂಗೀತ ಶಾಖೆಗಳಲ್ಲಿರುವ ವಿಭಿನ್ನ ತಾಳಗಳಲ್ಲಿರುವ ಹಾಡುಗಳನ್ನು ಬೆಸೆದು ಮಂಡಿಸುವುದು. | 2 |
| ಒಕ್ಟೋಬರ್ | 3 | ಪ್ರಾದೇಶಿಕ ಸಂಗೀತೋಪಕರಣವನ್ನು ಪರಿಚಯಿಸುವುದು. ಅವುಗಳ ಕುರಿತು ಪ್ರತಿಕ್ರಿಯೆ ನೀಡುವುದು. | 2 |
| ನವೆಂಬರ್ | 3 | ಪ್ರಾದೇಶಿಕ ಸಂಗೀತೋಪಕರಣವನ್ನು ಪರಿಚಯಿಸುವುದು. ಅವುಗಳ ಕುರಿತು ಪ್ರತಿಕ್ರಿಯೆ ನೀಡುವುದು. | 2 |
| ಡಿಸೆಂಬರ್ | 4 | ಸಂಗೀತ ಕಛೇರಿಗಳಲ್ಲಿ (ಪ್ರದರ್ಶನಗಳಲ್ಲಿ) ಉಪಯೋಗಿಸುವ ಪಕ್ಕವಾದ್ಯಗಳು, ಉಪಪಕ್ಕವಾದ್ಯಗಳ ಕುರಿತು ಟಿಪ್ಪಣಿ ತಯಾರಿಸಿ ಮಂಡಿಸುವುದು. | 2 |
| ಜನವರಿ | 4 | ಸಂಗೀತ ಕಛೇರಿಗಳಲ್ಲಿ (ಪ್ರದರ್ಶನಗಳಲ್ಲಿ) ಉಪಯೋಗಿಸುವ ಪಕ್ಕವಾದ್ಯಗಳು, ಉಪಪಕ್ಕವಾದ್ಯಗಳ ಕುರಿತು ಟಿಪ್ಪಣಿ ತಯಾರಿಸಿ ಮಂಡಿಸುವುದು. | 2 |
| ಫೆಬ್ರವರಿ | 5 | ಹಾಡುಗಳು, ಲಘು ಕೀರ್ತನೆಗಳು, ಭಜನೆಗಳು, ಅಷ್ಟಪದಿ, ದೋಣಿಹಾಡುಗಳು, ಘಸಲ್ ಇವುಗಳನ್ನು ಆರಿಸಿ ಹಾಡುವುದು. | 4 |

## ಸಂಗೀತ – ಒಂಭತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್<br>ಜುಲೈ<br>ಆಗಸ್ಟ್ | 1 | ಕರ್ನಾಟಿಕ್ ಸಂಗೀತ, ಹಿಂದುಸ್ಥಾನೀ ಸಂಗೀತ ಎಂಬೀ ಭಾರತೀಯ ಸಂಗೀತ ಶಾಖೆಗಳ ಕುರಿತು ತಿಳಿಯುವುದು.<br>ಕೆಲವು ಸಂಗೀತ ಕೃತಿಗಳನ್ನು ಹಾಡುವುದು. | 5 |
| ಆಗೋಸ್ಟ್<br>ಸಪ್ಟೆಂಬರ್<br>ಒಕ್ಟೋಬರ್ | 2 | ಪರಿಚಿತವಾದ ಕೆಲವು ಹಾಡುಗಳ ರಾಗಗಳನ್ನು ಗುರುತಿಸುವುದು (ಚಿತ್ರಗೀತೆಗಳು, ನಾಟಕಗೀತೆಗಳು, ಲಘುಸಂಗೀತಗಳು) | 4 |
| ಒಕ್ಟೋಬರ್<br>ನವೆಂಬರ್<br>ಡಿಸೆಂಬರ್ | 3 | ಸ್ವರಜತಿ, ವರ್ಣಗಳು, ಕೀರ್ತನೆಗಳು, ಪದ್ಯಗಳು, ಭಜನೆಗಳು ಮುಂತಾದವುಗಳನ್ನು ಹಾಡುವುದು. | 4+1 |
| ಜನವರಿ<br>ಫೆಬ್ರವರಿ<br>ಮಾರ್ಚ್ | 4 | ವೈವಿಧ್ಯಮಯ ದಿನಾಚರಣೆಗಳ ಭಾಗವಾಗಿ ಕೆಲವು ಹಾಡುಗಳಿಗೆ ರಾಗ ಸಂಯೋಜಿಸಿ ಹಾಡುವುದು. | 5 |

# ಸಂಗೀತ – ಹತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್<br>ಜುಲೈ<br>ಆಗಸ್ಟ್ | 1 | ಶಾಸ್ತ್ರೀಯ ಸಂಗೀತವನ್ನೊಳಗೊಂಡ ದೇಶಭಕ್ತಿಗೀತೆಗಳನ್ನು ಹಾಡುವುದು. | 3 |
| ಸಪ್ಟೆಂಬರ್<br>ಒಕ್ಟೋಬರ್ | 2 | ಹಾಡುಗಳಿಗೆ ರಾಗ ಸಂಯೋಜಿಸಿ ಹಾಡುವುದು. | 4 |
| ನವೆಂಬರ್<br>ಡಿಸೆಂಬರ್ | 3 | ಕರ್ನಾಟಕ ಸಂಗೀತ, ಹಿಂದುಸ್ಥಾನಿ ಸಂಗೀತ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಸಂಗೀತಜ್ಞರ ಕುರಿತು ತಿಳಿಯುವುದು | 4+1 |
| ಜನವರಿ<br>ಫೆಬ್ರವರಿ<br>ಮಾರ್ಚ್ | 4 | ಕರ್ನಾಟಕ ಮತ್ತು ಹಿಂದುಸ್ಥಾನಿ ಸಂಗೀತ ಕ್ಷೇತ್ರಗಳಲ್ಲಿ ಉಪಯೋಗಿಸುವ ವಾದ್ಯೋಪಕರಣಗಳ ಕುರಿತಾದ ತಿಳುವಳಿಕೆ ಹಂಚುವುದು. ಪ್ರಸಿದ್ಧ ವಾದ್ಯೋಪಕರಣ ವಿದ್ವಾಂಸರ ಬಗ್ಗೆ ತಿಳಿಯುವುದು. | 5 |

## ನೃತ್ಯ – ಎಂಟನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಕೇರಳದ ಸಾಂಪ್ರದಾಯಿಕ ನೃತ್ಯರೂಪಗಳನ್ನು ಗುರುತಿಸುವುದು. | 2 |
| ಜುಲೈ | 1 | ಕೇರಳದ ಸಾಂಪ್ರದಾಯಿಕ ನೃತ್ಯರೂಪಗಳನ್ನುಗುರುತಿಸುವುದು. | 2 |
| ಆಗೋಸ್ಟ್ | 2 | ತುಳ್ಳಲ್‌ಕಲೆ –ವಿವಿಧ ವಿಭಾಗಗಳು–ಸಾಮ್ಯ ವ್ಯತ್ಯಾಸಗಳನ್ನು ವರ್ಗೀಕರಿಸಲು ಸಾಧ್ಯವಾಗುವುದು. | 2 |
| ಸಪ್ಟೆಂಬರ್ | 2 | ತುಳ್ಳಲ್‌ಕಲೆ –ವಿವಿಧ ವಿಭಾಗಗಳು–ಸಾಮ್ಯ ವ್ಯತ್ಯಾಸಗಳನ್ನು ವರ್ಗೀಕರಿಸಲು ಸಾಧ್ಯವಾಗುವುದು. | 2 |
| ಒಕ್ಟೋಬರ್ | 3 | ಮುಖಾಭಿನಯದ ಮೂಲಕ ವಿಭಿನ್ನ ಭಾವನಾತ್ಮಕ ವಿಚಾರಗಳನ್ನು ಪ್ರಕಟಿಸುವುದು. | 2 |
| ನವೆಂಬರ್ | 3 | ಮುಖಾಭಿನಯದ ಮೂಲಕ ವಿಭಿನ್ನ ಭಾವನಾತ್ಮಕ ವಿಚಾರಗಳನ್ನು ಪ್ರಕಟಿಸುವುದು. | 2 |
| ಡಿಸೆಂಬರ್ | 4 | ವಿಭಿನ್ನ ಅಂಗಗಳ ಮೂಲಕ ಆಶಯ ವಿನಿಮಯ ನಡೆಸುವುದು. | 2 |
| ಜನವರಿ | 4 | ವಿಭಿನ್ನ ಅಂಗಗಳ ಮೂಲಕ ಆಶಯ ವಿನಿಮಯ ನಡೆಸುವುದು. | 2 |
| ಫೆಬ್ರವರಿ | 5 | ರಸಗಳು, ಮುದ್ರೆಗಳು, ಅಭಿನಯ ರೀತಿಗಳು, ಇವುಗಳನ್ನು ಸೇರಿಸಿ ಕ್ರಮವಾಗಿ ಹಾಡುಗಳು, ಕವಿತೆಗಳು ಎಂಬಿವುಗಳ ದೃಶ್ಯಾವಿಷ್ಕಾರ ನಡೆಸುವುದು. | 2 |
| ಮಾರ್ಚ್ | 5 | ರಸಗಳು, ಮುದ್ರೆಗಳು, ಅಭಿನಯ ರೀತಿಗಳು, ಇವುಗಳನ್ನು ಸೇರಿಸಿ ಕ್ರಮವಾಗಿ ಹಾಡುಗಳು, ಕವಿತೆಗಳು ಎಂಬಿವುಗಳ ದೃಶ್ಯಾವಿಷ್ಕಾರ ನಡೆಸುವುದು. | 2 |

# ನೃತ್ಯ– ಒಂಭತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಲೋಕಧರ್ಮಿ, ನಾಟ್ಯಧರ್ಮಿ ಮೊದಲಾದ ಅಭಿನಯ ವಿಭಾಗದ ಕುರಿತು ವಿವರಗಳನ್ನು ಸಂಗ್ರಹಿಸಿ ಮಂಡಿಸುವುದು. | 2 |
| ಜುಲೈ | 1 | ಲೋಕಧರ್ಮಿ, ನಾಟ್ಯಧರ್ಮಿ ಮೊದಲಾದ ಅಭಿನಯ ವಿಭಾಗದ ಕುರಿತು ವಿವರಗಳನ್ನು ಸಂಗ್ರಹಿಸಿ ಮಂಡಿಸುವುದು. | 2 |
| ಅಗೋಸ್ಟ್ | 2 | ನೃತ್ಯದ ಒಂದು ಪದ ಮಂಡಿಸುವುದು. | 2 |
| ಸಪ್ಟೆಂಬರ್ | 2 | ನೃತ್ಯದ ಒಂದು ಪದ ಮಂಡಿಸುವುದು. | 2 |
| ಒಕ್ಟೋಬರ್ | 3 | ಪರಿಚಿತವಾದ ಹಾಡುಗಳಿಗೆ ಯೋಗ್ಯವಾದ ನೃತ್ಯಾವಿಷ್ಕಾರ ನಡೆಸುವುದು. | 2 |
| ನವೆಂಬರ್ | 3 | ಪರಿಚಿತವಾದ ಹಾಡುಗಳಿಗೆ ಯೋಗ್ಯವಾದ ನೃತ್ಯಾವಿಷ್ಕಾರ ನಡೆಸುವುದು. | 2 |
| ಡಿಸೆಂಬರ್ | 4 | ಶುದ್ಧ ನೃತ್ಯ ರೂಪಗಳಾದ ಪುಷ್ಪಾಂಜಲಿ, ಜತಿಸ್ವರ ಇಂತಹ ಯಾವುದಾದರೊಂದು ರೀತಿಯನ್ನು ಮಂಡಿಸುವುದು. | 2 |
| ಜನವರಿ | 4 | ಶುದ್ಧ ನೃತ್ಯ ರೂಪಗಳಾದ ಪುಷ್ಪಾಂಜಲಿ, ಜತಿಸ್ವರ ಇಂತಹಯಾವುದಾದರೊಂದು ರೀತಿಯನ್ನು ಮಂಡಿಸುವುದು. | 2 |
| ಫೆಬ್ರವರಿ | 5 | ಅರ್ಧ ಶಾಸ್ತ್ರೀಯ ರೀತಿಯಲ್ಲಿರುವ ಹಾಡುಗಳಿಗೆ (ಭಜನೆ, ಭಕ್ತಿಗೀತೆಗಳು ಮೊದಲಾದವುಗಳು) ಕ್ರಮಬದ್ಧವಾಗಿ, ಅರ್ಥವತ್ತಾದ ರೀತಿಯಲ್ಲಿ ನೃತ್ಯ ನಿರ್ದೇಶನ ನಡೆಸಿ ಮಂಡಿಸುವುದು. | 2 |
| ಮಾರ್ಚ್ | 5 | ಅರ್ಧ ಶಾಸ್ತ್ರೀಯ ರೀತಿಯಲ್ಲಿರುವ ಹಾಡುಗಳಿಗೆ (ಭಜನೆ, ಭಕ್ತಿಗೀತೆಗಳು ಮೊದಲಾದವುಗಳು) ಕ್ರಮಬದ್ಧವಾಗಿ, ಅರ್ಥವತ್ತಾದ ರೀತಿಯಲ್ಲಿ ನೃತ್ಯ ನಿರ್ದೇಶನ ನಡೆಸಿ ಮಂಡಿಸುವುದು. | 2 |

## ನೃತ್ಯ- ಹತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | 1 | ಕೇರಳದ ನಾಡ ಕಲಾರೂಪಗಳನ್ನು (ಒಪ್ಪನ, ತಿರುವಾದಿರ, ಮಾರ್ಗಂಕಳಿ) ಗುರುತಿಸುವುದು. | 2 |
| ಜುಲೈ | 1 | ಕೇರಳದ ನಾಡ ಕಲಾರೂಪಗಳನ್ನು (ಒಪ್ಪನ, ತಿರುವಾದಿರ, ಮಾರ್ಗಂಕಳಿ) ಗುರುತಿಸುವುದು. | 2 |
| ಅಗೋಸ್ಟ್ | 2 | ಶಾಸ್ತ್ರೀಯ ನೃತ್ಯದಲ್ಲಿ ಐದು ಜಾತಿಗಳ ಹೇಳಿಕೆಗನುಸರಿಸಿ ಜತಿಗಳು ಇದೆಯೆಂದು ಗುರುತಿಸುವುದು. | 2 |
| ಸಪ್ಟೆಂಬರ್ | 2 | ಶಾಸ್ತ್ರೀಯ ನೃತ್ಯದಲ್ಲಿ ಐದು ಜಾತಿಗಳ ಹೇಳಿಕೆಗನುಸರಿಸಿ ಜತಿಗಳು ಇದೆಯೆಂದು ಗುರುತಿಸುವುದು. | 2 |
| ಒಕ್ಟೋಬರ್ | 3 | ಶಾಸ್ತ್ರೀಯ ನೃತ್ಯಗಳಲ್ಲಿ ನವರಸಗಳ ಪ್ರಾಧಾನ್ಯತೆಯನ್ನು ತಿಳಿಯುವುದು. | 2 |
| ನವೆಂಬರ್ | 3 | ಶಾಸ್ತ್ರೀಯ ನೃತ್ಯಗಳಲ್ಲಿ ನವರಸಗಳ ಪ್ರಾಧಾನ್ಯತೆಯನ್ನು ತಿಳಿಯುವುದು. | 2 |
| ಡಿಸಂಬರ್ | 4 | ದೇಶಭಕ್ತಿ ಗೀತೆಗಳು, ಕವಿತೆಗಳು ಮೊದಲಾದವುಗಳ ದೃಶ್ಯಾವಿಷ್ಕಾರ ನಡೆಸುವುದು. | 2 |
| ಜನವರಿ | 4 | ದೇಶಭಕ್ತಿ ಗೀತೆಗಳು, ಕವಿತೆಗಳು ಮೊದಲಾದವುಗಳ ದೃಶ್ಯಾವಿಷ್ಕಾರ ನಡೆಸುವುದು. | 2 |
| ಫೆಬ್ರವರಿ | | | |
| ಮಾರ್ಚ್ | | | |

## ನಾಟಕ – ಎಂಟನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | ಕೈಗನ್ನಡ ನೆಲಗನ್ನಡ | ಕಥಾಪಾತ್ರಗಳ ವಿಶೇಷತೆಗಳನ್ನು ತಿಳಿದು ಅಭಿನಯ ಘಟಕಗಳನ್ನು ರೂಪಿಸುವುದು. | 2 |
| ಜುಲೈ | ದೃಶ್ಯಾವಿಷ್ಕಾರ, ಕವಿತೆ, ಒಗಟುಗಳು | • ದೃಶ್ಯ, ಸನ್ನಿವೇಶಗಳ ರಚನಾ ಸಾಮರ್ಥ್ಯ<br>• ಒಂದು ಆಶಯವನ್ನು ಸನ್ನಿವೇಶವಾಗಿ ಬದಲಾಯಿಸುವ ಸಾಮರ್ಥ್ಯ ಬೆಳೆಸುವುದು. | 2 |
| ಆಗೋಸ್ಟ್ | ಕವಿತೆ, ದೃಶ್ಯಾವಿಷ್ಕಾರ, ಒಗಟುಗಳ ಮುಂದುವರಿಕೆ | • ಸ್ಥಳ, ಕಾಲ, ಸಂದರ್ಭ, ಕಥಾಪಾತ್ರಗಳನ್ನು ಸಂಯೋಜಿಸಿ ನಾಟಕಘಟಕಗಳನ್ನು ಬೆಳೆಸುವುದು.<br>• ಕಥಾಪಾತ್ರಗಳಿಗೆ ವೇದಿಕೆ, ಸಂಭಾಷಣೆ ಎಂಬಿವುಗಳನ್ನು ತಯಾರಿಸಿ ಮಂಡಿಸುವುದು.<br>• ಕಾಲ, ಪರಿಸರಕ್ಕೆ ಹೊಂದಿಕೊಂಡು ಆಶಯಗಳ ದೃಶ್ಯಾವಿಷ್ಕಾರ ತಯಾರಿಸುವುದು.<br>• ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ, ಚಿತ್ರಕಥೆ ತಯಾರಿಸುವುದು.<br>• ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು.<br>• ತರಗತಿಯಲ್ಲಿ ಪ್ರದರ್ಶಿಸುವ ನಾಟಕ ಸಿನಿಮಾಗಳನ್ನು ನೋಡಿ ಆಸ್ವಾದನಾಟಿಪ್ಪಣಿಯನ್ನು ತಯಾರಿಸುವುದು. | 2 |
| ಸಪ್ಟೆಂಬರ್ | ನಾಟಕ ರಚನೆ | | 2 |
| ಒಕ್ಟೋಬರ್ | ನಾಟಕ ರಚನೆ ಮುಂದುವರಿಕೆ, ನಾಟಕ ಆಸ್ವಾದನೆ | | 2 |
| ನವಂಬರ್ | ನಾಟಕ ಆಸ್ವಾದನೆ–ಮುಂದುವರಿಕೆ | | 2 |
| ಡಿಸೆಂಬರ್ | ಸಿನಿಮಾ ನಿರ್ಮಾಣ | • ಸಿನಿಮಾ ನಿರ್ಮಾಣದ ಪ್ರಾಥಮಿಕ ಅಂಶಗಳನ್ನು ತಿಳಿಯುವುದು.<br>• ಪ್ರಾಥಮಿಕ ತಿಳುವಳಿಕೆಗಳನ್ನು ಉಪಯೋಗಿಸಿ ನಾಟಕಗಳ ಸಂಭಾಷಣೆ ಚಿತ್ರಕಥೆಗಳಿಗೆ ದೃಶ್ಯಪಾಠಗಳನ್ನು ತಯಾರಿಸಿ ಮಂಡಿಸುವುದು. | 2 |
| ಜನವರಿ | ಸಿನಿಮಾ ನಿರ್ಮಾಣ ಮುಂದುವರಿಕೆ | | 2 |
| ಫೆಬ್ರವರಿ | ಚಲನಚಿತ್ರೋತ್ಸವ | | 2 |
| ಮಾರ್ಚ್ | ಚಲನಚಿತ್ರೋತ್ಸವ ಮುಂದುವರಿಕೆ | | 2 |

## ನಾಟಕ – ಒಂಭತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | ಭಾವ ಯಾನ | ಪ್ರತಿಯೊಂದು ಕಥಾಪಾತ್ರವು ವಿಭಿನ್ನವಾದ ವಿಶೇಷತೆಗಳಿರುವುದೆಂದು ತಿಳಿದು ಕಥಾಪಾತ್ರಗಳ ಸ್ವಭಾವಕ್ಕನುಸರಿಸಿ ಅಭಿನಯ ರೀತಿಗಳನ್ನು ಬೆಳೆಸುವ ತಿಳುವಳಿಕೆ ಗಳಿಸುವುದು. | 2 |
| ಜುಲೈ | ಕಥೆಯಲ್ಲಿ ಆರ್ | • ವೈಯುಕ್ತಿಕವಾಗಿಯೂ ಗುಂಪಾಗಿಯೂ ಚತುರ್ವಿದಾಭಿನಯ ಉಪಯೋಗಿಸಿ ಆವಿಷ್ಕಾರಗಳನ್ನು ರೂಪಿಸುವುದು.<br>• ಕಥಾಪಾತ್ರಗಳನ್ನು ಅಭಿನಯಿಸುವಾಗ ಸ್ಥಳ, ಕಾಲ, ಜ್ಞಾನದೊಂದಿಗೆ ವ್ಯವಹರಿಸುವ ಸಂಪ್ರದಾಯವನ್ನು ಉತ್ತಮಗೊಳಿಸಿ ಉಪಯೋಗಿಸುವುದು.<br>• ನಾಟಕ ಸ್ಕ್ರಿಪ್ಟ್, ಚಿತ್ರಕಥೆ ಮೊದಲಾದವುಗಳನ್ನು ತಯಾರಿಸುವುದು. ನಾಟಕ ಪ್ರದರ್ಶನಕ್ಕೆ ಅಗತ್ಯವಾದ ವಸ್ತ್ರವಿನ್ಯಾಸ, ಸಂಗೀತ, ಕೊರಿಯೋಗ್ರಾಫಿ, ಎಂಬಿವುಗಳನ್ನು ಉಪಯೋಗಿಸುವುದರಲ್ಲಿ ಸಾಮಾನ್ಯ ತಿಳುವಳಿಕೆ ಗಳಿಸುವುದು. | 2 |
| ಅಗೋಸ್ಟ್ | ಕಥೆಯಲ್ಲಿ ಆರ್ | | 2 |
| ಸಪ್ಟೆಂಬರ್ | ಕಥೆಯಲ್ಲಿ ಆರ್ | | 2 |
| ಒಕ್ಟೋಬರ್ | ಪಾಠಪುಸ್ತಕದಿಂದ ಒಂದು ನಾಟಕ | • ವೈಯುಕ್ತಿಕವಾಗಿಯೂ, ಗುಂಪಾಗಿಯೂ ಚತುರ್ವಿದಾಭಿನಯಗಳನ್ನು ಉಪಯೋಗಿಸಿ ಆವಿಷ್ಕಾರಗಳನ್ನು ರೂಪಿಸುವುದು.<br>• ಕಥಾಪಾತ್ರಗಳನ್ನು ಅಭಿನಯಿಸುವಾಗ ಸ್ಥಳ, ಕಾಲ, ಜ್ಞಾನದೊಂದಿಗೆ ವ್ಯವಹರಿಸುವ ಸಂಪ್ರದಾಯವನ್ನು ಉತ್ತಮಗೊಳಿಸಿ ಉಪಯೋಗಿಸುವುದು.<br>• ಸ್ಕ್ರಿಪ್ಟ್, ಚಿತ್ರಕಥೆ ಎಂಬಿವುಗಳನ್ನು ರಚಿಸುವಾಗ ಸನ್ನಿವೇಶಗಳು, ರಂಗಕರ್ಮಗಳನ್ನು, ಯುಕ್ತಿಪೂರ್ವವಾಗಿಯೂ, ಸೃಜನಾತ್ಮಕವಾಗಿಯೂ ವಿನ್ಯಾಸಗೊಳಿಸುವ ತಿಳುವಳಿಕೆ ಗಳಿಸುವುದು. | 2 |
| ನವಂಬರ್ | ಪಾಠಪುಸ್ತಕದಿಂದ ಒಂದು ನಾಟಕ | | 2 |
| ಡಿಸೆಂಬರ್ | ಸಿನಿಮಾ ಕಾರ್ಯಾಗಾರ | • ಹ್ರಸ್ವಚಿತ್ರಗಳ ನಿರ್ಮಾಣಕ್ಕಿರುವ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಸಿನಿಮಾ ನಿರ್ಮಿಸುವುದು.<br>• ಸಿನಿಮಾ ನಾಟಕಗಳ ಪ್ರದರ್ಶನವನ್ನು ಕಂಡು ಆಸ್ವಾದಿಸುವುದು. | 2 |
| ಜನವರಿ | ಸಿನಿಮಾ ಕಾರ್ಯಾಗಾರ | | 2 |
| ಫೆಬ್ರವರಿ | ಸಿನಿಮಾ ಕಾರ್ಯಾಗಾರ | | 2 |
| ಮಾರ್ಚ್ | ಸಿನಿಮಾ ಕಾರ್ಯಾಗಾರ | | 2 |

# ನಾಟಕ – ಹತ್ತನೇ ತರಗತಿ

| ತಿಂಗಳು | ಯೂನಿಟ್ | ಕಲಿಕಾ ಸಾಧನೆಗಳು | ಪಿರಿಯಡ್ |
|---|---|---|---|
| ಜೂನ್ | ಮಾತುಗಾರಿಕೆ, ಪಾಶ್ಚಾತ್ಯ | • ಪಾಶ್ಚಾತ್ಯ ಮತ್ತು ಪೌರಸ್ತ್ಯ ಅಭಿನಯಗಳನ್ನು ಉಪಯೋಗಿಸಿ ಕಥಾಪಾತ್ರಗಳ ಸನ್ನಿವೇಶಗಳನ್ನು ವಿನ್ಯಾಸಗೊಳಿಸುವುದರಲ್ಲಿ ತಿಳುವಳಿಕೆ ಗಳಿಸುವುದು.<br>• ಸಿನಿಮಾ ಮಂದಿರಗಳ ವಿಶೇಷತೆಗಳನ್ನು ಗಮನದಲ್ಲಿರಿಸಿ ಪಾಠಭಾಗ/ಆಶಯ ಎಂಬಿವುಗಳನ್ನು ನಾಟಕ ಮಾಡಿ ಅಭಿನಯಿಸುವುದು.<br>• ಸ್ವತಂತ್ರವಾದ ರಚನಾ ಶೈಲಿಯನ್ನು ಬೆಳೆಸಲು ಪಡೆದುಕೊಂಡ ತಿಳುವಳಿಕೆಗಳನ್ನೂ ನಾಟಕ, ಚಿತ್ರಕಥೆ ಎಂಬಿವುಗಳನ್ನು ರಚಿಸುವಾಗ ಉಪಯೋಗಿಸುವುದು. | 2 |
| ಜುಲೈ | | | 2 |
| ಆಗೋಸ್ಟ್ | | | 2 |
| ಸಪ್ಟೆಂಬರ್ | ಅಭಿನಯ ನಾಟಕದಲ್ಲಿ ಮತ್ತು ಸಿನಿಮಾದಲ್ಲಿ | • ವೇದಿಕೆಯಲ್ಲೂ, ಕ್ಯಾಮರಗಳ ಎದುರೂ ಅಭಿನಯಿಸುವ ತಿಳುವಳಿಕೆಗಳಿಸುವುದು. | 2 |
| ಒಕ್ಟೋಬರ್ | | | 2 |
| ನವಂಬರ್ | | | 2 |
| ಡಿಸೆಂಬರ್ | ಸಿನಿಮಾ ಕಾರ್ಯಗಾರ | • ಇತರ ಕಲಾ ರೂಪಗಳ ಸಾಧ್ಯತೆಗಳನ್ನು ನಾಟಕ, ಸಿನಿಮಾ ಎಂಬಿವುಗಳನ್ನು ತಯಾರಿಸಲು ಉಪಯೋಗಿಸುವುದು.<br>• ಸ್ವತಂತ್ರವಾದ ರಚನಾ ಶೈಲಿಯನ್ನು ಬೆಳೆಸಲು ಪಡೆದುಕೊಂಡ ತಿಳುವಳಿಕೆಗಳನ್ನು ನಾಟಕ, ಚಿತ್ರಕಥೆ ಎಂಬಿವುಗಳನ್ನು ರಚಿಸುವಾಗ ಉಪಯೋಗಿಸುವುದು.<br>• ನಾಟಕ, ಸಿನಿಮಾ ಎಂಬಿವುಗಳನ್ನು ನೋಡಿ ಆಸ್ವಾದಿಸಿ ವಿಮರ್ಶಾತ್ಮಕ ಚರ್ಚೆಗಳನ್ನು ನಡೆಯುವುದು. | 2 |
| ಜನವರಿ | | | 2 |
| ಫೆಬ್ರವರಿ | | | 2 |
| ಮಾರ್ಚ್ | | | 2 |

# ಅನುಬಂಧ – 2–ಮಾದರಿ ಪ್ರಶ್ನೆ ಪತ್ರಿಕೆ

## ಪಾರ್ಟ್ – ಎ : ಚಿತ್ರಕಲೆ

ತರಗತಿ–9

ಸಮಯ: 2 ಗಂಟೆ
ಸ್ಕೋರ್: 40

**ಅಧ್ಯಾಪಕರಿಗಿರುವ ಸೂಚನೆಗಳು**

- ಚಿತ್ರ ರಚಿಸಲು ಮತ್ತು ಬಣ್ಣ ಕೊಡಲು ಇರುವ ಉಪಕರಣಗಳನ್ನು ತರಲು ಮೊದಲೇ ಸೂಚನೆಗಳನ್ನು ನೀಡುವುದು.
- ಚಿತ್ರ ರಚಿಸಲು ಡಮ್ಮಿ 1/4 ಅಳತೆಯ ಕಾರ್ಡುಶೀಟ್‌ಗಳನ್ನು ನೀಡುವುದು.
- ಉತ್ತರ ಬರೆಯಲು ಬೇಕಾದ ಕಾಗದ ನೀಡಬೇಕು.

1. ಒಂದು ಶಿಲ್ಪವನ್ನು ನಿರ್ಮಿಸುವಾಗ ಅದಕ್ಕಾಗಿ 4 ಬದಿಗಳಿಂದ ಇರುವ ನೋಟದ ಸ್ಕೆಚ್ ಬಹಳ ಅಗತ್ಯವಾಗಿದೆ. (30ಮಿನಿಟ್)

   (a) ಒಂದು ಕಡಿದ ಮರದ ಬುಡದಲ್ಲಿರುವ ಹಕ್ಕಿಯ ಶಿಲ್ಪವನ್ನು ನಿರ್ಮಿಸಲು ಬೇಕಾದ ಯಾವುದಾದರೂ ಒಂದು ಕೋನದಿಂದ ಕಾಣುವ ರೀತಿಯಲ್ಲಿ ಸ್ಕೆಚ್ ರಚಿಸಿರಿ. (ಪೆನ್ಸಿಲ್ ಉಪಯೋಗಿಸಿ ರಚಿಸಿದರೆ ಸಾಕು. ಕೊಟ್ಟಿರುವ ಕಾಗದಕ್ಕೆ ಅನುಪಾತಿಕವಾಗಿ ರಚಿಸಬೇಕು.) (30ಮಿನಿಟ್)

   (b) ಶಿಲ್ಪ ನಿರ್ಮಾಣಕ್ಕೆ ಉಪಯೋಗಿಸುವ ನಾಲ್ಕು ಮಾಧ್ಯಮಗಳು ಯಾವುವು? (2ಮಿನಿಟ್)

---

2. ಸಮಕಾಲೀನವಾಗಿ ಬಹಳ ಪ್ರಧಾನವಾದ ಆಶಯಪ್ರಕಟಿಸುವ ಮಾಧ್ಯಮವಾಗಿದೆ ಕಾರ್ಟೂನ್. ವಿಮರ್ಶಾತ್ಮಕವಾಗಿ ಹಾಸ್ಯರಸದೊಂದಿಗೆ ಆಶಯವನ್ನು ಪ್ರಕಟಿಸುವ ರೀತಿಯಾಗಿದೆ ಕಾರ್ಟೂನಿನ ವಿಶೇಷತೆ. (30ಮಿನಿಟ್)

   (a) 'ನಗರದ ನೋಟ' ಎಂಬ ವಿಷಯದಲ್ಲಿ ಚಿಂತನೋದ್ದಿಪವಾದ ಒಂದು ಚಿತ್ರವನ್ನು ರಚಿಸಿರಿ. ಪೆನ್ಸಿಲ್, ವಾಟರ್ ಕಲರ್, ಕ್ರಯೋನ್ ಇವುಗಳಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು) (10ಮಿನಿಟ್)

   (b) ಪ್ರಸಿದ್ಧರಾದ ಚಿತ್ರಗಾರರಲ್ಲಿ ನಿಮಗೆ ತಿಳಿದಿರುವ 4 ಮಂದಿಯ ಹೆಸರುಗಳನ್ನು ಬರೆಯಿರಿ. ಅವರಲ್ಲಿ ಯಾರಾದರು ಒಬ್ಬರ ಲಘು ವಿವರಣೆ (ಕಾಲಘಟ್ಟ, ಚಿತ್ರದ ವಿಶೇಷತೆಗಳು, ಆಶಯ ಪ್ರಕಟನಾ ರೀತಿ, ರಚನಾ ಶೈಲಿ , ಸಾಮಾಜಿಕ ಸಾಂಸ್ಕೃತಿಕ ದೃಷ್ಟಿಕೋನ ಎಂಬಿವುಗಳನ್ನು ಸೇರಿಸಿ) ತಯಾರಿಸಿ. (5ಮಿನಿಟ್)

3. (a) "ಕಡಲ ತೀರದಲ್ಲಿ " ಎಂಬ ವಿಷಯವನ್ನು ಆಧಾರವಾಗಿರಿಸಿ ಭಾವಚಲನೆಯಿಂದೊಡಗೂಡಿದ ಮನುಷ್ಯ ಆಕೃತಿಗಳನ್ನು ಒಳಗೊಳಿಸಿ ಭಾವನಾತ್ಮಕದಿಂದೊಡಗೂಡಿದ ಒಂದು ಚಿತ್ರ ರಚಿಸಿ ಬಣ್ಣ ನೀಡಿರಿ. (60ಮಿನಿಟ್) (10ಮಿನಿಟ್)
(ನೀಡಿರುವ ಕಾಗದಕ್ಕೆ ಅನುಪಾತಿಕವಾಗಿ ಚಿತ್ರ ರಚಿಸಬೇಕು. ಬಣ್ಣ ನೀಡಲು ಇಷ್ಟವಿರುವ ಮಾಧ್ಯಮಗಳನ್ನು ಉಪಯೋಗಿಸಬಹುದು. ಹತ್ತಿರ ಮತ್ತು ದೂರ ಇರುವ ವಸ್ತುಗಳ ಗಾತ್ರ ಮತ್ತು ಬಣ್ಣ ವ್ಯತ್ಯಾಸಗಳನ್ನು ಪರಿಗಣಿಸಿ ರಚನೆಯನ್ನು ಪೂರ್ತಿಗೊಳಿಸಬೇಕಾಗಿದೆ.)

(b) ಕೆಳಗೆ ಹೇಳಿದವರಲ್ಲಿ ಯಾರಾದರು ಒಬ್ಬ ಚಿತ್ರಗಾರನ ಕುರಿತು ಲಘು ವಿವರಣೆ ತಯಾರಿಸಿ. (5ಮಿನಿಟ್)

ರಾಫೆಲ್
ರಾಜಾ ರವಿವರ್ಮ
ಕೆ.ಸಿ.ಎಸ್.ಪಣಿಕ್ಕರ್
ನಂಬೂದಿರಿ
ಎಂ.ವಿ.ದೇವನ್
ಮೈಕಲ್ ಆಂಜಲೋ
ಪಿ.ಎಸ್. ಪುಣಿಂಚಿತ್ತಾಯ

## ಉತ್ತರ

### ಪಾರ್ಟ್ ಎ : ಚಿತ್ರಕಲೆ

1. (a) *ಚಿತ್ರದ ಮೌಲ್ಯನಿರ್ಣಯ*

- ಆಶಯ ಪೂರ್ಣತೆ
- ಯಾತಾರ್ಥ ನೈಜತೆಗಿರುವ ಸಾಮ್ಯತೆ.
- ಗೆರೆಗಳ ಪ್ರಯೋಗ, ಬಣ್ಣಗಳ ಮಿಶ್ರಣ.
- ಸ್ಥಳದ ಉಪಯೋಗ ರೀತಿ, ಅಂತರ
- ಸಮಗ್ರತೆ

  - ಎಲ್ಲಾ ಹಿರಿಮೆಗಳು ಸೇರಿದ ರಚನೆ
  - ಹೆಚ್ಚಿನ ಹಿರಿಮೆಗಳು ಸೇರಿದ ರಚನೆ
  - ಹಿರಿಮೆಗಳು ಭಾಗಿಕವಾಗಿ ಮಾತ್ರವೇ ಇರುವ ರಚನೆ
  - ಹೆಚ್ಚಿನ ಹಿರಿಮೆಗಳು ಬೇಕಾದ ರಚನೆ

ಇವುಗಳನ್ನು ಪರಿಗಣಿಸಿಕೊಂಡು 8 ರಲ್ಲಿ ಎಷ್ಟು ಸ್ಕೋರ್ ನೀಡಬೇಕೆಂದು ತೀರ್ಮಾನಿಸಬೇಕು.

(b) *ಟೆರಾಕೋಟ್ಟ*

- ಆವೆ ತುಂಡು
- ಜಲ್ಲಿ
- ಕಗ್ಗಲ್ಲು
- ಮಾರ್ಬಲ್
- ಪ್ಲಾಸ್ಟರ್ ಓಫ್ ಪೇರಿಸ್

ಯಾವುದಾದರು 4 ಮಾಧ್ಯಮಗಳನ್ನು ಬರೆದರೆ 2 ಸ್ಕೋರ್

2. (a) ಕಾರ್ಟೂನಿನ ಮೌಲ್ಯನಿರ್ಣಯ

- ಆಶಯ ಪ್ರಕಟಣೆ
- ರಚನಾ ರೀತಿ
- ವಿಮರ್ಶನಾತ್ಮಕತೆ
- ಹಾಸ್ಯಾತ್ಮಕತೆ
- ಸಂಭಾಷಣೆಯ ವಿಶೇಷತೆಗಳು

  - ಎಲ್ಲಾ ಹಿರಿಮೆಗಳು ಸೇರಿದ ರಚನೆ
  - ಹೆಚ್ಚಿನ ಹಿರಿಮೆಗಳು ಸೇರಿದ ರಚನೆ
  - ಭಾಗಿಕ ಹಿರಿಮೆಗಳು ಸೇರಿದ ರಚನೆ
  - ಹೆಚ್ಚಿನ ಹಿರಿಮೆಗಳು ಸೇರಬೇಕಾದ ರಚನೆ

ಇವುಗಳನ್ನು ಪರಿಗಣಿಸಿಕೊಂಡು 10 ರಲ್ಲಿ ಎಷ್ಟು ಸ್ಕೋರ್ ನೀಡಬೇಕೆಂದು ತೀರ್ಮಾನಿಸುವುದು.

(b) ಕಾರ್ಟೂನಿಷ್ಟುಗಳು

- ಶಂಕರ್
- ಬಿ.ಎಂ ಗಫೂರ್
- ಅಬು
- ಒ.ವಿ ವಿಜಯನ್
- ನಾಡಿಗ್ ರವಿ
- ಏಸುದಾಸನ್
- ಕುಟ್ಟಿ
- ಗೋಪಿಕೃಷ್ಣನ್
- ಟೋಂಸ್
- ಆರ್.ಕೆ. ಲಕ್ಷ್ಮಣ್
- ನಾದಿಗ್
- ಹರಿಣಿ

4 ಪುಟಗಳನ್ನು ಬರೆದರೆ 2 ಸ್ಕೋರ್.
ಒಬ್ಬರ ಕುರಿತು ಲಘುವಿವರಣೆಗೆ 3 ಸ್ಕೋರ್.

---

3. (a) 'ಕಡಲ ತೀರದಲ್ಲಿ' ಚಿತ್ರೀಕರಣ.

- ವಿಷಯದೊಂದಿಗಿನ ಸಂಬಂಧ
- Back ground, Foreground - ವ್ಯತ್ಯಾಸ
- ಬೆಳಕು, ನೆರಳಿನ ಪ್ರಯೋಗ
- ಸತ್ಯಾಂಶಗಳ ವಿನ್ಯಾಸ
- ಬಣ್ಣದ ಪ್ರಯೋಗ/ರೀತಿ
- ಸಮಗ್ರತೆ–ಪೂರ್ಣತೆ

  - ಎಲ್ಲಾ ಹಿರಿಮೆಗಳು ಸೇರಿದ ರಚನೆ.
  - ಹೆಚ್ಚಿನ ಹಿರಿಮೆಗಳು ಸೇರಿದ ರಚನೆ.
  - ಭಾಗಿಕ ಹಿರಿಮೆಗಳು ಸೇರಿದ ರಚನೆ.
  - ಹೆಚ್ಚಿನ ಹಿರಿಮೆಗಳು ಸೇರಬೇಕಾದ ರಚನೆ.

ಇವುಗಳನ್ನು ಪರಿಗಣಿಸಿಕೊಂಡು 10 ರಲ್ಲಿ ಎಷ್ಟು ಸ್ಕೋರ್ ನೀಡಬೇಕೆಂದು ತೀರ್ಮಾನಿಸುವುದು.

(b) *ಚಿತ್ರಗಾರರ ಚರಿತ್ರೆ*

- ಕಾಲಘಟ್ಟ
- ಸಾಂಸ್ಕೃತಿಕ ಭಾಗವಹಿಸುವಿಕೆ, ಕೊಡುಗೆಗಳು
- ರಚನಾ ರೀತಿ/ಮಾಧ್ಯಮ/ಶೈಲಿ
- ಚಿತ್ರಕಲೆಗೆ ನೀಡಿದ ಕೊಡುಗೆಗಳು

ಇವುಗಳನ್ನು ಸೇರಿಸಿಕೊಂಡು ತಯಾರಿಸಿದ ಟಿಪ್ಪಣಿಗೆ 5 ಅಂಕ

ಒಟ್ಟು ಅಂಕ 40

ತರಗತಿ : ಒಂಭತ್ತು

## ಸಂಗೀತ

ಸಮಯ: 2 ಗಂಟೆ
ಸ್ಕೋರ್:40

*ಅಧ್ಯಾಪಕರಿಗಿರುವ ಸೂಚನೆಗಳು:*

- ಪ್ರತಿಯೊಂದು ಪ್ರಶ್ನೆಗೆ ಅಗತ್ಯವಾದ ತಯಾರಿಯನ್ನು ಮೊದಲೇ ಮಾಡಬೇಕು.
- ಎಲ್ಲಾ ಮಕ್ಕಳಿಗು ಅಗತ್ಯವಾದ ಸಮಾನ ಸಮಯ ಲಭಿಸುತ್ತದೆ ಎಂದು ಕಾತರಿಪಡಿಸಬೇಕು.
- ತತ್ಸಮಯ ಮೌಲ್ಯನಿರ್ಣಯ ಮಾಡಬೇಕಾದನ್ನು ಆಗಲೇ ಮಾಡಿ ದಾಖಲಿಸಬೇಕು.

1. ಪರಿಚಿತವಾದ ಹಾಡುಗಳ ಲಿಸ್ಟ್ ನೀಡುವುದು. ಇದರಿಂದ ಒಂದೇ ರಾಗದಲ್ಲಿರುವ ಹಾಡುಗಳನ್ನು ಕಂಡುಹಿಡಿದು ಮಂಡಿಸುವುದು. (60ಮಿನಿಟ್)

- 'ಶಿಲೆಗಳು ಸಂಗೀತವಾ ಹಾಡಿದೆ.....'
- 'ನೀ ಮೀಟಿದ ನೆನಪೆಲ್ಲವು ......'
- 'ಹುಟ್ಟಿದರೇ ಕನ್ನಡ ನಾಡಲ್ಲಿ ಹುಟ್ಟಬೇಕು....'
- 'ಒಲಿದ ಜೀವ ಜೊತೆಯಲಿರಲು....'
- 'ಒಲಿದ ಜೀವ ಜೊತೆಯಲಿರಲು.....'
- 'ಅನಿಸುತಿದೆ ಯಾಕೋ ಇಂದು ....'
- 'ಬಣ್ಣ ನನ್ನ ಒಲವಿನ ಬಣ್ಣ....'

2. ಪ್ರಾದೇಶಿಕವಾದ ಕೆಲವು ಕಲಾರೂಪಗಳ ವೀಡಿಯೋ ಪ್ರದರ್ಶಿಸುವುದು. ನೋಡಿದ ಕಲಾರೂಪಗಳಲ್ಲಿ ಉಪಯೋಗಿಸಿದ ಸಂಗೀತೋಪಕರಣಗಳನ್ನು ಲಿಸ್ಟ್ ಮಾಡುವುದು.

*ಕಲಾರೂಪಗಳು* (30ಮಿನಿಟ್)

1. ಯಕ್ಷಗಾನ
2. ಕರ್ನಾಟಕ/ಹಿಂದುಸ್ಥಾನಿ ಸಂಗೀತ
3. ಗಾನಮೇಳ
4. ಕಥಕ್ಕಳಿ/ಹುಲಿಕಥೆ

3. (a) ಪಾಠಭಾಗದಲ್ಲಿ ನೀಡಿದ ಕವಿತೆಗೆ ರಾಗಹಾಕಿ ಮಂಡಿಸುವುದು (30ಮಿನಿಟ್)

(b) ಒಂದು ಕವಿತಾಪದ್ಯಕ್ಕೆ ರಾಗ ಹಾಕಿ ಹಾಡಾಗಿ ಮಾಡುವಾಗ ಯಾವೆಲ್ಲ ವಿಚಾರಗಳನ್ನು ಗಮನಿಸಬೇಕು?

## ಉತ್ತರ Part-B: ಸಂಗೀತ

1. *ಒಂದೇ ರಾಗದಲ್ಲಿರುವ ಹಾಡುಗಳನ್ನು ಕಂಡುಹಿಡಿಯುವುದು.*

- ನಾಲ್ಕು ಹಾಡುಗಳನ್ನು ಕಂಡುಹಿಡಿದರೆ – 10 ಅಂಕ
- ಮೂರು ಹಾಡುಗಳನ್ನು ಕಂಡುಹಿಡಿದರೆ – 7 ಅಂಕ
- ಎರಡು ಹಾಡುಗಳನ್ನು ಕಂಡುಹಿಡಿದರೆ – 5 ಅಂಕ
- ಒಂದು ಹಾಡು ಮಾತ್ರ ಕಂಡುಹಿಡಿದರೆ – 3 ಅಂಕ

2.
- ■ ಯಕ್ಷಗಾನ
- ■ ಕರ್ನಾಟಕ/ಹಿಂದುಸ್ಥಾನಿ ಸಂಗೀತ
- ■ ಗಾನಮೇಳ
- ■ ಕಥಕ್ಕಳಿ/ಹರಿಕಥೆ

  - ಪೂರ್ಣವಾಗಿ ಕಂಡುಹಿಡಿದರೆ – 10 ಅಂಕ
  - ಹೆಚ್ಚಿನ ವಿಷಯಗಳನ್ನು ಕಂಡುಹಿಡಿದರೆ – 7 ಅಂಕ
  - ಭಾಗಿಕವಾಗಿ ಕಂಡುಹಿಡಿದರೆ – 5 ಅಂಕ
  - ಕೆಲವೇ ವಿಷಯಗಳನ್ನು ಕಂಡುಹಿಡಿದರೆ – 3 ಅಂಕ

3. (a) ಕವಿತೆಗಳಿಗೆ ರಾಗ ಹಾಕಿ ಮಂಡಿಸುವುದು.

- ■ ಕಂಠ
- ■ ಶ್ರುತಿ
- ■ ತಾಳ
- ■ ರಾಗ
- ■ ಭಾವ
- ■ ಸ್ಥಾಯೀ
- ■ ಸಾಹಿತ್ಯ ಶುದ್ಧಿ

  - ಎಲ್ಲಾ ಹಿರಿಮೆಗಳಿರುವುದು
  - ಹೆಚ್ಚಿನ ಹಿರಿಮೆಗಳಿರುವುದು
  - ಭಾಗಿಕ ಹಿರಿಮೆಗಳಿರುವುದು
  - ಹೆಚ್ಚಿನ ಹಿರಿಮೆಗಳು ಬೇಕಾಗಿರುವುದು

ಇವುಗಳನ್ನು ಆಧಾರವಾಗಿರಿಸಿ 10 ರಲ್ಲಿ ಸ್ಕೋರ್ ಎಷ್ಟೆಂದು ತೀರ್ಮಾನಿಸುವುದು.

3. (b)
- ■ ಕಂಠ
- ■ ಶ್ರುತಿ
- ■ ತಾಳ
- ■ ರಾಗ
- ■ ಭಾವ
- ■ ಸ್ಥಾಯಿ
- ■ ಸಾಹಿತ್ಯ ಶುದ್ಧಿ

  - ಏಳು ಸರಿಯಾಗಿದ್ದರೆ – 10 ಅಂಕ
  - ಯಾವುದಾದರು 5 ಸರಿಯಾಗಿದ್ದರೆ – 7 ಅಂಕ
  - ಯಾವುದಾದರು 4 ಸರಿಯಾಗಿದರೆ – 5 ಅಂಕ
  - ಯಾವುದಾದರು 3 ಸರಿಯಾದರೆ – 3 ಅಂಕ

# ಪಾರ್ಟ್ 3 : ನೃತ್ಯ

ತರಗತಿ : ಒಂಭತ್ತು

ಸಮಯ:2 ಗಂಟೆ
ಸ್ಕೋರ್ :40

*ಅಧ್ಯಾಪಕರಿಗಿರುವ ಸೂಚನೆಗಳು:*

- ಐದು ಮಂದಿಯ ಗುಂಪುಗಳಾಗಿ ಮಾಡಿ ಚಟುವಟಿಕೆಗಳನ್ನು ನೀಡಬೇಕು.
- ನೃತ್ಯಾವಿಷ್ಕಾರಕ್ಕೆ ಯೋಗ್ಯವಾದ ಗಾನಗಳನ್ನು ಆಯ್ಕೆ ಮಾಡಬೇಕು.
- ಆಶಯದ ಕುರಿತು, ಅಭಿನಯ ಸಾಧ್ಯತೆಯ ಕುರಿತು ಚರ್ಚಿಸಲು ಎಲ್ಲಾ ಗುಂಪುಗಳಿಗೂ ಸಮಾನ ಸಮಯಾವಕಾಶ ನೀಡಬೇಕು.
- ತತ್ಸಮಯ ಮೌಲ್ಯನಿರ್ಣಯ ಮಾಡಬೇಕಾದವುಗಳನ್ನು ಆಗಲೇ ಮಾಡಿ ದಾಖಲಿಸಬೇಕು.

1. (a) ಯಾವುದಾದರು ಒಂದು ಶುದ್ಧ ಕಲಾರೂಪವನ್ನು (ಪುಷ್ಪಾಂಜಲಿ, ಅಥವ ಜತಿಸ್ವರ) ಮಂಡಿಸುವುದು. ಒಂದು ಗುಂಪಿಗೆ 10 ನಿಮಿಷ ಸಮಯ (15 ಅಂಕ)

   (b) <u>ಉತ್ತರ ಬರೆಯಿರಿ</u> (5 ಅಂಕ)

   1. ನೃತ್ಯಪ್ರದರ್ಶನದಲ್ಲಿ ಮೊದಲು ಪುಷ್ಪಾಂಜಲಿಯನ್ನು ಮಂಡಿಸುವುದು ಯಾಕೆ?
   2. ಶುದ್ಧನೃತ್ಯಗಳಿಗೆ 5 ಉದಾಹರಣೆಗಳನ್ನು ಬರೆಯಿರಿ.

2. (a) ಹಾಡುಗಳಿಗೆ ನೃತ್ಯಾವಿಷ್ಕಾರ ನೀಡುವುದು. ಒಂದು ಗುಂಪಿಗೆ 10 ನಿಮಿಷ (15 ಸ್ಕೋರ್)

   (b) <u>ಉತ್ತರ ಬರೆಯಿರಿ.</u>

   1. ಲೋಕ ಧರ್ಮಿ, ನಾಟ್ಯಧರ್ಮಿ ಎಂಬಿವುಗಳ ಕುರಿತು ಟಿಪ್ಪಣಿ ಬರೆಯಿರಿ. (5 ಸ್ಕೋರ್)

---

## ಉತ್ತರ

## ಪಾರ್ಟ್ ಸಿ : ನೃತ್ಯ

1. (a)

   - ತಂತ್ರಗಾರಿಕೆ
   - ತಾಳ
   - ಮಂಡನಾ ಶೈಲಿ

   ಇವುಗಳನ್ನು ಆಧರಿಸಿದ ಮಂಡನೆಗೆ 15ರಲ್ಲಿ ಅಂಕ ನೀಡುವುದು.

   (b) 1. ವೇದಿಕೆಯ ಪವಿತ್ರತೆಗೂ, ದೇವ ಕೃಪೆಗೂ, ಶರೀರದ ತಯಾರಿಗೂ ಬೇಕಾಗಿ ಪ್ರಾರಂಭದಲ್ಲಿ ಪುಷ್ಪಾಂಜಲಿ ಮಾಡುತ್ತಾರೆ.

   2. 1.
      2.
      3
      4

5 ಉದಾಹರಣೆಗಳನ್ನು ಬರೆದರೆ 3 ಅಂಕ
3 ಉದಾಹರಣೆಗಳನ್ನು ಬರೆದರೆ 2 ಅಂಕ
1 ಉದಾಹರಣೆಗಳನ್ನು ಬರೆದರೆ 1 ಅಂಕ

2. (a)

- ತಾಳ ಜ್ಞಾನ
- ಸ್ಪಷ್ಟ ಮುದ್ರೆಗಳು
- ಮಂಡನಾ ಕೌಶಲ್ಯ

ಇವುಗಳನ್ನು ಆಧರಿಸಿ ಮಾಡಿದ ನೃತ್ಯಕ್ಕೆ 15 ರಲ್ಲಿ ಅಂಕವನ್ನು ನೀಡುವುದು.

(b) ಲೋಕ ಧರ್ಮಿ

ಸಾಧಾರಣವಾಗಿ ಮನುಷ್ಯರಿಗೆ ಉಂಟಾಗುವ ಸುಖ ದುಃಖಗಳೂ, ಇತರ ಭಾವನಾತ್ಮಕ ವಿಚಾರಗಳು ಪ್ರತ್ಯೇಕ ನಿಬಂಧನೆಗಳಿಲ್ಲದೆ (ಸಂಕೇತಗಳಿಲ್ಲದೆ) ಅನುಕರಣೆ ಮಾಡಿ ನೈಜತೆಯೊಂದಿಗೆ ಅಭಿನಯಿಸುವುದಾಗಿದೆ ಲೋಕಧರ್ಮಿ.

(3 ಸ್ಕೋರ್)

ನಾಟ್ಯ ಧರ್ಮಿ

ನಿಬಂಧನೆಗಳಿಗೆ ಅನುಸಾರವಾಗಿ ಅಂದರೆ ನಿಯಮಾನುಸಾರವಾಗಿ ಮಟ್ಟುಗಳು, ಹಸ್ತಗಳು, ಭಾವಗಳು, ನೃತ್ಯ ಹೆಜ್ಜೆಗಳು ಎಂಬಿವುಗಳ ಮೂಲಕ ಶೈಲಿಯುಕ್ತವಾದ ಅಭಿನಯ ನಿರ್ವಹಿಸುವುದಾಗಿದೆ ನಾಟ್ಯಧರ್ಮಿ.

(2 ಸ್ಕೋರ್)

## ಪಾರ್ಟ್ 4 : ನಾಟಕ

ಸಮಯ : 2 ಗಂಟೆ
ಸ್ಕೋರ್ :

ತರಗತಿ : ಒಂಭತ್ತು

ಅಧ್ಯಾಪಕರಿಗಿರುವ ಸೂಚನೆಗಳು

- ಪ್ರತಿಯೊಂದು ಪ್ರಶ್ನೆಗೆ ಅಗತ್ಯವಾದ ತಯಾರಿ ಮಾಡಬೇಕು.
- ಎಲ್ಲಾ ಮಕ್ಕಳಿಗೂ ಅಗತ್ಯವಾದ ಸಮಾನ ಸಮಯಾವಕಾಶ ದೃಢಪಡಿಸಬೇಕು.
- ತತ್ಸಮಯ ಮೌಲ್ಯನಿರ್ಣಯ ಮಾಡಬೇಕಾದುವುಗಳನ್ನು ಆಗಲೇ ಮಾಡಿ ದಾಖಲಿಸಬೇಕು.

1. **ಕಥಾಪಾತ್ರವನ್ನು ಅಭಿನಯಿಸುವುದು**

(a) ಮಕ್ಕಳನ್ನು ಐದೋ ಆರೋ ಮಂದಿಯ ಗುಂಪುಗಳಾಗಿಸುವುದು. 9ನೇ ತರಗತಿಯ ಭಾಷಾ ಪಾಠ ಪುಸ್ತಕಗಳ/ಪ್ರಸಿದ್ಧ ಸಾಹಿತ್ಯ ಕೃತಿಗಳ ಕಥಾಪಾತ್ರಗಳ ವಿವರಣೆಗಳನ್ನೊಳಗೊಂಡ ಟಿಪ್ಪಣಿಯನ್ನು ವಿತರಿಸುವರು. ಸಿಕ್ಕಿದ ಕಥಾಪಾತ್ರಗಳ ವಿಶೇಷತೆಗಳ ವಿವರಗಳನ್ನು ವೈಯುಕ್ತಿಕವಾಗಿ ತಯಾರಿಸಲು ಹೇಳುವುದು.

(b) ನಂತರ ವಿಭಿನ್ನ ಸಂದರ್ಭಗಳನ್ನು ನೀಡಿ ಆ ಸಂದರ್ಭಗಳಲ್ಲಿ ವಿವಿಧ ಕಥಾಪಾತ್ರಗಳು ಸೇರುವಂತೆ ಅಭಿನಯಿಸಲು ಹೇಳುವುದು.

*ಕಥಾಪಾತ್ರಗಳಿಗೆ ಉದಾಹರಣೆ*

- ಓಂದ್ ಮಾಂದುಕಾಲ್ ಜಿ — ಕಿಂದರಿಜೋಗಿ
- ಅಪ್ಪುಕ್ಕಿಳಿ — ಜಲಗಾರ
- ಪೊನ್‌ಕುರಿಶ್ ತೋಮ — ಏಕಲವ್ಯ

ಕಥಾಪಾತ್ರಗಳ ವಿಶೇಷತೆಗಳು ಟಿಪ್ಪಣಿ, ಸೂಚನೆಗಳು

- ಕಥಾಪಾತ್ರದ ಪ್ರಾಯ, ವೇಷ, ಸ್ಥಾಯೀಭಾವ, ಚಲನೆ, ಸಂಭಾಷಣೆ ರೀತಿ, ತನ್ಮಯತೆ.

*ಸಂದರ್ಭಗಳಿಗೆ ಉದಾಹರಣೆ*

- ಮರಣ ಮನೆ, ಕೃಷಿ ಸ್ಥಳ, ಗೂಡಂಗಡಿ, ಕ್ಷೌರಿಕನ ಅಂಗಡಿ, ರೈಲ್ವೇ ಸ್ಟೇಷನ್, ಅಪಘಾತ ಸ್ಥಳ

---

2. ***ಕವಿತಾ ತುಣುಕು/ಗಾದೆಗಳ ದೃಶ್ಯಾವಿಷ್ಕಾರ, ಆಸ್ವಾದನಾ ಟಿಪ್ಪಣಿ ತಯಾರಿಸುವುದು.***

(a) 9ನೇ ತರಗತಿಯ ಭಾಷಾ ಪಾಠಪುಸ್ತಕದ ಕವಿತಾ ತುಣುಕುಗಳನ್ನು ಅಥವಾ ಪ್ರಸಿದ್ಧವಾದ ಗಾದೆಗಳನ್ನು ವಿವಿಧ ಗುಂಪುಗಳಿಗೆ ವಿತರಿಸುವುದು. ಇವುಗಳನ್ನು ನೈಜ ಜೀವನದ ಸಂದರ್ಭಗಳಾಗಿ ಮಾಡಿ ಪ್ರದರ್ಶಿಸುವುದು. (ಸ್ಕ್ರಿಪ್ಟ್ ಬೇಡ).

(b) ತಯಾರಿಗೆ 10–15 ನಿಮಿಷ ನೀಡಬೇಕು. ಮಂಡನೆಗೆ 35 ನಿಮಿಷ ನೀಡಬಹುದು. ಒಂದು ಗುಂಪಿನ ಮಂಡನೆಯನ್ನು ಉಳಿದ ಗುಂಪಿನವರು ಸೂಚನೆಗಳನ್ನಾರಿಸಿ ಮೌಲ್ಯನಿರ್ಣಯ ಮಾಡುವುದು. ಎಲ್ಲಾ ಪ್ರದರ್ಶನಗಳ ನಂತರ ವೈಯುಕ್ತಿಕವಾಗಿ ಆಸ್ವಾದನಾ ಟಿಪ್ಪಣಿ ತಯಾರಿಸುವುದು.

---

3. ***ಚಲನಚಿತ್ರ ಮೇಳ ಸಜ್ಜೀಕರಣ***

(a) ನಿಮ್ಮ ಶಾಲೆಯಲ್ಲಿ 3 ದಿವಸದ ಒಂದು ಚಲನಚಿತ್ರಮೇಳ ಸಂಘಟಿಸಬೇಕು. ಶಾಲೆಯ ಎಲ್ಲಾ ಮಕ್ಕಳಿಗೂ ಸಮೀಪದ ಶಾಲಾ ಮಕ್ಕಳಿಗೂ ಮೇಳ ಕಾಣಲು ಅವಕಾಶ ನೀಡಬೇಕು. ಇದಕ್ಕಾಗಿ ನಡೆಸಬೇಕಾದ ತಯಾರಿಯನ್ನು ಟಿಪ್ಪಣಿಯಾಗಿ ಬರೆಯಬೇಕು.

## ಉತ್ತರ

1.
- ■ ಚತುರ್ವಿದಾಭಿನಯ ಸಾಧ್ಯತೆ ಪರಿಗಣಿಸಲಾಗಿದೆಯೇ?
- ■ ಯೋಗ್ಯ ಕಥಾಪಾತ್ರಗಳ ಆಯ್ಕೆ
- ■ ಸಂದರ್ಭಗಳಿಗನುಸರಿಸಿ ಕಥಾಪಾತ್ರಗಳನ್ನು ಆವಿಷ್ಕರಿಸಲು ಸಾಧಿಸಿದೆಯೇ?
- ■ ಮಂಡನಾ ಸೌಂದರ್ಯ/ತನ್ಮಯತೆ.

| | |
|---|---|
| • ಉತ್ತಮ ರೀತಿಯಲ್ಲಿ ವಿವರಗಳೊಂದಿಗೆ ಪರಿಗಣಿಸಲಾಗಿದೆ. | 4 |
| • ಎಲ್ಲಾ ಪರಿಗಣಿಸಲಾಗಿದೆ | 3 |
| • ಭಾಗಿಕವಾಗಿ ಪರಿಗಣಿಸಲಾಗಿದೆ | 2 |
| • ಇನ್ನೂ ಉತ್ತಮವಾಗಬೇಕಾಗಿದೆ | 1 |

2. ■ ಪೂರ್ಣತೆ / ಸಮಗ್ರತೆ

- ಆಶಯ ಸ್ಪಷ್ಟತೆ
- ಘಟಕಗಳು
- ಭಾಷಾ ಶೈಲಿ

| | |
|---|---|
| • ಉತ್ತಮ ಮಟ್ಟದ ರಚನೆ | 4 |
| • ತೃಪ್ತಿಕರ | 3 |
| • ಸರಾಸರಿ | 2 |
| • ಇನ್ನೂ ಉತ್ತಮ ಪಡಬೇಕಾಗಿದೆ | 1 |

---

3. ಉತ್ತರ

- ದಿನ ಆಯ್ಕೆ ಮಾಡಬೇಕು (ಕ್ಲಾಸ್ ಸಮಯ ನಷ್ಟವಾಗದೆ)
- ವಿವಿಧ ವೇದಿಕೆಗಳು
- ಕಂಪ್ಯೂಟರ್ ಇಲೆಕ್ಟ್ರಾನಿಕ್ ವ್ಯವಸ್ಥೆಗಳ ವ್ಯವಸ್ಥೆ
- ಸಿನಿಮಾಗಳ ಪೇನಲ್ ತಯಾರಿ.
- ಸಿನಿಮಾಗಳ ಸರಳ ವಿವರಗಳನ್ನು (Synopsis) ತಯಾರಿ.
- ಪ್ರತಿನಿಧಿಗಳ ರಿಜಿಸ್ಟ್ರೇಷನ್ ಪಾಸ್.
- ಬ್ರೋಷರ್‌ಗಳು/ನೋಟೀಸುಗಳು/ಪೋಸ್ಟರ್‌ಗಳು
- ಸಂವಾದ/ಚರ್ಚೆ
- ಆಸ್ವಾದನಾ ಟಿಪ್ಪಣಿ ತಯಾರಿಸುವುದು.
- ಡೋಕ್ಯುಮೆಂಟೇಷನ್
- ಅತಿಥಿಗಳ ಪೇನಲ್
- ವೋಲೆಂಟಿಯರ್ಸ್, ಜವಬ್ದಾರಿಗಳು... ಹೀಗೆ ಕಾರ್ಯಕ್ರಮದ ಸಮಗ್ರವಾದ ಯೋಜನೆ.

- ಸಮಗ್ರತೆ
- ತಯಾರಿಯ ಕ್ರಮಾಗತ ಮಂಡನೆ
- ಮಂಡನಾ ಶೈಲಿ
- ಜವಾಬ್ದಾರಿ ಹಂಚಿಕೆ

| | |
|---|---|
| • ಎಲ್ಲಾ ವಿವರಗಳನ್ನೊಳಗೊಂಡಿದೆ | 4 |
| • ತೃಪ್ತಿಕರವಾಗಿದೆ | 3 |
| • ಭಾಗಿಕವಾಗಿ ಪೂರ್ಣತೆಯಿದೆ | 2 |
| • ಇನ್ನೂ ಉತ್ತಮವಾಗಬೇಕಾಗಿದೆ. | 1 |

# ಅನುಬಂಧ 2

## ಕಲಾಶಿಕ್ಷಣ – ಸಾರ್ವಜನಿಕ ಪರೀಕ್ಷೆ

**ಕಲಾವಿದ್ಯಾಭ್ಯಾಸ – ಸಾರ್ವಜನಿಕ ಪರೀಕ್ಷೆಗೆ ಸಂಬಂಧಿಸಿದ ನಿರ್ದೇಶಗಳು**

ಕಲಾ ವಿದ್ಯಾಭ್ಯಾಸದಲ್ಲಿ 4 ಭಾಗಗಳಿವೆ.

1. ಚಿತ್ರಕಲೆ
2. ಸಂಗೀತ
3. ನೃತ್ಯ
4. ನಾಟಕ

ಈ 4 ಮಂಡಲಗಳಲ್ಲಿ ಕಲಿಕೆ ಅತೀ ಅಗತ್ಯವಾಗಿದೆ.

ಅಂದರೆ ಸಾರ್ವಜನಿಕ ಪರೀಕ್ಷೆಗೆ 4 ಮಂಡಲಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಳ್ಳಬಹುದಾಗಿದೆ.

ಒಂದು ಮಂಡಲ ಆರಿಸಿ ಸಾಧ್ಯವಿದ್ದರೆ ಬಳಿಕ ಎಲ್ಲಾ ಪ್ರಶ್ನೆಗಳನ್ನು ಆ ಮಂಡಲದಲ್ಲಿಯೇ ಇರುವಂತೆ ಮಾಡಬೇಕು. ಇತರ ಮಂಡಲಗಳನ್ನು ಪರಿಗಣಿಸಬಾರದು.

ಇನ್ನು ಮಾದರಿ ಪ್ರಶ್ನಾಪತ್ರಿಕೆ ನೋಡಿರಿ.

## ಮಾದರಿ ಪ್ರಶ್ನೆಪತ್ರಿಕೆ – ಕಲಾಕಲಿಕೆ

ತರಗತಿ: 9 | ಸಮಯ : 2 ಗಂಟೆ

ಸ್ಕೋರ್/ಅಂಕ : 40

**ನಿರ್ದೇಶಗಳು**

1) ಈ ಪ್ರಶ್ನಾ ಪತ್ರಿಕೆಯಲ್ಲಿ 4 ಭಾಗಗಳಿವೆ. ಭಾಗ ಎ–ಚಿತ್ರಕಲೆ, ಭಾಗ ಬಿ–ಸಂಗೀತ ಭಾಗ ಸಿ–ನೃತ್ಯ, ಭಾಗ ಡಿ–ನಾಟಕ ಇದರಲ್ಲಿ ಯಾವುದಾರೊಂದು ಭಾಗವನ್ನು ಆರಿಸಿ ಅದರ ಪ್ರಶ್ನೆಗಳಿಗೆ ಉತ್ತರಿಸಬೇಕು.
2) ಒಂದು ಭಾಗ ಆರಿಸಿದರೆ ಉಳಿದ ಎಲ್ಲಾ ಪ್ರಶ್ನೆಗಳು ಅದೇ ಭಾಗದಿಂದಲೇ ಆಗಬೇಕು. ಇತರ ಭಾಗಗಳನ್ನು ಪರಿಗಣಿಸಬಾರದು.
3) ಪ್ರತಿಯೊಂದು ಪ್ರಶ್ನೆಯ ಸಮಯವೂ, ಅಂಕವೂ, ಅದರ ಎದುರಲ್ಲಿಯೇ ನೀಡಲಾಗಿದೆ.